ಮಂತ್ರದ್ರಷ್ಟಾರ
ಬ್ರಹ್ಮರ್ಷಿ ದೈವರಾತರು

ಡಾ. ಜಿ. ಎನ್. ಭಟ್ಟ, ನಡಗೋಡು

ಶ್ರೀ ಭಗವತ್ಪಾದ ಪ್ರಕಾಶನ
ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ
ಮಠದೇವಳ, ಶಿರಸಿ – ೫೮೧ ೩೩೬
ದೂರವಾಣಿ : (೦೮೩೮೪) ೨೭೯೩೫೯, ೨೭೯೩೧೧, ೨೭೯೪೭೭

MANTRA DRUSHTAR BRAHMARSHI DAIVARATARU : by Dr. G. N. Bhat, Nadgodu, Professor Department of Sanskrit, MM Arts & Science College, Sirsi - 581 402

Published By : Shri Bhagavatpad Prakashan
Sonda Swarnawalli Mahasamsthan,
Post : Mathadevala,
Tq. : Sirsi, Dist : North Kanara-581 336

First Impression : 2008

Pages : xviii + 196 Copies : 1000

Price : Rs. 150/-

ಪ್ರಥಮ ಮುದ್ರಣ : ೨೦೦೮ ಪ್ರತಿಗಳು : ೧೦೦೦


ಪುಟಗಳು : xviii + ೧೯೬ ಬೆಲೆ : ರೂ. ೧೫೦/-

ಮುದ್ರಕರು :
ರವೀಂದ್ರ ಆಕಳವಾಡಿ
ಮನೋಹರ ಮುದ್ರಣಾಲಯ, ಮಾರ್ಕೆಟ್, ಧಾರವಾಡ
ದೂರವಾಣಿ : ೨೭೯೦೦೩೦, ೨೭೪೧೯೮೪

ಅರ್ಪಣೆ

ಆಚಾರ್ಯಃ ಪೂರ್ವರೂಪಮ್ ।
ಅಂತೇವಾಸ್ಯುತ್ತರ ರೂಪಮ್ ।
ವಿದ್ಯಾ ಸಂಧಿ ಃ । ಪ್ರವಚನಗ್ ಸಂದಾನಮ್ ।
ಇತ್ಯಧಿವಿದ್ಯಮ್ ॥ ”
ತೈತ್ತಿರೀಯ ಉಪನಿಷದ್

ನನ್ನ ಒಳಗನ್ನು ಹೊಕ್ಕು ಬೆಳಗುತ್ತಿರುವ
ಸದ್ವಿದ್ಯೆಯ ಉಭಯ ಪಾರ್ಶ್ವಗಳಲ್ಲಿ
ಮಂಡಿತರಾಗಿರುವ ದಕ್ಷಿಣಾಮೂರ್ತಿ ಸಮಾನರಾದ
ಸಕಲ ಆಚಾರ್ಯರುಗಳಿಗೆ
ಮತ್ತು
ಸಕಲದೇವತಾ ಸ್ವರೂಪರಾದ ಅಂತೇವಾಸಿಗಳಿಗೆ
ಈ ಕೃತಿ
ಸಮರ್ಪಿತ

श्री लक्ष्मीनृसिंहः  श्री नारायणः

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ, ಪದವಾಕ್ಯಪ್ರಮಾಣ ಪಾರಾವಾರಪಾರೀಣ
ಯಮನಿಯಮಾಸನ ಪ್ರಾಣಾಯಾಮಪ್ರತ್ಯಾಹಾರಧ್ಯಾನಧಾರಣ
ಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠ ಷಣ್ಮತವ್ಯವಸ್ಥಾಪನಾಚಾರ್ಯ, ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ
ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶಿಷ್ಯ
ಶ್ರೀ ಭಾಸ್ಕರೇಂದ್ರ ಸರಸ್ವತೀ ಕರಕಮಲ ಸಂಜಾತ ಶ್ರೀ ಶ್ರೀಮತ್ ವಿಶ್ವವಂದ್ಯ ಸರಸ್ವತೀ
ಗುರುಪರಂಪರಾಪ್ರಾಪ್ತ ಸಕಲನಿಗಮಾಗಮಸಾರಹೃದಯ ಸಾಂಖ್ಯತ್ರಯಪ್ರತಿಪಾದಕ
ಕ್ರಮಾಗತಶ್ರೌತಸ್ಮಾರ್ತಕರ್ಮಮಾರ್ಗವ್ಯವಸ್ಥಾಪಕ, ಆಶೇಷತ್ರಯಂತಾದ್ಯದ್ವೈತಸಿದ್ಧಾಂತಪ್ರಬಂಧ
ಪ್ರವರ್ತಕ ಆದಿರಾಜಧಾನೀ ವಿದ್ಯಾನಗರ ಮಹಾರಾಜಧಾನೀ ಶ್ರೀಮತ್
ಸುಧಾಪುರವರಸಿಂಹಾಸನಾಧೀಶ್ವರ ಸರ್ವತಂತ್ರಸ್ವತಂತ್ರ ವ್ಯಾಖ್ಯಾನ ಸಿಂಹಾಸನಾಧಿಷ್ಠಿತ,
ರಾಜಾಧಿರಾಜದೇಶಿಕ ಗೋಕರ್ಣಮಂಡಲಾಧೀಶ್ವರ, ಸಹ್ಯಾದ್ರಿಪುರವರಾಧೀಶ್ವರ,
ಶಾಲ್ಮಲೀತೀರವಾಸ, ಶ್ರೀಮಲ್ಲಕ್ಷ್ಮೀನೃಸಿಂಹ ಚಂದ್ರಮೌಳಿಪದಪಂಕೇರುಹರಸಗ್ರಾಸಾಳಿವನ್ಮಾನಸ
ಶ್ರೀ ಲಲಿತಾಚರಣದಾಸ ಶ್ರೀಮತ್ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನಾಧೀಶ್ವರ ಶ್ರೀ
ಶ್ರೀಮತ್ ಸರ್ವಜ್ಞೇಂದ್ರ ಸರಸ್ವತೀ ಶ್ರೀಸ್ವಾಮಿಕರಕಮಲಸಂಜಾತ

ಶ್ರೀ ಶ್ರೀಮತ್ ಗಂಗಾಧರೇಂದ್ರ ಸರಸ್ವತೀ ಶ್ರೀಸ್ವಾಮಿಭಿಃ



ಶ್ರೀ ಜಿ.ಎನ್.ಭಟ್ಟರು ಬರೆದ ಬ್ರಹ್ಮರ್ಷಿ ದೈವರಾತರ ಜೀವನ ಚರಿತ್ರೆಯ ಪುಸ್ತಕವನ್ನು ಅವಲೋಕಿಸಿದ್ದಾಗಿದೆ.

ಅನೇಕ ಶತಮಾನಗಳಿಗೊಮ್ಮೆ ಮಾತ್ರ ಸಿಗುವ ಅಪರೂಪದ ವ್ಯಕ್ತಿತ್ವ ದೈವರಾತರದ್ದು. ಗೃಹಸ್ಥನಾಗಿದ್ದು ವಿಶಿಷ್ಟವಾದ ಯೋಗ ಸಾಧನೆಯಿಂದ ಋಷಿಪದವಿಗೇರಿದ ಮಹನೀಯರು, ವೇದ

ಮಂತ್ರಗಳನ್ನು ಸಾಕ್ಷಾತ್ಕರಿಸಿಕೊಂಡ ದೃಷ್ಟಾರರು. ಅವರ ಗುರುಗಳಾಗಿದ್ದ ವಾಸಿಷ್ಠ ಗಣಪತಿ ಮುನಿಗಳಿಂದಲೇ "ಬ್ರಹ್ಮರ್ಷಿ" ಎನಿಸಿಕೊಂಡವರು. ಅವರು ಸಾಧನೆಯ ಕೊನೆಯ ಹಂತವನ್ನು ತಲುಪಿದ್ದರೆಂಬುದಕ್ಕೆ ಒಂದು ಉತ್ತಮ ನಿದರ್ಶನ ಈ ಪುಸ್ತಕದ ಕೊನೆಯಲ್ಲಿರುವ ಅನುಬಂಧ ೬ (೨) ರಲ್ಲಿರುವ ಅವರ ಪತ್ರದಲ್ಲಿರುವ ಕೊನೆಯ ಮಾತು–"ನನಗೆ ಬೇರೆ ಯಾವುದೇ ಚಿಂತೆಯೂ ಇಲ್ಲ. ಎಲ್ಲವನ್ನೂ ಬಿಟ್ಟು ಏಕಾಂತದಲ್ಲಿದ್ದು ತಪಸ್ಸು ಮಾಡಿ ನನ್ನ ಶರೀರಯಾತ್ರೆಯನ್ನು ಪೂರೈಸಲು ತಯಾರಿದ್ದೇನೆ", ಇದು ಮಹಾತ್ಮರ ದೃಷ್ಟಿ. ಅವರೆಂದೂ ಮರಣಕ್ಕೆ ಹಿಮ್ಮುಖರಾಗುವುದಿಲ್ಲ. ಯೋಗದಿಂದ ಶರೀರತ್ಯಾಗ ಅವರ ಮುಖ್ಯ ಲಕ್ಷಣ.

ಅವರ 'ಛಂದೋದರ್ಶನ' (ಮಂತ್ರ ಸಾಕ್ಷಾತ್ಕಾರ)ದಿಂದ ಇಡೀ ವೈದಿಕ ವಾಙ್ಮಯಕ್ಕೆ ದೊಡ್ಡ ಬಲ ಬಂದಂತಾಗಿದೆ. ವೇದಗಳು ಅಪೌರುಷೇಯ– ಮನುಷ್ಯ ಬುದ್ಧಿಯಿಂದ ರಚಿಸಲ್ಪಟ್ಟವುಗಳಲ್ಲ–ಎಂಬುದು ವೇದಗಳಿಗಿರುವ ಮೂಲ ಶಕ್ತಿ. ವೇದಗಳ ಅಪೌರುಷೇಯತ್ವವನ್ನು ಪ್ರಾಚೀನ ಕಾಲದಿಂದಲೂ ಅನೇಕ ನಾಸ್ತಿಕರು ಆಕ್ಷೇಪಿಸುತ್ತಲೇ ಬಂದಿದ್ದಾರೆ. ಆದರೆ ಇದಕ್ಕೆ ವಿರುದ್ಧವಾಗಿ ಆಸ್ತಿಕ ದರ್ಶನಗಳು ಅವುಗಳ ಅಪೌರುಷೇಯತ್ವವನ್ನು ಪ್ರತಿಷ್ಠಾಪಿಸುತ್ತ ಬಂದಿವೆ. ಆ ಅಪೌರುಷೇಯತ್ವದ ಜೊತೆಗೆ ಅನಂತತೆಯೂ ಇದೆ. ಅಂದರೆ ಈಗ ನಮಗೆ ಉಪಲಬ್ಧವಿರುವಷ್ಟಕ್ಕೇ ವೇದಗಳು ಮುಗಿದಿಲ್ಲ. ಇನ್ನು ಮುಂದೆಯೂ ಅನೇಕ ಋಷಿಗಳು ಈ ತನಕ ಉಪಲಬ್ಧವಿಲ್ಲದ ಮಂತ್ರಗಳನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಆ ಅಪೌರುಷೇಯತ್ವ– ಅನಂತತೆಗಳು ಬ್ರಹ್ಮರ್ಷಿ ದೈವರಾತರ 'ಛಂದೋದರ್ಶನ'ದಿಂದ ಸಾಬೀತುಗೊಂಡಿವೆ. ಆಸ್ತಿಕ ದರ್ಶನಗಳು ಅನೇಕ ವಿಧದಲ್ಲಿ ವೇದಗಳಿಗೆ ಅಪೌರುಷೇಯತ್ವವನ್ನು ಪ್ರತಿಪಾದಿಸುತ್ತವೆ. ಶ್ರೀ ಶಂಕರಾಚಾರ್ಯರು ದೇವತಾಧಿಕರಣದಲ್ಲಿ ಪ್ರತಿಪಾದಿಸುವ ರೀತಿ ವಿಶಿಷ್ಟವಾಗಿದೆ. ಕಲ್ಪಾಂತ್ಯ (ಸಹಸ್ರ ಕೃತ–ತ್ರೇತ–ದ್ವಾಪರ–ಕಲಿ ಯುಗಗಳ ಅಂತ್ಯ)ದಲ್ಲಿ ಪ್ರಪಂಚ ಒಮ್ಮೆ ಪ್ರಲಯಗೊಳ್ಳುತ್ತದೆ. ಆಗ ವೇದರಾಶಿಗಳೂ ಕಣ್ಮರೆಯಾಗುತ್ತವೆ. ಮತ್ತೆ ಮುಂದಿನ ಕಲ್ಪದ ಆರಂಭದಲ್ಲಿ ಋಷಿಗಳ ಮೂಲಕ ಆ ವೇದಗಳು ಆವಿರ್ಭಾವಗೊಳ್ಳುತ್ತವೆ. ಸ್ವಯಂ ಪರಮಾತ್ಮನೇ ಹಿರಣ್ಯಗರ್ಭಾದಿಗಳಿಗೆ ಹಿಂದಿನ ಕಲ್ಪದಲ್ಲಿದ್ದ ವೇದಗಳನ್ನು ಸ್ಮರಿಸಿಕೊಂಡು ಉಪದೇಶಿಸುತ್ತಾನೆ. ಇದನ್ನು ಉಪನಿಷತ್ತು ಹೀಗೆ ಹೇಳುತ್ತದೆ. "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ.."॥ ಇದಲ್ಲದೇ ಪರಮಾತ್ಮನಿಂದ ಅನುಗ್ರಹೀತರಾದ ಋಷಿಗಳೂ ಹಿಂದಿನ

ಕಲ್ಪದಲ್ಲಿದ್ದ ವೇದಗಳನ್ನು ಕಂಡುಕೊಳ್ಳುತ್ತಾರೆ. ಇದನ್ನು ವ್ಯಾಸರು ಹೀಗೆ ಹೇಳುತ್ತಾರೆ–" ಯುಗಾಂತೇ ಅಂತರ್ಹಿತಾನ್ ವೇದಾನ್ ಸೇತಿಹಾಸಾನ್ ಮಹರ್ಷಯಃ । ಲೇಭಿರೇ ತಪಸಾ ಪೂರ್ವಂ ಅನುಜ್ಞಾತಾಃ ಸ್ವಯಂಭುವಾ॥" ಹೀಗೆ ಹಿಂದಿನ ಕಲ್ಪಗಳಲ್ಲಿದ್ದ ವೇದಗಳು ಮುಂದಿನ ಕಲ್ಪಾದಿಗಳಲ್ಲಿ ಪ್ರಕಟಗೊಳ್ಳುತ್ತಾ ಹೋಗುತ್ತವೆ. ಆದ್ದರಿಂದ ವೇದಗಳು ಅನಾದಿ–ಅನಂತ.

ವೇದಗಳು ಎಲ್ಲಿ ನಿಹಿತವಾಗಿರುತ್ತವೆ. ಎಲ್ಲಿಂದ ಹೊರಬರುತ್ತವೆ? ಮೊದಲನೆಯದಾಗಿ ವೇದಗಳೆಂದರೆ ಕೇವಲ ಪುಸ್ತಕಗಳಲ್ಲ ಎಂಬುದನ್ನು ನೆನಪಿನಲ್ಲಿಡಬೇಕು. ಆದ್ದರಿಂದ ಪುಸ್ತಕಗಳ ರಕ್ಷಣೆಯಷ್ಟೇ ವೇದ ರಕ್ಷಣೆಯಲ್ಲ. ವೇದಗಳು ಶಬ್ದಗಳು, ನಿತ್ಯ ಶಬ್ದಗಳು (ಕಂಪ್ಯೂಟರಿನ ಈ ಕಾಲದಲ್ಲಿ ಗ್ರಂಥಗಳನ್ನು ಸಿ.ಡಿ., ಮೈಕ್ರೊಫಿಲ್ಮ ಮುಂತಾದ ಪುಸ್ತಕೇತರ ವಿಧಾನಗಳಲ್ಲಿ ರಕ್ಷಿಸುವಿಕೆ ಬಹುತೇಕ ಎಲ್ಲರಿಗೂ ಗೊತ್ತಿದೆ.) ನಿತ್ಯ ಶಬ್ದಗಳ ಸ್ವರೂಪದಲ್ಲಿ ವೇದಗಳು ಮನೋಮಯ ಕೋಶದಲ್ಲಿರುತ್ತವೆ. ಆತ್ಮನಿಗೆ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಎಂಬ ಐದು ಕೋಶಗಳ ವಿಷಯದಲ್ಲಿ ಆವರಣ ಇರುವ ವಿಷಯ ಅಧ್ಯಾತ್ಮ ಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ. ಮನೋಮಯ ಕೋಶದ ವಿಷಯದಲ್ಲಿ "ಋಕ್ ದಕ್ಷಿಣಃ ಪಕ್ಷಃ, ಸಾಮೋತ್ತರಃ ಪಕ್ಷಃ । ಆದೇಶ ಆತ್ಮಾ । ಅಥರ್ವಾಂಗೀರಸಃ ಪುಚ್ಛಂ ಪ್ರತಿಷ್ಠಾ ।" ಎಂಬುದಾಗಿ ಹೇಳಿದೆ. ಅಂದರೆ ವೇದಗಳು ಮನೋಮಯ ಕೋಶದಲ್ಲಿಯೇ ಅಡಗಿವೆ.

ಶ್ರೀ ಶಂಕರಾಚಾರ್ಯರು ಈ ವಾಕ್ಯಗಳ ವಿವರಣೆಯ ಸಂದರ್ಭದಲ್ಲಿ ಬರೆದಿದ್ದಾರೆ– **ತಸ್ಮಾತ್ ಮನೋವೃತ್ತ್ಯುಪಾಧಿಪರಿಚ್ಛಿನ್ನಂ ಆತ್ಮವಿಜ್ಞಾನಂ ಮಂತ್ರಾಃ ಇತಿ। ಏವಂ ಚ ನಿತ್ಯತ್ವೋಪಪತ್ತಿಃ ವೇದಾನಾಮ್॥** ಮನಸ್ಸು ತುಂಬಾ ಸೂಕ್ಷ್ಮವಾದದ್ದು. ಮಾತ್ರವಲ್ಲ ವ್ಯಷ್ಟಿ, ಸಮಷ್ಟಿಗಳೆಂದು ಎರಡು ರೂಪವುಳ್ಳದ್ದು. ನಾವು ನಮ್ಮ ಮನಸ್ಸೆಂದು ಗುರುತಿಸಿಕೊಳ್ಳುವ ಮನಸ್ಸು ವ್ಯಷ್ಟಿ ಮತ್ತು ಸ್ಥೂಲವಾದದ್ದು. ಇನ್ನೂ ಸೂಕ್ಷ್ಮವೂ, ಸಮಷ್ಟಿಯೂ ಆದ ಮನಸ್ಸು ಇಲ್ಲಿ ಗ್ರಾಹ್ಯ. ಅದಕ್ಕೋಸ್ಕರವೇ ಈ ಭಾಷ್ಯಕ್ಕೆ ವಾರ್ತಿಕ ಬರೆಯುವಾಗ ಶ್ರೀ ಸುರೇಶ್ವರಾಚಾರ್ಯರು ಭಾಷ್ಯದಲ್ಲಿರುವ "ಆತ್ಮ ವಿಜ್ಞಾನಂ" ಎಂಬ ಶಬ್ದಕ್ಕೆ "ಐಶ್ವರಂ ವಿಜ್ಞಾನಂ" ಎಂಬರ್ಥ ಬರೆದಿದ್ದಾರೆ. ಅಂದರೆ ಸಮಷ್ಟಿ ಸೂಕ್ಷ್ಮ ಶರೀರದ ಒಂದು ಭಾಗವಿರುವ ಸಮಷ್ಟಿಮನಸ್ಸಿನ ವಿಶಿಷ್ಟವಾದ ವೃತ್ತಿಗಳಿಗೆ ಸಮಷ್ಟಿಯನ್ನೂ ವ್ಯಾಪಿಸಿರುವ ಈಶ್ವರನ ಚೈತನ್ಯದ ಆಭಾಸವು ಸೇರಿಕೊಂಡಾಗ ಅದೇ 'ಐಶ್ವರ ವಿಜ್ಞಾನ' ಎನ್ನಿಸಿಕೊಳ್ಳುತ್ತದೆ. ಅಂಥ ವಿಶಿಷ್ಟವಾದ ಐಶ್ವರ

ವಿಜ್ಞಾನಗಳೇ ಮಂತ್ರಗಳು. ಈ ಐಶ್ವರ ವಿಜ್ಞಾನ ಈಶ್ವರನಿಗಿಂತ ಬೇರೆಯಲ್ಲ. ಆ ಅರ್ಥದಲ್ಲಿ ವೇದಗಳಿಗೆ ಈಶ್ವರನಂತೆ ನಿತ್ಯತ್ವವೂ ಸಿದ್ಧಿಸುತ್ತದೆ. ಮಂತ್ರ ಜಪದಲ್ಲಿ ಮೂರು ವಿಧ-ದೊಡ್ಡ ಧ್ವನಿಯಿಂದ ಜಪ, ಉಪಾಂಶು (ಸಣ್ಣ ಧ್ವನಿಯಿಂದ) ಜಪ, ಮತ್ತು ಮಾನಸ ಜಪ (ಸ್ವಲ್ಪವೂ ನಾಲಿಗೆ ಮುಂತಾದ ವಾಗಿಂದ್ರಿಯದ ಚಲನೆಯಿಲ್ಲದೇ ಜಪ.) ಇವುಗಳಲ್ಲಿ ಮಾನಸ ಜಪಕ್ಕೆ ಹೆಚ್ಚು ಫಲವನ್ನು ಶಾಸ್ತ್ರದಲ್ಲಿ ಹೇಳಿದೆ. ಮನೋಮಯ ಕೋಶದ ವೃತ್ತಿವಿಶೇಷಗಳೇ ಮಂತ್ರಗಳಾದ್ದರಿಂದ ಮಾನಸ ಜಪಕ್ಕೆ ಹೆಚ್ಚು ಫಲ. ಇದನ್ನು ಶ್ರೀ ಸುರೇಶ್ವರಾಚಾರ್ಯರು ಉಲ್ಲೇಖಿಸಿದ್ದಾರೆ. ಒಟ್ಟಾರೆ ಸಮಷ್ಟಿ ಮನೋಮಯ ಕೋಶವೇ ನಿಹಿತವಾಗಿರುವ ಸ್ಥಳ.

ಸಮಷ್ಟಿ ಮನೋಮಯ ಕೋಶಕ್ಕೂ ವ್ಯಷ್ಟಿ ಮನೋಮಯ ಕೋಶಕ್ಕೂ ಸಂಬಂಧವಿದೆ. ಆದ್ದರಿಂದ ವ್ಯಷ್ಟಿಯಾಗಿ ಮನೋಮಯ ಕೋಶದಲ್ಲಿ ಇಳಿದವನಿಗೆ ಈಶ್ವರಾನುಗ್ರಹದಿಂದ ಸಮಷ್ಟಿ ಮನೋಮಯ ಕೋಶದಲ್ಲಿರುವವುಗಳು ಗೋಚರಿಸುತ್ತವೆ. ಅಂಥವರು ಮಂತ್ರದೃಷ್ಟಾರರೆನಿಸಿಕೊಳ್ಳುತ್ತಾರೆ. ಪ್ರಕೃತ ಶ್ರೀ ದೈವರಾತರು ಮಂತ್ರದೃಷ್ಟಾರರ ಸಾಲಿಗೆ ಸೇರುತ್ತಾರೆ. ಕೆಲವು ಶತಮಾನಗಳಿಗೊಮ್ಮೆಯಾದರೂ ಇಂಥವರು ಹುಟ್ಟಿದರೆ ವೇದಗಳ ಸಾಮರ್ಥ್ಯದ ಸ್ಪಷ್ಟ ಅನುಭವ ಮನುಕುಲಕ್ಕೆ ಆಗುತ್ತದೆ. ಅತ್ಯಂತ ಅಪರೂಪದ ವಿಶಿಷ್ಟ ವ್ಯಕ್ತಿ ಶ್ರೀ ದೈವರಾತರು. ಅಂದ ಮೇಲೆ ಅವರ ಕುರಿತಾದ ಸಂಶೋಧನೆ, ಪುಸ್ತಕಗಳೂ ಅಪರೂಪವೂ, ವಿಶಿಷ್ಟವೂ ಆಗುವುದರಲ್ಲಿ ಸಂಶಯವಿಲ್ಲ. ಈ ಪುಸ್ತಕ ಎಲ್ಲ ಆಸ್ತಿಕ ಜನರಿಗೆ ತಲುಪಲಿ. ಆಸ್ತಿಕತೆ ಬಲಗೊಳ್ಳಲಿ.

ಲೋಕಾಃ ಸಮಸ್ತಾಃ ಸುಖಿನೋ ಭವಂತು
ನಾರಾಯಣ ನಾರಾಯಣ ನಾರಾಯಣ

ಮುನ್ನುಡಿ

ಬ್ರಹ್ಮರ್ಷಿ ದೈವರಾತರು ಅಸಾಮಾನ್ಯ ವ್ಯಕ್ತಿಗಳು, ವೇದ-ದೃಷ್ಟಾರರಾದ ಋಷಿಮುನಿಗಳು ವೇದಮಂತ್ರಗಳನ್ನು ಕೇವಲ ಕಂಡವರು; ಅವುಗಳ ಮೇಲೆ ಭಾಷ್ಯವನ್ನು ಬರೆದಿರಲಿಲ್ಲ. ಆದರೆ ಮಂತ್ರದೃಷ್ಟಾರರಾದ ದೈವರಾತರು ವೇದಮಂತ್ರಗಳ ಮೇಲೆ ಭಾಷ್ಯವನ್ನು ಬರೆದಿದ್ದಾರೆ. ಈ ದೃಷ್ಟಿಯಿಂದ ಅವರು ವೇದಗಳನ್ನು ಕಂಡ ಋಷಿಗಳಿಗಿಂತ ಮಿಗಿಲಾದವರು.

ದೈವರಾತರು ಭಾರತದ ಪ್ರಪ್ರಥಮ ರಾಷ್ಟ್ರಪತಿಗಳಾದ ಶ್ರೀ ರಾಜೇಂದ್ರ ಪ್ರಸಾದರ ಗುರುಗಳಾಗಿದ್ದರು ಎಂಬುದನ್ನು ಮರೆಯಬಾರದು. ಭಾರತದ ಇನ್ನೊಬ್ಬ ಧೀಮಂತ ವ್ಯಕ್ತಿಗಳಾದ ರಂಗನಾಥ ದಿವಾಕರರು ದೈವರಾತರನ್ನು ಪೂಜ್ಯ ಭಾವದಿಂದ ನೋಡುತ್ತಿದ್ದರು. ವಿಶ್ವದಲ್ಲಿಯೇ ಪ್ರಸಿದ್ಧವಾದ 'ಭಾರತೀಯ ವಿದ್ಯಾ ಭವನ'ವನ್ನು ಸ್ಥಾಪಿಸಿದ ಕೆ. ಎಮ್. ಮುನ್ಶಿಯವರು 'ಛಂದೋದರ್ಶನ'ವನ್ನು ವಾಸಿಷ್ಠಾನ್ವಯ ಭಾಷ್ಯ ಮತ್ತು ಇಂಗ್ಲೀಶ್ ವಿವರಣೆಯೊಂದಿಗೆ ಪ್ರಕಟಪಡಿಸಿದರು.

ನಾನು ಪ್ರಪ್ರಥಮವಾಗಿ ದೈವರಾತರ ಸಮಗ್ರ ಕೃತಿಗಳನ್ನು ನೋಡಿದ್ದು ಕುಳವೆಯ ಡಾ. ಜಿ. ಎಸ್. ಶಾಸ್ತ್ರಿಯವರ ಶಿರಸಿಯ ಮನೆಯಲ್ಲಿ. ಜಿ. ಎನ್. ಭಟ್ಟ (ನಡಗೋಡು)ರು ನನ್ನನ್ನು ಕರೆದೊಯ್ದು ದೈವರಾತರ ಕೃತಿಗಳನ್ನು ನೋಡುವುದಕ್ಕೆ ಏರ್ಪಾಡು ಮಾಡಿದ್ದರು. ದೈವರಾತರ ಕೃತಿಗಳನ್ನು ಅಧ್ಯಯನ ಮಾಡುವಂತೆ ಜಿ. ಎನ್. ಭಟ್ಟರಿಗೆ ಸೂಚಿಸಿದೆ. ಜಿ. ಎನ್. ಭಟ್ಟರು ದೈವರಾತರ ಕೃತಿಗಳನ್ನೇ ತಮ್ಮ ಪಿಎಚ್.ಡಿ. ಪದವಿಗಾಗಿ ಮಂಡಿಸಲಾಗುವ ಮಹಾಪ್ರಬಂಧದ ವಿಷಯವನ್ನಾಗಿ ಆಯ್ದುಕೊಂಡು "ಸಂಸ್ಕೃತ ವರ್ಕ್ಸ್ ಆಫ್ ದೈವರಾತ ಶರ್ಮಾ – ಎ ಕ್ರಿಟಿಕಲ್ ಸ್ಟಡಿ" ಎಂಬ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಬರೆದು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಮರ್ಪಿಸಿ ಪಿಎಚ್.ಡಿ. ಪದವಿಯನ್ನು

ಪಡೆದರು. ಜಿ. ಎನ್. ಭಟ್ಟರ ಮಹಾಪ್ರಬಂಧವನ್ನು ನೋಡಿ ಪ್ರೇರಣೆಗೊಂಡ ನಾನು ಸಂಸ್ಕೃತ ಶೋಧ ಸಂಸ್ಥಾನ– ಶಿರಸಿ ಇದರ ಆಶ್ರಯದಲ್ಲಿ ದೈವರಾತರ 'ಛಂದೋದರ್ಶನ'ದ ಮೇಲೆ ರಾಷ್ಟ್ರೀಯ ವಿಚಾರ–ಸಂಕಿರಣವನ್ನು ಆಯೋಜಿಸಿದೆ. ಅದು ಯಶಸ್ವಿಯಾಗಿ ನಡೆದದ್ದು ಈಗ ಇತಿಹಾಸ.

ಇದಾದ ಮೇಲೆ ಜಿ. ಎನ್. ಭಟ್ಟರಿಗೆ ದೈವರಾತರ ಸಮಗ್ರವಾದ ಜೀವನ ಚರಿತ್ರೆಯನ್ನು ಸಪ್ರಮಾಣವಾಗಿ ನಿರೂಪಿಸುವಂತೆ ಆಗ್ರಹಪೂರ್ವಕವಾಗಿ ಹೇಳುತ್ತ ಬಂದೆ. ಇದೀಗ ದೈವರಾತರ ಸಮಗ್ರ ಜೀವನ ಚಿತ್ರಣ ಬರೆಯಲ್ಪಟ್ಟಿರುವದು ನಿಜಕ್ಕೂ ಸಂತೋಷದ ಸಂಗತಿಯಾಗಿದೆ. ಜಿ. ಎನ್. ಭಟ್ಟರಿಗೂ, ಅವರ ಕುಟುಂಬ ವರ್ಗಕ್ಕೂ ದೇವರು ಆಯುರಾರೋಗ್ಯ ಐಶ್ವರ್ಯಾದಿ ಸರ್ವಸನ್ಮಂಗಲಗಳನ್ನು ಪ್ರದಾನ ಮಾಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಗ್ರಂಥವು ಉತ್ತಮವಾಗಿ ಪ್ರಕಟಗೊಂಡು ಲೋಕಾರ್ಪಣೆ ಹೊಂದಲೆಂದು ಹಾರೈಸುತ್ತೇನೆ.

ಸರ್ವಜಿತ್ ಸಂ ॥	**ಡಾ॥ ದಯಾನಂದ ಶಾನಭಾಗ**
ಮಾರ್ಗಶೀರ್ಷ ಶುದ್ಧ	ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು
ಏಕಾದಶಿ	ಮುಖ್ಯಸ್ಥರು, ಸಂಸ್ಕೃತ ವಿಭಾಗ
(೨೨–೧೨–೨೦೦೭)	ಕ.ವಿ.ವಿ., ಧಾರವಾಡ
ಬೆಂಗಳೂರು	

ನಿವೇದನೆ

ಲೋಕೋತ್ತರವಾದ ವ್ಯಕ್ತಿಗಳ ಜೀವನ ಚರಿತ್ರೆಯ ಬರವಣಿಗೆ ಸುಲಭವಲ್ಲ ಎನ್ನುವದು ದೈವರಾತರ ಜೀವನವನ್ನು ನಿರೂಪಿಸುವುದಕ್ಕೆ ಕೈಹಾಕಿದ ಮೇಲೆ ಅರಿವಾಯಿತು. ಪಿಎಚ್.ಡಿ. ಪದವಿಗಾಗಿ ನಾನು ಆರಿಸಿಕೊಂಡದ್ದು ದೈವರಾತರ ಗ್ರಂಥಗಳನ್ನು. ಆದ್ದರಿಂದ ದೈವರಾತರ ಜೀವನ ಚರಿತ್ರೆ ಪಿಎಚ್.ಡಿ.ಗಾಗಿ ರಚಿಸಿದ ಮಹಾಪ್ರಬಂಧದ ವ್ಯಾಪ್ತಿಯಲ್ಲಿ ಬಂದಿರಲಿಲ್ಲ. ದೈವರಾತರ ಪರಿಚಯಾತ್ಮಕವಾದ ಕಿರು–ಅಧ್ಯಾಯವನ್ನು ಮಾತ್ರ ಮಹಾಪ್ರಬಂಧದಲ್ಲಿ ಸೇರಿಸಲಾಗಿತ್ತು. ನನ್ನ ವಿದ್ಯಾಗುರುಗಳೂ, ಮಹಾಪ್ರಬಂಧದ ರಚನೆಯಲ್ಲಿ ಮಾರ್ಗದರ್ಶಕರೂ ಆದ ಡಾ. ದಯಾನಂದ ಶಾನಭಾಗರು ಪಿಎಚ್.ಡಿ ಪದವಿಯನ್ನು ಪಡೆದಾದ ಮೇಲೆ ದೈವರಾತರ ಸಮಗ್ರವಾದ ಜೀವನ ಚರಿತ್ರೆಯನ್ನು ಬರೆಯುವಂತೆಯೂ ಅದಕ್ಕಾಗಿ ಆಧಾರ ಸಾಮಗ್ರಿಯನ್ನು ಸಂಗ್ರಹಿಸಿ ಕ್ರೋಢೀಕರಿಸುವಂತೆಯೂ ಆಗ್ರಹಮಾಡುತ್ತಲೇ ಬಂದರು. ಅವರ ಪ್ರೀತಿ ಮತ್ತು ಪ್ರೇರಣೆಗಳ ಸಾಕಾರರೂಪವೇ ಈ ಕೃತಿ.

ಈ ಗ್ರಂಥವನ್ನು ರಚಿಸುವ ಪೂರ್ವದಲ್ಲಿ ದೈವರಾತರ ಜೀವನ ಮತ್ತು ಕೃತಿಗಳನ್ನು ಕುರಿತು ಇಂಗ್ಲೀಷಿನಲ್ಲಿ ಚಿಕ್ಕ ಗ್ರಂಥವನ್ನೂ ನೀಳ ಲೇಖನವನ್ನೂ ಕನ್ನಡದಲ್ಲಿ ಒಂದು ಕಿರು–ಪುಸ್ತಿಕೆಯನ್ನೂ ಪ್ರಕಾಶಿಸಿದ್ದಾಗಿದೆ. ಆದರೆ ಅವು ಯಾವವೂ ಸಮಗ್ರ ಎನ್ನುವಂತಿಲ್ಲ. ಆ ಗ್ರಂಥಗಳನ್ನು ರಚಿಸುವ ಸಮಯದಲ್ಲಿ ದೊರಕಿದ ಆಧಾರಸಾಮಗ್ರಿಗಳಿಗೆ ಅನುಗುಣವಾಗಿ ಬರೆದವುಗಳಾಗಿದ್ದವು. ಅನಂತರವೇ ಸುದೈವದಿಂದ ಇನ್ನಷ್ಟು ಆಧಾರಸಾಮಗ್ರಿಗಳು ಲಭ್ಯವಾದವು. ಲಭ್ಯವಾದ ಪ್ರಮಾಣ ಸಾಮಗ್ರಿಗಳಲ್ಲಿ ಸ್ವಯಂ ದೈವರಾತರೇ ಹೇಳಿ ಬರೆಯಿಸಿದ ಹಸ್ತಲಿಖಿತ ವಿವರಗಳು ಮುಖ್ಯವಾದ ಆಧಾರ ಸಾಮಗ್ರಿಯಾಗಿದೆ. ಅದಕ್ಕೆ ಪೂರಕವಾಗಿ ಕನ್ನಡ, ಇಂಗ್ಲೀಷ, ಮತ್ತು ತೆಲುಗು ಭಾಷೆಗಳಲ್ಲಿ ಪ್ರಕಟವಾದ ಬಿಡಿ ಲೇಖನಗಳು ಶ್ರೀ ಆರ್. ಆರ್. ದಿವಾಕರರು ಬರೆದ ಕಿರು–ಪುಸ್ತಿಕೆಗಳು ಮತ್ತು ಕೆಲವು ಧ್ವನಿಮುದ್ರಿತ ಸಂದರ್ಶನಗಳು ಮುಖ್ಯವಾದ ಪ್ರಮಾಣ

ಸಾಮಗ್ರಿಯಾಗಿವೆ. ಈ ಆಕರ ಸಾಮಗ್ರಿಗಳಿಗೆ ಕಪಾಲಿ ಶಾಸ್ತ್ರಿಗಳ 'ವಾಸಿಷ್ಠ ವೈಭವಮ್', ವಾಸಿಷ್ಠ ಗಣಪತಿ ಮುನಿಗಳ 'ರಮಣಗೀತಾ', ಟೇಂಬೇ ಮಹಾರಾಜರ 'ಯೋಗರಹಸ್ಯ', ದೈವರಾತರದೇ ಆದ 'ಛಂದೋದರ್ಶನ' ಗ್ರಂಥಗಳೂ ದೈವರಾತರ ಕೆಲವು ಪದಗಳೂ ಪೂರಕ ಪ್ರಮಾಣಗಳಾಗಿ ಉಪಕಾರ ಮಾಡಿದವು.

ಜೀವನ ಚರಿತ್ರೆಯ ನಿರೂಪಣೆ ಸಪ್ರಮಾಣವೂ ನ್ಯೂನಾತಿರೇಕ ದೋಷವಿಲ್ಲದ್ದೂ ಆಗಿರಬೇಕು. ವಿವಾದಗ್ರಸ್ತವಾದ ಅಂಶಗಳಿದ್ದಲ್ಲಿ ಸಂಯಮದ ನಿರೂಪಣೆಯೂ ಅವಶ್ಯವೇ ಆಗಿದೆ. ಈ ಮಿತಿಗಳಲ್ಲಿ ದೈವರಾತರ ಜೀವನ ಚರಿತ್ರೆಯನ್ನು ಬರೆಯಲು ಪ್ರಯತ್ನಿಸಲಾಗಿದೆ. ಈ ಗ್ರಂಥಕ್ಕೆ ಆಶೀರ್ವಾದ ಸಂದೇಶ ನೀಡಿದ ಪರಮಪೂಜ್ಯ ಶ್ರೀ ಶ್ರೀಮತ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳಿಗೆ ಕೃತಜ್ಞತಾಪೂರ್ವಕ ನಮನಗಳನ್ನು ಅರ್ಪಿಸುತ್ತೇನೆ.

ದೈವರಾತರ ಗ್ರಂಥಗಳ ಮತ್ತು ಜೀವನ ಚರಿತ್ರೆಯ ನನ್ನ ಅಧ್ಯಯನಕ್ಕೆ ತಮ್ಮಲ್ಲಿರುವ ಗ್ರಂಥಗಳನ್ನು ಮತ್ತು ಎಲ್ಲ ಬಗೆಯ ದಾಖಲೆಗಳನ್ನು ಕೊಟ್ಟು ಸರ್ವವಿಧದಿಂದಲೂ ಸಹಾಯ, ಸಹಕಾರ ಮತ್ತು ಮಾರ್ಗದರ್ಶನ ಮಾಡಿದ ದೈವರಾತರ ಬಂಧುಗಳಾದ ಡಾ. ಜಿ. ಎಸ್. ಶಾಸ್ತ್ರಿ, ಕುಳವೆ ಮತ್ತು ವೇದಶ್ರವ ಶರ್ಮಾ, ಗೋಕರ್ಣ ಇವರಿಗೆ ನಾನು ಅಭಾರಿಯಾಗಿದ್ದೇನೆ.

ಈ ಗ್ರಂಥವನ್ನು ಸ್ವರ್ಣವಲ್ಲಿಯ ಭಗವತ್ಪಾದ ಪ್ರಕಾಶನವು ಪ್ರಕಟಿಸುತ್ತಿದ್ದು ಅದರ ಎಲ್ಲ ಪದಾಧಿಕಾರಿಗಳಿಗೂ ನನ್ನ ಕೃತಜ್ಞತಾಪೂರ್ವಕ ಅಭಿನಮನಗಳನ್ನು ಸಲ್ಲಿಸುತ್ತೇನೆ. ಅಂದವಾಗಿ ಮುದ್ರಿಸಿದ ಧಾರವಾಡ ಮನೋಹರ ಮುದ್ರಣಾಲಯದ ಒಡೆಯರಾದ ರವಿ-ಚಂದ್ರು ಆಕಳವಾಡಿ ಸಹೋದರರಿಗೂ, ಸಕಲ ಸಿಬ್ಬಂದಿವರ್ಗಕ್ಕೂ ನನ್ನ ಕೃತಜ್ಞತೆ.

ಶಿರಸಿ,
ಸರ್ವಧಾರಿ ಸಂ. ಯುಗಾದಿ
೬-೪-೨೦೦೮

ಡಾ. ಜಿ. ಎನ್. ಭಟ್ಟ
ನಡಗೋಡು

ಪ್ರಕಾಶಕರ ನುಡಿ

ಭಾರತದ ಸಾಂಸ್ಕೃತಿಕ ಪ್ರಪಂಚದ ಮಹಾಚೇತನವಾದ ಆದಿಶಂಕರಾಚಾರ್ಯರು (ಕ್ರಿ.ಶ. ೭೮೮-೮೨೦) ಈ ಪುಣ್ಯಭೂಮಿಯಲ್ಲಿ ಅವತರಿಸಿ ಅದ್ವೈತ ಮತದ ಸಂಸ್ಥಾಪನಾ ಕಾರ್ಯ ಮಾಡಿರುವುದು ನಮ್ಮ ಭಾಗ್ಯವಿಶೇಷವಾಗಿದೆ. ಆದಿಶಂಕರರ ಅನುಗ್ರಹದಿಂದ ಕಾಶಿಯ ದಶಾಶ್ವಮೇಧ ಘಾಟಿನಲ್ಲಿ ಆರಂಭವಾದ ಸ್ವರ್ಣವಲ್ಲೀ ಮಠವು ಮುಂದೆ ಕ್ರಮವಾಗಿ ಉಜ್ಜಯಿನಿ, ಗೋಕರ್ಣ, ಕಡತೋಕೆ, ಸಹಸ್ರಲಿಂಗ ಮತ್ತು ಇಂದಿನ ಸ್ವರ್ಣವಲ್ಲಿಗೆ ಬಂದು ಧರ್ಮದೀಪವಾಗಿ ಬೆಳಗುತ್ತಲಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಸುಂದರ ನಿಸರ್ಗ ಪರಿಸರದ ರಮ್ಯ ತಾಣದಲ್ಲಿರುವ ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನವು ಅದ್ವೈತ ಮತದ ಮಹಾಗುರುಪೀಠವಾಗಿ ಪ್ರಸಿದ್ಧವಾಗಿದೆ. ಸುಮಾರು ಹನ್ನೆರಡುನೂರು ವರ್ಷಗಳ ಭವ್ಯವಾದ ಇತಿಹಾಸ ಶ್ರೀಮಠಕ್ಕಿದೆ. ಶ್ರೀ ವಿಶ್ವವಂದ್ಯ ಸರಸ್ವತಿಗಳಿಂದ ಆರಂಭವಾಗಿ ಇಂದಿನ ಪೀಠಾಧಿಪತಿಗಳಾದ ಶ್ರೀ ಗಂಗಾಧರೇಂದ್ರ ಸರಸ್ವತಿಗಳವರೆಗೆ ೫೪ ಯತಿವರ್ಯರು ಶ್ರೀಮಠದ ಸಂಸ್ಕೃತಿ ಪರಂಪರೆಯನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಸಮಸ್ತ ಗೋಕರ್ಣಮಂಡಲಕ್ಕೆ ಗುರುಪೀಠವಾಗುವುದರ ಜೊತೆಗೆ ಘಟ್ಟದ ಮೇಲಿನ ೧೬ ಸೀಮೆಗಳು ಹಾಗೂ ಘಟ್ಟದ ಕೆಳಗಿನ ಕೆಲಭಾಗಗಳು ಶ್ರೀಮಠದ ವ್ಯಾಪ್ತಿಯಲ್ಲಿದ್ದು ನಾಡಿನಾದ್ಯಂತ ಅಪಾರ ಸಂಖ್ಯೆಯ ಭಕ್ತಕೋಟಿಯನ್ನು ಶ್ರೀಮಠವು ಪಡೆದಿದೆ.

ಸ್ವರ್ಣವಲ್ಲೀ ಮಹಾಸಂಸ್ಥಾನವು ಭಾರತೀಯ ಸಂಸ್ಕೃತಿಯ ಪ್ರಸಾರ ಮಾಡುತ್ತಿದ್ದು ವೇದ ವಿದ್ಯಾವ್ಯಾಸಂಗ ಕೇಂದ್ರವಾಗಿ ಜನಜನಿತವಾಗಿದೆ. ವೈದಿಕ ಸಂಸ್ಕೃತಿ-ಸಂಸ್ಕಾರಗಳನ್ನು ಪ್ರಚುರಪಡಿಸುವುದು, ಆದಿಶಂಕರರ ವೇದಾಂತ ಸಾರವನ್ನು ಮನೆಮನಗಳಿಗೆ ತಲುಪಿಸುವುದು, ಧಾರ್ಮಿಕ ವಿಧಿವಿಧಾನಗಳನ್ನು,

ಕರ್ಮಾನುಷ್ಠಾನ, ಯೋಗವನ್ನು ನಿರಂತರವಾಗಿ ನಡೆಸುತ್ತಾ ಶ್ರೀಮಠವು ಭಕ್ತಕೋಟಿಯ ಕಣ್ಮಣಿಯಾಗಿ ಬೆಳೆದಿದೆ. ವಿದ್ಯಾದಾನ, ಅನ್ನದಾನ, ಅಭಯದಾನವನ್ನು ನೀಡಿ ಭಕ್ತರ ಬದುಕಿನ ಸಮಸ್ಯೆಗಳಿಗೆ ನಿರಂತರವಾಗಿ ಸ್ಪಂದಿಸುತ್ತಲಿರುವ ಈ ಮಹಾಸಂಸ್ಥಾನ ಭಾರತೀಯ ಸಂಸ್ಕೃತಿಯ ಪ್ರಸಾರಕಾರ್ಯ ಮಾಡುತ್ತಿದೆ. ಸರ್ವಧರ್ಮ ಸಮಭಾವ, ಭಾವೈಕ್ಯತೆ ಸಾರುವದು ಅದರ ಗುರಿಯಾಗಿದೆ.

ಸ್ವರ್ಣವಲ್ಲೀ ಮಹಾಸಂಸ್ಥಾನದ ೫೪ನೆಯ ಪೀಠಾಧಿಪತಿಗಳಾದ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ದಿವ್ಯ ನೇತೃತ್ವದಲ್ಲಿ "ಶ್ರೀ ಭಗವತ್ಪಾದ ಪ್ರಕಾಶನ" ಸಂಸ್ಥೆಯು ಆರಂಭವಾಗಿದ್ದು ಅದು ವಿದ್ವತ್ಪೂರ್ಣ ಕೃತಿಗಳನ್ನು ಪ್ರಕಟಿಸುತ್ತಿದೆ.

ಖ್ಯಾತ ಇತಿಹಾಸ ಸಂಶೋಧಕರಾದ ಡಾ. ಎ. ಕೆ. ಶಾಸ್ತ್ರಿ ಅವರು ಸಿದ್ಧಪಡಿಸಿಕೊಟ್ಟ 'ಸ್ವರ್ಣವಲ್ಲೀ ಮಹಾಸಂಸ್ಥಾನದ ಚಾರಿತ್ರಿಕ ದಾಖಲೆಗಳು' ಮಹಾಸಂಪುಟವನ್ನು ರಾಜ್ಯ ಪತ್ರಾಗಾರ ಇಲಾಖೆ ಪ್ರಕಟಿಸಿದೆ. ಡಾ. ಎ. ಕೆ. ಶಾಸ್ತ್ರಿ ಅವರು ರಚಿಸಿದ 'ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದ ಚರಿತ್ರೆ' ಎಂಬ ಮೌಲಿಕ ಸಂಶೋಧನ ಗ್ರಂಥವನ್ನು ಶ್ರೀಮಠವು ಪ್ರಕಟಿಸಿದೆ. ಇವು ಶ್ರೀಮಠದ ಐತಿಹಾಸಿಕ ವಿವರಗಳನ್ನು ನೀಡುತ್ತವೆ.

ಭಾರತೀಯ ಪ್ರಾಚೀನ ವೇದಶಾಸ್ತ್ರದ 'ಕೃಷ್ಣ ಯಜುರ್ವೇದ ಸ್ವಾಹಾಕಾರ ವಿಧಿ'ಯ ನಾಲ್ಕು ಬೃಹತ್ ಸಂಪುಟಗಳನ್ನು ಪರಿಷ್ಕರಿಸಿ ಪ್ರಕಟಿಸಲಾಗಿದೆ. ಆದಿಶಂಕರರ ಸ್ತೋತ್ರಗಳ ಸಂಪುಟ 'ಶ್ರೀ ಶಂಕರಾಚಾರ್ಯರ ಸ್ತೋತ್ರರತ್ನಮಾಲೆ' ಭಕ್ತರಿಗೆ ಪ್ರಿಯವಾಗಿದೆ. ಸ್ವರ್ಣವಲ್ಲೀ ಮಹಾಸಂಸ್ಥಾನದ ಹಿಂದಿನ ಗುರುಗಳಾದ 'ಶ್ರೀ ಸರ್ವಜ್ಞೇಂದ್ರ'ರನ್ನು ಕುರಿತ ನೆನಪಿನ ಗೌರವ ಗ್ರಂಥವನ್ನು ಶ್ರೀಮಠವು ಪ್ರಕಟಿಸಿದೆ.

ಭಾರತದ ಅಧ್ಯಾತ್ಮ ಪ್ರಪಂಚದ ಜ್ಯೋತಿಗಳು ಎಂಬ ಜನಪ್ರಿಯ ಪುಸ್ತಕಮಾಲೆಯನ್ನು ಆರಂಭಿಸಲಾಗಿದ್ದು ಇದರಲ್ಲಿ 'ವಿಭೂತಿ ಪುರುಷ ವಿದ್ಯಾರಣ್ಯರು', 'ಶ್ರೀ ಬೃಹತ್ ಗಂಗಾಧರೇಂದ್ರ ಸ್ವರಸ್ವತೀ', 'ಶ್ರೀ ಸರ್ವಜ್ಞೇಂದ್ರ ಸರಸ್ವತಿ' ಕೃತಿಗಳು ಪ್ರಕಟವಾಗಿವೆ. 'ಶ್ರೀ ಸ್ವರ್ಣವಲ್ಲೀ ಗುರುವಂಶಚರಿತಂ' ಎಂಬ ಕೃತಿಯೂ ಬಂದಿದೆ.

'ಸನಾತನ ಸಂಸ್ಕಾರಗಳು' ನಮ್ಮ ಪರಂಪರೆಯ ಸನಾತನ ಮಾರ್ಗವನ್ನು ಪ್ರಚುರಪಡಿಸುತ್ತದೆ. 'ಬೌಧಾಯನೀಯ ನಿತ್ಯಕರ್ಮ'ದ ಐದು ಸಾವಿರ ಪ್ರತಿಗಳು ಭಕ್ತರ ಕೈಸೇರಿವೆ. ಶ್ರೀಮಠದ ಆರಾಧ್ಯ ದೇವರಾದ 'ಶ್ರೀಲಕ್ಷ್ಮೀನರಸಿಂಹ ಕಲ್ಪೋಕ್ತ ಪೂಜಾವಿಧಿ' ಪುಸ್ತಕ ಪ್ರಕಟಿಸಲಾಗಿದೆ. ಶ್ರೀಗಳ ಸಂಕಲ್ಪದಂತೆ 'ಶ್ರೀ ಲಕ್ಷ್ಮೀನಾರಾಯಣ ಹೃದಯ ಪಾರಾಯಣ ವಿಧಿ' ಮತ್ತು 'ಶ್ರೀ ಲಕ್ಷ್ಮೀ ನಾರಾಯಣ ಪೂಜಾವಿಧಿ'ಗಳ ಹತ್ತು ಸಾವಿರ ಪ್ರತಿಗಳನ್ನು ಪ್ರಕಟಿಸಲಾಗಿದೆ. 'ಸ್ವರ್ಣವಲ್ಲೀ ಪ್ರಭಾ' ಆಧ್ಯಾತ್ಮಿಕ ಮಾಸಪತ್ರಿಗೆಯೂ ಶ್ರೀಮಠದಿಂದ ಪ್ರಕಟವಾಗುತ್ತಿದೆ. ಇವುಗಳ ಜೊತೆಗೆ ಗಾಯತ್ರಿ ಮಹತ್ವ ಮತ್ತು ಸಂಧ್ಯಾವಂದನೆ ಕ್ಯಾಸೆಟ್ಟುಗಳೂ ಹೊರ ಬಂದಿವೆ.

'ಶ್ರೀ ಶಂಕರಾಚಾರ್ಯರ ಅದ್ವೈತ ದರ್ಶನ' ಶ್ರೀ ಭಗವತ್ಪಾದ ಪ್ರಕಾಶನದ ಹೆಮ್ಮೆಯ ಪ್ರಕಟಣೆಯಾಗಿದೆ. ಆದಿಶಂಕರರ ಅದ್ವೈತ ವೇದಾಂತ, ಅದ್ವೈತ ಸಿದ್ಧಾಂತದ ವೈಜ್ಞಾನಿಕತೆ ಮತ್ತು ಭಾರತೀಯ ಸಾಹಿತ್ಯದಲ್ಲಿ ಅದ್ವೈತ ದರ್ಶನದ ಮೌಲಿಕ ಪ್ರಬಂಧಗಳನ್ನು ಇದು ಒಳಗೊಂಡಿದೆ.

ಉತ್ತಮವಾದ ಪಿಎಚ್.ಡಿ. ಮಹಾಪ್ರಬಂಧಗಳನ್ನು ಪ್ರಕಟಿಸುವ ಯೋಜನೆಯ ಅಂಗವಾಗಿ ಮದ್ರಾಸ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀಕೃಷ್ಣ ಭಟ್ ಅರ್ತಿಕಜೆ ಅವರ 'ಕನ್ನಡದಲ್ಲಿ ಶತಕ ಸಾಹಿತ್ಯ' ಮಹಾಪ್ರಬಂಧವನ್ನು ಪ್ರಕಟಿಸಲಾಗಿದೆ. ತಂತ್ರಸಮುಚ್ಚಯ, ಶೇಷಸಮುಚ್ಚಯ, ಕುಮಾರವ್ಯಾಸ ಭಾರತಕಥಾಮೃತದ ಬೃಹತ್ ಸಂಪುಟಗಳನ್ನು ಪ್ರಕಟಿಸಲಾಗಿದೆ.

ಪುಸ್ತಕಗಳ ಮೂಲಕ ಅಕ್ಷರಸ್ಥ ಸಮಾಜದಲ್ಲಿ ಧರ್ಮ, ಸಾಹಿತ್ಯ, ಸಂಸ್ಕೃತಿಯ ಬೀಜವನ್ನು ಬಿತ್ತಿ ಸಮಾಜೋನ್ನತಿ ಸಾಧಿಸಬೇಕೆಂಬುದು ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ಉಪದೇಶಾಮೃತವಾಗಿದೆ. ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಕ್ರಿಯಾಚೇತನರಾಗಿ ಧರ್ಮ, ಸಂಸ್ಕೃತಿಯ ಪ್ರಸಾರ, ಜೊತೆಗೆ ಪರಿಸರ ಸಂರಕ್ಷಣೆಯಂತಹ ವಿಧಾಯಕ ಕಾರ್ಯದಲ್ಲಿ ನೇತೃತ್ವ ವಹಿಸಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಶ್ರೀಗಳ 'ಆಲೋಕಯಾಂಬ ಲಲಿತೆ', 'ಧರ್ಮಸಂದೇಶ', "Radiant Thoughts" ಕೃತಿಗಳನ್ನು ಪ್ರಕಟಿಸಲಾಗಿದೆ. ಈಗಾಗಲೇ 'ಸ್ವರ್ಣವಲ್ಲೀ ಸುಧಾ', 'ಗಾಯತ್ರೀ ಜಪಯಜ್ಞ' ಹಾಗೂ ತಮ್ಮ ಉಪನ್ಯಾಸಗಳ ಧ್ವನಿ ಸುರುಳಿಗಳಿಂದ ಸಹೃದಯರ ಹೃನ್ಮನಗಳಲ್ಲಿ ವಿಚಾರೋನ್ನತಿಯನ್ನು, ಸಂಸ್ಕೃತಿಯ ಪ್ರಸಾರವನ್ನು ಮಾಡಿರುವ

ಶ್ರೀಗಳ ಗೀತಾ ಪ್ರವಚನ ಜನಪ್ರಿಯವಾಗಿದೆ. ಸ್ವರ್ಣವಲ್ಲೀ ಶ್ರೀಗಳು ಅದ್ಭುತವಾದ ಪ್ರತಿಭೆ-ಪಾಂಡಿತ್ಯಗಳ ಮಣಿರತ್ನವಾಗಿದ್ದಾರೆ.

ಬ್ರಹ್ಮರ್ಷಿ ದೈವರಾತರು ಇಪ್ಪತ್ತನೆಯ ಶತಮಾನದ ಭಾರತದ ಅಧ್ಯಾತ್ಮ ಪ್ರಪಂಚದ ಮಹಾಚೇತನವಾಗಿದ್ದಾರೆ. ಡಾ. ಜಿ. ಎನ್. ಭಟ್ಟ, ನಡಗೋಡು, ದೈವರಾತರ ಜೀವನ ಸಾಧನೆ ಕೃತಿಗಳ ಸಮೀಕ್ಷೆಯ ಈ ಗ್ರಂಥವನ್ನು ವಿಪುಲ ಆಕರಸಾಮಗ್ರಿಗಳ ಆಧಾರದಿಂದ ರಚಿಸಿಕೊಟ್ಟಿದ್ದಾರೆ. ಭಗವತ್ಪಾದ ಪ್ರಕಾಶನದ 'ಭಾರತದ ಅಧ್ಯಾತ್ಮ ಜ್ಯೋತಿಗಳು' ಪುಸ್ತಕ ಮಾಲೆಯಲ್ಲಿ 'ಬ್ರಹ್ಮರ್ಷಿ ದೈವರಾತರು' ಪುಸ್ತಕ ಪ್ರಕಟವಾಗುತ್ತಿದೆ. ಸಂಸ್ಕೃತ ಪ್ರಾಧ್ಯಾಪಕರೂ, ವಿದ್ವಾಂಸರೂ ಆದ ಡಾ. ಜಿ. ಎನ್. ಭಟ್ಟರು ದೈವರಾತರನ್ನು ಕನ್ನಡಲೋಕಕ್ಕೆ ಪರಿಚಯಿಸುವ ಮಹತ್ವದ ಕಾರ್ಯವನ್ನು ಮಾಡಿದ್ದಾರೆ. ತಮ್ಮ ಕೃತಿ ಶ್ರೀ ಭಗವತ್ಪಾದ ಪ್ರಕಾಶನದ ಮೂಲಕ ಪ್ರಕಟನೆಗೊಳ್ಳುವಂತೆ ಮಾಡಿದ ಡಾ. ಜಿ. ಎನ್. ಭಟ್ಟರಿಗೆ ನಮ್ಮ ಕೃತಜ್ಞತೆಗಳು. 'ಬ್ರಹ್ಮರ್ಷಿ ದೈವರಾತರು' ಪುಸ್ತಕ ಪ್ರಕಟಣೆಗೆ ಮಾರ್ಗದರ್ಶನ ಮಾಡಿದ ಪರಮಪೂಜ್ಯ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರಿಗೆ ಭಕ್ತಿಪೂರ್ವಕ ನಮನಗಳು. ಈ ಪುಸ್ತಕ ಪ್ರಕಟಣೆಗೆ ಕಾರಣರಾದ ಭಗವತ್ಪಾದ ಪ್ರಕಾಶನದ ಸದಸ್ಯರಿಗೂ ಶ್ರೀ ಮಠದ ಆಡಳಿತ ಮಂಡಳಿಗೂ ನಮ್ಮ ಧನ್ಯವಾದಗಳು. ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ಧಾರವಾಡ ಮನೋಹರ ಮುದ್ರಣಾಲಯದ ರವಿ-ಚಂದ್ರ ಸಹೋದರರಿಗೂ ಕೃತಜ್ಞತೆಗಳು. 'ಮಂತ್ರದೃಷ್ಟಾರ ಬ್ರಹ್ಮರ್ಷಿ ದೈವರಾತರು' ಪುಸ್ತಕವನ್ನು ಭಕ್ತರು ಕೊಂಡು ಓದಿ ಅದರಿಂದ ಸ್ಫೂರ್ತಿ ಪಡೆಯಲಿ ಎಂದು ನಾವು ಹಾರೈಸುತ್ತೇವೆ.

ಸರ್ವಧಾರಿ ಸಂವತ್ಸರ
ಶಂಕರ ಜಯಂತಿ

ಡಾ. ಜಿ. ಎಂ. ಹೆಗಡೆ
ಪ್ರೊ. ಪಿ. ಆಯ್. ಹೆಗಡೆ

ಪರಿವಿಡಿ

೧. ದೈವರಾತರ ಜನ್ಮಭೂಮಿ–ಗೋಕರ್ಣ

ಶ್ರೀ ಚಂದ್ರಶೇಖರಂ ವಂದೇ ಪಾರ್ವತೀರಮಣಂ ವಿಭುಂ ।
ಮಹಾಬಲೇತಿ ವಿಖ್ಯಾತಂ ಗೋಕರ್ಣೇಶಂ ನಮಾಮ್ಯಹಂ ॥

ಶತಶತಮಾನಗಳಿಂದ ವೇದವಾಙ್ಮಯದ ಅವಿಚ್ಛಿನ್ನವಾದ ಬೋಧನಾಪರಂಪರೆ, ವೇದೋದಿತವಾದ ಕರ್ಮಾನುಷ್ಠಾನಗಳಿಗೆ ಆಶ್ರಯವಾದ ಪವಿತ್ರ ಕ್ಷೇತ್ರ ಗೋಕರ್ಣ ಬ್ರಹ್ಮರ್ಷಿ ದೈವರಾತರ ಜನ್ಮಸ್ಥಾನ. ಉತ್ತರ–ಕನ್ನಡ ಜಿಲ್ಲೆಯ ಪಶ್ಚಿಮ ಸಾಗರ ತೀರದಲ್ಲಿರುವ ಗೋಕರ್ಣ ದಕ್ಷಿಣ ಭಾರತದ ಪ್ರಸಿದ್ಧ ಯಾತ್ರಾಸ್ಥಾನವೂ ಆಗಿದೆ. ಅಖಂಡ ಭರತಭೂಮಿಯಲ್ಲಿಯೇ 'ತ್ರಿಸ್ಥಲಿ' ಎಂದು ಮೂರು ಶಿವಸ್ಥಾನಗಳು ಪ್ರಸಿದ್ಧವಾಗಿವೆ. ಅಂತಹ ಮೂರು ಶಿವಸ್ಥಾನಗಳಲ್ಲಿ ವಾರಣಾಸೀ, ರಾಮೇಶ್ವರಗಳ ಸಹಿತ ಗೋಕರ್ಣ ಕ್ಷೇತ್ರವು ಸೇರಿರುವದು ಈ ಕ್ಷೇತ್ರದ ಮಹಿಮೆಗೆ ಸಾಕ್ಷಿಯಾಗಿದೆ. ಚಾರಿತ್ರಿಕವಾಗಿ ಗೋಕರ್ಣಕ್ಷೇತ್ರದ ಅಸ್ತಿತ್ವ ಕ್ರಿಸ್ತಶಕದ ಆರಂಭಕ್ಕೆ ಹೋಗುತ್ತದೆ. ಕರ್ಣಾಟಕದ ಅತ್ಯಂತ ಪ್ರಾಚೀನ ರಾಜಮನೆತನಗಳಲ್ಲಿ ಒಂದಾದ ಕದಂಬರ ಕಾಲದಿಂದ ಹಿಡಿದು ವಿಜಯನಗರದ ಅರಸರ ಚರಿತ್ರೆಯವರೆಗೆ ಈ ಕುರಿತು ಹಲವಾರು ಶಾಸನಗಳು ಬೆಳಕು ಬೀರಬಲ್ಲವು ಎಂಬುದು ಶಾಸನತಜ್ಞರ ಮತ್ತು ಪ್ರಖ್ಯಾತ ಪುರಾತತ್ತ್ವ ಶಾಸ್ತ್ರಕಾರರ ಅಭಿಪ್ರಾಯವಾಗಿದೆ.[೧]

ಪೌರಾಣಿಕವಾಗಿಯೂ ಅನಾದಿಕಾಲದಿಂದ ಗೋಕರ್ಣವು ಪ್ರಸಿದ್ಧ ತೀರ್ಥಕ್ಷೇತ್ರವೆಂದು ಪ್ರತೀತವಾಗಿರುವದು ಸರ್ವವಿದಿತವಾಗಿದೆ. ವಾಯುಪುರಾಣದ ನಲವತ್ತೆಂಟನೇ ಅಧ್ಯಾಯದಲ್ಲಿ–

---

೧. ಡಾ. ಎ. ಕೆ. ಶಾಸ್ತ್ರಿ : ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದ ಚರಿತ್ರೆ – ಪುಟ ೩೩–೩೪

"ತಸ್ಯ ದ್ವೀಪಸ್ಯ ವೈ ಪೂರ್ವೇ ತೀರೇ ನದ ನದೀಪತೇಃ।
ಗೋಕರ್ಣ ನಾಮಧೇಯಸ್ಯ ಶಂಕರಸ್ಯಾಲಯಂ ಮಹತ್ ॥"

ಎಂದು ಗೋಕರ್ಣ ಕ್ಷೇತ್ರವನ್ನು ಉಲ್ಲೇಖಿಸಲಾಗಿದೆ. ಬ್ರಹ್ಮಾಂಡ ಪುರಾಣದಲ್ಲಿಯೂ ಗೋಕರ್ಣವನ್ನು ಕುರಿತು ಹಲವು ಸ್ಥಳಗಳಲ್ಲಿ ಉಲ್ಲೇಖಿಸಲಾಗಿದ್ದು ಇದೇ ಪುರಾಣದ ಐವತ್ತೇಳನೇ ಅಧ್ಯಾಯವು ಗೋಕರ್ಣ ಕ್ಷೇತ್ರ ಹೇಗೆ ಪರಶುರಾಮ ಸೃಷ್ಟಿಯೆಂಬುದನ್ನು ವಿವರಿಸುತ್ತದೆ. ಬ್ರಹ್ಮಾಂಡಪುರಾಣದ ಒಂದು ಮಾತು ಗೋಕರ್ಣವನ್ನು ಹೀಗೆ ವಿವರಿಸುತ್ತದೆ–

ಗೋಕರ್ಣಂ ನಾಮ ವಿಖ್ಯಾತಂ ಕ್ಷೇತ್ರಂ ಸರ್ವಸುರಾರ್ಚಿತಮ್
ಸಾರ್ಧಯೋಜನ ವಿಸ್ತಾರಂ ತೀರೇ ಪಶ್ಚಿಮ ವಾರಿಧೇಃ॥

ಗೋಕರ್ಣ ಖಂಡವೆಂಬ ಪುರಾಣವು ಅಷ್ಟಾದಶ ಮಹಾಪುರಾಣಗಳಲ್ಲಿ ಒಂದಾದ ಸ್ಕಂದ ಪುರಾಣದ ಒಂದು ಭಾಗವಾಗಿದ್ದು ಇದರಲ್ಲಿ ಗೋಕರ್ಣ ಕ್ಷೇತ್ರದ ಮಹಿಮೆಯು ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ಗೋಕರ್ಣಖಂಡವು ನೂರಾಹದಿನೆಂಟು ಅಧ್ಯಾಯಗಳಿಂದ ಕೂಡಿದ್ದು ಇದರಲ್ಲಿ ಪ್ರಧಾನವಾಗಿ ಗೋಕರ್ಣದಲ್ಲಿ ಸ್ಥಾಪಿತವಾಗಿರುವ ಮೂವತ್ತಮೂರು ಶಿವಲಿಂಗಗಳ ಮತ್ತು ಮೂವತ್ತಮೂರು ತೀರ್ಥಗಳ ವರ್ಣನೆಯಿದೆ.[೨] ಹೀಗೆ ಸ್ಥಾಪಿತವಾದ ಶಿವಲಿಂಗಗಳಲ್ಲಿ ಈಶ್ವರನ ಆತ್ಮಲಿಂಗವೆಂದು ಪ್ರಥಿತವಾದ ಮಹಾಬಲೇಶ್ವರಾಭಿಧಾನದಿಂದ ಪ್ರಖ್ಯಾತವಾದದ್ದೇ ಗೋಕರ್ಣದಲ್ಲಿ ಸ್ಥಾಪಿಸಲ್ಪಟ್ಟ ಶಿವಲಿಂಗಗಳಲ್ಲೆಲ್ಲಾ ಪ್ರಧಾನವಾಗಿದ್ದು ತೀರ್ಥಗಳಲ್ಲಿ 'ಕೋಟಿತೀರ್ಥ'ವು ಪ್ರಧಾನವಾಗಿದೆ. ಈ ಪುರಾಣೋಕ್ತವಾದ ಶಿವಮಂದಿರಗಳಲ್ಲದೇ ಇನ್ನೂ ಬಹುಸಂಖ್ಯೆಯಲ್ಲಿರುವ ವಿಭಿನ್ನ ದೇವ–ದೇವತೆಗಳಿಗೆ ಸೇರಿದ ಬಹುಸಂಖ್ಯೆಯಲ್ಲಿರುವ ದೇವಾಯತನಗಳು ಗೋಕರ್ಣವನ್ನು ಅಕ್ಷರಶಃ ದೇವವಿಹಾರಭೂಮಿಯನ್ನಾಗಿ ಮಾಡಿವೆ. ಗಣಪತಿಯ ಕರದಿಂದ ಸ್ಥಾಪಿಸಲ್ಪಟ್ಟ ಈಶ್ವರನ ಆತ್ಮಲಿಂಗದಿಂದಾಗಿ 'ಭೂಕೈಲಾಸ'ವೆನ್ನಿಸಿಕೊಂಡಿರುವದು ಸಾರ್ಥಕವೇ ಆಗಿದೆ.

ಇಂತಹ ಪುರಾಣ ಪ್ರಸಿದ್ಧವಾದ ಗೋಕರ್ಣದಲ್ಲಿ ಸಹಸ್ರ ಸಹಸ್ರ ವರ್ಷಗಳಿಂದ ಆಸ್ತಿಕರಾದ ವಿವಿಧ ಪಂಥಗಳಿಗೆ ಸೇರಿದ ಅಧ್ಯಾತ್ಮವೀರರಾದ ಸಾಧಕರು ಬಂದು ತಪವನ್ನಾಚರಿಸಿ ಸಿದ್ಧಿಗಳನ್ನು ಪಡೆದು ಈ ಕ್ಷೇತ್ರದ ಮಹಿಮೆಯನ್ನು ಇನ್ನಷ್ಟು ಎತ್ತರಕ್ಕೆ ಏರಿಸಿದ್ದಾರೆ. ಸಾವಿರವರ್ಷಗಳ ಪರ್ಯಂತ

---

೨. ವೇ॥ ಗಜಾನನ ಹಿರೆ, ಗೋಕರ್ಣ : ಗೋಕರ್ಣಖಂಡಮ್ – ಪುಟ ೭

ಭಗೀರಥನು ಗೋಕರ್ಣದಲ್ಲಿ ದೇವನದಿಯಾದ ಗಂಗೆಯನ್ನು ಪೃಥ್ವಿಗೆ ಅವತರಣ ಮಾಡಿಸುವದಕ್ಕಾಗಿ ಅತ್ಯಂತ ಕಠೋರ ತಪಸ್ಸನ್ನು ಆಚರಿಸಿದನು ಎಂಬ ಉಲ್ಲೇಖ ಶ್ರೀಮದ್ವಾಲ್ಮೀಕಿರಾಮಾಯಣದಲ್ಲಿ ವರ್ಣಿತವಾಗಿದೆ.[೩] ಭಗೀರಥನ ತಪೋವೃತ್ತಾಂತವು ಗೋಕರ್ಣದ ಪ್ರಾಚೀನತೆಯನ್ನು ಸಾರಿಹೇಳುವುದರ ಜೊತೆಗೆ ತಪೋಸಿದ್ಧಿಗೆ ವರಸಿದ್ಧಿಕ್ಷೇತ್ರ ಇದಾಗಿದೆ ಎಂಬುದಕ್ಕೆ ಪ್ರಮಾಣವೂ ಆಗಿ ನಿಲ್ಲುತ್ತದೆ. ಸ್ವಯಂ ತಪಸ್ವಿಗಳಾದ ಬ್ರಹ್ಮರ್ಷಿ ದೈವರಾತರ ಜೀವನ ಚರಿತ್ರೆಯಲ್ಲಿ ಪ್ರತ್ಯಕ್ಷವಾಗಿ ಬರುವ ಶ್ರೀ ವಾಸುದೇವಾನಂದ ಸರಸ್ವತೀ ಟೆಂಬೆ ಮಹಾರಾಜರು, ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿಗಳು ಸಂತ ರಾಮದಾಸ ಸ್ವಾಮಿಗಳವರೆಗೂ ತಪಸ್ವಿಗಳ ಗೋಕರ್ಣ ಕ್ಷೇತ್ರದೊಂದಿಗಿನ ಸಂಬಂಧದ ಈ ಪರಂಪರೆ ಮುಂದುವರಿದುಕೊಂಡೇ ಬಂದಿದೆ ಎಂಬುದನ್ನಿಲ್ಲಿ ಗಮನಿಸಬಹುದಾಗಿದೆ. ವಾಸಿಷ್ಠ ಗಣಪತಿ ಮುನಿಗಳಂತೂ ತಪವನ್ನಾಚರಿಸುವದಕ್ಕೆ ಎಲ್ಲಿಗೆ ಹೋಗಲಿ ಎಂದು ಒಂದು ಕ್ಷಣ ವಿಚಾರಮಾಡಿದಾಗ ಅವರ ಸ್ಮೃತಿಪಟಲದಲ್ಲಿ ಮೂಡಿದ್ದು 'ಸ ಘೋರಂ ತಪ ಅತಿಷ್ಠದ್ ಗೋಕರ್ಣೇ ರಘುನಂದನ' ಎಂಬ ಮಾತು. ಅದೇ ಅವರಿಗೆ ಗೋಕರ್ಣ ಗಮನಕ್ಕೆ ಪ್ರೇರಕಶಕ್ತಿಯಾದದ್ದು ಎಂಬುದು ವಾಸಿಷ್ಠ ವೈಭವದಲ್ಲಿ ಉಲ್ಲೇಖಿತವಾಗಿದೆ.[೪]

ಇಂತಹ ಸಿದ್ಧಿಕ್ಷೇತ್ರವಾದ ಗೋಕರ್ಣದಲ್ಲಿ ಬ್ರಹ್ಮರ್ಷಿ ದೈವರಾತರ ಜನ್ಮ ಆಯಿತು; ಅವರು ಹುಟ್ಟಿ ಬೆಳೆದು ಮುಂದೆ ಅರ್ವಾಚೀನಕಾಲದ ಮಂತ್ರದೃಷ್ಟಾರರಾದರು. ಅನಂತರದ ಕಾಲದಲ್ಲಿ ಅವರು ಗೋಕರ್ಣದಲ್ಲಿ ವಿಶಿಷ್ಟ ಸನಾತನ ತತ್ತ್ವಗಳನ್ನು ಅಳವಡಿಸಿದ ಆಶ್ರಮವನ್ನು ಸ್ಥಾಪನೆ ಮಾಡಿದರು. ಇಂತಹ ಸಿದ್ಧಿಕ್ಷೇತ್ರವಾದ ಗೋಕರ್ಣದಲ್ಲಿ ನಡೆದ ಸಾಧಕರ ತಪಸ್ಸಿನ ಪುಣ್ಯಭೂಮಿಕೆಯಲ್ಲಿ ಅವಿರ್ಭೂತವಾದ ಅಭಿವ್ಯಕ್ತವಾದ ದಿವ್ಯಚೇತನವೇ ದೈವರಾತರಾಗಿದ್ದಾರೆ.

ಗತಃ ಪ್ರತೀಚೀನಪಯೋಧಿತೀರೇ
ಕ್ಷೇತ್ರಂ ಪುರಾಣಪ್ರಥಿತಂ ಪವಿತ್ರಮ್।
ಯತ್ರ ಪ್ರಸನ್ನೋ ಭಗವಾನ್ಮಹೇಶೋ
ಮಹಾಬಲಾಖ್ಯಃ ಶಿವಲಿಂಗಮೂರ್ತಿಃ॥[೫]

---

೩. ಶ್ರೀ ವಾಲ್ಮೀಕಿ ರಾಮಾಯಣ ಬಾಲಕಾಂಡ ಸರ್ಗ–೪೨
೪. ಟಿ. ವಿ. ಕಪಾಲಿಶಾಸ್ತ್ರಿ : 'ವಾಸಿಷ್ಠ ವೈಭವಮ್' – ಪುಟ ೬೪
೫. ಟಿ. ವಿ. ಕಪಾಲಿಶಾಸ್ತ್ರಿ : ವಾಸಿಷ್ಠವೈಭವಮ್ – ಪುಟ ೬೭

೨. ದೈವರಾತರ ಪೂರ್ವಜರು

ದೈವರಾತರು ಉತ್ತರ-ಕನ್ನಡ, ಶಿವಮೊಗ್ಗ, ದಕ್ಷಿಣ-ಕನ್ನಡ ಮೊದಲಾದ ಜಿಲ್ಲೆಗಳಲ್ಲಿ ವಾಸಿಸುತ್ತಿರುವ 'ಹವ್ಯಕ' ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು. ಗೋಕರ್ಣದಲ್ಲಿ ಉಳಿದ ಬ್ರಾಹ್ಮಣ ಸಮುದಾಯಕ್ಕಿಂತ 'ಹವ್ಯಕ'ರ ಸಂಖ್ಯೆ ಪ್ರಾಯಶಃ ಗಣನೀಯವಾಗಿ ಹೆಚ್ಚಾಗಿಯೇ ಇದೆ. ಉತ್ತರ-ಕನ್ನಡ ಮಂಡಲಕ್ಕೆ ಈ 'ಹವ್ಯಕ'ರು ಎಲ್ಲಿಂದ, ಏಕೆ, ಮತ್ತು ಯಾವಾಗ ಬಂದರೆಂಬುದಕ್ಕೆ ಸ್ಕಾಂದ ಪುರಾಣದ ಉತ್ತರ ಸಹ್ಯಾದ್ರಿ ಖಂಡ ಕೆಲವು ವಿವರಗಳನ್ನು ನೀಡುತ್ತದೆ. ಬನವಾಸಿಯ ಕದಂಬವಂಶದ ರಾಜನಾದ ಮಯೂರವರ್ಮನಿಗೆ ಕಾಶ್ಯಪಮುನಿಗಳು (ಉತ್ತರ ಭಾರತದ) 'ಅಹಿಚ್ಛತ್ರ' (ಅಹಿಕ್ಷೇತ್ರ)ದಿಂದ ಯಜನ-ಯಾಜನಾದಿ ವಿಹಿತ ಕರ್ಮಗಳ ಸುಗಮ ಅನುಷ್ಠಾನಕ್ಕಾಗಿ ಕೆಲವು ಬ್ರಾಹ್ಮಣರನ್ನು ಕರೆತರುವಂತೆ ಆದೇಶಿಸುತ್ತಾರೆ. ಆ ಆದೇಶದಂತೆ ಮಯೂರವರ್ಮನು ಗಂಗಾನದೀ ತೀರದ 'ಅಹಿಚ್ಛತ್ರ'ದಿಂದ ಬ್ರಾಹ್ಮಣರನ್ನು ಕರೆಯಿಸಿದನು. ಹಾಗೆ ಬಂದ ಬ್ರಾಹ್ಮಣರೇ 'ಹವ್ಯಕರು'. ಇವರು ಕ್ರಮೇಣ ಗೋಕರ್ಣವೇ ಮುಂತಾದ ಕ್ಷೇತ್ರಗಳಿಗೂ ಬಂದು ವಾಸಿಸತೊಡಗಿದರು ಎಂಬುದು ಇದೀಗ ಸಾಮಾನ್ಯವಾಗಿ ಒಪ್ಪಿತವಾಗಿರುವ ವಿಷಯವಾಗಿದೆ.[೧] ಹೀಗೆ ಬಂದ ಹವ್ಯಕರು ತಾವು 'ಸ್ವಾಧ್ಯಾಯ' ನಿರತರಾಗಿ ಸದಾಚಾರ ಸಂಪನ್ನರಾಗಿ ಶ್ರೌತ ಮತ್ತು ಸ್ಮಾರ್ತ ಕರ್ಮಾನುಷ್ಠಾನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಗೋಕರ್ಣ ಕ್ಷೇತ್ರದ ಸಿದ್ಧಿ ಪ್ರಸಿದ್ಧಿಗಳ ದೀರ್ಘ ಪರಂಪರೆಯಲ್ಲಿ ಅವಿನಾಭಾವದಿಂದ ಸೇರಿಹೋಗಿರುವದು ಕಂಡುಬರುತ್ತದೆ.

೧. ಉತ್ತರ ಸಹ್ಯಾದ್ರಿ ಖಂಡ (ಸ್ಕಂದ ಪುರಾಣಾಂತರ್ಗತ) ಅಧ್ಯಾಯ ೪ ಶ್ಲೋಕ-೧೯
ಹವ್ಯಕರ ಇತಿಹಾಸ - ಹವ್ಯಕರ ಸಂಪದಭಿವೃದ್ಧಿ ಸಮಾಜ (೧೯೮೦), ಪುಟ ೨೧

ಗೋಕರ್ಣದಲ್ಲಿ ನೆಲೆಸಿರುವ ವಿಶ್ವಾಮಿತ್ರ, ವಸಿಷ್ಠಾದಿ ಗೋತ್ರ ಪ್ರವರಗಳನ್ನು ಹೊಂದಿದ ಹವ್ಯಕ-ಬ್ರಾಹ್ಮಣರು ಪ್ರಾಯಶಃ ಗುರುತಿನ ಸೌಲಭ್ಯಕ್ಕಾಗಿ ಕಾಲಕ್ರಮೇಣ ಪ್ರತ್ಯೇಕವಾಗಿ ಒಂದೊಂದು ಕುಟುಂಬನಾಮವನ್ನೂ ಹೊಂದಿರುವದು ಕಂಡುಬರುತ್ತದೆ. ಉದಾ: ಮಾರ್ಕಂಡೇಯ, ವೇದೇಶ್ವರ ಇತ್ಯಾದಿ. ವಿಶ್ವಾಮಿತ್ರ ಗೋತ್ರಕ್ಕೆ ಸೇರಿದ 'ಭಡತಿ' ಎಂಬ ಕುಟುಂಬ-ನಾಮದಿಂದ ಕೂಡಿದ ಒಂದು ಪರಿವಾರವೂ ಇವುಗಳಲ್ಲಿ ಒಂದಾಗಿದೆ. ದೈವರಾತರು ಹುಟ್ಟಿದ್ದು ಭಡತಿ ಮನೆತನದಲ್ಲಿ.

'ಭಡತಿ' ಮನೆತನವು ಗೋಕರ್ಣದಲ್ಲಿ ಪ್ರಸಿದ್ಧ ವೈದಿಕರ ಮನೆತನಗಳ ಪೈಕಿ ಒಂದು ಎಂದು ಬಹುಕಾಲದಿಂದ ಪ್ರತೀತವಾಗಿದೆ. ಸದಾಚಾರಿಗಳೂ, ನಿತ್ಯ-ನೈಮಿತ್ತಿಕ ಕರ್ಮಗಳನ್ನು ಅನುಷ್ಠಾನ ಮಾಡುತ್ತ ಇರುವವರೂ, ವೇದಾಧ್ಯಯನ ಅಧ್ಯಾಪನ, ಯಜನ-ಯಾಜನಾದಿಗಳಲ್ಲಿ ನಿರತರಾದವರೂ ಸಂಸ್ಕೃತ-ವಾಙ್ಮಯದಲ್ಲಿ ಪಂಡಿತರೂ ಆದ ಭಡತಿ ಮನೆತನದಲ್ಲಿ ದೈವರಾತರು ಜನ್ಮ ಪಡೆದರು. ಭಡತಿ ಮನೆತನವನ್ನು ಕುರಿತು ಈ ಮೇಲೆ ವಿವರಿಸಿದ ಸಾಮಾನ್ಯ ಅಂಶಗಳನ್ನು ಹೊರತುಪಡಿಸಿ ದೈವರಾತರ ಪೂರ್ವಜರನ್ನು ಉದ್ದೇಶಿಸಿ ವಿಶೇಷ ಅಂಶಗಳು ಯಾವುವೂ ಉಪಲಬ್ಧವಾಗುವುದಿಲ್ಲ. ದೈವರಾತರಿಂದ ಕೇವಲ ಎರಡು ತಲೆಮಾರುಗಳಷ್ಟು ಹಿಂದಿನಿಂದ ಮಾತ್ರ ವಂಶಾವಳಿಗೆ ಸಂಬಂಧಪಟ್ಟ ಅಂಶಗಳು ದೊರಕುತ್ತವೆ. ದೈವರಾತರ ಅಜ್ಜನ ಹೆಸರು ವರದೇಶ್ವರ ಭಡತಿ ಎಂದು. ಇವರಿಗೆ ಮೂರು ಜನ ಮಕ್ಕಳು. ಮೊದಲನೆಯ ಮಗನ ಹೆಸರು ಶಿವ, ಎರಡನೆಯ ಮಗನ ಹೆಸರು ವಿಘ್ನೇಶ್ವರ ಭಡತಿ ಎಂದು ಮತ್ತು ಮೂರನೆಯ ಮಗ ಸುಬ್ರಾಯ ಎಂದಾಗಿತ್ತು. ಇವರಲ್ಲಿ ದ್ವಿತೀಯ ಪುತ್ರನಾದ ವಿಘ್ನೇಶ್ವರ ಭಟ್ಟರೇ ದೈವರಾತರ ತಂದೆ. ವಿಘ್ನೇಶ್ವರ ಭಡತಿಯವರಿಗೆ ಮೂರು ಜನ ಮಡದಿಯರಿದ್ದರು-ನಾಗವೇಣಿ, ಸರಸ್ವತಿ ಮತ್ತು ಪಾರ್ವತಿ ಎಂದು. ನಾಗವೇಣಿ ಎಂಬ ಮೊದಲ ಪತ್ನಿಯೇ ದೈವರಾತರ ತಾಯಿ. ದೈವರಾತರೇ ಅವರ ಪಾಲಕರ ಹಿರಿಯ ಪುತ್ರ! ದೈವರಾತರಿಗೆ ಒಬ್ಬನು ಸೀತಾರಾಮ ಎಂಬ ತಮ್ಮನೂ ಲಲಿತಾ ಎನ್ನುವ ತಂಗಿಯೂ ಇದ್ದರು. ಇನ್ನುಳಿದಂತೆ ವಿಘ್ನೇಶ್ವರ ಭಡತಿಯವರಿಗೆ ಎರಡನೆಯ ಪತ್ನಿಯಲ್ಲಿ ಮಕ್ಕಳಾಗಲಿಲ್ಲ, ಮೂರನೆಯ ಪತ್ನಿಯಲ್ಲಿ ಉಮಾಮಹೇಶ್ವರ ಮತ್ತು ದತ್ತಾತ್ರೇಯ ಎಂಬ ಎರಡು ಮಕ್ಕಳೂ ಹುಟ್ಟಿದರು.[೨]

೨. ದೈವರಾತರ ಹತ್ತಿರದ ಬಂಧುಗಳಿಂದ ಸಂಗ್ರಹಿಸಿದ ವಿವರ

ನಾಗವೇಣಿ ಮತ್ತು ವಿಘ್ನೇಶ್ವರ ಭಡತಿ ದಂಪತಿಗಳಿಗೆ ಹಿಂದೆ ಹೇಳಿದಂತೆ ದೈವರಾತರು ಜ್ಯೇಷ್ಠ ಪುತ್ರನಾಗಿ ಶಾಲಿವಾಹನ ಶಕೆ ೧೮೧೩ ಖರ ಸಂವತ್ಸರ ಪುಷ್ಯ ಶುಕ್ಲಪಕ್ಷದ ಪಂಚಮಿ ತಿಥಿ ಸೋಮವಾರ (ಜನವರಿ ೪, ೧೮೯೨) ದಂದು ಜನಿಸಿದರು.[೩] ದೈವರಾತರ ನಾಮಕರಣದ ಹೆಸರು ಗಣೇಶ[೪] ಎಂದು ಇಡಲಾಗಿತ್ತು.

ದೈವರಾತರ ತಂದೆಯವರಾದ ವಿಘ್ನೇಶ್ವರ ಭಟ್ಟ ಭಡತಿಯವರು ವೈದಿಕ ವಿದ್ಯೆಯಲ್ಲಿ ಪಾರಂಗತರಾಗಿದ್ದರು. ತಂದೆ ವರದೇಶ್ವರ ಭಡತಿಯವರು, ದೈವರಾತರ ತಾಯಿಯ ತಂದೆಯಾದ ಗಣೇಶ ಶಾಸ್ತ್ರಿ ಹೊಸಮನೆಯವರೊಂದಿಗೆ ವಾರಣಾಸಿಗೆ ಹೋಗಿ ಸಂಸ್ಕೃತ ವಾಙ್ಮಯ, ವೈದಿಕ ವಾಙ್ಮಯ ಮತ್ತು ದರ್ಶನ ಶಾಸ್ತ್ರಗಳನ್ನು ಅಧ್ಯಯನ ಮಾಡಿ ಬಂದವರಾಗಿದ್ದರು.[೫] ವಿಘ್ನೇಶ್ವರ ಭಟ್ಟ ಭಡತಿಯವರಿಗೆ ತಮ್ಮ ತಂದೆಯಿಂದ ಈ ವಿದ್ಯೆಗಳ ಪರಂಪರೆ ಹರಿದು ಬಂದಿತ್ತು. ವಿಘ್ನೇಶ್ವರ ಭಡತಿಯವರು ಕನ್ನಡ ಭಾಷೆಯ ಮೇಲೆಯೂ ಪ್ರಭುತ್ವವನ್ನು ಪಡೆದವರಾಗಿದ್ದು ಕವಿಗಳೂ ಆಗಿದ್ದರು. ಕನ್ನಡದಲ್ಲಿ ಅವರು ದೇವ ದೇವತೆಗಳನ್ನು ಕುರಿತು ಅನೇಕ ಹಾಡುಗಳನ್ನು ರಚಿಸಿದ್ದರು. ದಯೆ, ಅನುಕಂಪಗಳಿಂದ ತುಂಬಿದ ಅಂತರಂಗದಿಂದ ಕೂಡಿದ ಅವರ ವ್ಯಕ್ತಿತ್ವ ಮೃದು ಮಧುರವಾದದ್ದೂ ವಿನಯಗುಣೋಪೇತವಾದದ್ದೂ ಆಗಿತ್ತು. ವಿಘ್ನೇಶ್ವರ ಭಡತಿಯವರು ತಾವು ರಚಿಸಿದ ಭಕ್ತಿಪರವಾದ ಹಾಡುಗಳನ್ನು ಶಾಸ್ತ್ರೋಕ್ತವಾಗಿ ಹಾಗೂ ಇಂಪಾಗಿ ಹಾಡಬಲ್ಲವರೂ ಆಗಿದ್ದು ವಿಶೇಷವಾಗಿತ್ತು. ಸ್ವಯಂ ದೈವರಾತರೇ ತಮ್ಮ ತಂದೆಯನ್ನು ಕುರಿತು ಗೌರವದಿಂದ ಹೀಗೆ ದಾಖಲಿಸುತ್ತಾರೆ– "ನನ್ನ ತಂದೆಯವರು ವೇದವಿದ್ಯಾಪಾರಂಗತರೂ ಸಂಸ್ಕೃತ ವಿದ್ವಾಂಸರೂ ಆಗಿರುವಂತೆ ಒಳ್ಳೆಯ ಕವಿಗಳೂ ಆಗಿದ್ದರು. ಅವರು ದೇವರನ್ನು ಕುರಿತು ಅನೇಕ ಹಾಡುಗಳನ್ನು ರಚಿಸಿದ್ದರು. ಅವುಗಳಲ್ಲಿ ಮಂಗಲಾರತಿಯ ಹಾಡುಗಳು, ಅನಂತನ ಹಾಡುಗಳು ಪ್ರಸಿದ್ಧವಾಗಿದ್ದವು. ಅವರು ಬರೆದ ಮದುವೆಯ

೩. ಛಂದೋದರ್ಶನ ವಾಸಿಷ್ಠಾನ್ವಯಭಾಷ್ಯಭೂಮಿಕಾ – ಪುಟ xviii

೪. ದೈವರಾತರ ನಾಮಕರಣದ ಹೆಸರಿನ ಕುರಿತು ಸ್ವಲ್ಪಮಟ್ಟಿನ ಗೊಂದಲವಿದೆ. ದೊರೆತ ಆಕರಗಳಲ್ಲಿ ಕೆಲವು ಕಡೆ ಗಣೇಶ ಎಂದೂ ಕೆಲವು ಕಡೆ ಗಜಾನನ ಎಂದೂ ಉಲ್ಲೇಖವಿದೆ. ದೈವರಾತರ ಅಪ್ರಕಟಿತ ಆತ್ಮಚರಿತ್ರೆಯ ಉಪಲಬ್ಧವಿರುವ ಭಾಗಗಳಲ್ಲಿ ಗಣೇಶ ಎಂದೇ ಉಲ್ಲೇಖಿಸಲಾಗಿದ್ದು ಅದೇ ಹೆಚ್ಚು ಪ್ರಸ್ತುತವಾದುದರಿಂದ ಅದನ್ನೇ ಸ್ವೀಕರಿಸಲಾಗಿದೆ.

೫. ಆರ್. ಆರ್. ದಿವಾಕರ : ಬ್ರಹ್ಮರ್ಷಿ ದೈವರಾತ : ಜೀವನ ಮತ್ತು ಕೃತಿಗಳು (ಇಂಗ್ಲೀಷ), ಸಂಯುಕ್ತ ಕರ್ಣಾಟಕ ಪ್ರಕಟಣೆ, ೧೯೬೪

ಹಾಡುಗಳೂ ಪ್ರಸಿದ್ಧವಾಗಿದ್ದವು. ಅವರು ಬರೆದ ಮದುವೆಯ ಹಾಡುಗಳು ಅವರ ಘನವಿದ್ವತ್ತು ಮತ್ತು ಕರುಣಾಪೂರಿತ ಅಂತಃಕರಣದ ಪ್ರತೀಕವಾಗಿದೆ. ಮದುವೆಯಲ್ಲಿ ಆ ಹಾಡನ್ನು ಹಾಡುತ್ತ ಹೆಂಗಸರು ಕಣ್ಣೀರು ಸುರಿಸುವದನ್ನು ನಾನು ನೋಡಿದ್ದೇನೆ. ಆ ಹಾಡನ್ನು ಕೇಳಿ ಅಲ್ಲಿ ನೆರೆದವರ ಕಣ್ಣುಗಳೂ ಒದ್ದೆಯಾಗುತ್ತಿದ್ದವು. ಅಷ್ಟು ಹೃದಯಂಗಮವಾಗಿತ್ತು ಆ ಹಾಡು. ತಂದೆಯವರು ಹಾಡುಗಳನ್ನು ಬರೆಯಬಲ್ಲವರಾಗಿದ್ದಂತೆ ಶಾಸ್ತ್ರೀಯವಾಗಿ ಹಾಡಬಲ್ಲವರೂ ಆಗಿದ್ದರು. ಅವರ ಕಂಠವು ಬಹು ಮಧುರವಾಗಿದ್ದು, ಇಂಪಾಗಿ ಹಾಡುತ್ತಿದ್ದರು. ಇದು ಅವರಿಗೊಂದು ವರದಾನವೇ ಆಗಿತ್ತು."[೬]

ಭಡತಿ ಮನೆಯವರು ಕೃಷಿಕರೂ ಆಗಿದ್ದರು. ಗೋಕರ್ಣದಿಂದ ಸುಮಾರು ಐದು ಮೈಲುಗಳ ಅಂತರದಲ್ಲಿ ತೆಂಗಿನ ತೋಟ ಮತ್ತು ಭತ್ತದ ಗದ್ದೆಗಳನ್ನು ಭಡತಿ ಮನೆಯವರು ಹೊಂದಿದ್ದರು. ವಿಘ್ನೇಶ್ವರ ಭಡತಿಯವರು ಮೇಲಿಂದ ಮೇಲೆ ತಮ್ಮ ತೋಟ ಗದ್ದೆಗಳಿಗೆ ಹೋಗಿ ಕೃಷಿ ಕಾರ್ಯದಲ್ಲಿ ತೊಡಗುತ್ತಿದ್ದರು. ಸಮುದ್ರ ತೀರದ ಗುಂಟ ಮುಂಜಾನೆ ನಡೆದುಕೊಂಡು ಹೋಗಿ ಸಂಜೆಯವರೆಗೆ ಕೆಲಸಮಾಡಿ ಮನೆಗೆ ಮರಳುತ್ತಿದ್ದರು.[೭] ಕೃಷಿಕಾರ್ಯವನ್ನು ಮಾಡುವಲ್ಲಿ ಉಂಟಾಗುವ ಶ್ರಮವನ್ನು ನಿರಾಯಾಸವಾಗಿ ನಿರ್ವಹಿಸಬಲ್ಲ ಬಲಿಷ್ಠವಾದ ಶರೀರಸಂಪತ್ತೂ ವಿಘ್ನೇಶ್ವರ ಭಡತಿಯವರಿಗಿತ್ತು. ದೈವರಾತರ ತಂದೆಯವರದ್ದು ಈ ವಿಧವಾಗಿ ಸುದೃಢ ಆರೋಗ್ಯದಿಂದ ಕೂಡಿದ ಬಲಿಷ್ಠವಾದ ಶರೀರ, ವೇದೋದಿತವಾದ ಶಾಸ್ತ್ರ ಪ್ರಕ್ಷಾಲಿತವಾದ ಬುದ್ಧಿ ಮತ್ತು ಕವಿತ್ವ ಸಹಜವಾದ ಸಹೃದಯತ್ವದಿಂದ ಕೂಡಿದ ಅಂತಃಕರಣಗಳಿಂದ ಕೂಡಿದ ಸಾಮರಸ್ಯ ಮತ್ತು ಸಮತೋಲನಗಳಿಂದ ಕೂಡಿದ ವ್ಯಕ್ತಿತ್ವವಾಗಿತ್ತು.

ಹಿಂದೆ ಉಲ್ಲೇಖಿಸಿದಂತೆ ದೈವರಾತರ ತಾಯಿ ನಾಗವೇಣಿ ಎಂಬವರಾಗಿದ್ದರು. ಅವರ ತಂದೆ ಆಗಿನಕಾಲದಲ್ಲಿ ದೇಶದಲ್ಲಿಯೇ ಬೆರಳೆಣಿಕೆಯ

೬. ಅಪ್ರಕಟಿತ ಆತ್ಮಚರಿತ್ರೆ, ಪುಟ ೯, ೧೦

೭. ಭಡತಿ ಮನೆತನದವರಿಗೆ ತೆಂಗಿನ ತೋಟ ಮತ್ತು ಭತ್ತದ ಗದ್ದೆಗಳಿದ್ದವು ಎನ್ನುವದಕ್ಕೆ ಅಪ್ರಕಟಿತ ಆತ್ಮಚರಿತ್ರೆ (ಪುಟ ೧೦) ಆಧಾರವಾಗಿದೆ. ಪ್ರಸ್ತುತ ಗ್ರಂಥಕರ್ತನು ಅಪ್ರಕಟಿತ ಆತ್ಮಚರಿತ್ರೆಯ ನಿರೂಪಕರಾದ ವೇದಶ್ರವ ಶರ್ಮ (ದೈವರಾತರ ಮೊಮ್ಮಗ) ರೊಂದಿಗೆ ನಡೆಸಿದ ಸಂದರ್ಶನದ ವೇಳೆಯಲ್ಲಿ ಈ ಅಂಶವನ್ನು ದೃಢಪಡಿಸಿಕೊಳ್ಳಲಾಗಿದೆ.

ಖ್ಯಾತ ಸಂಸ್ಕೃತ ವಿದ್ವಾಂಸರಲ್ಲೊಬ್ಬರಾದ ಗಣೇಶ ಶಾಸ್ತ್ರಿ ಹೊಸಮನೆ ಎಂಬವರಾಗಿದ್ದರು. ನಾಗವೇಣಿಯವರದು ತುಂಬು ಹೃದಯವಂತಿಕೆಯಿಂದ ಕೂಡಿದ ಸುಂದರ ವ್ಯಕ್ತಿತ್ವವಾಗಿತ್ತು. ಎತ್ತರದ ನಿಲುವಿನ ಅಗಲವಾದ ಮುಖದ, ಬೆಳ್ಳಗಿನ, ನೋಡಿದವರ ಮನದಲ್ಲಿ ಪೂಜ್ಯಭಾವವನ್ನು ಉಂಟುಮಾಡುವ ದೈವರಾತರ ತಾಯಿಯ ವರ್ಣನೆ ದೈವರಾತರು ಸ್ಮರಿಸಿರುವದು ಹೀಗೆ- "ತಾಯಿ ನಾಗವೇಣಿಯು ನೋಡಲು ಬಹು ಸುಂದರವಾಗಿ ಲಕ್ಷ್ಮೀದೇವಿಯಂತೆ ಇದ್ದಳು. ಎತ್ತರವಾದ ಅವಳ ನಿಲುವಿನಲ್ಲಿ ಗೌರವರ್ಣದ ಮೈಕಾಂತಿಯಿಂದ ಅಗಲವಾದ ಅವಳ ಮುಖದಲ್ಲಿ ಸದಾ ಮಂದಹಾಸವು ಮಿನುಗುತ್ತಿತ್ತು. ಅವಳ ಆ ನಿರ್ಮಲವಾದ ಮತ್ತು ಪವಿತ್ರ ಸೌಮ್ಯ ಭಾವವನ್ನು ಕಂಡಾಗ ಅವಳ ಬಗೆಗೆ ಯಾರಲ್ಲಿಯೂ ಪ್ರಾಂಜಲಭಾವ ಮೂಡುತ್ತಿತ್ತು."[೮]

ದೈವರಾತರ ತಾಯಿ ಮದುವೆಯಾಗಿ ಬಂದದ್ದು ತುಂಬಿದ ಮನೆಗೆ. ಆಗ ಅವಿಭಕ್ತ ಕುಟುಂಬಗಳು ಸರ್ವೇಸಾಮಾನ್ಯವಾದ ಕಾಲಘಟ್ಟ. ಮನೆ ತುಂಬ ಜನ. ಎರಡು-ಮೂರು ತಲೆಮಾರುಗಳಿಗೆ ಸೇರಿದ ಜನರು ಒಂದೇ ಸೂರಿನಡಿಯಲ್ಲಿ ಸಾಮರಸ್ಯದಿಂದ ಇರುವದು ಅಪರೂಪವಾಗಿರಲಿಲ್ಲ. ಅಂಥ ಮನೆಗಳಲ್ಲಿ ಸ್ತ್ರೀ ಸಮುದಾಯದ ಕಾರ್ಯಬಾಹುಲ್ಯ ಮತ್ತು ಹೊಣೆಗಾರಿಕೆಗಳೂ ಹೆಚ್ಚುಹೆಚ್ಚೇ ಆಗಿತ್ತು. ಸ್ತ್ರೀಯರಿಗೆ ಇಂತಹ ವಾತಾವರಣದಲ್ಲಿ ವ್ಯವಧಾನ ವಿಶ್ರಾಂತಿಗಳಿಗೂ ಬಹಳಷ್ಟು ವೇಳೆ ಅವಕಾಶವಿರುತ್ತಿರಲಿಲ್ಲ. ದೈವರಾತರ ತಾಯಿಯವರು ಮದುವೆಯಾಗಿ ಬಂದಾಗ ದೈವರಾತರ ಮನೆಯಲ್ಲಿಯೂ ಇದೇ ಸಂದರ್ಭವಿತ್ತು. ನಸುಕಿನಲ್ಲಿ ಪ್ರಾರಂಭವಾದ ಗೃಹಕೃತ್ಯ ರಾತ್ರಿಯವರೆಗೂ ಮುಂದುವರಿದೇ ಇರುತ್ತಿತ್ತು. ನಾಗವೇಣಿಯವರು ಇದಕ್ಕೆಲ್ಲಾ ಹೊಂದಿಕೊಂಡು ನಗುಮೊಗದಿಂದಲೇ ತಮ್ಮ ಗೃಹಕೃತ್ಯಗಳನ್ನು ನಡೆಸುತ್ತಿದ್ದರು. ಈ ಸಂದರ್ಭದಲ್ಲಿಯೂ ದೈವರಾತರ ಮಾತುಗಳು ಅವರ ತಾಯಿಯ ವ್ಯಕ್ತಿತ್ವ ದರ್ಶನಕ್ಕೆ ಸೂಕ್ತವಾದ ಪ್ರಮಾಣವಾಗುತ್ತದೆ- "ನನ್ನ ತಾಯಿಯು ಮದುವೆಯಾಗಿ ನಂದಗೋಕುಲದಂಥ ತುಂಬಿದ ಮನೆಗೆ ಬಂದಿದ್ದಳು. ದೊಡ್ಡ ಮನೆ, ತುಂಬಿದ ಸಂಸಾರ. ಅದರಿಂದ ಕೆಲಸಗಳೂ ಬಹಳ. ಆದರೂ ಅವಳು ಒಂದು ದಿನವೂ ಯಾರಲ್ಲಿಯೂ ಸಿಡುಕಿದವಳಲ್ಲ. ಅವಳು

೮. ಅಪ್ರಕಟಿತ ಆತ್ಮಚರಿತ್ರೆ; ಪುಟ ೭

ಕರ್ಮಜೀವಿಯಂತೆ ಬಾಳುತ್ತಿದ್ದಳು. ಅವಳ ಶ್ರಮಜೀವನ ಮತ್ತು ಸಹನೆಗೆ ಭೂಮಿತಾಯಿಯನ್ನು ಹೋಲಿಸಬಹುದಾಗಿದೆ. ಅವಳು ತುಂಬ ನಿಯಮಿತತನದವಳೂ ಮತ್ತು ದಕ್ಷಳೂ ಆಗಿದ್ದಳು."[೯]

ದೈವರಾತರ ತಾಯಿಯವರ ವ್ಯಕ್ತಿತ್ವದ ಮತ್ತೊಂದು ಮುಖ್ಯ ಅಂಶ ಎಂದರೆ ಅವರ ಆಸ್ತಿಕ್ಯ ಭಾವ. ಮನೆಗೆ ಬರುವ ಅತಿಥಿ-ಅಭ್ಯಾಗತರನ್ನು ಗೌರವಪೂರ್ವಕವಾಗಿ ಸತ್ಕರಿಸುವದಕ್ಕೆ, ತಮ್ಮ ಅವಿರತ ಹಾಗೂ ಅವಿಶ್ರಾಂತ ಗೃಹಕೃತ್ಯಗಳ ನಡುವೆಯೂ ದೇವಮಂದಿರಗಳಿಗೆ ತೆರಳಿ ತಮ್ಮ ಭಕ್ತಿಯನ್ನು ಸಮರ್ಪಿಸುವದಕ್ಕೆ ಮರೆಯುತ್ತಿರಲಿಲ್ಲ. ಗೋಕರ್ಣಕ್ಷೇತ್ರಕ್ಕೆ ಬಂದು ತಪಸ್ಸಮಾಧಿಯಲ್ಲಿ ನಿರತರಾಗುತ್ತಿದ್ದ ಅದೆಷ್ಟೋ ಸಾಧುಸಂತರನ್ನು ಸಂದರ್ಶಿಸಿ ಆಶೀರ್ವಾದವನ್ನು ಪಡೆಯುತ್ತಿದ್ದರು.[೧೦]

ವಿದ್ವಾಂಸರಾದ ಹಾಗೂ ಕವಿಗಳೂ, ಸಹೃದಯರೂ ಆದ ತಂದೆ ಮತ್ತು ಸಾಧ್ವಿಯೂ, ಆಸ್ತಿಕಳೂ ಆದ ತಾಯಿಯರನ್ನು ಪಡೆದ ದೈವರಾತರು ಈ ಅಂಶದಲ್ಲಿ ಭಾಗ್ಯವಂತರೇ ಆಗಿದ್ದರು.

೯. ಅಪ್ರಕಟಿತ ಆತ್ಮಚರಿತ್ರೆ; ಪುಟ ೭

೧೦. ಅಪ್ರಕಟಿತ ಆತ್ಮಚರಿತ್ರೆ; ಪುಟ ೪

೩. ದೈವರಾತರ ಜನ್ಮ-ಬಾಲ್ಯ-ಉಪನಯನ-ಮತ್ತು ತಾಯಿಯ ಮರಣ

ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕ; ತೆರೆ ಸರಿದು ಹೊಸ ಶತಮಾನದ ನವ ಹೊಸ್ತಿಲಿಗೆ ತೋರಣ ಕಟ್ಟುವ ಸಮಯ, ಇಪ್ಪತ್ತನೆಯ ಶತಮಾನದ ಆರಂಭದ ಕಾಲಘಟ್ಟಕ್ಕಿಂತ ಮುಂದೆ ಅವತಿದೂರದಲ್ಲಿ ತಪಸ್ಸಿನ ಶಿಖರಾಗ್ರವೊಂದನ್ನು ಸ್ಪರ್ಶಿಸಿ ನೂತನಮಂತ್ರಗಳ ದರ್ಶನವನ್ನು ಮಾಡುವ ನವಮಂತ್ರದ್ರಷ್ಟಾರನ ಜನ್ಮ ಭೂಕೈಲಾಸವೆಂದೇ ಪ್ರಥಿತವಾದ ಗೋಕರ್ಣಕ್ಷೇತ್ರದಲ್ಲಿ ಹಿಂದೆಯೇ ಉಲ್ಲೇಖಿಸಿದಂತೇ ಶಾಲಿವಾಹನ ಶಕ ೧೮೧೩, ಖರ ಸಂವತ್ಸರ ಪುಷ್ಯಮಾಸದ ಶುಕ್ಲಪಕ್ಷದ ಪಂಚಮಿ ಸೋಮವಾರದಂದು ಆಯಿತು. ವಿವಾಹವೇದಿಕೆಯಲ್ಲಿ ಸಂಧಿಸಿ ಗೃಹಸ್ಥಧರ್ಮವನ್ನು ಸ್ವೀಕರಿಸಿ ಧರ್ಮದ ತಳಹದಿಯ ಮೇಲೆ ಆದರ್ಶದಾಂಪತ್ಯವನ್ನು ನಡೆಸುತ್ತಿದ್ದ ವಿಘ್ನೇಶ್ವರ ಭಟ್ಟ ಭಡತಿ ಮತ್ತು ನಾಗವೇಣಿ ದಂಪತಿಗಳ ಚೊಚ್ಚಲ ಮಗನಾಗಿ ದೈವರಾತರು ೧೮೯೨ನೇ ಇಸ್ವಿಯ ಜನವರಿ ನಾಲ್ಕರಂದು ಹುಟ್ಟಿದರು. ಚೊಚ್ಚಲ ಮಗುವಾದ್ದರಿಂದ ದಂಪತಿಗಳು ಸಹಜವಾಗಿಯೇ ಉತ್ಕಟ ಮಮತೆಯಿಂದ ಮಗುವನ್ನು ಬೆಳೆಸಿದರು. ಮಗುವಿಗೆ 'ಗಣೇಶ' ಎಂದು ನಾಮಕರಣವನ್ನು ಮಾಡಲಾಗಿತ್ತು. ತಂದೆ ತಾಯಿಯರ ಮನಸ್ಸನ್ನು ಮಡಿಲನ್ನೂ ತುಂಬಿ ಮಗು ಬೆಳೆಯುತ್ತಿತ್ತು.

ಗೋಕರ್ಣದಲ್ಲಿ ಮಹಾಬಲೇಶ್ವರ ಮಂದಿರ ಇರುವದು ಪಶ್ಚಿಮ ಸಮುದ್ರಕ್ಕೆ ಎದುರಾಗಿ. ಮಹಾಬಲೇಶ್ವರ ದೇವಸ್ಥಾನದಿಂದ ನೇರವಾಗಿ ಪೂರ್ವದಲ್ಲಿ ಸ್ವಲ್ಪ ದೂರದಲ್ಲಿ ವಿಸ್ತಾರವಾದ ಕೋಟಿತೀರ್ಥ. ವಿಸ್ತಾರವಾದ ಸರೋವರ ಎಂದು ಗುರುತಿಸಬಹುದಾದ ಸುತ್ತಲೂ ಪಾವಟಿಗೆಗಳಿಂದ ಕೂಡಿದ

ಕೋಟಿತೀರ್ಥದ ನಾಲ್ಕೂದಿಕ್ಕಿನಲ್ಲಿ ಬ್ರಾಹ್ಮಣರ ವಸತಿಸ್ಥಾನಗಳಿವೆ. ದೈವರಾತರ ಮೂಲಮನೆ, ಭಡತಿ ಪರಿವಾರದವರ ಮನೆ ಕೋಟಿತೀರ್ಥದ ಉತ್ತರದಿಕ್ಕಿನ ವಸತಿಗಳ ಸಾಲಿನಲ್ಲಿದೆ.[1] ದೈವರಾತರು ಹುಟ್ಟಿದ್ದು ಮತ್ತು ಬಾಲ್ಯವನ್ನು ಕಳೆದದ್ದು ಆ ಮನೆಯಲ್ಲಿಯೇ. ದೈವರಾತರು ತಮ್ಮ ಬಾಲ್ಯದ ದಿನಗಳಲ್ಲಿ ಕೋಟಿತೀರ್ಥದೊಂದಿಗೆ ಒಂದು ಬಗೆಯ ವಿಶಿಷ್ಟ ಸಂಬಂಧವನ್ನು ಹೊಂದಿದ್ದರು. ಎರಡು-ಮೂರು ವರ್ಷಗಳವರೆಗೆ ಸಹಜವಾಗಿ ಸರ್ವಸಾಮಾನ್ಯವಾಗಿ ಬೆಳೆದ ಮಗು ಮೂರು ವರ್ಷಗಳನ್ನು ತಲುಪುವಷ್ಟು ಹೊತ್ತಿಗೆ ಕೆಲವು ವಿಲಕ್ಷಣಗಳಿಂದ ಕೂಡಿ ಕೆಲವು ವೇಳೆ ಪಾಲಕರಿಗೆ ಗಾಬರಿ ಆತಂಕಗಳನ್ನುಂಟು ಮಾಡಿತ್ತು. ಹೊರಗೆ ಬಿದ್ದರೆ ವಿಶಾಲವಾದ ಕೋಟಿತೀರ್ಥ; ಬಾಲಕ ಗಣೇಶ ಆಗಾಗ ಕೋಟಿತೀರ್ಥದ ಕಟ್ಟೆಯ ಮೇಲೆ ಏಕಾಂಗಿಯಾಗಿ ಮೌನದಿಂದ ಕೋಟಿತೀರ್ಥವನ್ನೇ ನಿಟ್ಟಿಸಿ ನೋಡುತ್ತ ಕುಳಿತುಬಿಡುತ್ತಿದ್ದ. ಸಾಧಾರಣವಾಗಿ ಮಕ್ಕಳು ಬಾಲ್ಯದಲ್ಲಿ ಸಮವಯಸ್ಸಿನ ಇತರ ಮಕ್ಕಳೊಂದಿಗೆ ಸುಲಭವಾಗಿ ಬಹುಬೇಗನೆ ಸ್ನೇಹವನ್ನು ಹೊಂದಿ ಆಡಬಲ್ಲವರಾಗಿರುತ್ತಾರೆ. ಆದರೆ ಬಾಲಕ ಗಣೇಶ ಇನ್ನಿತರ ಓರಗೆಯ ಮಕ್ಕಳೊಂದಿಗೆ ಸೇರುತ್ತಿರಲಿಲ್ಲ; ಆಡುತ್ತಲೂ ಇರಲಿಲ್ಲ. ಒಂದು ವಿಧದ ಮಂಕು ಕವಿದಂತೆ ಇರುತ್ತಿದ್ದ ಈ ಬಾಲಕ. ಆಗಾಗ ವಿಶೇಷವಾಗಿ ಸಂಜೆಯ ಇಳಿಹೊತ್ತಿನಲ್ಲಿ ಕೋಟಿತೀರ್ಥದ ಸೋಪಾನಮಾರ್ಗದಲ್ಲಿ ಮೌನದಿಂದ ನಿಸರ್ಗವನ್ನೇ ನಿಟ್ಟಿಸುತ್ತ ಕುಳಿತುಬಿಡುತ್ತಿದ್ದ. ಒಮ್ಮೊಮ್ಮೆ ನಿಮಿತ್ತಮಾತ್ರದಿಂದ ನಗುವುದಕ್ಕೆ ತೊಡಗಿದರೆ ಬಹಳಹೊತ್ತು ನಗುತ್ತಲೇ ಇರುವದು; ಅಥವಾ ಅಳುವದಕ್ಕೆ ತೊಡಗಿದರೆ ಅಳುತ್ತಲೇ ಇರುವದು; ರಾತ್ರಿ ಅಳುತ್ತಲೇ ನಿದ್ರೆ ಮಾಡಿದರೆ ಬೆಳಿಗ್ಗೆ ಏಳುವಾಗ ಅಳುತ್ತಲೇ ಏಳುವದು ಹೀಗೆ ವಿಲಕ್ಷಣಮೂರ್ತಿಯಾಗಿ ಬಿಟ್ಟಿದ್ದ ಬಾಲಕ ಗಣೇಶ. ಅನ್ಯರ ದೃಷ್ಟಿಯಲ್ಲಿ ಇದು ಶುದ್ಧ ಹಟಮಾರಿತನವಾಗಿತ್ತು. ಇನ್ನೂ ಕೆಲವರು ಈ ಸ್ವಭಾವವನ್ನು ತಂದೆ ತಾಯಿಯರ ಅತಿಯಾದ ಮುದ್ದಿನ ಫಲ ಎನ್ನುತ್ತಿದ್ದರು.[2]

---

೧. ಅಪ್ರಕಟಿತ ಆತ್ಮಚರಿತ್ರೆ; ಪುಟ ೧೦
ಪ್ರಸ್ತುತ ಗ್ರಂಥಕರ್ತನು ದೈವರಾತರ ಜೀವನ-ಕೃತಿಗಳನ್ನು ಕುರಿತು ವಿಷಯ ಸಂಗ್ರಹಣೆಯ ನಿಮಿತ್ತ ಗೋಕರ್ಣಕ್ಕೆ ತೆರಳಿದಾಗ ದೈವರಾತರ ಯಥೋಕ್ತವಾದ ಮನೆಯನ್ನು ಸಂದರ್ಶಿಸಿದ್ದಿದೆ. ಮಹಾಬಲೇಶ್ವರ ಪುರಾಣಿಕರನ್ನು ಭೇಟಿಮಾಡಿ ಸಂದರ್ಶನ ನಡೆಸಿದ್ದು ಇರುತ್ತದೆ. ಮಹಾಬಲೇಶ್ವರ ಪುರಾಣಿಕರು ಭಡತಿ ಮನೆತನಕ್ಕೆ ಸೇರಿದವರೇ ಆಗಿದ್ದಾರೆ.

೨. ಅಪ್ರಕಟಿತ ಆತ್ಮಚರಿತ್ರೆ; ಪುಟ ೨

ಬಾಲಕ ಇನ್ನಷ್ಟು ದೊಡ್ಡವನಾದ. ಸ್ವಲ್ಪ ವಿಲಕ್ಷಣ ಎನ್ನಬಹುದಾದ ಸ್ವಭಾವ ಹಿಂದಕ್ಕೆ ಸರಿದು ಹುಡುಗ ಎಲ್ಲ ಬಾಲಕರಂತಾದ. ಐದು ವರ್ಷದ ಬಾಲಕ ಗಣೇಶ ತಾಯಿಯ ಜೊತೆಯಲ್ಲಿ ದೇವಮಂದಿರಗಳಿಗೆ ಹೋಗುತ್ತ ಸಾಧು ಸಂತರನ್ನು ಸಂದರ್ಶಿಸುತ್ತ ಕೆಲವು ಸತ್‌ಸಂಸ್ಕಾರಗಳನ್ನು ಪಡೆಯುತ್ತಿದ್ದ.

ಸರಿಸುಮಾರು ಇದೇ ಸಮಯದಲ್ಲಿ ಗೋಕರ್ಣದಲ್ಲಿ ಸಚ್ಚಿದಾನಂದ ಸರಸ್ವತಿ ಎಂಬ ಹೆಸರಿನ ಸಂನ್ಯಾಸಿಗಳು ವಾಸವಾಗಿದ್ದರು. ಮಧ್ಯಪ್ರದೇಶ ರಾಜ್ಯದ ಗ್ವಾಲಿಯರ್ ಪ್ರಾಂತದ ಮಹಾರಾಣಿಯವರ ರಾಜಪುರೋಹಿತರಾದ ಜಯರಾಮ ಭಟ್ಟ, ಸಪ್ರೆ ಎನ್ನುವವರು ಮಹಾರಾಣಿಯವರ ರಾಜಪರಿವಾರದೊಂದಿಗೆ ಗೋಕರ್ಣದ ಸಂದರ್ಶನಕ್ಕೆ ಬಂದವರು ಇಲ್ಲಿಯ ಪವಿತ್ರ ವಾತಾವರಣಕ್ಕೆ ಮನಸೋತು ಇಲ್ಲಿಯೇ ಉಳಿದುಬಿಟ್ಟಿದ್ದರು. ಕರ್ಹಾಡೆ ಪಂಗಡಕ್ಕೆ ಸೇರಿದ ಅವರು ಚತುರ್ವೇದ ಪಾರಂಗತರಾಗಿದ್ದರು. ಇವರ ವಿದ್ವತ್ತು, ಸರಳ ಸ್ವಭಾವ, ಅನುಷ್ಠಾನ ನಿಷ್ಠೆ ಮತ್ತು ನಿಯಮಿತ ಜೀವನವನ್ನು ಕಂಡು ಊರಿನ ಅನೇಕ ಜನರು ಇವರ ಶಿಷ್ಯರಾಗಿದ್ದರು. ದೈವರಾತರ ತಂದೆ ವಿಘ್ನೇಶ್ವರ ಭಟ್ಟರು, ಅನಂತ ಉಪಾಧ್ಯಾಯ ಎನ್ನುವವರು ಮತ್ತು ನಂತರದ ಕಾಲಘಟ್ಟದಲ್ಲಿ ದೈವರಾತರಿಗೆ ಸ್ವಲ್ಪಕಾಲ ವೇದಪಾಠಮಾಡಿದ ಕೃಷ್ಣಭಟ್ಟ, ಮೈಯರ್ ಎನ್ನುವವರೂ ಅವರ ಪ್ರಧಾನ ಶಿಷ್ಯವರ್ಗಕ್ಕೆ ಸೇರಿದವರಾಗಿದ್ದರು. ಸಾರ್ವಜನಿಕರಿಗಾಗಿ ಜಯರಾಮ ಭಟ್ಟ ಸಪ್ರೆಯವರು ಆಗಾಗ ವೇದಗಳನ್ನು ಕುರಿತು ವ್ಯಾಖ್ಯಾನ ಹಾಗೂ ಅಧ್ಯಾತ್ಮ ವಿಷಯಕವಾದ ಪ್ರವಚನಗಳನ್ನು ನೀಡುತ್ತಿದ್ದರು. ಜಯರಾಮ ಭಟ್ಟರಿಂದ ಗೋಕರ್ಣದಲ್ಲಿ ವೇದವಿದ್ಯೆಯು ಉಚ್ಚಾಯಸ್ಥಿತಿಯನ್ನು ಮುಟ್ಟುವಂತಾಗಿತ್ತು. ಊರಮಧ್ಯದ ಮಾರ್ಕಂಡೇಶ್ವರ ದೇವರ ದಕ್ಷಿಣಭಾಗದ ಒಂದು ಸಣ್ಣ ಕೊಠಡಿಯಲ್ಲಿ ಆಗ ಅವರು ವಾಸವಾಗಿದ್ದು ಊರ ಜನ ಪ್ರತಿನಿತ್ಯ ಅವರನ್ನು ತಮ್ಮ ತಮ್ಮ ಮನೆಗೆ ಊಟಕ್ಕೆ ಕರೆದೊಯ್ಯುತ್ತಿದ್ದರು. ಇವರು ಕೆಲವು ಕಾಲ ಮೌನದಿಂದಿದ್ದು ಇಪ್ಪತ್ತನಾಲ್ಕು ಲಕ್ಷ ಗಾಯತ್ರಿ ಜಪವನ್ನು ಮಾಡಿದ್ದರು. ಮುಂದೆ ಸಂನ್ಯಾಸವನ್ನು ಸ್ವೀಕರಿಸಿದ ಮೇಲೆ ಇವರಿಗೇ ಸಚ್ಚಿದಾನಂದ ಸರಸ್ವತಿ ಎಂಬ ಯೋಗಪಟ್ಟವು ಕೊಡಲ್ಪಟ್ಟಿತು. ಜನರು ಅವರನ್ನು 'ಗುರುಮೂರ್ತಿ' ಎಂದೇ ಆಗಿನಿಂದ ಕರೆಯುತೊಡಗಿದ್ದರು. ಸಂನ್ಯಾಸವನ್ನು ಸ್ವೀಕರಿಸಿದ ನಂತರ ಗುರುಮೂರ್ತಿಯವರು ಯಾರ ಮನೆಗಳಿಗೂ ಹೋಗದೇ ಒಂದೇ ಸ್ಥಳದಲ್ಲಿ

ಇರುತ್ತಿದ್ದರು. ಊರ ಜನರು ವಿಶೇಷವಾಗಿ ಸಂಜೆಯ ಇಳಿಹೊತ್ತಿನಲ್ಲಿ ಅವರ ದರ್ಶನಕ್ಕಾಗಿ ಹೋಗುತ್ತಿದ್ದರು. ಬಾಲಕ ಗಣೇಶನೂ ತನ್ನ ತಾಯಿಯ ಜೊತೆಯಲ್ಲಿ ಆಗಾಗ ಗುರುಮೂರ್ತಿಯ ದರ್ಶನವನ್ನು ಪಡೆಯುತ್ತಿದ್ದ. ಆ ತಪಸ್ವಿಯ ದರ್ಶನಗಳ ಅಚ್ಚಳಿಯದ ಗಾಢವಾದ ಬಿಂಬ ದೈವರಾತರ ಸ್ಮೃತಿಪಟಲದಲ್ಲಿ ಮಸಕಾಗದ ರೀತಿಯಲ್ಲಿ ಮೂಡಿತ್ತು.[೩] ತನ್ನ ತಾಯಿಯನ್ನು ಬಿಡದೇ ಅವಳ ಸೆರಗನ್ನು ಹಿಡಿದು ಅವಳು ಹೋಗುವೆಲ್ಲೆಡೆಯಲ್ಲಿ ತಾನೂ ಹೋಗುತ್ತ ಗೋಕರ್ಣದ ತುಂಬ ಇರುವ ಮಂದಿರಗಳನ್ನು ಸಂದರ್ಶಿಸುತ್ತ ಇದ್ದ ಬಾಲಕ ಗಣೇಶನಿಗೆ ಈ ಎಲ್ಲ ಸತ್ಸಂಸ್ಕಾರಗಳೂ ಬಾಲ್ಯದಲ್ಲಿಯೇ ದೊರಕಿ ಆಸ್ತಿಕ್ಯ ಭಾವದ ಬೀಜವನ್ನು ಪೋಷಿಸಿದವು.

ಬಾಲಕ ಗಣೇಶನಿಗೆ ಎಂಟು ವರ್ಷಗಳಾದವು. ಅವನ ಪಾಲಕರು ಬಾಲಕನಿಗೆ ಉಪನಯನವನ್ನು ಮಾಡಲು ನಿರ್ಧರಿಸಿದರು.[೪] ಅವಿಭಕ್ತ ಕುಟುಂಬವಾದ ನಿಮಿತ್ತ ಮನೆಯ ಯಜಮಾನರಾದ ಹಿರಿಯರ ಒಪ್ಪಿಗೆ ತೀರಾ ಅವಶ್ಯವಾಗಿತ್ತು. ವಿಘ್ನೇಶ್ವರ ಭಟ್ಟರ ಹಿರಿಯಣ್ಣನವರಾದ ಶಿವಭಟ್ಟರು ಉಪನಯನ ಮಾಡಲು ಒಪ್ಪಿಗೆಯನ್ನು ಕೊಟ್ಟರು. ವಿಘ್ನೇಶ್ವರ ಭಟ್ಟರ ತಮ್ಮನವರಾದ ಸುಬ್ರಾಯ ಭಟ್ಟರ ಮಗನಾದ ನಾರಾಯಣ ಎಂಬಾತನೂ ಉಪನಯನದ ವಯೋಮಾನಕ್ಕೆ ಬಂದಿದ್ದರಿಂದ ಮನೆಯ ಯಜಮಾನರಾದ ಶಿವ ಭಟ್ಟರು ಎರಡೂ ಉಪನಯನಗಳನ್ನು ಮಾಡಲು ನಿರ್ಧರಿಸಿದರು. ಬಾಲಕ ಗಣೇಶನಿಗೆ ಉಪನಯನವಾದದ್ದು ಸರಿಸುಮಾರು ೧೮೯೯ನೇ ಇಸ್ವಿಯ ವೇಳೆ. ಉಪನಯನವಾದ ನಾಲ್ಕನೆಯ ದಿನ ನಡೆದ ಒಂದು ಘಟನೆ ದೈವರಾತರ ಅಪ್ರಕಟಿತ ಆತ್ಮಚರಿತ್ರೆಯಲ್ಲಿ ಉಲ್ಲೇಖಿತವಾಗಿದೆ. ಸಾಂಗವಾಗಿ ಉಪನಯನ ಮುಗಿದ ನಂತರ ಅಂದರೆ ಉಪನಯನದ ದಿನದಿಂದ ನಾಲ್ಕನೆಯ ದಿನ ಉಪನೀತನಾದ ವಟುವನ್ನು ಬೆಲೆಬಾಳುವ ಪಟ್ಟೆಯ ವಸ್ತ್ರದೊಂದಿಗೆ ಮೆರವಣಿಗೆಯಲ್ಲಿ ಹೆಂಗಸರು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ದೇವರ ಮುಂದೆ ತೆಂಗಿನಕಾಯಿ ಫಲಗಳನ್ನಿಟ್ಟು ಪೂಜೆ ಮಾಡಿಕೊಂಡು ಬರುವದು ಗೋಕರ್ಣದಲ್ಲಿ ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದ ಒಂದು ಪದ್ಧತಿ. ಆ ಪದ್ಧತಿಯಂತೆ ಗಣೇಶನ

---

೩. ಅಪ್ರಕಟಿತ ಆತ್ಮಚರಿತ್ರೆ; ಪುಟ ೨,೩,೪
೪. ಅಪ್ರಕಟಿತ ಆತ್ಮಚರಿತ್ರೆ; ಪುಟ ೫

ಉಪನಯನವಾದ ನಾಲ್ಕನೆಯ ದಿನ ಗಣೇಶನಿಗೂ ಹೊಸಪಟ್ಟೆ ಮಡಿಯನ್ನುಡಿಸಿ ಭುಜದ ಮೇಲೆ ಒಂದು ಚಿಕ್ಕ ಪಟ್ಟೆ ಶಾಲನ್ನು ಹೊದೆಸಿ ತಲೆಗೆ ಜರಿಯ ಅಂಚಿರುವ ಪಟ್ಟೆ ವಸ್ತ್ರವನ್ನು ಪೇಟದಂತೆ ಸುತ್ತುವದಕ್ಕೆ ಸಿದ್ಧತೆ ಮಾಡಿದರು. ಇಷ್ಟೆಲ್ಲಾ ಅಲಂಕಾರ ಮಾಡಿದ ಮೇಲೆ ಒಂದು ಮುತ್ತುಗದ (ಪಾಲಾಶ) ದಂಡವನ್ನು ವಟುವಿನ ಕೈಯಲ್ಲಿ ಹಿಡಿಸಿಕೊಂಡು ದೇವಸ್ಥಾನಕ್ಕೆ ಕರೆದೊಯ್ಯುವದು ರೂಢಿ. ಗಣೇಶನ ದೊಡ್ಡಪ್ಪನವರಾದ ಶಿವಭಟ್ಟರು ಬಾಲಕ ಗಣೇಶನಿಗೆ ಅಲಂಕಾರ ಮಾಡಲು ಸ್ವಯಂ ತಾವೇ ಮುಂದಾದರು. ಆದರೆ ಬಾಲಕ ಗಣೇಶ "ಸಾದಾ ಬಿಳಿಯ ಪಂಚೆಯೇ ಸಾಕು" ಎಂದು ಬೆಲೆಬಾಳುವ ಅಗಲವಾದ ರೇಶ್ಮೆಯ ಅಂಚಿನಿಂದ ಕೂಡಿದ ಪಂಚೆ ಪೇಟ ಇವುಗಳನ್ನು ಧರಿಸಲು ನಿರಾಕರಿಸಿದನು. ಸಹಜವಾಗಿಯೇ ಶಿವ ಭಟ್ಟರಿಗೆ ಮನೆಯ ಮರ್ಯಾದೆಯೇ ಹೋಗುತ್ತದೆ ಎಂದು ಸಿಟ್ಟು ಬಂದು ನಾಲ್ಕು ಏಟನ್ನು ಬಾಲಕನಿಗೆ ಹೊಡೆದರು. ಇದಕ್ಕೂ ಬಾಲಕ ಗಣೇಶ ಬಗ್ಗದೇ ಇದ್ದಾಗ ತಂದೆಯಾದ ವಿಘ್ನೇಶ್ವರ ಭಟ್ಟರೂ ನಾಲ್ಕು ಏಟನ್ನು ಹೊಡೆದರು. ಹುಡುಗ ಜೋರಾಗಿ ಅಳುವದಕ್ಕೇ ಪ್ರಾರಂಭಿಸಿದ. ಆಗ ಅವನ ಸಹಾಯಕ್ಕೆ ತಾಯಿಯಾದ ನಾಗವೇಣಿಯವರು ಬಂದು– "ಗಣೇಶನು ಪಟ್ಟೆ ಪೀತಾಂಬರ ಬೇಡವೆಂದರೆ ಬೇಡ; ಅವನು ಪಟ್ಟೆಯನ್ನುಡದೇ ಹೋದರೆ ಜಗತ್ತೇನೂ ಮುಳುಗಿ ಹೋಗುವದಿಲ್ಲ. ಅವನಿಗೆ ಪಟ್ಟೆಯೂ ಬೇಡ, ಪೀತಾಂಬರವೂ ಬೇಡ" ಎಂದು ಮಗನ ಪರವಾಗಿ ವಾದಿಸಿದರು. ಅನಂತರ ಮಗನಿಗೆ ಶುಭ್ರವಾದ ಬಿಳಿಯ ಪಂಚೆಯನ್ನುಡಿಸಿ ಒಂದು ಬಿಳಿಯದಾದ ವಲ್ಲಿಯನ್ನು ಭುಜದ ಮೇಲೆ ಹಾಕಿ ಆ ತಾಯಿಯು ತನ್ನ ಮಗನನ್ನು ದೇವಸ್ಥಾನಕ್ಕೆ ಹೋಗಲು ಅಣಿಮಾಡಿದಳು. ಸಂಪ್ರದಾಯವಂತೂ ನಡೆಯಿತು.[೫] ಪ್ರಾಯಶಃ ದೈವರಾತರು ತಮ್ಮ ಜೀವನದುದ್ದಕ್ಕೂ ಆಡಂಬರಗಳಿಂದ ದೂರವಿದ್ದು ಸರಳ ಜೀವನ ನಡೆಸಿರುವದಕ್ಕೆ ಈ ಘಟನೆ ಮುನ್ನುಡಿಯಾಗಿತ್ತೇನೋ ಎಂದು ಅನ್ನಿಸದಿರದು.

ದೈವರಾತರಿಗೆ ಉಪನಯನ ಸಂಸ್ಕಾರವಾಗುವ ವೇಳೆಗಾಗಲೇ ಒಬ್ಬ ತಮ್ಮ, ಸೀತಾರಾಮ ಎಂದು ಅವನ ಹೆಸರಿಡಲಾಗಿತ್ತು ಮತ್ತು ಒಬ್ಬಳು ತಂಗಿ, ಲಲಿತಾ ಎನ್ನುವವಳು ಹುಟ್ಟಿದ್ದರು. ತಮ್ಮ ಸೀತಾರಾಮನಿಗೆ ದೈವರಾತರ ಉಪನಯನದ ವೇಳೆಗೆ ಸರಿಸುಮಾರು ಆರು ವರ್ಷಗಳಾಗಿದ್ದವು. ತಂಗಿಯಾದ

೫. ಅಪ್ರಕಟಿತ ಆತ್ಮಚರಿತ್ರೆ; ಪುಟ ೫–೬

ಲಲಿತಾಳಿಗೆ ೨–೩ ವರ್ಷ ವಯಸ್ಸು ಮಾತ್ರ ಆಗಿತ್ತು. ಹಿಂದೆಯೇ ಹೇಳಿದಂತೆ ದೈವರಾತರಿಗೆ ಉಪನಯನದ ವೇಳೆಗೆ ಎಂಟು ವರ್ಷಗಳಾಗಿದ್ದವು. ಇಷ್ಟು ಚಿಕ್ಕ ವಯಸ್ಸಿನಲ್ಲಿರುವಾಗಲೇ ದೈವರಾತರಿಗೆ ತಾಯಿಯ ವಿಯೋಗ ಉಂಟಾಯಿತು.

ಉಪನಯನವಾಗಿ ಸ್ವಲ್ಪ ದಿನಗಳಲ್ಲಿಯೇ ತಾಯಿ ನಾಗವೇಣಿಯವರಿಗೆ ವಿಷಮ ಜ್ವರ ಪ್ರಾರಂಭವಾಯಿತು. ಈಗಿನಂತೆ ಒಳ್ಳೆಯ ವೈದ್ಯಕೀಯ ಉಪಚಾರಗಳು ಉಪಲಬ್ಧವಿಲ್ಲದ ಕಾಲ ಅದು. ಗೋಕರ್ಣದಲ್ಲಿಯೂ ಯಾವುದೇ ಆಧುನಿಕ ಚಿಕಿತ್ಸಾ ಸೌಲಭ್ಯಗಳು ಇರಲಿಲ್ಲ. ಕೆಲವು ಬೇರು, ನಾರುಗಳ ಕಷಾಯಗಳನ್ನು ಕೊಡುವ ನಾಟೀ ವೈದ್ಯರು ಮಾತ್ರ ಅಲ್ಲಿ ಇದ್ದಿರಬಹುದು. ಅಂಥ ವೈದ್ಯರುಗಳಿಂದ ವೈದ್ಯೋಪಚಾರ ಕೆಲವು ದಿನಗಳವರೆಗೆ ನಡೆಯಿತಾದರೂ ಯಾವೊಂದು ಪ್ರಯೋಜನವೂ ಆಗಲಿಲ್ಲ. ದಿನದಿಂದ ದಿನಕ್ಕೆ ರೋಗಿಯ ಸ್ಥಿತಿ ಉಲ್ಬಣಗೊಳ್ಳುತ್ತಲೇ ನಡೆಯಿತು. ನಾಗವೇಣಿಯವರ ಸ್ಥಿತಿ ಹೀಗೆ ಮತ್ತಷ್ಟು ಮತ್ತಷ್ಟು ಉಲ್ಬಣಗೊಳ್ಳುತ್ತಿರುವುದನ್ನು ಕಂಡು ಗಾಬರಿಯಾದ ಭಡತಿ ಮನೆಯವರು ಮತ್ತಷ್ಟು ಒಳ್ಳೆಯ ಶುಶ್ರೂಷೆ, ಮಾನಸಿಕವಾಗಿ ನೆಮ್ಮದಿ ಮತ್ತು ಧೈರ್ಯ ಬರುವದಕ್ಕಾಗಿ ರೋಗಿಯಾದ ನಾಗವೇಣಿಯವರನ್ನು ಅವಳ ತವರುಮನೆಗೆ ಸಾಗಿಸಿದರು. ಆ ವೇಳೆಗಾಗಲೇ ನಾಗವೇಣಿಯವರ ತಂದೆಯವರಾದ ಗಣೇಶ ಶಾಸ್ತ್ರಿ, ಹೊಸಮನೆಯವರು ಮರಣಹೊಂದಿದ್ದರು. ತವರುಮನೆಯಲ್ಲಿ ಇದ್ದವರೆಂದರೆ ನಾಗವೇಣಿಯವರ ವೃದ್ಧಳಾದ ತಾಯಿ ಮತ್ತು ತಮ್ಮ ಗಣಪತಿ ಶಾಸ್ತ್ರಿಯವರು. ಗಣಪತಿ ಶಾಸ್ತ್ರಿಯವರೂ ನಿಯತವಾಗಿ ಮನೆಯಲ್ಲಿ ಇರುತ್ತಿರಲಿಲ್ಲ; ಅವರು ಅಂಚೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಊರಿಂದ ಊರಿಗೆ ವರ್ಗವಾಗುತ್ತಿರುವದರಿಂದ ಗೋಕರ್ಣದಲ್ಲಿರುವದು ಅಪರೂಪವೇ ಆಗಿತ್ತು. ಇದರಿಂದ ವೃದ್ಧಳಾದ ತಾಯಿಯೇ ರೋಗಿಯಾದ ಮಗಳ ಶುಶ್ರೂಷೆಯ ಹೊಣೆಯನ್ನು ಹೊರಬೇಕಾಯಿತು. ಅನಿವಾರ್ಯವಾಗಿ ಇನ್ನೂ ಆಟವಾಡಿಕೊಂಡಿರಬೇಕಾದ ಬಾಲಕ ಗಣೇಶನು ಅಜ್ಜಿಯ ಶುಶ್ರೂಷೆಯ ಮತ್ತು ಗೃಹಕೃತ್ಯಗಳಲ್ಲಿ ಸಹಾಯ ಮಾಡಬೇಕಾದ ಪ್ರಸಂಗ ಬಂದೊದಗಿತು. ಇಷ್ಟು ಸಾಲದು ಎಂಬಂತೆ ಇನ್ನೂ ಚಿಕ್ಕವರಾದ ಮತ್ತೆರಡು ಮಕ್ಕಳೂ

ತಾಯಿಯನ್ನು ಅನುಸರಿಸಿ ಬರಲೇಬೇಕಾದದ್ದರಿಂದ ಅವರನ್ನು ನೋಡಿಕೊಳ್ಳುವ ಹೊಣೆಯೂ ದೈವರಾತರ ಮೇಲೆ ಬಿದ್ದವು. ಅದು ನಿಜವಾಗಿ ಅತ್ಯಂತ ಕರುಣಾಜನಕವಾದ ಪರಿಸ್ಥಿತಿಯಾಗಿತ್ತು. ಆ ತಾಯಿ ಮಕ್ಕಳ ಪಾಲಿಗೆ. ಎರಡು ಜನ ಗಂಡುಮಕ್ಕಳು ಇನ್ನೂ ಸಣ್ಣವರೇ ಆಗಿದ್ದರೂ ಅವರಿಗಿಂತ ಇನ್ನೂ ಚಿಕ್ಕ ಎಳೆಯ ಹಸುಳೆಯಾದ ಮಗಳ ಚಿಂತೆಯೇ ತಾಯಿಗೆ ಇನ್ನಷ್ಟು ಸಂಕಟವನ್ನುಂಟು ಮಾಡುತ್ತಿತ್ತು. ಚಿಕ್ಕ ಮಗುವಾದುದರಿಂದ ಲಲಿತೆಯು ತಾಯಿಯ ಸ್ಥಿತಿಯ ಅರಿವಿಲ್ಲದೇ ಒಂದೇ ಸಮ ಅಳುತ್ತಿತ್ತು. "ಲಲಿತೆಯಾದರೋ ಇನ್ನೂ ಚಿಕ್ಕ ಮಗು; ನಾನು ಸತ್ತು ಹೋದರೆ ಅವಳನ್ನು ಯಾರು ಕೇಳಬೇಕು? ಯಾರು ಪಾಲಿಸಬೇಕು?" ಇವೇ ಮುಂತಾದ ಯೋಚನೆಗಳು ಅವಳನ್ನು ಕಾಡುತ್ತಿದ್ದವು. ತಾಯಿಯ ಮರಣ ಶಯ್ಯೆಯ ಅಂತಿಮ ದೃಶ್ಯವನ್ನು ದೈವರಾತರು ಮನಮಿಡಿಯುವಂತೆ ನಿರೂಪಿಸಿದ್ದಾರೆ– "ದಿನ ಕಳೆದಂತೆ ಅವಳಿಗೆ ಎದ್ದು ಓಡಾಡುವುದಕ್ಕೂ ಕಷ್ಟವೆನಿಸಿತು. ನಾನೇ ತಾಯಿಗೆ ದೊಡ್ಡ ಮಗನಾದ್ದರಿಂದ ಅವಳು ಹಾಸಿಗೆ ಹಿಡಿದಂದಿನಿಂದಲೂ ಅವಳ ಸೇವೆಯನ್ನು ಮಾಡುವ ಭಾಗ್ಯವು ನನಗೆ ಒದಗಿತು. ಇತ್ತೀಚೆಗೆ ಮೂರು ದಿನಗಳಿಂದ ತಾಯಿ ನಾಗವೇಣಿಗೆ ಜ್ವರವು ಉಲ್ಬಣಿಸಿ ಒಮ್ಮೆಲೆ ಆಕೆ ನಿತ್ರಾಣಳಾದಳು. ಅಂದು (ವಿಕಾರಿ ಸಂವತ್ಸರದ) ಫಾಲ್ಗುಣ ಬಹುಳ ಚತುರ್ಥಿ ನಾನು ತಾಯಿಯ ಬಳಿಯಲ್ಲಿಯೇ ಕುಳಿತಿದ್ದೆ. ಆಗ ತಾಯಿಯು ಕ್ಷೀಣವಾದ ಸ್ವರದಿಂದ ತಡೆತಡೆದು ಹೇಳಿದಳು. "ಮಗನೆ! ನೀನು ತಾಯಿಯ ಸೇವೆಯನ್ನು ತಾಯಿಯಂತೆ ಮಾಡಿದೆ. ಹೀಗೆಯೇ ಮುಂದೆಯೂ ನೀನು ಗುರುಹಿರಿಯರನ್ನು ಸೇವಿಸು. ಆ ಪರಮಾತ್ಮನು ನಿನಗೆ ಮಂಗಲವನ್ನುಂಟು ಮಾಡಲಿ". ಅದೇ ತಾಯಿಯ ಮಾತು. ಅದು ಅವಳ ಕೊನೆಯ ಮಾತಾಗಿರದೇ ಅಂತಿಮ ಸಂದೇಶವೇ ಆಗಿತ್ತು. ಸುತ್ತಲೂ ಸ್ಮಶಾನ ಮೌನ ಆವರಿಸಿತ್ತು. (ಮರಣದ) ಕೊನೆಯ ಲಕ್ಷಣಗಳು ಕಾಣಿಸಿಕೊಂಡವು. ನಾನು ತಾಯಿಯ ಬಾಯಲ್ಲಿ ಎರಡು ಹನಿ ಗಂಗಾಜಲವನ್ನು ಹಾಕಿದೆ. ಗಂಗಾಜಲವು ಗಂಟಲಿನಲ್ಲಿ ಇಳಿಯುತ್ತಿದ್ದಂತೆ ತಾಯಿ ನಾಗವೇಣಿಯು ನಮ್ಮನ್ನೆಲ್ಲ ಅಗಲಿ ಚಿರವಿಶ್ರಾಂತಿಯನ್ನು ಹೊಂದಿದಳು. ಅವಳ ಆತ್ಮವು ಪಾರ್ಥಿವ ಶರೀರವನ್ನು ತೊರೆದು ಪರಮಾತ್ಮನಲ್ಲಿ ಲೀನವಾಯಿತು. ಆಗ ತಮ್ಮ ಸೀತಾರಾಮನ ಉಪನಯನವು ಇನ್ನೂ

ಆಗಿರಲಿಲ್ಲ. ಅದರಿಂದ ತಾಯಿಯ ಅಂತ್ಯಕರ್ಮಗಳನ್ನೆಲ್ಲ ನಾನೊಬ್ಬನೇ ಮಾಡಿದೆನು."[೬]

ನಂತರ ಗಣೇಶ ಅಜ್ಜಿಯ ಜೊತೆಯಲ್ಲಿ ವಾಸಿಸತೊಡಗಿದ. ಏಕೆಂದರೆ ಅಜ್ಜಿಯು ಒಬ್ಬಂಟಿಯಾಗಿದ್ದಳು. ಅವಳ ಮನೆವಾರ್ತೆಯಲ್ಲಿ ಸಹಾಯ ಮಾಡುತ್ತ ಕ್ರಮೇಣ ದಿನಕಳೆದಂತೆ ಅವಳ ಆರೋಗ್ಯವೂ ಕ್ಷೀಣಿಸತೊಡಗಿದಾಗ ಅವಳ ಶುಶ್ರೂಷೆಯನ್ನು ಮಾಡುತ್ತಲಿದ್ದ. ಸ್ವಲ್ಪ ದಿನಗಳಲ್ಲಿ ಅಜ್ಜಿಯ ಶುಶ್ರೂಷೆ ಮತ್ತು ಮನೆ ವಾರ್ತೆಯನ್ನೆರಡನ್ನೂ ಮಾಡುವುದಕ್ಕಾಗದೇ ಸಂಬಂಧಿಗಳ ಮನೆಗೆ ಅವಳನ್ನು ಸೇರಿಸಿದ. ಮತ್ತೆ ಸ್ವಲ್ಪ ದಿನಗಳಲ್ಲಿ ಅವಳೂ ಇಹಲೋಕವನ್ನು ತ್ಯಜಿಸಿದಳು.

ದೈವರಾತರು ತಮ್ಮ ಎಂಟನೆಯ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ಅನಾಥರಾದರು. ತಾಯಿಯ ಮತ್ತು ಅಜ್ಜಿಯ ಕೊನೆಯ ದಿನಗಳಲ್ಲಿ ಬಾಲಕನಾದ ಗಣೇಶ ಮಾಡಿದ ಸೇವೆ, ಶುಶ್ರೂಷೆಗಳು ಅನ್ಯಾದೃಶವಾಗಿದ್ದವು. ಮುಂದೆ ಅವರ ಬದುಕಿನುದ್ದಕ್ಕೂ ಈ ವಿಧದ ಸೇವಾವ್ರತ ಮುಂದುವರಿಯಿತು. ಅದಕ್ಕೆ ಬೇಕಾದ ಸಂಸ್ಕಾರದ ಬೀಜಾರೋಪಣ ಬಾಲ್ಯದಲ್ಲಿಯೇ ಆಯಿತು.

---

೬ ಉಪನಯನ, ನಂತರದ ತಾಯಿಯ ಮರಣ – ಈ ಎಲ್ಲ ವೃತ್ತಾಂತಗಳನ್ನೂ ಅ. ಆತ್ಮಚರಿತ್ರೆಯನ್ನು ಆಧರಿಸಿಯೇ ಪ್ರಸ್ತುತ ವಿವರಿಸಲಾಗಿದೆ. ಅ. ಆತ್ಮಚರಿತ್ರೆ ಪು. ೫–೮. ತಾಯಿಯ ಮರಣವಾದದ್ದು ದೈವರಾತರು ಹತ್ತು ವರ್ಷದವರಿದ್ದಾಗ ಮತ್ತು ಆಗ ದೈವರಾತರ ತಂಗಿಗೆ ಕೇವಲ ಎಂಟು ತಿಂಗಳಾಗಿತ್ತು ಎಂದು 'ಕಸ್ತೂರಿ'– ಕನ್ನಡ ಡೈಜೆಸ್ಟ ಪತ್ರಿಕೆಯ ಜುಲೈ ೧೯೬೪ರ "ಬ್ರಹ್ಮರ್ಷಿ ದೈವರಾತರು" ಎಂಬ ಪಾವೆಂ ಅವರ ಲೇಖನದಲ್ಲಿ ಉಲ್ಲೇಖಿಸಲಾಗಿದೆ. ಎರಡನೆಯ ಪಕ್ಷವನ್ನು ಸ್ವೀಕರಿಸಿದರೆ "ಉಪನಯನವಾದ ಸ್ವಲ್ಪ ದಿನಗಳಲ್ಲಿಯೇ ತಾಯಿಗೆ ವಿಷಮಜ್ವರ ಪ್ರಾರಂಭವಾಯಿತ್ತು." ಇತ್ಯಾದಿ ಅ. ಆತ್ಮಚರಿತ್ರೆಯ ಮಾತುಗಳಿಗೆ ವಿರೋಧ ಉಂಟಾಗುತ್ತದೆ. ಉಪನಯನ ದೈವರಾತರ ಎಷ್ಟನೇ ವಯಸ್ಸಿನಲ್ಲಾಯಿತು ಎನ್ನುವುದರ ಕುರಿತು 'ಕಸ್ತೂರಿ' ಮಾಸಪತ್ರಿಕೆ ಮೌನ ತಾಳುತ್ತದೆ. ಆದ್ದರಿಂದ ಅ. ಆತ್ಮಚರಿತ್ರೆಯ ಪಕ್ಷವೇ ಪ್ರಸ್ತುತ ಗ್ರಂಥಕರ್ತನಿಂದ ಸ್ವೀಕರಿಸಲ್ಪಟ್ಟಿದೆ.

೪. ದೈವರಾತರ ಶಿಕ್ಷಣ

ದೈವರಾತರ ಪ್ರಾಥಮಿಕ ಹಂತದ ಓದು ಬರಹಗಳ ಶಿಕ್ಷಣಕ್ಕೆ ಅಕ್ಷರಶಃ ಮನೆಯೇ ಮೊದಲ ಪಾಠಶಾಲೆಯಾಗಿತ್ತು; ತಾಯಿಯೇ ಮೊದಲ ಗುರುವೂ ಆಗಿದ್ದಳು. ಇಷ್ಟೊಂದು ವ್ಯಾಪಕವಾಗಿ ಶೈಕ್ಷಣಿಕ ವಾತಾವರಣ ದೇಶದೆಲ್ಲೆಡೆ ಪಸರಿಸಿರಲಿಲ್ಲ; ಅದಕ್ಕೆ ಗೋಕರ್ಣವೂ ಹೊರತಾಗಿರಲಿಲ್ಲ. ಭಾರತದ ಸ್ವಾತಂತ್ರ್ಯಾನಂತರ ಶಾಸನಬದ್ಧವಾಗಿ ಅನುಷ್ಠಾನಕ್ಕೆ ಬಂದ ಸರ್ವಜನಸಾಮಾನ್ಯವಾದ ಶೈಕ್ಷಣಿಕ ನೀತಿ. ಅದಕ್ಕನುಸಾರವಾದ ಶಿಕ್ಷಣ ಪದ್ಧತಿ, ಅಭ್ಯಾಸಪತ್ರಿಕೆ, ಪರೀಕ್ಷಾಪದ್ಧತಿ, ಶಾಲೆಗಳು ಮತ್ತು ಶಿಕ್ಷಕರು ಇವು ಯಾವವೂ ಇಲ್ಲದ ದಿನಗಳಲ್ಲಿ ದೈವರಾತರು ಶಾಲೆಗೆ ಹೋಗುವದಾಗಲೀ ಪರೀಕ್ಷೆಯನ್ನು ಎದುರಿಸುವುದಾಗಲೀ ಪದವಿಗಳನ್ನು ಪಡೆಯುವುದಕ್ಕಾಗಲೀ ಸಾಧ್ಯವೇ ಇರಲಿಲ್ಲ. ಶಿಕ್ಷಣವೇ ಇರಲಿಲ್ಲ ಎಂದೂ ಇದರರ್ಥವಲ್ಲವಷ್ಟೆ! ಪದ್ಧತಿ ಭಿನ್ನವಾಗಿತ್ತು. ಆಚಾರ್ಯ ಶಿಷ್ಯ ಪರಂಪರೆಯ ಮೂಲಕ ಅನೇಕ ಸಹಸ್ರ ವರ್ಷಗಳಿಂದ ವೇದ-ಶಾಸ್ತ್ರಗಳ ಅಧ್ಯಯನದ ಒಂದು ದೀರ್ಘಪರಂಪರೆ ಇತ್ತಷ್ಟೆ. ಗೋಕರ್ಣವಂತೂ ಸಹಸ್ರಮಾನಗಳಿಂದ ವೈದಿಕ ವಾಙ್ಮಯದ ಅಧ್ಯಯನ-ಅಧ್ಯಾಪನದ ಕೇಂದ್ರವಾಗಿತ್ತು. ಅಂಥ ಒಂದು ಅಪರೂಪದ ವೇದ-ಕೇಂದ್ರದಲ್ಲಿಯೇ ಜನ್ಮತಾಳಿದ ದೈವರಾತರು ಗೋಕರ್ಣದಲ್ಲಿ ಹಲವು ವರ್ಷ ವೇದಾಭ್ಯಾಸವನ್ನು ಮಾಡಿದರು. ಇಷ್ಟನ್ನು ಹೇಳಿದರೆ ದೈವರಾತರ ಅಧ್ಯಯನವನ್ನು ಕುರಿತು ಎಲ್ಲವನ್ನೂ ಹೇಳಿದಂತಾಗುವುದಿಲ್ಲ.

ದೈವರಾತರ ಅಧ್ಯಯನದ ವ್ಯಾಪಕತೆ ಕಾಲದ ದೃಷ್ಟಿಯಿಂದಲೂ ದೇಶದ ದೃಷ್ಟಿಯಿಂದಲೂ ವಿಶಾಲ ಹಾಗೂ ಹರಹಿನಿಂದ ಕೂಡಿರುವುದನ್ನು ಅವರ ಜೀವನ ವೃತ್ತಾಂತದ ಸಿಂಹಾವಲೋಕನದಿಂದ ಮನಗಾಣಬಹುದಾಗಿದೆ.

ಅವರ ಆಯುಷ್ಯದ ಒಂದೇ ಕಾಲಘಟ್ಟಕ್ಕಾಗಲೀ, ಒಂದು ಸೀಮಿತ ಪ್ರದೇಶಕ್ಕಾಗಲೀ ಅವರ ವಿದ್ಯಾರ್ಥಿ ಜೀವನ ಸೀಮಿತವಾಗಿರಲಿಲ್ಲ. ಅವರ ಆಚಾರ್ಯ ಪರಂಪರೆಯು ದೊಡ್ಡದೂ ಮಹತ್ತ್ವಪೂರ್ಣವಾದುದೂ ಆಗಿದೆ. ಆಗಿನ ಕಾಲದ ಪ್ರಖ್ಯಾತ ಯೋಗಿಗಳಾದ ಟೆಂಬೇ ಮಹಾರಾಜರು, ಪಂಡಿತರೂ, ವಾಗ್ಮಿಗಳೂ, ಕವಿಗಳೂ ಅವಧಾನಿಗಳೂ ಆದ ವಾಸಿಷ್ಠ ಗಣಪತಿ ಮುನಿಗಳೂ, ಜೀವನ್ಮುಕ್ತರಾಗಿ ಅರುಣಗಿರಿಯಿಂದ ಜಗದಗಲ ಬೆಳಗಿದ ರಮಣಮಹರ್ಷಿಗಳೂ ದೈವರಾತರ ಆಚಾರ್ಯ ಪರಂಪರೆಯಲ್ಲಿ ಬರುವ ಮಹನೀಯರಾಗಿದ್ದಾರೆ. ಅವರು ಪಡೆದ ವಿದ್ಯೆಗಳ ವ್ಯಾಪ್ತಿಯೂ ವಿಶಾಲವಾಗಿಯೇ ಇದೆ. ವೇದಗಳು, ಅದರ ಅಂಗಗಳಾದ ಕಲ್ಪ, ಜ್ಯೋತಿಷ ಮತ್ತು ವ್ಯಾಕರಣ ಮುಂತಾದವುಗಳು, ಸಂಸ್ಕೃತ ಭಾಷೆ ಮತ್ತು ಸಾಹಿತ್ಯ, ಚಿತ್ರಕಲೆ, ವೃಕ್ಷಾಯುರ್ವೇದ, ವೈದ್ಯಶಾಸ್ತ್ರ, ಪಾಕವಿದ್ಯೆ, ಅಷ್ಟಾಂಗಯೋಗ, ಹಠಯೋಗ, ಮಂತ್ರ ಮತ್ತು ತಂತ್ರ ಶಾಸ್ತ್ರಗಳು, ಇಂಗ್ಲೀಷೊಂದನ್ನು ಹೊರತುಪಡಿಸಿ ಉಳಿದ ಭಾರತೀಯ ಭಾಷೆಗಳಲ್ಲಿ ಮತ್ತು ನೇಪಾಲಿ ಭಾಷೆಯಲ್ಲಿ ಸಂವಹನ ಮಾಡುವ ಸಾಮರ್ಥ್ಯ ಕೃಷಿ, ಗೋರಕ್ಷೆ ಮತ್ತು ಇವೆಲ್ಲವುಗಳಿಗೆ ಕಲಶವಿಟ್ಟಂತೆ ಭಗವದ್ಗೀತೆಯ ವಿಭೂತಿಯೋಗದ ಪ್ರಸಿದ್ಧ ಉಕ್ತಿಯಾದ "ಅಧ್ಯಾತ್ಮ ವಿದ್ಯಾ ವಿದ್ಯಾನಾಂ" ಎಂಬ ಮಾತಿಗನುಸಾರವಾಗಿ ಅಧ್ಯಾತ್ಮ ವಿದ್ಯೆ ಇವೆಲ್ಲವುಗಳನ್ನೂ ಪಡೆದಿದ್ದರು. ಆದರೆ ಒಂದು ಮಾತಂತೂ ಸತ್ಯ- ಅವರ ಅಧ್ಯಯನದ ಪರಂಪರೆ ಪ್ರಾರಂಭವಾದದ್ದು ಗೋಕರ್ಣದಲ್ಲಿಯೇ, ಅದೂ ತಮ್ಮ ಸ್ವಂತ ಮನೆಯಲ್ಲಿಯೇ.

ದೈವರಾತರಿಗೆ ಉಪನಯನವಾದ ನಂತರ ಅವರ ತಂದೆ ವಿಘ್ನೇಶ್ವರ ಭಡತಿಯವರೆ ಋಗ್ವೇದ ಪಾಠವನ್ನು ಪ್ರಾರಂಭ ಮಾಡಿದರು.[೧] ವಿಘ್ನೇಶ್ವರ ಭಡತಿಯವರು ವೇದವಿದ್ಯಾ ಸಂಪನ್ನರೇನೋ ಆಗಿದ್ದರು; ಆದರೆ ಅವರದು ಉಪಾಧ್ಯಾಯ ವೃತ್ತಿಯಾಗಿರಲಿಲ್ಲ. ಗೋಕರ್ಣದಲ್ಲಿ ದೈವರಾತರು ಹುಟ್ಟುವುದಕ್ಕೆ ಪೂರ್ವದಲ್ಲಿಯೇ ವರ್ತಮಾನದಲ್ಲಿ "ಶ್ರೀ ಮೇಧಾ ದಕ್ಷಿಣಮೂರ್ತಿ ಸಂಸ್ಕೃತ ಮಹಾವಿದ್ಯಾಲಯಃ" ಎಂಬ ಹೆಸರಿನಲ್ಲಿ ನಡೆಯುತ್ತಿರುವ ಸಂಸ್ಕೃತ ವಿದ್ಯಾಪೀಠವು ದೈವರಾತರ ತಾಯಿಯ ತಂದೆಯಾದ ಗಣೇಶ ಶಾಸ್ತ್ರಿ,

೧. ಅಪ್ರಕಟಿತ ಆತ್ಮಚರಿತ್ರೆ; ಪುಟ ೧೦
ಕಸ್ತೂರಿ (ಕನ್ನಡ ಡೈಜೆಸ್ಟ್) ಜುಲೈ ೧೯೬೪ ಪುಟ ೭೪

ಹೊಸಮನೆಯವರಿಂದ ಸ್ಥಾಪಿಸಲ್ಪಟ್ಟಿತ್ತು.[1] ಕೆಲವು ವಿದ್ವಾಂಸರು ವಿಶೇಷವಾಗಿ ವೈಯಕ್ತಿಕ ನೆಲೆಯಲ್ಲಿ ತಮ್ಮ ತಮ್ಮ ಮನೆಗಳಲ್ಲಿಯೇ ವೇದಾಧ್ಯಾಪನವನ್ನು ಮಾಡುತ್ತಿದ್ದರು. ಇದು ಸ್ಥೂಲವಾಗಿ ಗೋಕರ್ಣದ ಅಂದಿನ ಶೈಕ್ಷಣಿಕ ಚಟುವಟಿಕೆಯ ನಕ್ಷೆ ಎನ್ನಬಹುದು.

ವಿಘ್ನೇಶ್ವರ ಭಡತಿಯವರು ಕೃಷಿಕರೂ ಆದದ್ದರಿಂದ ದೈವರಾತರ ವೇದಾಭ್ಯಾಸ ಸುಲಲಿತವಾಗಿ ಮುಂದುವರಿಯುತ್ತಿರಲಿಲ್ಲ. ಸಮುದ್ರ ತೀರದಲ್ಲಿರುವ ಗೋಕರ್ಣದಿಂದ ಸರಿಸುಮಾರು ಏಳೆಂಟು ಕಿ.ಮೀಟರ ದೂರವಿರುವ ತೆಂಗಿನ ತೋಟ ಮತ್ತು ಭತ್ತದ ಗದ್ದೆಗಳಿಗೆ ಆಗಾಗ ಹೋಗುತ್ತಿದ್ದರು. ಹೆಚ್ಚು ಕೃಷಿಕಾರ್ಯಗಳಿದ್ದಾಗ ನಾಲ್ಕೈದು ದಿನಗಳವರೆಗೆ ಅಲ್ಲಿಯೇ ಇದ್ದು ಕೆಲಸಗಳೆಲ್ಲ ಮುಗಿದ ಮೇಲೆ ತಿರುಗಿ ಬರುತ್ತಿದ್ದರು. ದೈವರಾತರೂ ತಂದೆಯ ಸಂಗಡ ಆಗಾಗ ಹೋಗುತ್ತಿದ್ದುದೂ ನಡೆಯುತ್ತಿತ್ತು. ದೈವರಾತರಿಗೂ ಕೃಷಿ ಇಷ್ಟವೇ ಆಗಿತ್ತು. ದೈವರಾತರೇ ಒಂದು ಕಡೆ ಇದನ್ನು ಆತ್ಮೀಯವಾಗಿ ದಾಖಲಿಸುತ್ತಾ ಹೀಗೆ ಹೇಳಿರುವುದುಂಟು – "ನಮ್ಮ ಮನೆಯು ಕೋಟಿತೀರ್ಥದ ಉತ್ತರಭಾಗದಲ್ಲಿತ್ತು. ಅಲ್ಲಿಂದ ಮುಂದೆ ಸಮುದ್ರ ದಂಡೆಗುಂಟ ಸುಮಾರು ಐದು ಮೈಲಿ ನಡೆದರೆ ನಮ್ಮ ತೆಂಗಿನ ತೋಟ ಮತ್ತು ಭತ್ತದ ಗದ್ದೆಯು ಸಿಗುವದು. ನಾನು ತಂದೆಯವರ ಜೊತೆಗೆ ಆಗಾಗ್ಗೆ ಅಲ್ಲಿಗೆ ಹೋಗುತ್ತಿದ್ದೆ. ನಾವು ಅಲ್ಲಿಗೆ ಹೋದಾಗ ಉಳಿದುಕೊಳ್ಳಲೆಂದು ತೆಂಗಿನಗರಿಗಳಿಂದ ಹೊದೆಸಿದ ಒಂದು ಚಿಕ್ಕ ಗುಡಿಸಲನ್ನು ಕಟ್ಟಿದ್ದರು. ನಾವು ಅಲ್ಲಿಗೆ ಹೋಗುವಾಗ ಸ್ವಲ್ಪ ಅಕ್ಕಿಯನ್ನು ಒಯ್ಯುತ್ತಿದ್ದೆವು. ಅದರಿಂದ ಒಂದಿಷ್ಟು ಗಂಜಿಯನ್ನು ಮಾಡಿ ಊಟ ಮುಗಿಸಿ ಅಲ್ಲಿ ಮಾಡಬೇಕಾದ ಕೆಲಸಗಳನ್ನು ಪೂರಯಿಸಿ ಮನೆಗೆ ಮರಳುತ್ತಿದ್ದೆವು.... ನನಗೆ ಚಿಕ್ಕಂದಿನಿಂದಲೂ ಕೃಷಿಯಲ್ಲಿ ಆಸಕ್ತಿ. ಆದ್ದರಿಂದಲೇ ತಂದೆಯವರು ಈ ಕಡೆಗೆ ಬರುವಾಗಲೆಲ್ಲ ಸುಮಾರು ಐದು ಮೈಲುಗಳಷ್ಟು ದೂರವಾದರೂ ನಡೆದು ಬರುತ್ತಿದ್ದೆ."[2] ಈ ಮಾತುಗಳು ನಿಶ್ಚಿತವಾಗಿ

೧. ಕಸ್ತೂರಿ (ಕನ್ನಡ ಡೈಜೆಸ್ಟ) ಜುಲೈ ೧೯೬೪ ಪುಟ ೭೪
ದೈವರಾತರು ಹುಟ್ಟುವದಕ್ಕೆ ಮೊದಲೇ ಗೋಕರ್ಣದಲ್ಲಿ ಸಂಸ್ಕೃತ ವಿದ್ಯಾಪೀಠವಿತ್ತು. ಸಂಸ್ಕೃತ ವಿದ್ಯಾಪೀಠದ (ಇಂದಿನ ಶ್ರೀಮೇಧಾ ದಕ್ಷಿಣಾಮೂರ್ತಿ ಸಂಸ್ಕೃತ ಮಹಾವಿದ್ಯಾಲಯ) ಅಧಿಕೃತ ಸ್ಥಾಪನೆಯ ವರ್ಷ ೧೮೮೪. ೧೮೮೨ರಲ್ಲಿಯೇ ಪ್ರಾರಂಭವಾದರೂ ಅಧಿಕೃತ ದಾಖಲೆಗಳ ಪ್ರಕಾರ ೧೮೮೪ ಎಂದೇ ಸ್ವೀಕರಿಸಲ್ಪಟ್ಟಿದೆ.
ಎಂದು ಅದರ ಇಂದಿನ ಪ್ರಾಚಾರ್ಯರಾದ ವಿದ್ವಾನ್ ಗಣಪಯ್ಯ ಹೊಳ್ಳ ಅವರು ಪ್ರಸ್ತುತ ಗ್ರಂಥಕರ್ತನಿಗೆ ತಿಳಿಸಿರುತ್ತಾರೆ.

೨. ಅಪ್ರಕಟಿತ ಆತ್ಮಚರಿತ್ರೆ; ಪುಟ ೧೦

ದೈವರಾತರಿಗೆ ಕೃಷಿಯಲ್ಲಿ ಬಾಲ್ಯದಿಂದಲೇ ಇದ್ದ ಆಸಕ್ತಿಯನ್ನೂ, ಕೃಷಿಯಲ್ಲಿ, ವೇದಾಧ್ಯಯನದಲ್ಲಿ ಹೇಗೋ ಹಾಗೆ, ತಂದೆಯಿಂದಲೇ ಪ್ರಥಮ ಉಪದೇಶ ಪಡೆದರೆಂಬುದಕ್ಕೂ ನಿದರ್ಶನವಾಗಿದೆ.

ಸ್ವಲ್ಪ ಕಾಲದ ನಂತರ ತಂದೆ ವಿಘ್ನೇಶ್ವರ ಭಡತಿಯವರು ಮಗನಿಗೆ ನಿಯತವಾಗಿ ಹಾಗೂ ನಿರಂತರವಾಗಿ ವೇದಾಧ್ಯಯನವನ್ನು ಮಾಡಿಸಲು ತಮ್ಮಿಂದ ಸಾಧ್ಯವಿಲ್ಲವೆಂಬುದನ್ನು ಮನಗಂಡು ಗೋಕರ್ಣದಲ್ಲಿ ಆಗ ಇರುವ ಕೃಷ್ಣಭಟ್ಟ, ಮ್ಯೆಯರ್ ಎಂಬ ವೇದವಿದ್ವಾಂಸರ ಖಾಸಗಿ ಪಾಠಶಾಲೆಗೆ ದೈವರಾತರನ್ನು ಸೇರಿಸಿದರು. ಈ ಘಟನೆಯನ್ನು ಉದ್ದೇಶಿಸಿ ಮತ್ತು ಪಾಠಶಾಲೆಯ ಚಿತ್ರಣ ಮುಂತಾದವುಗಳನ್ನು ಕುರಿತು ದೈವರಾತರ ಮಾತುಗಳನ್ನು ಉದ್ಧರಿಸುವುದೇ ಹೆಚ್ಚು ಸೂಕ್ತ ಮತ್ತು ಉಚಿತವಾಗಿ ಕಾಣುತ್ತದೆ. "ತಂದೆಯವರಿಗೆ ಈ ನಡುವೆ ಕೆಲಸಗಳ ಒತ್ತಡದಿಂದ ನನಗೆ ಸರಿಯಾಗಿ ಪಾಠವನ್ನು ಹೇಳಿಕೊಡುವುದಕ್ಕೆ ಆಗುತ್ತಿರಲಿಲ್ಲ. ಅಲೆದಾಟ ಮತ್ತು ಕೆಲಸಗಳ ನಡುವೆ ಮಗನ ಓದು ಸುಗಮವಾಗಿ ಸಾಗದೆಂದು ಅವರು ನನ್ನನ್ನು ಋಗ್ವೇದ ಕುಲಪುರೋಹಿತರೆನಿಸಿದ ವೇ. ಕೃಷ್ಣಶರ್ಮಾ ಮ್ಯೆಯರ ಇವರ ಪಾಠಶಾಲೆಗೆ ಕಳಿಸಿದರು. ಆಗಿನ ಕಾಲದಲ್ಲಿ ಇಂದಿನಂತೆ ಪಾಠಶಾಲೆಗೆ ಪ್ರತ್ಯೇಕವಾದ ಸ್ಥಳ (ಕಟ್ಟಡ)ದ ವ್ಯವಸ್ಥೆಯು ಇರುತ್ತಿರಲಿಲ್ಲ. ವಿದ್ಯಾರ್ಥಿಯಾಗಿ ಬಂದ ಮಕ್ಕಳಿಗೆ ಮನೆಯಲ್ಲಿಯೇ ಪಾಠವನ್ನು ಹೇಳಿಕೊಡಲಾಗುತ್ತಿತ್ತು. ಅಲ್ಲಿಯ ಯಮ, ನಿಯಮಗಳು ಬಹು ಕಷ್ಟ ನಿಷ್ಠುರವಾಗಿರುತ್ತಿದ್ದವು. ದಿನಾಲು ನಾವು ಮುಂಜಾನೆ ನಸುಕಿನಲ್ಲಿಯೇ ಎದ್ದು ಪ್ರಾತರ್ವಿಧಿ, ನಿತ್ಯಕರ್ಮಗಳನ್ನು ತೀರಿಸಿ ಪಾಠಶಾಲೆಯನ್ನು ಸೇರುತ್ತಿದ್ದೆವು. ಅಂದು ಇಂದಿನಂತೆ ಬೆಳಗಿನ ಉಪಾಹಾರಕ್ಕೆ ಚಹಾ, ಕಾಫಿ, ತಿಂಡಿಗಳು ವಾಡಿಕೆಯಲ್ಲಿರಲಿಲ್ಲ. ಒಂದು ಲೋಟ ಆಕಳ ಹಾಲನ್ನು ಕುಡಿದು ಪಾಠಶಾಲೆಗೆ ಹೋದರೆ ಸುಮಾರು ಹತ್ತು ಗಂಟೆಯ ಸಮಯಕ್ಕೆ ಗಂಜಿಯ ಊಟವನ್ನು ಮಾಡುವುದಕ್ಕಾಗಿ ಸ್ವಲ್ಪ ಕಾಲಾವಕಾಶ ಬಿಡುವು ದೊರೆಯುತ್ತಿತ್ತು. ಆದರೂ ಒಂದು ದಿನ ನಮ್ಮ ಗುರುಗಳು ಸಿಟ್ಟಾಗಿ, ವಿದ್ಯಾರ್ಥಿಗಳು ಗಂಜಿ ಊಟಕ್ಕಾಗಿ ಮನೆಗೆ ಹೋಗಿ ಬರುವುದಕ್ಕೆ ಒಂದು ಕರಾರನ್ನು ಮಾಡಿದರು. ಅದೇನೆಂದರೆ "ವಿದ್ಯಾರ್ಥಿಗಳು ಗಂಜಿ ಊಟಕ್ಕೆ ಹೋಗುವಾಗ ಒಂದು ಒಣಗಿದ ಗಾರೆ ಹಂಚಿನ ಮೇಲೆ ಬಾಯಿಂದ ಉಗುಳಿ ಹೋಗಬೇಕು. ಅದು ಆರುವದರೊಳಗಾಗಿ ಪಾಠಕ್ಕೆ ಬಂದು ಸೇರಬೇಕು".

ಇದೇ ಆ ಕರಾರು (ನಿಯಮ). ಅಲ್ಲ ಕಟ್ಟಪ್ಪಣೆ! ಇದಕ್ಕೆ ಯಾರೂ ತಪ್ಪುವಂತಿರಲಿಲ್ಲ. ತಪ್ಪಿದವರನ್ನು ಕಠಿಣವಾಗಿ ಶಿಕ್ಷಿಸುತ್ತಿದ್ದರು. ಹೀಗೆ ನಿಷ್ಠುರವಾದ ನಿಯಮ ನಿಷ್ಠೆಯನ್ನು ವಿದ್ಯಾರ್ಥಿಗಳು ಪಾಲಿಸುವದು ಅನಿವಾರ್ಯವಾಗಿತ್ತು."[೪]

ದೈವರಾತರ ವೇದಾಧ್ಯಯನ ಕೃಷ್ಣಭಟ್ಟ ಮ್ಯೆಯರ ಅವರ ಪಾಠಶಾಲೆಯಲ್ಲಿ ಐದು–ಆರು ವರ್ಷಗಳವರೆಗೆ ನಡೆಯಿತು. ಆ ಸಮಯದಲ್ಲಿಯೇ ಗೋಕರ್ಣ ಕ್ಷೇತ್ರಕ್ಕೆ ಬಂದಿದ್ದ ಮಹಾರಾಷ್ಟ್ರದ ಸಮರ್ಥ ರಾಮದಾಸರ ಭಕ್ತಿ ಪರಂಪರೆಯ ರಾಮದಾಸ ಸ್ವಾಮಿ ಎಂಬ ಸಾಧುಗಳಿಂದ ಆಕರ್ಷಿತರಾಗಿ ಅವರನ್ನು ಅನುಸರಿಸಿ ಗೋಕರ್ಣವನ್ನು ತ್ಯಜಿಸಿ ಉತ್ತರ ಭಾರತದ ಕಡೆಗೆ ತೆರಳಿದ ದೈವರಾತರು ಎರಡು–ಮೂರು ವರ್ಷಗಳ ನಂತರವಷ್ಟೇ ಗೋಕರ್ಣಕ್ಕೆ ಮರಳಿದರು. (೧೯೦೭–೦೮)

ಗೋಕರ್ಣಕ್ಕೆ ಮರಳಿಬಂದ ನಂತರ ದೈವರಾತರು ಚಿಕ್ಕವರದೇಶ್ವರ ದೇವಸ್ಥಾನದಲ್ಲಿ ವಾಸಮಾಡತೊಡಗಿದರು. ಬಲವಂತರಾವ್ ಭಾಗವತ್ ಎಂಬ ಮಧ್ಯಪ್ರದೇಶದ ಬ್ರಹ್ಮಚಾರಿಯೋರ್ವರು ಗೋಕರ್ಣದ 'ಅಹಲ್ಯಾಬಾಯಿ ಛತ್ರ'ದ ಉಸ್ತುವಾರಿಯನ್ನು ನೋಡಿಕೊಳ್ಳುತ್ತ 'ಹಠಯೋಗ'ದಲ್ಲಿ ಆಸಕ್ತರಾದವರಿಗೆ ತರಬೇತಿಯನ್ನು ನೀಡುತ್ತಿದ್ದರು. ದೈವರಾತರು ಬಲವಂತರಾವ್ ಭಾಗವತರಿಂದ ಹಠಯೋಗದ ಪ್ರಾಥಮಿಕ ಹಂತಗಳಾದ ಆಸನ, ಪ್ರಾಣಾಯಾಮ, ನೇತಿ, ಧೌತಿ ಮೊದಲಾದ ಅಂಗಗಳನ್ನು ಅಭ್ಯಾಸ ಮಾಡಿದರು. [೫]

ದೈವರಾತರು ಅವರ ತಾಯಿಯ ತಂದೆಯಾದ ಗಣೇಶ ಶಾಸ್ತ್ರಿ, ಹೊಸಮನೆಯವರಿಂದ ಸ್ಥಾಪಿಸಲ್ಪಟ್ಟ ಸಂಸ್ಕೃತ ವಿದ್ಯಾಪೀಠ (ಇಂದಿನ ಮೇಧಾ ದಕ್ಷಿಣಾಮೂರ್ತಿ ಸಂಸ್ಕೃತ ಮಹಾವಿದ್ಯಾಲಯ)ದ ವಿದ್ಯಾರ್ಥಿಯಾಗಿ ಸ್ವಲ್ಪಕಾಲ ಸಂಸ್ಕೃತ ಸಾಹಿತ್ಯವನ್ನು ಅಭ್ಯಾಸ ಮಾಡಿದ್ದು [೬] ಅವರು ಹಠಯೋಗವನ್ನು ಅಭ್ಯಾಸ ಮಾಡುತ್ತಿದ್ದ ಕಾಲಖಂಡದಲ್ಲಿಯೇ ಆಗಿತ್ತು.

---

೪. ಅಪ್ರಕಟಿತ ಆತ್ಮಚರಿತ್ರೆ; ೧೦–೧೧
ಕಸ್ತೂರಿ (ಕನ್ನಡ ಡೈಜೆಸ್ಟ) ಜುಲೈ ೧೯೬೪, ಪುಟ ೭೪

೫. ಅಪ್ರಕಟಿತ ಆತ್ಮಚರಿತ್ರೆ; ಪುಟ ೧೪

೬ ಅಪ್ರಕಟಿತ ಆತ್ಮಚರಿತ್ರೆ; ಪುಟ ೫೭
ದೈವರಾತರು ಕಾಲಿದಾಸನ ರಘುವಂಶವನ್ನು ಅಭ್ಯಾಸ ಮಾಡುತ್ತಿದ್ದರೆಂದು ಈ ಮೇಲೆ ಕಾಣಿಸಿದ ಉಲ್ಲೇಖ ತಿಳಿಸುತ್ತದೆ.

ಸಂಸ್ಕೃತ ವಿದ್ಯಾಪೀಠದಲ್ಲಿ ದೈವರಾತರು ಸಂಸ್ಕೃತ ಸಾಹಿತ್ಯವನ್ನು ಅಭ್ಯಾಸಮಾಡುತ್ತಿದ್ದ ಕಾಲದಲ್ಲಿಯೇ ಕಾವ್ಯಕಂಠ ಎಂದೇ ಬಿರುದನ್ನು ಪಡೆದಿದ್ದ ವಾಸಿಷ್ಠ ಗಣಪತಿ ಮುನಿಗಳ ಆಗಮನವಾಯಿತು. ದೈವರಾತರು ಅವರಿಂದ ಆಕರ್ಷಿತರಾಗಿ ಗಣಪತಿ ಮುನಿಗಳ ಶಿಷ್ಯತ್ವವನ್ನು ಅಂಗೀಕರಿಸಿದರು. ದೈವರಾತರು ಗಣಪತಿ ಮುನಿಗಳಿಂದ ಉಪನಿಷತ್ತುಗಳ ಸಾರವನ್ನೂ, ರಹಸ್ಯವನ್ನೂ, ರಾಜಯೋಗವನ್ನವಲಂಬಿಸಿ ಧ್ಯಾನ ಮಾಡುವ ವಿಧಾನವನ್ನೂ, ಉಪನಿಷತ್ತುಗಳಲ್ಲಿ ವಿವೃತವಾದ 'ದಹರೋಪಾಸನೆ', 'ಮುಖ್ಯಪ್ರಾಣೋಪಾಸನೆ', 'ವೈಶ್ವಾನರ ವಿದ್ಯೆ' ಈ ಮೊದಲಾದ ಉಪಾಸನಾ ವಿಧಾನಗಳನ್ನೂ ಉಪದೇಶ ಪಡೆದರು.[೭]

ಓದುಗರ ಅವಗಾಹನೆಗಾಗಿ ಒಂದು ಮಾತನ್ನು ಸೂಚಿಸುವುದು ಉಚಿತವಾಗಿ ಕಾಣುತ್ತದೆ. ಪ್ರಸ್ತುತ ಪ್ರಕರಣವು ದೈವರಾತರ ಅಧ್ಯಯನದ ವ್ಯಾಪ್ತಿಗೆ ಸೀಮಿತವಾದದ್ದರಿಂದ ಅವರು ಪಡೆದ ಅಧ್ಯಯನದ ಜೊತೆ ಜೊತೆಗೆ ಸೇರಿಕೊಂಡಿರುವ ಇನ್ನಿತರ ವಿಷಯಗಳನ್ನೂ, ವ್ಯಕ್ತಿ ವಿಶೇಷಗಳನ್ನೂ ಯಥಾಯುಕ್ತವಾದ ಗ್ರಂಥದ ಮುಂದಿನ ಭಾಗಗಳಲ್ಲಿ ವಿವರಿಸಲಾಗುತ್ತದೆ.

ವಾಸಿಷ್ಠ ಗಣಪತಿ ಮುನಿಗಳು ಎರಡು–ಮೂರು ವರ್ಷಗಳವರೆಗೆ ಗೋಕರ್ಣದಲ್ಲಿ ವಾಸಮಾಡಿ ಹೊರಟುಹೋದ ನಂತರ ದೈವರಾತರು ವಾಸುದೇವಾನಂದ ಸರಸ್ವತೀ ಅಥವಾ ಟೇಂಬೆ ಮಹಾರಾಜರು ಎಂದು ಖ್ಯಾತರಾಗಿದ್ದ ಆ ಕಾಲದ ಪ್ರಖ್ಯಾತ ಯೋಗಿಗಳನ್ನು ಅನುಸರಿಸಿ ಗರುಡೇಶ್ವರಕ್ಕೆ ಹೋಗಿ ಅವರ ಶಿಷ್ಯವೃತ್ತಿಯನ್ನು ಅಂಗೀಕರಿಸಿ ಅಲ್ಲಿ ಕೆಲಕಾಲ ಉಳಿದು ಟೇಂಬೆ ಮಹಾರಾಜರಿಂದ ಹಠಯೋಗದ ಸೂಕ್ಷ್ಮಾತಿಸೂಕ್ಷ್ಮ ಪ್ರಕ್ರಿಯೆಗಳನ್ನು ಅಭ್ಯಾಸ ಮಾಡಿದರು. ಇದಕ್ಕೆ ಮೊದಲೇ ಪ್ರಾಥಮಿಕ ಯೋಗಾಭ್ಯಾಸವನ್ನು ಬಲವಂತರಾವ್ ಮಾರ್ಗದರ್ಶನದಲ್ಲಿ ದೈವರಾತರು ಮಾಡಿಕೊಂಡಿದ್ದರು ಎಂಬುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ದೈವರಾತರು ವಾಸುದೇವಾನಂದ ಸರಸ್ವತೀ ಸ್ವಾಮಿಗಳು ಅಥವಾ ಟೇಂಬೆ ಮಹಾರಾಜರಿಂದ ಕಲಿತ ಹಠಯೋಗದ ಕ್ರಿಯೆಗಳಲ್ಲಿ ಆಸನ, ನವಲಿ, ಧೌತಿ, ಬಸ್ತಿ, ನೇತಿ, ಖೇಚರಿ ಮುದ್ರಾ, ವಜ್ರೋಲಿ ಮುದ್ರಾ, ಕುಂಡಲಿನೀ ಉತ್ಥಾನ ಮುಂತಾದವುಗಳು ಸೇರಿವೆ.[೮] (ಮುಂದೆ ಯುಕ್ತ ಸ್ಥಾನಗಳಲ್ಲಿ ಇವುಗಳನ್ನು ವಿವರಿಸಲಾಗುವದು).

---

೭. ಅಪ್ರಕಟಿತ ಆತ್ಮಚರಿತ್ರೆ; ಪುಟ ೪೦–೪೧

೮. ಅಪ್ರಕಟಿತ ಆತ್ಮಚರಿತ್ರೆ; ಪುಟ ೬೫–೬೬
ಕಸ್ತೂರಿ (ಕನ್ನಡ ಡೈಜೆಸ್ಟ) ಜುಲೈ ೧೯೬೪, ಪುಟ ೭೫

ದೈವರಾತರು ಗರುಡೇಶ್ವರದಿಂದ ವಾರಣಾಸಿಗೆ ತೆರಳಿ ಅಲ್ಲಿ ಕೆಲಕಾಲ ಇದ್ದು ಬಾಬಾಸಾಹೇಬ್ ಜಮಖಂಡೀಕರ ಎಂಬವರ ಬಳಿ ವ್ಯಾಕರಣ ಶಾಸ್ತ್ರವನ್ನು ಅಭ್ಯಾಸ ಮಾಡಿದರು. ಇದೇ ಸಮಯದಲ್ಲಿಯೇ ದೈವರಾತರು ವಾರಣಾಸಿಯಲ್ಲಿದ್ದ ತತ್ಕಾಲೀನ ಘನ ಸಂಸ್ಕೃತ ವಿದ್ವಾಂಸರೊಂದಿಗೆ ಸಂಪರ್ಕಹೊಂದಿ ಅವರಿಂದಲೂ ಉಳಿದ ದರ್ಶನ-ಶಾಸ್ತ್ರಗಳ ಜ್ಞಾನವನ್ನು ಪಡೆದುಕೊಂಡರು. ವಾರಣಾಸಿಯಲ್ಲಿದ್ದ ಸಾಂಪ್ರದಾಯಿಕವಾದ ಜ್ಞಾನನಿಷ್ಠೆಗಳ ವಿವಿಧ ಶಾಖೆಗಳಲ್ಲಿ ಪಾರಂಗತರಾಗಿದ್ದ ಪರ್ವತೀಯ ನಿತ್ಯಾನಂದ ಪಂಡಿತರ ನ್ಯಾಯ, ವೇದಾಂತ ದರ್ಶನಗಳಲ್ಲಿ ವಿದ್ವಾಂಸರಾಗಿದ್ದ ದ್ರವಿಡ ಲಕ್ಷ್ಮಣ ಶಾಸ್ತ್ರಿಗಳ ಮತ್ತು ಮಹಾಮಹೋಪಾಧ್ಯಾಯ ಕೇಶವಶಾಸ್ತ್ರಿ ಮರಾಠೆಯವರ ಪ್ರವಚನ ವರ್ಗಗಳಿಗೆ ಸೇರಿ ದೈವರಾತರು ಮಾರ್ಗದರ್ಶನ ಪಡೆದರು. ದೈವರಾತರು ಟೇಂಬೆ ಮಹಾರಾಜರ ಆದೇಶದ ಮೇರೆಗೆ ವ್ಯಾಕರಣ ಶಾಸ್ತ್ರವನ್ನು ಅದರಲ್ಲೂ ವಿಶೇಷವಾಗಿ ವೈದಿಕ ವ್ಯಾಕರಣವನ್ನು ಅಭ್ಯಾಸ ಮಾಡಲು ವಾರಣಾಸಿಗೆ ಹೋಗುವ ವೇಳೆಗಾಗಲೇ ವಾರಣಾಸಿಯಲ್ಲಿದ್ದ ಆ ಕಾಲದ ಘನವಿದ್ವಾಂಸರಲ್ಲೊಬ್ಬರಾದ ಭಾಮತಿ ಸುಬ್ರಹ್ಮಣ್ಯ ಶಾಸ್ತ್ರಿಗಳು ತುಂಬ ವಯೋವೃದ್ಧರಾದುದರಿಂದ ಪಾಠಪ್ರವಚನಗಳನ್ನು ನಿಲ್ಲಿಸಿ ಬಿಟ್ಟಿದ್ದರು. ಆದರೂ ದೈವರಾತರು ಅವರ ಮನೆಗೆ ಆಗಾಗ ಹೋಗಿ ಬರುತ್ತಿದ್ದರಷ್ಟೆ.

ಗೋಕರ್ಣದ ಸ್ವಗೃಹದಲ್ಲಿ ತಂದೆ ತಾಯಿಗಳಿಂದ ಪ್ರಾರಂಭವಾದ ದೈವರಾತರ ಪ್ರತ್ಯಕ್ಷವಾದ ಅಧ್ಯಯನ ಪರಂಪರೆಗೆ ವಾರಣಾಸಿಯಲ್ಲಿ ಪೂರ್ಣವಿರಾಮ ಒಂದು ವಿಚಿತ್ರ ಘಟನೆಯೊಂದಿಗೆ ಬಿತ್ತು. ವಾರಣಾಸಿಯ ಆ ಘಟನೆಯ ನಂತರ ದೈವರಾತರು ಪ್ರತ್ಯಕ್ಷವಾಗಿ ಉಪದೇಶ ಪಡೆದ ವಿದ್ಯೆಯೆಂದರೆ ಶುಕ್ಲಯಜುರ್ವೇದದ ಪಠನಮಾಡುವ ಕ್ರಮವನ್ನು ಮಾತ್ರ, ಅದೂ ಒಂದು ರೀತಿಯಲ್ಲಿ ವಿನಿಮಯೋಪಾದಿಯಲ್ಲಿ. ವಾರಣಾಸಿಯಿಂದ ತಿರುಗಿ ಹೊರಟ ದೈವರಾತರು ಮಾತೃಗಯಾ ಕ್ಷೇತ್ರದಲ್ಲಿ ಕೆಲವು ಕಾಲ ತಂಗಿದ್ದರು. ಅಲ್ಲಿಯ ಸಾರಸ್ವತೇಶ್ವರ ಮಂದಿರದ ಅರ್ಚಕರಿಗೆ ಶುಕ್ಲ ಯಜುರ್ವೇದ ಭಾಷ್ಯವನ್ನು ವಿವರಿಸುವದಕ್ಕೆ ಒಪ್ಪಿಕೊಂಡ ದೈವರಾತರು ಅದೇ ಅಮೃತಲಾಲ್ ಎಂಬ ಅರ್ಚಕರಿಂದ ಶುಕ್ಲಯಜುರ್ವೇದ ಪಾರಾಯಣವನ್ನು ಕಲಿತರು.

೯. ಕಸ್ತೂರಿ (ಕನ್ನಡ ಡೈಜೆಸ್ಟ್) ಜುಲೈ ೧೯೬೪, ಪುಟ ೭೫
ಅಪ್ರಕಟಿತ ಆತ್ಮಚರಿತ್ರೆ; ಪುಟ ೬೮

ದೈವರಾತರ ವಾರಣಾಸಿಯ ವಾಸದ ಸಮಯದಲ್ಲಿ ಒಂದು ದಿನ ದೈವರಾತರು ಎಂದಿನಂತೆ ಗಂಗಾನದಿಗೆ ಸ್ನಾನಕ್ಕೆ ಹೋಗಿದ್ದರು. ದ್ರವಿಡ ಲಕ್ಷ್ಮಣ ಶಾಸ್ತ್ರಿಗಳ ಇನ್ನೋರ್ವ ಶಿಷ್ಯರಾದ ಭಾವು ಶಾಸ್ತ್ರಿ ವಝೆಯವರು ದೈವರಾತರ ಜೊತೆಗಿದ್ದರು. ದೈವರಾತರು ಗಂಗಾನದಿಯ ಸ್ನಾನಘಟ್ಟದ ಪಾವಟಿಗೆಯ ಮೇಲೆ ನಿಂತುಕೊಂಡಿದ್ದರು. ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ದೈವರಾತರು ನದಿಯ ಜಲವನ್ನು ಬೊಗಸೆಯಲ್ಲಿ ಹಿಡಿದುಕೊಂಡು ಗಂಗಾಮಾತೆಯ ಮೇಲೆ ಶಪಥ ಮಾಡಿ ಇನ್ನು ಮುಂದೆ ಅಧ್ಯಯನಕ್ಕಾಗಿ ತಾವು ಯಾರನ್ನೂ ಸಮೀಪಿಸುವುದಿಲ್ಲ; ವೇದಮಾತೆಯಾದ ಸರಸ್ವತಿಯು ತಾವು ಬಾಳುತ್ತಿರುವ ರೀತಿಗೆ ಪ್ರಸನ್ನಳಾಗಿರುವುದಾದರೆ ವೈದಿಕ ಮಂತ್ರಗಳ ದರ್ಶನ ಶಕ್ತಿಯನ್ನು ತಮಗೆ ಕರುಣಿಸಲೆಂದು ಪ್ರಾರ್ಥಿಸುತ್ತಾ ಬೊಗಸೆಯಲ್ಲಿನ ನೀರನ್ನು ನದಿಗೆ ಸಮರ್ಪಿಸಿದರು. ಇದೇ ಮೇಲೆ ಸೂಚಿಸಿದ ವಿಚಿತ್ರ ಪ್ರಸಂಗ.[೧೦] ಈ ಪ್ರಸಂಗ ನಡೆದ ನಂತರ ದೈವರಾತರು ವಾರಣಾಸಿಯಿಂದ ಮಾತೃಗಯಾಕ್ಕೆ ಬಂದರು. ಹೀಗೊಂದು ನಾಟಕೀಯ ತಿರುವಿನೊಂದಿಗೆ ದೈವರಾತರ ಔಪಚಾರಿಕ ಅಧ್ಯಯನ ಪರಂಪರೆಗೆ ಪೂರ್ಣವಿರಾಮ ಬಿತ್ತಾದರೂ ಗಣಪತಿ ಮುನಿಗಳು ರಮಣಮಹರ್ಷಿಗಳಂಥ ಶ್ರೇಷ್ಠ ಆಚಾರ್ಯರುಗಳ ಸಹವಾಸದಲ್ಲಿ ನಿರಂತರ ಪ್ರವಾಸಗಳಲ್ಲಿ ಅವರ ಅಧ್ಯಯನ ಮುಂದುವರಿದೇ ಇತ್ತು. ಅವರದು ನಿಜಕ್ಕೂ ದೈತ್ಯ ಅಭಿಜಾತ ಪ್ರತಿಭೆ. ಈ ಪ್ರಕರಣದ ಆರಂಭದಲ್ಲಿ ಸೂಚಿಸಿದ ಹಲವು ವಿಧದ ವಿದ್ಯೆಗಳಲ್ಲಿ ಕೆಲವನ್ನು ಮಾತ್ರ ಸ್ವಲ್ಪ ಮಟ್ಟಿಗೆ ಆಚಾರ್ಯ ಪರಂಪರೆಯಿಂದ ಪ್ರತಿಗ್ರಹಿಸಿದರು. ಉಳಿದದ್ದೆಲ್ಲವೂ ತಮ್ಮ ಸ್ವಪ್ರತಿಭೆಯೇ ಪರಿಪಾಕವಾಗಿ ಅಭಿವ್ಯಕ್ತವಾದದ್ದು. ಉದಾಹರಣೆಗೆ ಚಿತ್ರಕಲೆ, ಅವರು ಚಿತ್ರಿಸಿದ ಅತಿವಿಶಾಲ ಚಿತ್ರಗಳನ್ನು ನೋಡಿದರೆ ಆ ಅಭಿಜಾತ ಪ್ರತಿಭೆಯ ಅರಿವಾಗಲು ಸಾಧ್ಯ. ಅದರಂತೆ ಪಾಕಶಾಸ್ತ್ರ, ವೈದ್ಯಶಾಸ್ತ್ರ, ಇತ್ಯಾದಿಗಳೂ ಸಹ. ಅಕ್ಷರಶಃ ಅವರು ವಿದ್ಯೆಗಳ ಕಣಜವೇ ಆಗಿದ್ದರು.

೧೦. ಅಪ್ರಕಟಿತ ಆತ್ಮಚರಿತ್ರೆ;
ಕಸ್ತೂರಿ (ಕನ್ನಡ ಡೈಜೆಸ್ಟ್) ಜುಲೈ ೧೯೬೪ ಪುಟ ೭೫
ಬ್ರಹ್ಮರ್ಷಿ ದೈವರಾತ ಜೀವನ ಮತ್ತು ಕೃತಿ (ಇಂಗ್ಲೀಷ), ಸಂಯುಕ್ತ ಕರ್ನಾಟಕ ಪ್ರಕಾಶನ ೧೯೬೪ ಪುಟ ೫

೫. ಭಕ್ತಿಯ ಮೋದ

(ಸರಿಸುಮಾರು ೧೯೦೪–೧೯೦೭)

ವಾಸುದೇವೇ ಭಗವತಿ ಭಕ್ತಿಯೋಗಃ ಪ್ರಯೋಜಿತಃ ।
ಜನಯತ್ಯಾಶು ವೈರಾಗ್ಯಂ ಜ್ಞಾನಂ ಯತ್ರದಹೈತುಕಮ್ ॥
(ಭಾಗವತ)

ಋಗ್ವೇದ ಕುಲಪುರೋಹಿತರೆನಿಸಿದ್ದ ಕೃಷ್ಣಭಟ್ಟ ಮೈಯರ ಅವರ ಪಾಠಶಾಲೆಯಲ್ಲಿ ದೈವರಾತರು ವೇದಾಧ್ಯಯನ ಮಾಡುತ್ತಿದ್ದ ಕಾಲ. ಗೋಕರ್ಣಕ್ಕೆ ಲೆಕ್ಕವಿಲ್ಲದಷ್ಟು ಸಾಧು ಸಂತರು ಬಂದು ಹೋಗುತ್ತಿದ್ದರು. ಮಹಾರಾಷ್ಟ್ರದ ಸಮರ್ಥ ರಾಮದಾಸ ಪಂಥಕ್ಕೆ ಸೇರಿದ ಸಾಧುವೊಬ್ಬರು ಆ ಕಾಲದಲ್ಲಿಯೇ ಗೋಕರ್ಣಕ್ಕೆ ಬಂದರು. ಉಜ್ಜಯಿನಿಯಿಂದ ಬಂದಿದ್ದ ಆ ಸಾಧುಗಳ ಹೆಸರು ಸಂತ ರಾಮದಾಸ ಸ್ವಾಮಿ ಎಂದಾಗಿತ್ತು. ಅವರು ಗೋಕರ್ಣದಲ್ಲಿ ಒಂದು ತಿಂಗಳು ವಾಸವಾಗಿದ್ದರು. ಮಹಾಬಲೇಶ್ವರ ಮಂದಿರದ ಎದುರುಗಡೆಯ ಧರ್ಮಶಾಲೆಯ ಮಹಡಿಯ ಮೇಲೆ ಅವರು ಉಳಿದುಕೊಂಡಿದ್ದರು. ಪ್ರತಿನಿತ್ಯ ಸಾಯಂಕಾಲ ಮಹಾಬಲೇಶ್ವರ ಮಂದಿರದಲ್ಲಿ ಕಾಲಿಗೆ ಗೆಜ್ಜೆಕಟ್ಟಿ ನರ್ತನ ಮಾಡುತ್ತ ರಾಮದಾಸ ಸ್ವಾಮಿಗಳೂ ಅವರ ಸಂಗಡಿಗರೂ ಭಜನೆ ಮಾಡುತ್ತಿದ್ದರು. ಸ್ವಚ್ಛಂದವಾಗಿ ನಡೆಯುತ್ತಿದ್ದ ಆ ಭಜನೆಗೆ ಸಮಯದ ಮಿತಿ ಇರುತ್ತಿರಲಿಲ್ಲ. ಭಜನೆ ನರ್ತನಗಳು ಭಕ್ತ್ಯೋನ್ಮಾದದ ಸಂಚಲನವನ್ನು ಉಂಟುಮಾಡುತ್ತಿತ್ತು. ಈ ಎಲ್ಲ ವಿಷಯಗಳು ದೈವರಾತರ (ಬಾಲಕ ಗಣೇಶನ) ಕಿವಿಗೂ ಬಿತ್ತು. ಆಗ ಗಣೇಶನಿಗೆ ೧೨–೧೩ ವರ್ಷಗಳ ವಯಸ್ಸು. ಈ ಸುದ್ದಿಯನ್ನು ಕೇಳಿದ ಗಣೇಶ ಒಂದು ದಿನ ಪಾಠಶಾಲೆಯಿಂದ ಮನೆಗೆ ಬಂದವನೇ ಸಾಯಂಕಾಲೀನ ಅಹ್ನಿಕವನ್ನು ಮುಗಿಸಿ ಮಹಾಬಲೇಶ್ವರ ಮಂದಿರಕ್ಕೆ ಸಂತರನ್ನು ನೋಡಲೆಂದು ಕುತೂಹಲದಿಂದ ಹೋದ. ಸಂತರ

ಭಜನೆಗಳು ನರ್ತನಗಳು ಎಂದಿನಂತೆ ಪ್ರಾರಂಭವಾಗಿದ್ದವು. ಗಣೇಶನೂ ಸ್ವಲ್ಪ ಹೊತ್ತಿನಲ್ಲಿ ಅವರೊಂದಿಗೆ ಭಜನೆ ಮಾಡುವುದಕ್ಕೆ ತೊಡಗಿದ್ದ; ಭಜನೆಯ ಆವೇಶ ಗಣೇಶನನ್ನಾವರಿಸಿತು. ಎಷ್ಟೋ ಹೊತ್ತಿನ ಮೇಲೆ ಭಜನೆ ನಿಂತಾಗಲೇ ಗಣೇಶನಿಗೆ ಬಾಹ್ಯ ಪ್ರಪಂಚದ ಅರಿವಾದದ್ದು. ಈ ಘಟನೆಯನ್ನು ದೈವರಾತರು ಹೀಗೆ ವ್ಯಕ್ತಪಡಿಸಿದ್ದಾರೆ–

"…. ಇದನ್ನು ಕೇಳಿ ಅವರನ್ನು ಕಾಣಬೇಕೆಂಬ ಅಪೇಕ್ಷೆಯು ನನ್ನಲ್ಲಿ ಉಂಟಾಯಿತು. ಆದ್ದರಿಂದ ನಾನು ಮನೆಯ ಕಡೆಗೆ ಬೇಗಬೇಗನೆ ಹೆಜ್ಜೆಹಾಕಿದೆ. ಮನೆಯಲ್ಲಿ ಪುಸ್ತಕದ ಗಂಟನ್ನು ಅದರ ಸ್ಥಾನದಲ್ಲಿರಿಸಿ ಲಗುಬಗೆಯಿಂದ ಕೈಕಾಲು ಮುಖಗಳನ್ನು ತೊಳೆದು ಸಂಧ್ಯಾವಂದನೆಯನ್ನು ಮುಗಿಸಿದೆ. ಅನಂತರ ಸಂತ ರಾಮದಾಸರನ್ನು ಕಾಣಲು ತವಕದಿಂದ ಶ್ರೀ ಮಹಾಬಲೇಶ್ವರ ಮಂದಿರದ ಕಡೆಗೆ ಬಂದೆ. ಆ ಸಮಯಕ್ಕೆ ರಾಮದಾಸಸ್ವಾಮಿಯವರಿಂದ ಶ್ರೀ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ಭಜನೆ ನಡೆಯುತ್ತಿತ್ತು. ಅವರು ಭಜನೆ ಮಾಡುವುದೆಂದರೆ ಬರಿಯ ಭಕ್ತಿಗೀತೆಯನ್ನು ಹಾಡುವುದಾಗಿರಲಿಲ್ಲ. ಕಾಲಿಗೆ ಗೆಜ್ಜೆಯನ್ನು ಕಟ್ಟಿ ಲಯಬದ್ಧವಾಗಿ ಹಾಡುತ್ತ ಭಾವಪರವಶರಾಗಿ ಕುಣಿಯುತ್ತಿದ್ದರು. ಅದನ್ನು ನೋಡುತ್ತ ನನ್ನ ಹೃದಯದಲ್ಲಿ ಅನಿರ್ವಚನೀಯವಾದ ಆನಂದವಾಯಿತು. ನನ್ನನ್ನು ನಾನೇ ಮರೆತು ಅವರ ಜೊತೆಗೆ ನಾನೂ ಅರಿವಿಲ್ಲದೆಯೇ ಭಜನೆಯಲ್ಲಿ ತೊಡಗಿದ್ದೆ….. ಭಜನೆಯನ್ನು ನಿಲ್ಲಿಸಿದಾಗಲೇ ನನಗೆ ಬಾಹ್ಯ ಪ್ರಪಂಚದ ಅರಿವಾದುದು. ತರುವಾಯ ಪ್ರತಿದಿನ ಸಾಯಂಕಾಲ ಪಾಠಶಾಲೆಯಿಂದ ಹಿಂದಿರುಗಿದ ಬಳಿಕ ರಾಮದಾಸ ಸ್ವಾಮಿಯವರೊಂದಿಗೆ ಭಜನೆ ಮಾಡುವದು ನನ್ನ ನಿತ್ಯಪರಿಪಾಠವಾಯಿತು. ಇದರಿಂದ ಪಾಠಶಾಲೆಯಲ್ಲಿ ನನ್ನನ್ನು ಸಹಪಾಠಿಗಳು 'ರಾಮದಾಸ' ಎಂದು ಅಪಹಾಸ್ಯ ಮಾಡುತ್ತಿದ್ದರು. ಈ ಮೊದಲು 'ಅಜ್ಜಿಮೊಮ್ಮ', 'ಬಲಗೊಂಬೆ', 'ಜಡಭರತ' ಮುಂತಾಗಿ ಪರಿಹಾಸ್ಯ ಮಾಡುತ್ತಿದ್ದು ಈಗ ಅವುಗಳ ಪಟ್ಟಿಯಲ್ಲಿ 'ರಾಮದಾಸ' ಎಂಬ ಹೆಸರೂ ಸೇರಲ್ಪಟ್ಟಿತು. ಆದರೆ ಇದರಿಂದ ನನಗೆ ಯಾವುದೇ ತರದ ಲಜ್ಜೆಯೆನಿಸುತ್ತಿರಲಿಲ್ಲ….."[೧] ಹೀಗೆ ಒಂದು ತಿಂಗಳು

---

೧. ಅಪ್ರಕಟಿತ ಆತ್ಮಚರಿತ್ರೆ; ಪುಟ ೧೧–೧೨
ದೈವರಾತರ ಕುರಿತಾದ ಕಸ್ತೂರಿ (ಕನ್ನಡ ಡೈಜೆಸ್ಟ) ಯ ಲೇಖನದಲ್ಲಿ ರಾಮದಾಸರ ಹೆಸರು ಉಜ್ಜಯಿನಿಯ ಜಯ ರಾಮಕೃಷ್ಣ ಖೇರ ಎಂದು ಉಕ್ತವಾಗಿದೆ.

ನಡೆಯಿತು. ಗಣೇಶನ ಅಂತರಂಗದಲ್ಲಿ ಭಕ್ತಿಯ ಬೀಜವನ್ನು ಬಿತ್ತಿ ಸಂತರು ಕೊಲ್ಹಾಪುರಕ್ಕೆ ತೆರಳಿದರು.

೧. ಮದುವೆ ನಿಶ್ಚಯ

ಗಂಡುಮಕ್ಕಳಿಗೆ ಹದಿಮೂರರಿಂದ ಹದಿನಾರು ವರ್ಷಗಳೊಳಗಾಗಿ ಹೆಣ್ಣುಮಕ್ಕಳಿಗೆ ಐದಾರು ವರ್ಷಗಳಿಂದ ಹತ್ತು ಇಲ್ಲವೆ ಹನ್ನೊಂದು ವರ್ಷಗಳೊಳಗಾಗಿ ಮದುವೆ ಮಾಡುವ ಕಾಲ ಅದಾಗಿತ್ತು. ವಿಘ್ನೇಶ್ವರ ಭಡತಿಯವರು ಗಣೇಶನಿಗೆ ಮದುವೆ ಮಾಡಲು ನಿಶ್ಚಯಿಸಿದರು. ಗತಿಸಿದ ಪತ್ನಿಯ ಅಣ್ಣನ ಮಗಳೇ ವಧು ಎಂದು ನಿಶ್ಚಯಿಸಲ್ಪಟ್ಟಿತು. ಪತ್ನಿಯಾದ ನಾಗವೇಣಿಯು ತಾನು ಸಾಯುವ ಪೂರ್ವದಲ್ಲಿ ಅವನ ಮಗಳಾದ ಅರುಂಧತಿಯನ್ನು ಗಣೇಶನಿಗೇ ಕೊಟ್ಟು ಮದುವೆ ಮಾಡಬೇಕೆಂದು ಆಗ್ರಹಪೂರ್ವಕವಾಗಿ ಬೇಡಿಕೊಂಡಿದ್ದಳು. ಅದಕ್ಕೆ ಅಣ್ಣನಾದ ಗಣಪತಿ ಶಾಸ್ತ್ರಿಗಳೂ ಒಪ್ಪಿಗೆ ನೀಡಿ ತಂಗಿಗೆ ವಚನ ನೀಡಿದ್ದರು. ಗಣಪತಿ ಶಾಸ್ತ್ರಿಗಳ ತಾಯಿಯೂ ತಾನು ಸಾಯುವುದಕ್ಕೆ ಮೊದಲು "ನಿನ್ನ ಮಗಳು ಅರುಂಧತಿಯನ್ನು ಗಣೇಶನಿಗೆ ಕೊಡಬೇಕು, ಇದು ನನ್ನ ಕೊನೆಯ ಆಸೆ" ಎಂದು ಗಣಪತಿ ಶಾಸ್ತ್ರಿಗಳಿಗೆ ಹೇಳಿದ್ದಳು. ಗಣೇಶನ ಸೇವಾಮನೋವೃತ್ತಿ, ಸೌಜನ್ಯಶೀಲತೆಗಳು ಅವಳಿಗೆ ಮೆಚ್ಚುಗೆಯಾಗಿದ್ದವು. (ಹಿಂದಿನ ಪ್ರಕರಣದಲ್ಲಿ ಪ್ರಸ್ತಾವಿಸಿದಂತೆ ತನ್ನ ತಾಯಿಗೂ ಮತ್ತು ಅಜ್ಜಿಗೂ ಗಣೇಶ ಮಾಡಿದ ಶುಶ್ರೂಷಾದಿ ವಿಚಾರಗಳನ್ನಿಲ್ಲಿ ಸ್ಮರಿಸಿಕೊಳ್ಳಬಹುದು) ಈ ಹಿನ್ನೆಲೆಯಲ್ಲಿ ವಿಘ್ನೇಶ್ವರ ಭಡತಿ ಮತ್ತು ಗಣಪತಿ ಶಾಸ್ತ್ರಿಗಳಿಬ್ಬರೂ ಸೇರಿ ಮದುವೆಯ ಮುಹೂರ್ತ ಹಾಗೂ ದಿನಗಳನ್ನು ಗೊತ್ತುಮಾಡಿದರು.[೨] ಮದುವೆಯ ಒಂದು ಸಂಪ್ರದಾಯದಂತೆ ವಧುವಿನ ಮನೆಗೆ ಹೋಗಿ ಎಣ್ಣೆ ಹನಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಿಹಿ ಅಡಿಗೆಯನ್ನು ಊಟ ಮಾಡುವವರೆಗೂ ಮುಂದುವರಿಯಿತು.[೩]

---

೨. ಮದುವೆಯ ದಿನ ಫಾಲ್ಗುಣ ಶುದ್ಧ ಷಷ್ಠಿ ಆದಿತ್ಯವಾರವೆಂದು ಉಲ್ಲೇಖಿಸಲ್ಪಟ್ಟಿದೆ. – ಅ. ಆತ್ಮಚರಿತ್ರೆ, ಪುಟ ೧೪

೩. ಸೋದರಮಾವನ ಮಗಳೇ ನಿಶ್ಚಿತವಾದದ್ದರಿಂದ ಗಣೇಶ ಈ ಸಂಪ್ರದಾಯದಲ್ಲಿ ತನಗೆ ಮನಸ್ಸಿನಲ್ಲಿ ಮದುವೆಯೇ ಇಷ್ಟವಿಲ್ಲದಿದ್ದರೂ ಪಾಲ್ಗೊಂಡ. ಅವನಿಗೆ ಇಷ್ಟವಾದ 'ಹಾಲುಬಾಯಿ' ಎಂಬ ಸಿಹಿಕಜ್ಜಾಯವನ್ನೂ ಮಾಡಿದ್ದರು. ಊಟಮಾಡಿ ಹಿರಿಯರಿಗೆ ನಮಸ್ಕರಿಸಿ ಮನೆಗೆ ಬಂದ. ಇದು ನಡೆದದ್ದು ಮದುವೆಯ ಹಿಂದಿನ ದಿನ. – ಅ. ಆತ್ಮಚರಿತ್ರೆ, ಪುಟ ೧೪ (ಪ್ರಾಯಶಃ ಈ ಸಂಪ್ರದಾಯ ಗೋಕರ್ಣದಲ್ಲಿದ್ದ ಸಂಪ್ರದಾಯ)

೨. ಗೋಕರ್ಣವನ್ನು ತ್ಯಜಿಸಿ ದೂರ ಪಯಣ (ಗೋಕರ್ಣದಿಂದ – ಕೊಲ್ಹಾಪುರ)

ಸಂತ ರಾಮದಾಸರ ಭಕ್ತಿಯ ಉನ್ಮಾದದಿಂದ ಆಕರ್ಷಿತನಾಗಿದ್ದ ಗಣೇಶನಿಗೆ ಆ ಸಮಯದಲ್ಲಿ ವಿವಾಹವಾಗಲು ಸ್ವಲ್ಪವೂ ಇಷ್ಟವಿರಲಿಲ್ಲ. ಈ ಮದುವೆಯಿಂದ ತಪ್ಪಿಸಿಕೊಳ್ಳಬೇಕು ಎಂದು ಮದುವೆಯನ್ನು ಹಿರಿಯರು ನಿಶ್ಚಿತಮಾಡಿದ ದಿನದಿಂದಲೇ ಗಣೇಶ ನಿರ್ಧರಿಸಿಯಾಗಿತ್ತು. ಅದಕ್ಕಾಗಿ ತಾನೇ ಒಂದು ಸಮಯವನ್ನೂ ನಿಶ್ಚಯ ಮಾಡಿಕೊಂಡು ಸ್ವಲ್ಪ ಅವಲಕ್ಕಿಯನ್ನು ಅರಿವೆಯ ತುಂಡಿನಲ್ಲಿ ಕಟ್ಟಿ ತಾನು ಹೋಗುವ ದಾರಿಯಲ್ಲಿ ಇಟ್ಟುಕೊಂಡಿದ್ದ ಗಣೇಶ ಮದುವೆಯ ಹಿಂದಿನ ದಿನ ಗೋಕರ್ಣವನ್ನು ತ್ಯಜಿಸಿ ಸಂತ ರಾಮದಾಸ ಸ್ವಾಮಿಯವರನ್ನು ಅರಸಿ ಕೊಲ್ಹಾಪುರಕ್ಕೆ ಹೊರಟನು. "ಮನೆ ಮಾರು ಊರನ್ನು ತೊರೆದು ಬಹುದೂರ ಓಡಿ ಹೋಗಬೇಕು. ಉಸಿರುಕಟ್ಟುವ ಮಡಿವಂತಿಕೆಯ ಸಂಪ್ರದಾಯದ ಶೃಂಖಲೆಗಳನ್ನು ಕಿತ್ತೆಸೆಯಬೇಕು. ಸಂತ ರಾಮದಾಸ ಸ್ವಾಮಿಯವರನ್ನು ಸೇರಬೇಕು..... ಭಕ್ತಿಯ ಭಾವಭಿತ್ತಿಯಿಂದ ಹಾಡುತ್ತ ಆ ರಸೋನ್ಮಾದದಲ್ಲಿ ಕಾಲಿಗೆ ಗೆಜ್ಜೆಯನ್ನು ಕಟ್ಟಿ ಕುಣಿಯಬೇಕು.... ಇವೇ ಮೊದಲಾದ ಮಹತ್ವಾಕಾಂಕ್ಷೆ ನನ್ನ ಮನದಲ್ಲಿ ಅಂಕುರಿಸಿತು. ಅಂದು ಮಾವನ ಮನೆಯಿಂದ ಮನೆಗೆ ಬಂದವನೇ ಯಾರಿಗೂ ತಿಳಿಯದಂತೆ ನಮ್ಮ ಮನೆಯ ದೇವರ ಪೀಠದ ಬಳಿಗೆ ಹೋದೆ. ಅಲ್ಲಿ ನನ್ನ ಕೈಗಿರುವ ಬೆಳ್ಳಿಯ ಬಳೆಗಳು, ಕಿವಿಗಿರುವ ವಂಟಿ, ಸೊಂಟದಲ್ಲಿರುವ ನ್ಯಾವಳ ಇವೆಲ್ಲವುಗಳನ್ನೂ ಮೆಲ್ಲಗೆ ತೆಗೆದಿರಿಸಿದೆ. ತರುವಾಯ ಸಾವಕಾಶವಾಗಿ ಮನೆಯಿಂದ ಹೊರಟು ರಥಬೀದಿಯ ಮಾರ್ಗವಾಗಿ ಮಹಾಬಲೇಶ್ವರ ದೇವಸ್ಥಾನಕ್ಕೆ ಬಂದೆ. ಅಲ್ಲಿ ದೇವಸ್ಥಾನದ ಹೊರಾವರಣದಲ್ಲಿರುವ ಪಶ್ಚಿಮದ್ವಾರದಲ್ಲಿರುವ ಧ್ವಜಸ್ತಂಭದ ಹತ್ತಿರ ಮೌನವಾಗಿ ಒಂದು ಗಳಿಗೆ ಕಾಲ ನಿಂತು ಪಶ್ಚಿಮಾಭಿಮುಖವಾಗಿ ಸಮುದ್ರ ತೀರದತ್ತ ನಡೆಯತೊಡಗಿದೆ. ಆಗ ನನಗೆ ಪರಿಚಿತರೇ ಆದ ಚಿತ್ರಿಗೆ ಭಟ್ಟರೆಂಬವರು ನನಗೆ ಎದುರಾಗಿ ಸಮುದ್ರದ ಕಡೆಯಿಂದ ಬರುತ್ತಿದ್ದರು. ಅವರು ನನ್ನನ್ನು ನೋಡಿ "ಏ! ಇಷ್ಟುಹೊತ್ತಿನಲ್ಲಿ ಎಲ್ಲಿಗೆ ಹೊರಟೆಯೊ? ಗಣೇಶ!" ಎಂದರು. ಅದಕ್ಕೆ ನಾನು ಸಂಕ್ಷಿಪ್ತವಾಗಿ "ಎಲ್ಲಿಗೂ ಇಲ್ಲ, ಇಲ್ಲೇ ಸಮುದ್ರ ತೀರದ ಬಳಿಗೆ" ಎನ್ನುತ್ತ ಸರಸರನೆ ಮುಂದಕ್ಕೆ ಹೆಜ್ಜೆ ಹಾಕಿದೆ"[೪] ಗೋಕರ್ಣವನ್ನು ತ್ಯಜಿಸಿ ಮದುವೆಯ

---

೪. ಅಪ್ರಕಟಿತ ಆತ್ಮಚರಿತ್ರೆಯಲ್ಲಿ ಮೂಡಿಬಂದ ನಿರೂಪಣೆ – ಪುಟ ೧೫–೧೬

ಹಿಂದಿನ ದಿನ ಗಣೇಶ ಹೊರಟುಹೋದ ವೃತ್ತಾಂತ ದೈವರಾತರಿಂದ ಹೀಗೆ ನಿರೂಪಿತವಾಗಿದೆ.

ಗೃಹತ್ಯಾಗಮಾಡಿ ಹೊರಟ ಗಣೇಶ ಸಮುದ್ರದಂಡೆಯ ಮೇಲೆ ನಡೆದು ಗಂಗಾವಳಿ ನದಿಯನ್ನು ದಾಟಿ ಕಾರವಾರಕ್ಕೆ ಬಂದು ಅಲ್ಲಿಂದ ಕಾಳೀ ನದಿಯನ್ನು ದಾಟಿ ಮಡಗಾಂವನ್ನು ತಲುಪಿ ಅಲ್ಲಿಂದ ಬೆಳಗಾವಿಯ ಮೂಲಕ ಕೊಲ್ಹಾಪುರಕ್ಕೆ ಕಾಲುನಡಿಗೆಯಿಂದ ಒಂದು ವಾರದೊಳಗೆ ತಲುಪಿದ. ಕೊಲ್ಹಾಪುರದಲ್ಲಿರುವ ಪ್ರಸಿದ್ಧ ಮಂದಿರವಾದ ಮಹಾಲಕ್ಷ್ಮೀ ಮಂದಿರದ ಆಗ್ನೇಯ ದಿಕ್ಕಿಗಿರುವ ಗೋಕರ್ಣೇಶ್ವರ ಮಂದಿರದಲ್ಲಿ ರಾಮದಾಸರನ್ನು ಗಣೇಶ ಕೂಡಿಕೊಂಡ.[೫] ಇತ್ತ ಗೋಕರ್ಣದಲ್ಲಿ ದೈವರಾತರು ಮನೆಯನ್ನು ಬಿಟ್ಟು ಹೋದನಂತರ ವಿವಾಹದ ಮೊದಲಿನ ದಿನ ವರನೆ ಪತ್ತೆ ಇಲ್ಲದ್ದರಿಂದ ಸಹಜವಾಗಿಯೇ ಮನೆಯವರಿಗೂ ಬಂಧುಗಳಿಗೂ ಗಾಬರಿ ಉಂಟಾಯಿತು. ಯಾವಾಗಲೂ ಕೋಟಿತೀರ್ಥದ ಉತ್ತರದಿಕ್ಕಿನ ಮನೆಯ ಎದುರು ಸಾಲಿನಲ್ಲಿರುವ ಚಿಕ್ಕಮಂಟಪದಲ್ಲಿ ಗಣೇಶ ಇರುತ್ತಿದ್ದ. ಅಲ್ಲಿ ನೋಡಿದರೆ ಅಲ್ಲೂ ಇರಲಿಲ್ಲ. ಇನ್ನಷ್ಟು ಗಾಬರಿಯಿಂದ ಎಲ್ಲಾ ಕಡೆಗೂ ಹುಡುಕತೊಡಗಿದರು. ವಿಘ್ನೇಶ್ವರ ಭಡತಿಯವರಂತೂ ಅಳುವದಕ್ಕೇ ತೊಡಗಿದರು. ಊರಿನಲ್ಲಿ ಎಲ್ಲೂ ಕಾಣಸದಿದ್ದಾಗ ವಿಘ್ನೇಶ್ವರ ಭಡತಿಯವರ ಹತ್ತಿರದ ಬಂಧುಗಳೂ ಸ್ನೇಹಿತರೂ ಹೇಗಾದರೂ ಗಣೇಶನನ್ನು ಹುಡುಕಿ ತರುತ್ತೇವೆ ಎಂದು ಅವರಿಗೆ ಸಮಾಧಾನಪಡಿಸಿ ತಿಂಗಳ ಪರ್ಯಂತ ರಾಮದಾಸ ಸ್ವಾಮಿಯವರ ಭಜನೆ, ನರ್ತನಗಳಿಗೆ ಹೋಗುತ್ತಿದ್ದ ಗಣೇಶ ಅವರ ಹಿಂದೆಯೇ ಹೋಗಿರಬಹುದೆಂದು ತರ್ಕಿಸಿ ರಾಮದಾಸ ಸ್ವಾಮಿಯವರು ಗೋಕರ್ಣದಿಂದ ಮುಂದೆ ಎಲ್ಲಿಗೆ ಹೋಗಿದ್ದಾರೆಂದು ವಿಚಾರಿಸಿಕೊಂಡು ಕೊಲ್ಹಾಪುರಕ್ಕೆ ಬಂದಿಳಿದರು. ಸುತ್ತಲೆಲ್ಲ ರಾಮದಾಸ ಸಂತರಿಗಾಗಿ ಕೇಳುತ್ತ ಗೋಕರ್ಣೇಶ್ವರ ಮಂದಿರಕ್ಕೆ ಬಂದು ಗಣೇಶನನ್ನು ಪತ್ತೆ ಮಾಡಿಯೇ ಬಿಟ್ಟರು. ಅವನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡು ಊರಿಗೆ ಹೋಗುವುದಕ್ಕಾಗಿ ಏರ್ಪಾಟು ಮಾಡತೊಡಗಿದರು. ಗೋಕರ್ಣೇಶ್ವರ ಮಂದಿರದಿಂದ ರಸ್ತೆಗೆ ಬಂದಾಗ ಗಣೇಶ ಅವರ ಹಿಡಿತದಿಂದ ತಪ್ಪಿಸಿಕೊಂಡು ದಟ್ಟವಾದ ಜನಸಂದಣಿಯಲ್ಲಿ

---

೫. ಫಾಲ್ಗುಣ ಶುಕ್ಲಪಕ್ಷದ ಏಕಾದಶಿಯಂದು ಗಣೇಶ ಕೊಲ್ಹಾಪುರವನ್ನು ತಲುಪಿದ ಎಂದು ಆತ್ಮಚರಿತ್ರೆಯಲ್ಲಿ ಉಲ್ಲೇಖಿಸಲ್ಪಟ್ಟಿದೆ.
ಈ ಘಟನೆ ಸಂಕ್ಷೇಪವಾಗಿ ಕಸ್ತೂರಿ-ಜುಲೈ ೧೯೬೪ರಲ್ಲಿಯೂ ಉಲ್ಲೇಖಿತವಾಗಿದೆ. (ಪುಟ ೭೪)

ಮರೆಯಾಗಿ ಊರಹೊರಗಿನ ಪಾಳುಗಡಿಯಲ್ಲಿ ನಾಲ್ಕು ದಿನ ಉಪವಾಸದಿಂದ ಕಳೆದು ಮತ್ತೆ ಗುರುಗಳೊಂದಿಗೆ ಸೇರಿಕೊಂಡ.[೬]

೩. ದಾರಿ ದೂರ ಬಲು ದೂರ (ಕೊಲ್ಹಾಪುರದಿಂದ ಉಜ್ಜಯನಿ)

ಕಾಲವು ಪ್ರವಾಹದಂತೆ ಹರಿಯುತ್ತಿತ್ತು. ಹೊಸ ಸಂವತ್ಸರ ಉದಯವಾಗಿತ್ತು.[೭] ಶ್ರೀರಾಮನವಮಿಯ ಉತ್ಸವದ ಸಡಗರ ಪ್ರಾರಂಭವಾಗಿತ್ತು. ಸಂತರಾಮದಾಸರು ರಾಮನವಮಿಯ ಉತ್ಸವಕ್ಕೆಂದು ಗಾರ್ಘೋಲಿ ಎಂಬ ಊರಿಗೆ ತೆರಳಿದರು. ಗಣೇಶ ಮುಂದೆ ಗುರುಗಳನ್ನು ವಾಯಿ ಅಥವಾ ಉಜ್ಜಯನಿಯಲ್ಲಿ ಪುನಃ ಸೇರುವದು ಎಂದು ಸೂಚಿತವಾಗಿತ್ತು. ಗಣೇಶ ಕೊಲ್ಹಾಪುರದಿಂದ ಹೊರಟು ಕಾಲುನಡಿಗೆಯಿಂದಲೇ ಮೀರಜನ್ನು ತಲುಪಿ ಅಲ್ಲಿಂದ ಮುಂದೆ ಪಂಢರಪುರವನ್ನು ಸೇರಿದ. ಪಂಢರಪುರದಲ್ಲಿ ರಾಮನವಮಿಯವರೆಗಿದ್ದು ದಶಮಿಯ ದಿನ ಗೊಂಧವಲೆ ಎಂಬ ಊರಿಗೆ

---

೬. ಅಪ್ರಕಟಿತ ಆತ್ಮಚರಿತ್ರೆಯಲ್ಲಿ ಈ ಘಟನಾವಳಿ ಸವಿಸ್ತಾರವಾಗಿ ಉಕ್ತವಾಗಿದೆ. ಗೋಕರ್ಣದಿಂದ ಎರಡು ಜನ ಗಣೇಶನನ್ನು ಅನ್ವೇಷಿಸುವುದಕ್ಕಾಗಿ ಬಂದಿದ್ದರು. ಅವರಲ್ಲಿ ಕಾಮಣ್ಣ ಎಂಬ ವ್ಯಕ್ತಿಯೂ ಒಬ್ಬನಾಗಿದ್ದ. ಅವನಿಗೆ ಕೊಲ್ಹಾಪುರದಲ್ಲಿ ತುಂಬ ಪರಿಚಯದ ಜನರೂ ಇದ್ದರು. ಗಣೇಶ ಕೊಲ್ಹಾಪುರಕ್ಕೆ ಬಂದು ನಾಲ್ಕು ದಿನ ಕಳೆದ ಮೇಲೆ ಅವರು ಬಂದು ತಲುಪಿದ್ದರು. ಇನ್ನು ಗಣೇಶ ಅವರಿಂದ ತಪ್ಪಿಸಿಕೊಂಡು ಹೋಗಿ ಊರನ್ನು ದಾಟಿ ಕಾಡುದಾರಿಯನ್ನು ಹಿಡಿದು ಮುಂದಕ್ಕೆ ಕಾಣುತ್ತಿರುವ ಬೆಟ್ಟದ ಮೇಲೆ ಹೋಗಿ ಅಲ್ಲಿರುವ ಪಾಳುದೇಗುಲದ ಮೇಲಿನ ಶಿಖರದಲ್ಲಿರುವ ಸಣ್ಣ ಕಿಂಡಿಯ ಮೂಲಕ ಶಿಖರದ ಗರ್ಭಭಾಗವನ್ನಾಶ್ರಯಿಸಿ ಹಗಲು ರಾತ್ರಿಗಳನ್ನು ಕಳೆದ. ಗಣೇಶ ತಪ್ಪಿಸಿಕೊಂಡ ಮೇಲೆ ಕಾಮಣ್ಣ ಮತ್ತು ಅವರ ಸಂಗಡಿಗರು ಆರಕ್ಷಕರಿಗೆ ದೂರನ್ನು ಕೊಟ್ಟರು. ಆರಕ್ಷಕರು ಸಂತ ರಾಮದಾಸರನ್ನೇ ಸಂಶಯದಿಂದ ನೋಡುವುದಕ್ಕೆ ಪ್ರಾರಂಭ ಮಾಡಿದರು. ಆದರೆ ಗಣೇಶ ಮಾತ್ರ ಸಿಕ್ಕದೇ ಗೋಕರ್ಣದಿಂದ ಅನ್ವೇಷಣೆಗೆ ತೆರಳಿದವರು ಗೋಕರ್ಣಕ್ಕೆ ಮರಳಿ ಬಂದು ಅವನ ತಂದೆಗೆ ಎಲ್ಲ ಸಂಗತಿಗಳನ್ನು ತಿಳಿಸಿದರು. ಇದನ್ನು ಕೇಳಿದ ವಿಘ್ನೇಶ್ವರ ಭಡತಿಯವರು ಮತ್ತಷ್ಟು ಗಾಬರಿಯಾಗಿ ಮಗನ ಪ್ರಾಣ ಉಳಿದರೆ ಸಾಕು ಎಂದು ಕೊಲ್ಹಾಪುರಕ್ಕೆ ಹೋಗಿ ಸಂತರನ್ನು ಭೇಟಿಯಾಗಿ ಗಣೇಶ ಬಂದರೆ ರಾಮದಾಸ ಸ್ವಾಮಿಗಳ ಸಂಗಡ ಇರುವುದಕ್ಕೆ ತಮ್ಮದೇನೂ ಅಭ್ಯಂತರವಿಲ್ಲವೆಂದು ಲಿಖಿತವಾಗಿ ಪತ್ರ ಕೊಟ್ಟು ಗೋಕರ್ಣಕ್ಕೆ ಬಂದರು.

೭. ಅಪ್ರಕಟಿತ ಆತ್ಮಚರಿತ್ರೆಯ ಅಸ್ಪಷ್ಟವಾದ ದಾಖಲೆಗಳನ್ನು ಜೋಡಿಸಿದಾಗ ದೈವರಾತರ ರಾಮದಾಸ ಸ್ವಾಮಿಯೊಂದಿಗಿನ ತೀರ್ಥಾಟನ ಸರಿಸುಮಾರು ೧೯೦೫ನೇ ಇಸ್ವಿಯಲ್ಲಿ ಪ್ರಾರಂಭವಾಗಿರಬೇಕೆಂದು ತೀರ್ಮಾನಿಸಿ ಅಂಗೀಕರಿಸಲಾಗಿದೆ. ಆಗ ದೈವರಾತರು ಮನೆಯಿಂದ ಹೊರಟ ಕಾಲ ಹಿಂದೂ ಪಂಚಾಂಗದ ಪ್ರಕಾರ-ಶಾಲಿವಾಹನ ಶಕೆ ೧೮೨೫ನೇ ಫಾಲ್ಗುಣ ಮಾಸ ಎಂದು ಒಪ್ಪಬೇಕಾಗುತ್ತದೆ. ಹೊಸ ಸಂವತ್ಸರ ೧೮೨೬ನೇ ಕ್ರೋಧಿ ಸಂವತ್ಸರ, ಕೊಲ್ಹಾಪುರದಲ್ಲಿ ಪ್ರಾರಂಭವಾಯಿತು.

ಪಯಣಿಸಿದ. ಅಲ್ಲಿ ಗೋಂಧವಲೇಕರ ಮಹಾರಾಜ ಎಂಬ ಸಮರ್ಥ ಸಂಪ್ರದಾಯದ ಸಂತರನ್ನು ಸಂದರ್ಶಿಸಿ ಮೂರುದಿನ ಅಲ್ಲಿಯೇ ಉಳಿದು ಮುಂದೆ ಸಜ್ಜನಗಡಕ್ಕೆ ಹೋದನು.

ದೈವರಾತರ ಬರಹದಲ್ಲಿ ಮೂಡಿಬಂದ ಸಜ್ಜನಗಡ ಹೀಗಿದೆ– "ಪಂಢರಪುರದಿಂದ ಗೋಂಧವಲೇಕರ ಮಹಾರಾಜ ಸ್ವಾಮಿಗಳ ಅಪ್ಪಣೆ ಪಡೆದು ನಾನು ಸಾತಾರೆಗೆ ಹೋದೆ. ಅಲ್ಲಿಂದ ಶಿವಾಜಿಯ ಗುರುಗಳಾದ ಸಮರ್ಥರ ಮೂಲಸ್ಥಾನವಾದ ಸಜ್ಜನಗಡಕ್ಕೆ ಬಂದು ಅಲ್ಲಿಯ ಸೀತಾರಾಮಲಕ್ಷ್ಮಣರ ಮೂರ್ತಿಯನ್ನು ಸಂದರ್ಶಿಸಿದೆ. ಅವುಗಳ ಎದುರಿಗೆ ಆಂಜನೇಯನ ವಿಗ್ರಹವಿದ್ದು ಅದರ ಕೆಳಗಡೆಯಲ್ಲಿ ಶ್ರೀಸಮರ್ಥರಾಮದಾಸ ಸ್ವಾಮಿಯವರ ಸಮಾಧಿಯಿರುವದು. ಇವುಗಳ ದರ್ಶನ ಭಾಗ್ಯದಿಂದ ನನಗೆ ಬಹಳ ಸಂತೋಷವಾಯಿತು. ಸಜ್ಜನಗಡವು ಬಹುರಮ್ಯವಾದ ಸ್ಥಳವಾಗಿದ್ದು ಅಲ್ಲಿಯ ನೋಟವು ಸುಂದರವೂ, ಪ್ರಶಾಂತವೂ ಆಗಿ ನಯನ ಮನೋಹರವಾಗಿದೆ. ಸಜ್ಜನಗಡವು ಕೆಳಗಿನ ಊರಿನಿಂದ ಸುಮಾರು ಎರಡು ಮೈಲುಗಳಷ್ಟು ಎತ್ತರವಿದ್ದರೂ ಅಲ್ಲಿ ಎರಡು ಮೂರು ಜಲಾಶಯಗಳು ನೀರಿನಿಂದ ತುಂಬಿರುವುದೊಂದು ಈ ಸ್ಥಳದ ವೈಶಿಷ್ಟ್ಯವಾಗಿದೆ. ಹಿಂದೆ ಶಿವಾಜಿಯು ಸಜ್ಜನಗಡಕ್ಕೆ ಕುದುರೆಯನ್ನೇರಿ ಬರುವದಕ್ಕಾಗಿ ಸುಮಾರು ನಾಲ್ಕೈದು ಮೈಲುಗಳ ಮಾರ್ಗವನ್ನು ನಿರ್ಮಿಸಿದ್ದನು. ಇಂದಿಗೂ ಈ ಮಾರ್ಗವೇ ಸಜ್ಜನಗಡದ ಪ್ರಧಾನವಾದ ಮಾರ್ಗವಾಗಿದೆ."[೮] ಸಜ್ಜನಗಡಕ್ಕೆ ಬಂದು ಅಲ್ಲಿ ರಾಮದಾಸ ಸ್ವಾಮಿಯವರ ಬಗೆಗೆ ವಿಚಾರಿಸಿದಾಗ ಅವರು ಎರಡು ದಿನಗಳ ಹಿಂದೆ ಬಂದು ನಂತರ ವಾಯಿ ಎನ್ನುವ ಊರಿಗೆ ಅವರ ಗುರುಗಳನ್ನು ಕಾಣಲು ಹೋದರು ಎಂಬ ಸಮಾಚಾರ ಗಣೇಶನಿಗೆ ಸಿಕ್ಕಿತು. ಅದರಿಂದಾಗಿ ಗಣೇಶ ವಾಯಿಗೆ ಹೊರಟು ನಿಂತನು.

ಗಣೇಶ ಮೊದಲು ಸಾತಾರೆಗೆ ಬಂದು ಅಲ್ಲಿಂದ ಐದು ಮೈಲು ದೂರದಲ್ಲಿರುವ ಶ್ರೀಸಮರ್ಥರು ವಾಸವಾಗಿದ್ದ ಪಂಚಗಂಗಾ ತೀರಕ್ಕೆ ಹೋಗಿ ಅಲ್ಲಿ ಸ್ನಾನಾದಿ ನಿತ್ಯ ಕರ್ಮಗಳನ್ನು ಮುಗಿಸಿ ಅಲ್ಲಿಂದ ತಿರುಗಿ ಸಾತಾರೆಗೆ ಬಂದನು. ವೈಶಾಖ ಮಾಸ ಪ್ರಾರಂಭವಾಗಿತ್ತು. ಮಧ್ಯಾಹ್ನದ ಸುಡುಬಿಸಲಿನಲ್ಲಿ ಪಂಚಗಂಗೆಯಿಂದ ಸಾತಾರೆ, ಸಾತಾರೆಯಿಂದ ವಾಯಿಗೆ ಕಾಲುನಡಿಗೆಯಿಂದ ಗಣೇಶ ಒಂದೇ ನಡೆಯುತ್ತಿದ್ದ. ಈಗಾಗಲೇ ಕಾಲುನಡಿಗೆಯಿಂದ ಬೇಕಾದಷ್ಟು

೮. ಅಪ್ರಕಟಿತ ಆತ್ಮಚರಿತ್ರೆ; ಪುಟ ೨೨

ದೂರ ನಡೆದಾಗಿತ್ತು. ಇದರಿಂದಾಗಿ ಅಂಗಾಲಿನ ಚರ್ಮದ ಹೊದಿಕೆ ಹರಿದು ರಕ್ತ ಒಂದು ಕಡೆ ಒಸರುತ್ತಿತ್ತು. ಮೈಯಿಂದ ಧಾರಾಕಾರವಾಗಿ ಬೆವರು ಸುರಿಯುತ್ತಿತ್ತು. ಮೇಲೆ ಬಿಸಿಲು, ಕೆಳಗೆ ಕಾದು ಕೆಂಡವಾಗಿರುವ ಭೂಮಿ. ಆದರೂ ಇದ್ಯಾವುದನ್ನೂ ಲೆಕ್ಕಿಸದೇ ಗಣೇಶನ ಪ್ರಯಾಣ ಮುಂದುವರಿದೇ ಇತ್ತು. ಉಟ್ಟ ಪಂಚೆಯನ್ನೆ ಹರಿದು ರಕ್ತ ಒಸರುತ್ತಿದ್ದ ಪಾದಕ್ಕೆ ಕಟ್ಟಿಕೊಂಡು ಬಾಯಾರಿಕೆ ಹಸಿವನ್ನೂ ಲೆಕ್ಕಿಸದೇ ವಾಯಿಯ ಕಡೆಗೆ ಹೋಗುತ್ತಲೇ ಇದ್ದ. ಹಗಲು ಕಳೆದು ಮುಸ್ಸಂಜೆ ಆವರಿಸತೊಡಗಿತು. ತಂಪಾದ ಗಾಳಿ ಬೀಸತೊಡಗಿತು. ದಣಿವು ನಿವಾರಣೆಗಾಗಿ ದಾರಿಯ ಪಕ್ಕದಲ್ಲಿರುವ ಮರದ ಬುಡವನ್ನಾಶ್ರಯಿಸಿದ ಗಣೇಶ. ಇಷ್ಟು ಹೊತ್ತಿನವರೆಗೆ ಕಾಣದಿದ್ದ ಹಸಿವು ನೀರಡಿಕೆಗಳು ಈಗ ತೀವ್ರವಾಗಿ ಕಾಡಿಸತೊಡಗಿದವು. ನೋಡನೋಡುತ್ತಲೇ ಆ ನಿರ್ಜನವಾದ ಕಾಡುದಾರಿಯಲ್ಲಿ ಕತ್ತಲು ಆವರಿಸತೊಡಗಿತು. ಬೇರೆ ಮಾರ್ಗವಿಲ್ಲದೇ ಗಣೇಶ ಮತ್ತೆ ನಡೆಯಲಾರಂಭಿಸಿದ. ದಾರಿ ನಡೆಯುತ್ತಿದ್ದಾಗ ಸ್ವಲ್ಪ ಹೊತ್ತಿನಲ್ಲಿ ಕಣ್ಣಿಗೆ ಕಾಣುವಷ್ಟು ದೂರದಲ್ಲಿ ಬೆಂಕಿಯ ಹೊಂಬೆಳಕು ಕಾಣಿಸಿತು. ಇನ್ನೂ ಹತ್ತಿರಕ್ಕೆ ಹೋಗಿ ನೋಡಲಾಗಿ ಅಲ್ಲಿ ಮೂರು ಜನರು ಕುಳಿತುಕೊಂಡಿದ್ದರು. ಅವರ ಜೊತೆಯಲ್ಲಿ ಕೆಲವು ಆಕಳುಗಳೂ ಇದ್ದವು. ಆಕಳನ್ನು ಸನಿಹದಲ್ಲಿ ಮರಕ್ಕೆ ಕಟ್ಟಿಹಾಕಲಾಗಿತ್ತು. ಅವರೂ ಸಾತಾರೆಯಿಂದ ವಾಯಿಗೆ ಹೊರಟವರೇ ಆಗಿದ್ದರು. ಗಣೇಶನ ಸ್ಥಿತಿಯನ್ನು ಕಂಡ ಅವರು ಮುಂದಕ್ಕೆ ರಾತ್ರಿಯಲ್ಲಿಯೇ ಹೋಗದಂತೆ ತಡೆದರು. ತಾವು ತಂದ ಬುತ್ತಿಯಲ್ಲಿ ಗಣೇಶನಿಗೂ ಒಂದು ಪಾಲನ್ನು ಕೊಟ್ಟರು. "ಇನ್ನೂ ಎಷ್ಟು ದೂರವಿದೆ ವಾಯಿ?" ಎಂದು ಕೇಳಿದ್ದಕ್ಕೆ ಆ ಅಪರಿಚಿತ ದಾರಿಹೋಕರು "ಇನ್ನೂ ಏಳು ಮೈಲಿದೆ" ಎಂದು ಹೇಳಿದರು. ಹಾಗಾದರೆ ತಾನು ಈಗಾಗಗೇ ಎಂಟು ಮೈಲುಗಳನ್ನು ನಡೆದ ಹಾಗಾಯಿತು ಎಂದುಕೊಳ್ಳುತ್ತ ತಾನು ರಾತ್ರಿಯ ಎರಡನೆಯ ಯಾಮದಲ್ಲಿಯೇ ಎದ್ದು ಮುಂದಿನ ದೂರವನ್ನು ಕ್ರಮಿಸಬೇಕು ಎಂದು ಸಂಕಲ್ಪಿಸಿ ಗಣೇಶ ಅಲ್ಲಿಯೇ ಮಲಗಿದ. ಬೆಳಗಿನ ಯಾಮದಲ್ಲಿ ಎರಡು ಗಂಟೆಗೆ ಎದ್ದು ಗಣೇಶ ಮತ್ತೆ ನಡೆಯುವದಕ್ಕೆ ಪ್ರಾರಂಭ ಮಾಡಿದ. ಜಗವೆಲ್ಲ ಗಾಢವಾದ ನಿದ್ರೆಯಲ್ಲಿರಲು ಇನ್ನೂ ಹದಿಹರೆಯದಲ್ಲಿದ್ದ ಗಣೇಶನಿಗೆ ಗುರಿಯನ್ನೂ ಗುರುವನ್ನೂ ಸ್ಪರ್ಶಿಸುವ ಕಾತರ. ಸಾತಾರೆಯಿಂದ ವಾಯಿಗೆ ಸುಮಾರು ಹದಿನೈದು ಹದಿನಾರು ಮೈಲುಗಳ ಅಂತರ. ಉಳಿದ ಏಳೆಂಟು

೯. ಅ. ಆತ್ಮಚರಿತ್ರೆ, ಪುಟ ೨೩–೨೪
ಕಸ್ತೂರಿ (ಕನ್ನಡ ಡೈಜೆಸ್ಟ) ಜುಲೈ ೧೯೬೪, ಪುಟ ೭೪

ಮೈಲಿಗಳ ಅಂತರವನ್ನು ಕ್ರಮಿಸಿ ಗಣೇಶ ವಾಯಿಯನ್ನು ಬೆಳಗಿನ ಎಂಟು ಗಂಟೆಗೆ ತಲುಪಿದ.

ವಾಯಿಯಲ್ಲಿ ರಾಮದಾಸ ಸ್ವಾಮಿಯವರ ಗುರುಗಳಾದ ಚೌಂಡೇಸ್ವಾಮಿಯವರ ಆಶ್ರಮವಿತ್ತು. ಗಣೇಶ ಅಲ್ಲಿಗೆ ಬಂದಾಗ ರಾಮದಾಸರಾಗಲೀ ಅವರ ಗುರುಗಳಾಗಲೀ ಆಶ್ರಮದಲ್ಲಿ ಇರಲಿಲ್ಲ. ಆದರೆ ಚೌಂಡೇಸ್ವಾಮಿಯವರ ಇನ್ನೆರಡು ಜನ ಶಿಷ್ಯರು ಅಲ್ಲಿದ್ದರು. ದತ್ತಾರಾಮ್ ಮತ್ತು ದಾಮೋದರ ಬುವಾ ಎಂಬ ಆ ಎರಡು ಶಿಷ್ಯರು ಆಶ್ರಮವನ್ನು – ಅದಕ್ಕೂ ಹೆಚ್ಚಾಗಿ ಆಶ್ರಮದಲ್ಲಿರುವ ಗೋಶಾಲೆಯ ವ್ಯವಸ್ಥೆಯನ್ನು – ನೋಡಿಕೊಳ್ಳುವದಕ್ಕಾಗಿ ಗುರುಗಳಿಂದ ನಿಯೋಜಿಸಲ್ಪಟ್ಟಿದ್ದರು. ಆಶ್ರಮದ ಆ ಗೋಶಾಲೆ ಸುತ್ತಮುತ್ತಲಿನ ಪ್ರಾಂತದಲ್ಲೆಲ್ಲಾ ಆಗ ಪ್ರಸಿದ್ಧವಾಗಿತ್ತು. ಆ ಇಬ್ಬರೂ ಶಿಷ್ಯರು ಗಣೇಶನನ್ನೂ ಅವನ ಸ್ಥಿತಿಯನ್ನೂ ಕಂಡು ಹಲವಾರು ದಿನಗಳವರೆಗೆ ಆಶ್ರಮದಲ್ಲಿ ಆಗ್ರಹಪೂರ್ವಕವಾಗಿ ಉಳಿಯುವಂತೆ ಮಾಡಿದರು. ಮುಂಜಾನೆ ಕೃಷ್ಣಾನದಿಯಲ್ಲಿ ಸ್ನಾನಾದಿಗಳನ್ನು ಮುಗಿಸಿ 'ಮಧುಕರಿ' (ಭಿಕ್ಷಾನ್ನ) ವೃತ್ತಿಯಿಂದ ಮಧ್ಯಾಹ್ನದ ಊಟವನ್ನು ಮಾಡಿ ಉಳಿದ ವೇಳೆಗಳಲ್ಲಿ ಗೋವುಗಳನ್ನು ರಕ್ಷಿಸುವ ವಿಧಾನಗಳನ್ನು ಆ ಇಬ್ಬರು ಶಿಷ್ಯರ ಸಹಯೋಗದಲ್ಲಿ ಕಲಿಯುತ್ತ ಅಲ್ಲಿ ಕಾಲವನ್ನು ಕಳೆದ ಗಣೇಶ. ಮುಂದೊಂದು ದಿನ ಆಶ್ರಮವನ್ನು ಸ್ಥಾಪಿಸಿ ಗೋರಕ್ಷಣೆಯನ್ನು ಮಾಡುವುದಕ್ಕೆ ಬೇಕಾದ ಶಿಕ್ಷಣವನ್ನು ಅನಿರೀಕ್ಷಿತವಾಗಿ ಪಡೆದಿದ್ದನವನು.

ವಾಯಿಯಿಂದ ಇಪ್ಪತ್ತು ಮೈಲಿ ದೂರವಿರುವ ಪುಣೆಗೆ ಮುಂದಿನ ಪಯಣ ಮಾಡಿ ನಂತರ ಉಜ್ಜಯಿನಿಗೆ ಹೋಗುವದು ಗಣೇಶನ ಆಲೋಚನೆ. ಆಶ್ರಮದ ಆ ಎರಡು ಜನ ಗುರುಬಂಧುಗಳಿಂದ ಬೀಳ್ಕೊಡಲ್ಪಟ್ಟ ಗಣೇಶ ಕಾಲು ನಡಿಗೆಯಿಂದ ಮತ್ತೊಮ್ಮೆ ಪ್ರಯಾಣ ಪ್ರಾರಂಭಿಸಿದ. ಪುಣೆಗೆ ಬಂದು ರೈಲು ನಿಲ್ದಾಣದಲ್ಲಿ ಉಜ್ಜಯನಿಗೆ ಹೋಗುವದಕ್ಕೆ ಹಣವಿಲ್ಲದೇ ಪ್ಲಾಟಫಾರ್ಮನಲ್ಲಿ ನಾಲ್ಕುದಿನ ಕಳೆಯಬೇಕಾಗಿ ಬಂತು. ಕಾಲುನಡಿಗೆಯಿಂದ ಹೋಗುವದಕ್ಕೂ ಸಾಧ್ಯವಿಲ್ಲದಷ್ಟು ದೂರ. ನಾಲ್ಕುದಿನಗಳಾದ ಮೇಲೆ ಸಜ್ಜನರೊಬ್ಬರ [೧೦] ಸಹಾಯದಿಂದ ಮುಂಬಯಿಗೆ ಬಂದು ತಲುಪಿದ. ಅವರ ಆಶ್ರಯದಲ್ಲಿಯೇ ಗಣೇಶ ಗಿರಗಾಂವದ ಲಕ್ಷ್ಮೀನಾರಾಯಣ ಮಂದಿರದಲ್ಲಿ ಎಂಟುದಿನ ವಾಸ್ತವ್ಯ ಮಾಡಿ ಅವರಿಂದ 'ಋಗ್ವೇದ ಸಂಹಿತೆ' ಮತ್ತು

೧೦. ಸಜ್ಜನರ ಹೆಸರು ದತ್ತಮಹಾರಾಜ ಎಂದು ಉಲ್ಲೇಖಿಸಲ್ಪಟ್ಟಿದೆ. – ಅ. ಆತ್ಮಚರಿತ್ರೆ, ಪುಟ ೨೬

'ದಾಸಬೋಧ' ಎಂಬ ಎರಡು ಪುಸ್ತಕಗಳನ್ನೂ ಹರಿದುಹೋದ ಪಂಚೆಯನ್ನು ಕಂಡು ಉದಾರತೆಯಿಂದ ಕೊಟ್ಟ ಹೊಸ ಪಂಚೆಯನ್ನೂ ದಾರಿಯ ಖರ್ಚಿಗಾಗಿ ಕೊಟ್ಟ ಸ್ವಲ್ಪ ಹಣವನ್ನೂ ತೆಗೆದುಕೊಂಡು ಮುಂದಿನ ಪ್ರಯಾಣವನ್ನು ಪ್ರಾರಂಭಿಸಿದ. ವಸ್ತುತಃ ಆ ಸಜ್ಜನರು ನಾಗಪುರ ರೈಲ್ವೇ ಅಧಿಕಾರಿಗಳಿಗೆ ಗಣೇಶನನ್ನು ಒಪ್ಪಿಸಿ ಉಜ್ಜಯಿನಿಗೆ ತಲುಪಿಸುವಂತೆ ಏರ್ಪಾಟು ಮಾಡಿದ್ದರು.

ಶ್ರೇಯೋಮಾರ್ಗದಲ್ಲಿ ವಿಘ್ನಗಳದ್ದೆ ಕಾರುಬಾರು ಎಂಬರ್ಥದ ಪ್ರಸಿದ್ಧ ಸಂಸ್ಕೃತೋಕ್ತಿಯಂತೆ ಗಣೇಶನ ಮುಂದಿನ ಪಯಣವೂ ಮತ್ತೆ ಕೆಲವು ವಿಘ್ನಗಳಿಂದ ಕೂಡಿತ್ತಾದರೂ ಆ ಪ್ರತಿಬಂಧಗಳನ್ನು ದಾಟಿ ಗಣೇಶ ಉಜ್ಜಯನಿಯನ್ನು ತಲುಪಿದ.[೧೧]

೪. ಸಂತರ ಸಂಗ–ತೀರ್ಥಕ್ಷೇತ್ರ ದರ್ಶನ ಪ್ರಸಂಗ

ಉಜ್ಜಯನಿಯ 'ಪಾನದರೀಬಾ' ಮೊಹಲ್ಲಾದಲ್ಲಿರುವ ಗಣಪತಿ ದೇವಸ್ಥಾನದಲ್ಲುಳಿದು ರಾಮದಾಸ ಸ್ವಾಮಿಗಳನ್ನು ಹುಡುಕುವುದಕ್ಕೆ ಪ್ರಾರಂಭಿಸಿದ. ಗೋವಿಂದರಾವ್ ಜೋಶಿ ಎಂಬವರ ಮನೆಗೆ ಸಂತರೊಬ್ಬರು ಬಂದಿರುವುದಾಗಿಯೂ ಅವರ ಮನೆಗೆ ಹೋದರೆ ಅವರು ಸಿಗಬಹುದೆಂದೂ ತಿಳಿಯಿತು. ಅಲ್ಲಿಗೆ ಹೋಗಿ ನೋಡಿದಾಗ ರಾಮದಾಸರು ಅಲ್ಲಿರಲಿಲ್ಲ. ಆದರೆ ರಾಮದಾಸ ಸ್ವಾಮಿಗಳ ಅತ್ತೆಯೂ ಮತ್ತು ರಾಮದಾಸರ ಮಗಳೂ ಅಲ್ಲಿದ್ದರು. ಗೋಕರ್ಣಕ್ಕೆ ರಾಮದಾಸರು ಬಂದಾಗ ಅವರೂ ಬಂದಿದ್ದರಿಂದ ಗಣೇಶನಿಗೆ ಅವರ ಪರಿಚಯ ಚೆನ್ನಾಗಿಯೇ ಇತ್ತು. ಅವರು ಗಣೇಶನನ್ನು ಆತ್ಮೀಯವಾಗಿ ಬರಮಾಡಿಕೊಂಡರು. ರಾಮದಾಸರು ತಮ್ಮ ಮಗಳ ವಿವಾಹ

೧೧. ನಾಗಪುರದ ರೈಲು ಅಧಿಕಾರಿಗಳಿಂದ ಸಹಾಯ ಪಡೆದು ರೈಲು ಪ್ರಯಾಣ ಪ್ರಾರಂಭಿಸಿದ ಗಣೇಶ ಪ್ರಯಾಣದ ಮಧ್ಯದಲ್ಲಿ ನೀರನ್ನು ಕುಡಿಯುವುದಕ್ಕೆ ಕೆಳಗಿಳಿದಾಗ ರೈಲು ಹೋಗಿ ಬಿಟ್ಟಿತು. ಮನ್ಮಾಡ ಎಂಬ ನಿಲ್ದಾಣದಲ್ಲಿ ಈ ಘಟನೆ ನಡೆಯಿತು. ಅಲ್ಲಿಂದ ಜುನಾವಳ ಎಂಬ ಊರಿಗೆ ಬಂದು ಗೋಕರ್ಣಕ್ಷೇತ್ರಕ್ಕೆ ಬಂದು ಜೋಗಳೆಕರ ಮನೆಯಲ್ಲಿ ಶಿವರಾತ್ರಿಯ ವೇಳೆ ಬಂದ. ಹಲವಾರು ದಿನಗಳ ಪರ್ಯಂತ ಉಳಿದಿದ್ದ ಗೋದಾವರಿಬಾಯಿ ಎಂಬವರ ಪರಿಚಯವಿದ್ದ ಕಾರಣ ಅವರನ್ನು ಹುಡುಕಿ ಅವರ ಸಹಾಯದಿಂದ ಜುನಾವಳದ ರೈಲು ಅಧಿಕಾರಿಯನ್ನು ಭೇಟಿಮಾಡಿದೆ. ಅವರು ಹಿಂದುಮುಂದಿನ ರೈಲು ನಿಲ್ದಾಣಗಳ ಅಧಿಕಾರಿಗಳನ್ನು ಸಂಪರ್ಕಿಸಿ ಮನ್ಮಾಡ ರೈಲು ನಿಲ್ದಾಣದಲ್ಲಿಯೇ ಗಣೇಶನ ಲಗೇಜುಗಳು ನಾಗಪುರದ ಸ್ಟೇಶನ್ ಮಾಸ್ತರರಿಂದ ಇಡಲ್ಪಟ್ಟಿವೆ ಎಂಬುದು ತಿಳಿಯಿತು. ಪುನಃ ಮನ್ಮಾಡಕ್ಕೆ ಹೋಗಿ ಲಗೇಜನ್ನು ತೆಗೆದುಕೊಂಡು ಬಂದು ಜುನಾವಳದಿಂದ ಖಾಂಡ್ವಾ ಬೇಡಿಘಾಟ್ ಮಾರ್ಗವಾಗಿ ಉಜ್ಜಯಿನಿಯನ್ನು ತಲುಪಿದ.
– ಅ ಆತ್ಮಚರಿತ್ರೆ, ಪುಟ ೨೬–೨೭

ನಿಶ್ಚಯ ಮಾಡುವ ಸಲುವಾಗಿ 'ಮಹತ್ಪುರ' ಎಂಬ ಊರಿಗೆ ತೆರಳಿದ್ದಾರೆಂದೂ ಇನ್ನು ಎರಡು ಮೂರು ದಿನಗಳೊಳಗೆ ತಿರುಗಿ ಬರುತ್ತಾರೆಂದೂ ತಿಳಿಸಿದರು. ಅದರಂತೆ ಮೂರು ದಿನವಾದ ಮೇಲೆ ರಾಮದಾಸರು ಮದುವೆಯನ್ನು ನಿಶ್ಚಯ ಮಾಡಿಕೊಂಡು ಬಂದರು. ಗುರುಪುತ್ರಿಯ ಮದುವೆಯ ಹೊಣೆಯನ್ನು ಹೊತ್ತು ಗುರುಗಳಿಗೆ ಸರ್ವವಿಧದಲ್ಲಿಯೂ ಗಣೇಶ ಸಹಾಯ ಮಾಡಿದ.[೧೨]

ಚಾತುರ್ಮಾಸ್ಯ ಕಾಲ ಸನ್ನಿಹಿತವಾಗುತ್ತಲಿತ್ತು. ಇದರಿಂದಾಗಿ ಮತ್ತೆಲ್ಲಿಯೂ ಹೋಗಲಿಚ್ಛಿಸದೇ ರಾಮದಾಸ ಸ್ವಾಮಿಗಳು ಉಜ್ಜಯಿನಿಯಲ್ಲಿಯೇ ಇರುವದಕ್ಕೆ ತೀರ್ಮಾನಿಸಿದರು. ಚಾತುರ್ಮಾಸ್ಯ ಕಾಲದಲ್ಲಿ ಪ್ರತಿನಿತ್ಯವೂ ಮುಂಜಾನೆ ನಸುಕಿನಲ್ಲಿಯೇ ಕ್ಷಿಪ್ರಾನದಿಯಲ್ಲಿ ಸ್ನಾನಮಾಡಿ ಮಹಾಕಾಲ ಮಂದಿರಕ್ಕೆ ಹೋಗಿ ಮಹಾಕಾಲೇಶ್ವರನ ದರ್ಶನ ಮಾಡಿ ತಮ್ಮ ಸ್ಥಾನಕ್ಕೆ ಸಂತರು ಹೋಗುತ್ತಿದ್ದರು. ನದಿಯಲ್ಲಿ ಸ್ನಾನಮಾಡಿ ಮಂದಿರಕ್ಕೆ ಹೋಗುವಾಗ ತಾಳದೊಂದಿಗೆ ಭಜನೆ ಮಾಡುತ್ತ ಹೋಗುವದು ಅವರ ಪದ್ಧತಿಯಾಗಿತ್ತು. ಗಣೇಶ ಮತ್ತು ಇತರ ಅನುಯಾಯಿಗಳು ಆಗ ರಾಮದಾಸರ ಜೊತೆಗೆ ಸೇರಿಕೊಳ್ಳುತ್ತಿದ್ದರು. ಪ್ರತಿನಿತ್ಯ ಸಂಜೆಯ ಹೊತ್ತಿನಲ್ಲಿಯೂ ಮಹಾಕಾಲನ ದರ್ಶನ ಪಡೆದು ಹೊರಗಿನ ಸಭಾಮಂಟಪದಲ್ಲಿ ಮೂರು ತಾಸುಗಳ ಪರ್ಯಂತ ನರ್ತನ ಮತ್ತು ಭಜನೆಗಳನ್ನು ತಮ್ಮ ಶಿಷ್ಯರೊಂದಿಗೆ ಸೇರಿ ಅವ್ಯಾಹತವಾಗಿ ರಾಮದಾಸರು ಚಾತುರ್ಮಾಸ್ಯ ಪರ್ಯಂತ ಮಾಡುತ್ತಿದ್ದರು.

ಇದೇ ವೇಳೆಯಲ್ಲಿ ಗಣೇಶ ರಾಮದಾಸ ಸ್ವಾಮಿಗಳ ಪರಿವಾರಕ್ಕೆಲ್ಲ ಅಡಿಗೆ ಮಾಡಿ ಬಡಿಸುವ ಹೊಣೆಯನ್ನು ಹೊತ್ತುಕೊಂಡ. ಗಣೇಶನ ಪಾಕವಿದ್ಯಾಶಿಕ್ಷಣ ಇಲ್ಲಿ ಹೀಗೆ ಪ್ರಾರಂಭವಾಯಿತು. ಮಹಾರಾಷ್ಟ್ರ ಪದ್ಧತಿಯ ಎಲ್ಲ ವಿಧದ ತಿಂಡಿ-ತಿನಿಸುಗಳನ್ನೂ, ಅಡಿಗೆಯನ್ನೂ ಮಾಡುವಲ್ಲಿ ಗಣೇಶ ನಿಷ್ಣಾತನಾದ. "ಗೋಧಿಯ ಪುಲಕಾ, ರೋಟಿ, ಪುರಿ ಮುಂತಾದವುಗಳು ಅವರ (ಮಹಾರಾಷ್ಟ್ರಿಯನ್ನರ) ಖಾದ್ಯ ಪದಾರ್ಥಗಳಾಗಿದ್ದವು. ಅನಂತರ ಚಿರೋಟಿ, ಶಂಕರಪಾಳ, ಖರ್ಜಿಕಾಯಿ ಮುಂತಾದವುಗಳಲ್ಲದೇ ಮಾಲ್ಪಾದ

೧೨. ಮದುವೆ ಎರಡು ದಿನಗಳಿರುವಾಗಲೇ ಮಹತ್ಪುರ ಎಂಬ ಊರಿಗೆ ಹೋಗಿ ಸಮುಹೂರ್ತದಲ್ಲಿ ಕನ್ಯಾದಾನವನ್ನು ಮಾಡಿ ಉಜ್ಜಯಿನಿಗೆ ವಧೂವರರನ್ನು ಕರೆತಂದು ಏಳೆಂಟು ದಿನ ಅವರನ್ನಿರಿಸಿಕೊಂಡು ವರನ ಗೃಹಕ್ಕೆ ವಧುವನ್ನು ಬೀಳ್ಕೊಟ್ಟದ್ದು ಮದುವೆಯಲ್ಲಿ ಮೊಮ್ಮಗಳಿಗೆ ರಾಮದಾಸರ ಅತ್ತೆ ಯಥೇಚ್ಛವಾಗಿ ಬಂಗಾರ (ಇಪ್ಪತ್ತು ಸಾವಿರ ರೂ ಮೌಲ್ಯದ) ಮತ್ತು ಸೀರೆ, ಪಾತ್ರೆ ಬೆಳ್ಳಿಯ ಸಾಮಗ್ರಿಗಳನ್ನು ಉಡುಗೊರೆಯಾಗಿ ಕೊಟ್ಟದ್ದನ್ನೂ ಅಪ್ರಕಟಿತ ಆತ್ಮಚರಿತ್ರೆಯಲ್ಲಿ ವರ್ಣಿಸಲಾಗಿದೆ-ಪುಟ ೨೮

ಗೋದಿಯಿಂದಲೇ ಮಾಡಬಹುದಾದ ಫೇಣಿ, ಘೀವರ ಮುಂತಾದವುಗಳನ್ನೂ ಕಲಿತುಕೊಂಡೆನು." ಎಂದು ದೈವರಾತರು ಒಂದು ಕಡೆ ಸ್ಮರಿಸಿಕೊಂಡಿದ್ದನ್ನು ಕಾಣಬಹುದು.[೧೩] ದೈವರಾತರ ಪಾಕವಿದ್ಯಾ ನೈಪುಣ್ಯ ಅವರ ಚರಿತ್ರೆಯಲ್ಲಿ ಅವರ ಇನ್ನಿತರ ಆಚಾರ್ಯರಿಗೆ ಸೇವೆ ಮಾಡುವಾಗಲೂ ನಂತರವೂ ಪ್ರಕಟವಾಗುವದನ್ನು ನೋಡುತ್ತೇವೆ.

ರಾಮದಾಸ ಸ್ವಾಮಿಗಳ ಜೊತೆಯಲ್ಲಿದ್ದು ಅವರಿಗೂ ಅವರ ಪರಿವಾರಕ್ಕೂ ಅಡಿಗೆಯನ್ನು ಮಾಡುತ್ತಿದ್ದರೂ ಮಧ್ಯಾಹ್ನದ ಹೊತ್ತಿಗೆ ತಾವು 'ಮಧುಕರಿ' ವೃತ್ತಿಯಿಂದಲೇ ಊಟವನ್ನು ಮಾಡುತ್ತಿದ್ದರು.

ಚಾತುರ್ಮಾಸ್ಯ ಮುಗಿದು ನವರಾತ್ರಿ ಬಂದಿತು. ಉಜಯಿನಿಯಲ್ಲಿ ವಿಕ್ರಮಾದಿತ್ಯನಿಂದ ಪೂಜಿಸಲ್ಪಟ್ಟದೆಂದು ಐತಿಹ್ಯವಿರುವ ದೇವೀ ವಿಗ್ರಹವನ್ನು ದರ್ಶನ ಮಾಡುವ ಭಾಗ್ಯ ಗಣೇಶನಿಗೆ ಪ್ರಾಪ್ತವಾಯಿತು. "ವಿಕ್ರಮಾದಿತ್ಯ ಮಹಾರಾಜನು ಆರಾಧಿಸಿದ ದೇವೀವಿಗ್ರಹದ ಸಂದರ್ಶನದಿಂದ ಧನ್ಯನಾದೆನು" ಎಂದು ಕೃತಕೃತ್ಯಭಾವವನ್ನು ದೈವರಾತರು ಒಂದು ಕಡೆಗೆ ವ್ಯಕ್ತಪಡಿಸಿದ್ದು ಕಂಡುಬರುತ್ತದೆ.[೧೪] ಎರಡು ಮೂರು ತಿಂಗಳು ಹೀಗೆ ಉಜ್ಜಯಿನಿಯಲ್ಲಿ ಕಳೆದ ಕಾಲದಲ್ಲಿ ಉಜ್ಜಯನಿಯಲ್ಲಿರುವ ಪ್ರಸಿದ್ಧ 'ವೇಧಶಾಲೆ'ಯನ್ನೂ ಗಣೇಶ ಎರಡು ಮೂರು ಸಲ ನೋಡುವ ಅವಕಾಶ ಭಾಗ್ಯವನ್ನೂ ಪಡೆದ.

ಕಾರ್ತೀಕ ಪೂರ್ಣಿಮೆಯ ವರೆಗೂ ಉಜ್ಜಯಿನಿಯಲ್ಲಿಯೇ ವಾಸ್ತವ್ಯ ಮಾಡಿದ ಸಂತ ರಾಮದಾಸರು ಮತ್ತು ಅವರ ಅನುಯಾಯಿಗಳು ನಂತರ ಝಾಂಸಿಯನ್ನು ನೋಡಿ ಮುಂದೆ ಪ್ರಯಾಗಕ್ಕೆ ಹೋಗುವ ಮಾರ್ಗದಲ್ಲಿ ಟೇಂಬೆ ಮಹಾರಾಜರು (ಈ ಮಹಾತ್ಮರ ಪ್ರಸ್ತಾಪ ವಿಸ್ತಾರವಾಗಿ ಮುಂದೆ ಬರುತ್ತದೆ) ಸಂನ್ಯಾಸಾಶ್ರಮ ಸ್ವೀಕಾರ ಮಾಡಿದ ನಂತರ ಮೂರು ವರ್ಷ ತಪಸ್ಸನ್ನಾಚರಿಸಿದ ಕ್ಷೇತ್ರವನ್ನು ಸಂದರ್ಶಿಸಿದರು. ಆ ಕ್ಷೇತ್ರದ ಹೆಸರು ಬ್ರಹ್ಮಾವರ್ತ ಎಂದು ಉಲ್ಲೇಖಿಸಲ್ಪಟ್ಟಿದೆ.[೧೫] ಇಲ್ಲಿ ಟೇಂಬೆ ಮಹಾರಾಜರು ವಾಸವಾಗಿದ್ದ ರಾಮಮಂದಿರದಲ್ಲಿ ಮೂರು ತಿಂಗಳು ಉಳಿದುಕೊಂಡು ನಂತರ ಮಕರ

೧೩. ಅಪ್ರಕಟಿತ ಆತ್ಮಚರಿತ್ರೆ; ಪುಟ ೨೯

೧೪. ಅಪ್ರಕಟಿತ ಆತ್ಮಚರಿತ್ರೆ; ಪುಟ ೨೯

೧೫. ಬ್ರಹ್ಮಾವರ್ತ ಎಂಬುದು ವ್ಯಾಪಕವಾದ ದೇಶವಾಚಕ ಶಬ್ದ –
ಸರಸ್ವತೀ ದೃಶದ್ವತ್ಯೋಃ ದೇವನದ್ಯೋರ್ಯದಂತರಮ್।
ತಂ ದೇವನಿರ್ಮಿತಂ ದೇಶಂ ಬ್ರಹ್ಮಾವರ್ತಂ ಪ್ರಚಕ್ಷತೇ॥ – ಮನುಸ್ಮೃತಿ
ಪ್ರಸ್ತುತ ಅದನ್ನು ಒಂದು ತೀರ್ಥಕ್ಷೇತ್ರ ಎಂಬಂತೆ ದಾಖಲಿಸಲಾಗಿದೆ.

ಸಂಕ್ರಮಣದ ವೇಳೆಗೆ ಪ್ರಯಾಗಕ್ಕೆ ಹೋದರು. ಪ್ರಯಾಗದಲ್ಲಿ ಒಂದು ಮಾಸ ಪರ್ಯಂತ ಉಳಿದು ತ್ರಿವೇಣಿ ಸಂಗಮದಲ್ಲಿ ಸ್ನಾನ, ತಲ್ಪವಾಸ, ಧ್ಯಾನ, ಅನುಷ್ಠಾನ, ಭಜನೆಗಳನ್ನು ಮಾಡುತ್ತ ಆ ಸಂತರ ಪರಿವಾರ ಕಾಲವನ್ನು ಕಳೆಯಿತು.

ಅನಂತರ ಆ ಸಂತರ ಪರಿವಾರ ಪ್ರಯಾಗದಿಂದ ಕಾಶಿಗೆ ತೆರಳಿತು. ಕಾಶಿಯಲ್ಲಿ ರಾಮಘಾಟದಲ್ಲಿರುವ ಬಾಲಕ ರಾಮ ಮಂದಿರದಲ್ಲಿ ಅವರು ಉಳಿದುಕೊಂಡರು. ಆ ಮಂದಿರವು ರಾಮದಾಸರ ಗುರುಗಳು ನಿರ್ಮಾಣಮಾಡಿದ ಮಂದಿರವಾಗಿತ್ತು. ಸ್ವಲ್ಪ ದಿನಗಳಲ್ಲಿ ರಾಮದಾಸರ ಗುರುಗಳಾದ ಚೌಂಡೇಸ್ವಾಮಿಯವರೂ ಬಂದು ಅವರನ್ನು ಸೇರಿಕೊಂಡರು. ಗುರುಗಳು, ಪರಮಗುರುಗಳ ಸಾಂನಿಧ್ಯದಲ್ಲಿ ಭಜನೆ, ಧ್ಯಾನ, ಅನುಷ್ಠಾನ, ಭೋಜನಾದಿಗಳು ಪ್ರಸಾದರೂಪದಲ್ಲಿ ಗಣೇಶನಿಗೆ ದೊರಕಿದವು. ಆ ಬಾಲಕರಾಮ ಮಂದಿರವಂತೂ ಸಜ್ಜನಗಡದ ಸಮರ್ಥ ರಾಮದಾಸರ ಸಮಾಧಿ ಮಂದಿರದ ಪ್ರತಿಕೃತಿಯಂತೆ ನಿರ್ಮಾಣ ಮಾಡಲ್ಪಟ್ಟಿತ್ತು. ಸೀತಾರಾಮಲಕ್ಷ್ಮಣರ ಸುಂದರವಾದ ವಿಗ್ರಹಗಳು, ಎದುರಿಗೆ ಆಂಜನೇಯ ವಿಗ್ರಹ ಆ ಆಂಜನೇಯ ವಿಗ್ರಹದ ಕೆಳಗೆ ಸಮರ್ಥರ ಪಾದುಕೆಗಳು ಮತ್ತು ವಿಗ್ರಹಗಳಿರುವ ಆ ಮಂದಿರದಲ್ಲಿಯೇ ಫಾಲ್ಗುಣಮಾಸದ ಕೃಷ್ಣಪಕ್ಷದ ನವಮಿಯಂದು ಆಚರಿಸಲಾಗುವ 'ದಾಸನವಮಿ'ಯನ್ನು ಆಚರಿಸಿದರು. ಅದು ಸಮರ್ಥರಾಮದಾಸರು ಸಮಾಧಿಸ್ಥರಾದ ದಿವಸವಾಗಿತ್ತು. ಕಾಶಿಯಲ್ಲಿ ಮತ್ತೂ ಕೆಲವು ದಿವಸ ಉಳಿದು ನೇಪಾಳಕ್ಕೆ ಹೊರಟರು.

ಸೋನಪುರ, ಮುಝಫ್ಫರಪುರ, ಸಹೋಲ ಮಾರ್ಗವಾಗಿ ಬೀರಗಂಜನ್ನು ಅವರೆಲ್ಲ ತಲುಪಿದರು. ತತ್ಕಾಲದಲ್ಲಿ ನೇಪಾಳ ದೇಶಕ್ಕೆ ಹೋಗಲು ಕಾರಣಾಂತರದಿಂದ ಅನುಮತಿ ದೊರಕದೇ ಇರುವ ಕಾರಣ ತಿರುಗಿ ಜನಕಪುರ, ಸೀತಾಮಡಿಗಳನ್ನು ಸಂದರ್ಶಿಸಿ ಅಯೋಧ್ಯೆಯ ಮಾರ್ಗವಾಗಿ ಮತ್ತೆ ಪ್ರಯಾಗ ಕ್ಷೇತ್ರಕ್ಕೆ ಬಂದು ತಲುಪಿದರು. ಪ್ರಯಾಗದಲ್ಲಿ ದಾರಾಗಂಜದ ವೇಣುಮಾಧವ ಮಂದಿರದ ಸಮೀಪದಲ್ಲಿದ್ದ ನಾರಾಯಣರಾವ್ ಪೋತ್ನಿಸ್ ಎಂಬ ಪ್ರಸಿದ್ಧ ಜಾಗೀರುದಾರರ ಧರ್ಮಶಾಲೆಯಲ್ಲಿ ರಾಮದಾಸ ಸ್ವಾಮಿಗಳು ಮತ್ತು ಶಿಷ್ಯರು ವಾಸ್ತವ್ಯ ಮಾಡಿದರು. ರಾಮದಾಸರು ಮತ್ತು ಅವರ ಶಿಷ್ಯರು ಸೇರಿ ಚೈತ್ರ ಮಾಸದ ಪ್ರತಿಪದೆಯಿಂದ ನವಮಿಯ ಪರ್ಯಂತ ಭಜನೆಯನ್ನು ಮಾಡಿದರು.

ನವಮಿಯ ದಿನ ವಿಶೇಷವಾದ ರೀತಿಯಲ್ಲಿ ಉತ್ಸವಾದಿಗಳನ್ನು ಆಚರಿಸಿ ದಶಮಿಯ ದಿನ ಪ್ರಯಾಣವನ್ನು ಪ್ರಾರಂಭಿಸಿ ಮತ್ತೆ ಉಜ್ಜಯಿನಿಗೆ ಬಂದು ತಲುಪಿದರು.

ರಾಮದಾಸ ಸ್ವಾಮಿಗಳು ಉಜ್ಜಯಿನಿಗೆ ಬಂದ ಸಮಾಚಾರವನ್ನು ತಿಳಿದು ಬಡೋದೆಯಿಂದ ರಾಮದಾಸ ಸ್ವಾಮಿಗಳ ತಮ್ಮನಾದ ಬಲವಂತರಾವ್ ಎಂಬವರೂ ಊರಿನ ಇನ್ನಿತರ ಪ್ರಮುಖ ಗಣ್ಯರೂ ರಾಮದಾಸರನ್ನು ಬಡೋದೆಗೆ ಆಮಂತ್ರಿಸಲು ಬಂದರು. ಬಡೋದೆಯು ರಾಮದಾಸ ಸ್ವಾಮಿಗಳ ಜನ್ಮಸ್ಥಾನವು. ರಾಮನಾಮಸಪ್ತಾಹ ಆಚರಿಸುವದಾದರೆ ತಾವು ಬಡೋದೆಗೆ ಬರುತ್ತೇನೆಂದು ರಾಮದಾಸರು ಹೇಳಿದ್ದಕ್ಕೆ ಬಡೋದೆಯ ಪ್ರಮುಖರು ಒಪ್ಪಿದರು. ನಂತರ ರಾಮದಾಸ ಸ್ವಾಮಿಗಳು ಮತ್ತು ಶಿಷ್ಯರು ಬಡೋದೆಗೆ ಹೋದರು. ಊರಮಧ್ಯದಲ್ಲಿ ರಾಮದಾಸ ಸ್ವಾಮಿಗಳ ಹೇಳಿಕೆಯಂತೆ ಊರವರೆಲ್ಲ ಸೇರಿ ಶ್ರೀರಾಮನನ್ನು ಸ್ಥಾಪಿಸಿ ಭಕ್ತಿ ಶ್ರದ್ಧಾಪೂರ್ವಕವಾಗಿ ಭಜನಾ ಸಪ್ತಾಹವನ್ನು ಸಾಂಗವಾಗಿ ಆಚರಿಸಿದರು. ಕೊನೆಯ ದಿನ ಸಡಗರ ಸಂಭ್ರಮಗಳಿಂದ ಉತ್ಸವವನ್ನಾಚರಿಸಿ ಊರವರಿಗೆಲ್ಲ ಸಂತರ್ಪಣೆಯನ್ನು ಏರ್ಪಡಿಸಿದರು.

೫. ಗುರುಗಳ ತನುತ್ಯಾಗ–ದೈವರಾತ ಗೋಕರ್ಣ ಪ್ರತ್ಯಾಗಮನ

ಭಜನಾ ಸಪ್ತಾಹದ ನಂತರ ರಾಮದಾಸ ಸ್ವಾಮಿಗಳು ಸಮಾಧಿಯನ್ನು ಆಚರಿಸಲು ಇಚ್ಛಿಸಿದರು. ಈಗಾಗಲೇ ಒಂದೆರಡು ಆವರ್ತಿ ಅವರು ಸಮಾಧಿಯನ್ನು ಹೊಂದಿದ್ದನ್ನು ಗಣೇಶ ನೋಡಿದ್ದ.[೧೬] ಹಲವು ದಿನಗಳ ಸಮಾಧಿಯಿಂದ ಎದ್ದಾಗ ರಾಮದಾಸರಿಗೆ ಬಹಳ ಆಯಾಸವಾಗಿ ಬಳಲುತ್ತಿದ್ದುದು ಗಣೇಶನ ಅನುಭವಕ್ಕೆ ವೇದ್ಯವಾದ ವಿಷಯವಾಗಿತ್ತು. ಈಗಷ್ಟೇ ಭಜನಾ ಸಪ್ತಾಹದ ಅಂಗವಾಗಿ ಸತತ ಏಳೆಂಟು ದಿನಗಳಿಂದ ಭಜನೆ, ನರ್ತನ, ಜಾಗರಣಗಳಿಂದ ರಾಮದಾಸ ಸ್ವಾಮಿಗಳು ತುಂಬಾ ಬಳಲಿದ್ದರು. ಆದ್ದರಿಂದ ಗಣೇಶ "ಸಮಾಧಿಯ ಆಚರಣೆ ಈಗ ಬೇಡ"ವೆಂದು ಪ್ರಾರ್ಥಿಸಿದ. ಆದರೆ ರಾಮದಾಸ ಸ್ವಾಮಿಗಳು ಅವನ ಪ್ರಾರ್ಥನೆಯನ್ನು ಮನ್ನಿಸದೆ ಸಮಾಧಿಯನ್ನು ಆಚರಿಸುವದೆಂದು ನಿರ್ಧರಿಸಿದರು. ಬಡೋದೆಯ

---

೧೬. ಗೋಕರ್ಣದ ಭೇಟಿಯ ವೇಳೆ ಗೋಕರ್ಣದ ಗುರುಲಿಂಗ ದೇವಸ್ಥಾನದಲ್ಲಿ ಒಂದು ಆವರ್ತಿ, ಉಜ್ಜಯಿನಿಯ ಒಂದು ಹಳೆಯ ಮನೆಯಲ್ಲಿ ಒಂದು ಆವರ್ತಿ ಹೀಗೆ ಎರಡು ಬಾರಿ ಅವರ ಸಮಾಧಿಯ ಪೂರ್ವಾಪರಗಳನ್ನು ಗಣೇಶ ನೋಡಿದ್ದನು. – ಅ. ಆತ್ಮಚರಿತ್ರೆ, ಪುಟ ೩೩

ಮನೆಯೊಂದರ ಮಾಳಿಗೆಯ ಮೇಲೆ ರಾಮದಾಸ ಸ್ವಾಮಿಗಳು ಸಮಾಧಿಸ್ಥರಾದರು. ಅವರು ಸಮಾಧಿ ಹೊಂದಲು ಏರ್ಪಡಿಸಲಾದ ಕೋಣೆಯ ಬಾಗಿಲನ್ನು ಹಾಕಿ ಹೊರಗಿನಿಂದ ಕಾವಲು ಕಾಯುವಂತೆ ಏರ್ಪಾಟು ಮಾಡಿ ಒಂದು ವಾರದ ವರೆಗೆ ತನ್ನನ್ನು ಯಾರೂ ಬಂದು ನೋಡಕೂಡದು ಎಂಬ ಸಂತರ ನಿರ್ದೇಶದಂತೆ ಎಲ್ಲವನ್ನೂ ನಡೆಸಿದರು. ಹಗಲು ರಾತ್ರಿ ಸಂತತವಾಗಿ ಗಣೇಶ ಕೋಣೆಯ ಹೊರಗೆ ಕಾವಲು ನಿಂತನು. ಅವರು ಮಾಡುತ್ತಿದ್ದ ದೇವಪೂಜೆಯನ್ನು ಗಣೇಶನೇ ಪ್ರತಿನಿತ್ಯ ಮಾಡುತ್ತಿದ್ದ. ಹೀಗೆ ಏಳು ದಿನಗಳು ಕಳೆದ ಮೇಲೆ ಕೋಣೆಯ ಬಾಗಿಲನ್ನು ತೆರೆದು ನೋಡಿದಾಗ ರಾಮದಾಸ ಸ್ವಾಮಿಗಳ ದೇಹ ಗೋಡೆಗೆ ಒರಗಿಕೊಂಡಿತ್ತು. ಹತ್ತಿರಕ್ಕೆ ಹೋಗಿ ನೋಡಿದಾಗ ರಾಮದಾಸ ಸ್ವಾಮಿಗಳ ಪ್ರಾಣ ಶರೀರವನ್ನು ಬಿಟ್ಟು ಅನಂತದಲ್ಲಿ ಲೀನವಾಗಿತ್ತು. ಗಣೇಶ ಮತ್ತು ಇನ್ನಿತರ ಶಿಷ್ಯರ ಗುಂಪಿನಲ್ಲಿ ಆಗ ಇದ್ದ ಮೌನಿಬಾಬಾ ಎಂಬ ಯೋಗಿಗಳು "ಶ್ರೀರಾಮದಾಸ ಸ್ವಾಮಿಗಳು ಶಿರಸ್ಸಿನಲ್ಲಿ ಧರಿಸಿದ್ದ ಪ್ರಾಣವಾಯುವು ನೆತ್ತಿಯನ್ನು ಭೇದಿಸಿಕೊಂಡು ಹೋಗಿದೆ" ಎಂದು ಹೇಳಿದರಂತೆ. ರಾಮದಾಸ ಸ್ವಾಮಿಗಳ ಅಂತ್ಯಕ್ರಿಯೆಯನ್ನು ಉಚಿತವಾದ ರೀತಿಯಲ್ಲಿ ಮುಗಿಸಲಾಯಿತು. ಹದಿನಾಲ್ಕು ದಿನಗಳ ಪರ್ಯಂತ ಔರ್ಧ್ವದೈಹಿಕ ಸಂಸ್ಕಾರಗಳನ್ನು ಯಥಾಶಾಸ್ತ್ರೀಯವಾಗಿ ಮುಗಿಸಿ ಬಡೋದೆಯಿಂದ ಗಣೇಶ ಉಜ್ಜಯನಿಗೆ ತಿರುಗಿಬಂದು ರಾಮದಾಸರು ಪೂಜೆ ಮಾಡುತ್ತಿದ್ದ ಪಟ್ಟಾಭಿರಾಮ ಮೂರ್ತಿಯನ್ನು ರಾಮದಾಸರ ಕುಟುಂಬವರ್ಗಕ್ಕೆ ಕೊಟ್ಟು ಮುಂಬಯಿ ಮಾರ್ಗವಾಗಿ ಗೋಕರ್ಣಕ್ಕೆ ಬಂದು ತಲುಪಿದ.

ಸರಿಸುಮಾರು ಒಂದೂವರೆ ವರ್ಷದ ಅವಧಿಯನ್ನು ಗಣೇಶ ಶ್ರೀ ರಾಮದಾಸ ಸ್ವಾಮಿಯವರ ಸಂಗಡ ಕಳೆದು ಭಕ್ತಿಯೋಗದ ಒಂದು ಮಾದರಿಯ ವಾರಸುದಾರನಾಗಿ ಗೋಕರ್ಣಕ್ಕೆ ತಿರುಗಿಬಂದ. ಭಜನೆ, ಮೈಮರೆತು ಮಾಡುವ ನರ್ತನೆಗಳ ಮೂಲಕ ಭಗವಂತನನ್ನು ಒಲಿಸಿಕೊಳ್ಳುವ ಬಗೆಯನ್ನು ಸಂತರ ಮೂಲಕ ಕಲಿತದ್ದಲ್ಲದೇ ಉತ್ತರ ಭಾರತದ ಲೆಕ್ಕವಿಲ್ಲದಷ್ಟು ತೀರ್ಥಸಂದರ್ಶನ ಮಾಡಿದ. ಹದಿವಯಸ್ಸಿನ ತರುಣ ಬಹು ಕಷ್ಟ ಆಯಾಸಗಳನ್ನು ಲೆಕ್ಕಿಸದೇ ಗುರುಶುಶ್ರೂಷೆಯನ್ನು ಮಾಡಿ ಅವರ ಕೃಪೆಗೆ ಪಾತ್ರನಾದದ್ದು ವಿಶೇಷ.

೬. ಯೋಗದ ಭಿಕ್ಷೆ – ಜ್ಞಾನದ ದೀಕ್ಷೆ

(ಸರಿಸುಮಾರು ೧೯೦೭ – ೧೯೧೩)[೧]

ಪಶ್ಚಾತ್ ಪುಣ್ಯೇನ ಲಭತೇ ಸಿದ್ಧೇನ ಸಹ ಸಂಗತಿಮ್ ।
ತತಃ ಸಿದ್ಧಸ್ಯ ಕೃಪಾಯಾ ಯೋಗೀ ಭವತಿ ನಾನ್ಯಥಾ ॥

ದೈವರಾತರು ರಾಮದಾಸ ಸ್ವಾಮಿಯವರೊಂದಿಗೆ ಸಂಚರಿಸಿ, ಅವರು ಮುಕ್ತಿ ಹೊಂದಿದ ನಂತರ ಉಜ್ಜಯಿನಿಯಿಂದ ಗೋಕರ್ಣಕ್ಕೆ ಮರಳಿ ಬಂದರು.

---

೧. ದೈವರಾತರು ಸಂತರಾಮದಾಸ ಸ್ವಾಮಿಯವರ ಸಂಗಡ ತೀರ್ಥಾಟನೆ ಮಾಡಿ ತಿರುಗಿ ಬಂದದ್ದು, ನಿಂತುಹೋದ ಮದುವೆ ಮತ್ತೆ ನಡೆದದ್ದು, ಟೇಂಬೇ ಮಹಾರಾಜರ ಗೋಕರ್ಣಾಗಮನ ಈ ಎಲ್ಲ ಘಟನೆಗಳ ಕಾಲವನ್ನು ನಿಶ್ಚಿತವಾಗಿ ತಿಳಿಸುವ ಆಂತರಿಕ (Internal) ಅಥವಾ ಬಾಹ್ಯ (External) ಪ್ರಮಾಣಗಳು ದುರ್ದೈವ ವಶದಿಂದ ದೊರಕಿಲ್ಲ. ವಾಸಿಷ್ಠ ಗಣಪತಿ ಮುನಿಗಳು ಗೋಕರ್ಣಕ್ಕೆ ಪ್ರಪ್ರಥಮವಾಗಿ ಬಂದ ಪೂರ್ವದಲ್ಲಿ ಟೇಂಬೇ ಮಹಾರಾಜರು ಗೋಕರ್ಣಕ್ಕೆ ಆಗಮಿಸಿದ್ದರು ಎಂಬುದು ದೈವರಾತರ ಬರಹಗಳ ಅವಲೋಕನದಿಂದ ಸ್ಪಷ್ಟವಾಗುತ್ತದೆ. ವಾಸಿಷ್ಠ ಗಣಪತಿ ಮುನಿಗಳು ಗೋಕರ್ಣಕ್ಕೆ ಪ್ರಥಮವಾಗಿ ಭೇಟಿಕೊಟ್ಟದ್ದು ೧೯೧೩ನೇ ಇಸ್ವಿಯಲ್ಲಿ ಎಂದು 'ವಾಸಿಷ್ಠ ವೈಭವ'ದ ಕನ್ನಡದ ಅನುವಾದಕರಾದ ಹರಿಹರಪುರ ಸುಬ್ರಹ್ಮಣ್ಯ ಅವರು ತಿಳಿಸುತ್ತಾರೆ ಎಂದು ಅದೇ ಗ್ರಂಥದ ಇಂಗ್ಲೀಷ ಅನುವಾದಕರಾದ ಶ್ರೀಮತಿ ಎಸ್. ಆರ್. ಲೀಲಾ ಅವರು ತಮ್ಮ ಗ್ರಂಥದಲ್ಲಿ (Glory of Vasistha Ganapati : Page 264) ಉಲ್ಲೇಖಿಸಿದ್ದಾರೆ. ಈ ಅಭಿಪ್ರಾಯಕ್ಕೆ ವಾಸಿಷ್ಠ ವೈಭವದಲ್ಲಿ ಯಾವ ಪ್ರತ್ಯಕ್ಷ ಪ್ರಮಾಣವೂ ಇಲ್ಲ. ಪರೋಕ್ಷವಾಗಿಯೂ ವಾಸಿಷ್ಠ ವೈಭವದಲ್ಲಿನ ಘಟನಾವಳಿಗಳು ಈ ಅಭಿಪ್ರಾಯಕ್ಕೆ ಪುಷ್ಟಿಯನ್ನು ನೀಡುವುದಿಲ್ಲ. ಸುಬ್ರಹ್ಮಣ್ಯ ಅವರು ಯಾವುದನ್ನು ಆಧರಿಸಿ ಹೀಗೆ ದಾಖಲಿಸಿದ್ದಾರೆ ಎಂಬುದನ್ನು ತಿಳಿಸಿಲ್ಲ. ಈ ಮಧ್ಯೆ ಗಣಪತಿ ಮುನಿಗಳ ಪುತ್ರರಾದ ಮಹಾದೇವ ಅವರ ದೈವರಾತರನ್ನು ಕುರಿತು ತೆಲಗು ಲೇಖನದಲ್ಲಿ ಗಣಪತಿ ಮುನಿಗಳು ೧೯೧೨ನೇ ಇಸ್ವಿಯಲ್ಲಿ ಗೋಕರ್ಣದಲ್ಲಿ ಉಮಾಮಹೇಶ್ವರ ತಪೋವನದಲ್ಲಿ ಇರುವಾಗ ಅವರಿಗೆ ದೊರಕಿದ ಮುಂದೆ ಅವರ ಅಂತರಂಗದ ಶಿಷ್ಯರೇ ಆದ ದೈವತಾರನ್ನು ಪ್ರಸ್ತಾವಿಸಿದ್ದಾರೆ. ಇದರಿಂದ ಗಣಪತಿ ಮುನಿಗಳು ಗೋಕರ್ಣಕ್ಕೆ ಬಂದದ್ದು ೧೯೧೧ರಲ್ಲಿ ಅಥವಾ ಎಷ್ಟೇ ತಡೆದು ಎಂದರೂ ೧೯೧೨ನೇ ಇಸ್ವಿಯಲ್ಲಿ ಎಂಬುದು ನಿರ್ವಿವಾದವಾಗಿ ಸಿದ್ಧವಾದಂತಾಗುತ್ತದೆ. ಇದರಿಂದ ಟೇಂಬೇ ಮಹಾರಾಜರ ಗೋಕರ್ಣಾಗಮನ ಅದಕ್ಕಿಂತ ಪೂರ್ವದಲ್ಲಿ ಎಂದರೆ ೧೯೧೦-೧೯೧೧ರಲ್ಲಿ ಎಂದು ನಿಸ್ಸಂಶಯವಾಗಿ ನಿರ್ಧರಿಸಬಹುದಾಗಿದೆ.

ಗೋಕರ್ಣಕ್ಕೆ ಮರಳಿ ಬಂದ ನಂತರ ಕೋಟಿತೀರ್ಥದ ಉತ್ತರಭಾಗದ ತಮ್ಮ ಮನೆಯ ಎದುರು ಸಾಲಿನಲ್ಲಿ ಇರುವ ಚಿಕ್ಕವರದೇಶ್ವರ ಮಂಟಪದಲ್ಲಿ ಇರತೊಡಗಿದರು. ನಿಶ್ಚಿತವಾದ ಮದುವೆಯನ್ನು ಬಿಟ್ಟು ಸಂತರ ಬೆನ್ನ ಹಿಂದೆ ಹೋದ ದೈವರಾತರು ತಿರುಗಿ ಒಂದು ಒಂದೂವರೆ ವರ್ಷಗಳಿಗೂ ಅಧಿಕ ಕಾಲ ಮನೆಯಿಂದ ದೂರವಿದ್ದವರು. ಮರಳಿ ಬಂದಾಗ ಮನೆಯ ವಾತಾವರಣ <u>ಪರಸ್ಪರ</u> ಹೇಗಿರಬಹುದು ಎಂಬುದು ಊಹಿಸುವದಕ್ಕೆ ಸುಲಭವೇ ಸರಿ. ದೈವರಾತರಿಗಂತೂ ಯಾವುದೋ ವಿವರಿಸಲಾಗದ ಆಧ್ಯಾತ್ಮಿಕ ಸಾಧನೆಗಳ ಹಂಬಲ. ಗೋಕರ್ಣಕ್ಕೆ ಬರುವ ಯಾವ ಸಾಧು – ಸಂತರನ್ನು ಬಿಡದೆ ದರ್ಶಿಸಿ ಅವರ ಸಹವಾಸ ಹೊಂದುವ ಅದಮ್ಯ ಹಂಬಲ. ಆ ಸಮಯದಲ್ಲಿ ಅವರು ಗೋಕರ್ಣಕ್ಕೆ ಮರಳಿ ಬಂದಾಗ ಅವರಿಗೆ ಕಂಡದ್ದು ಬಲವಂತರಾವ್ ಭಾಗವತ್ ಎಂಬ ನೈಷ್ಠಿಕ ಬ್ರಹ್ಮಚಾರಿಗಳು. ಅವರು ಗೋಕರ್ಣದಲ್ಲಿಯೇ ವಾಸವಾಗಿದ್ದರು. ಅಹಲ್ಯಾಬಾಯಿ ಛತ್ರ ಎಂಬ ಯಾತ್ರಿಕರ ನಿವಾಸದ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತ ಸರಳ ಹಾಗೂ ಶುದ್ಧ ಜೀವನ ನಡೆಸುತ್ತಿದ್ದ ಬಲವಂತರಾವ್ ಅವರು ನಿತ್ಯ ಕರ್ಮಾನುಷ್ಠಾನ ನಿರತರಾಗಿದ್ದರು. ಅವರು ಹಠಯೋಗದಲ್ಲಿಯೂ ತಕ್ಕಮಟ್ಟಿಗೆ ನಿಷ್ಣಾತರಾಗಿದ್ದರು. ಮತ್ತು ಆಸಕ್ತರಾದ ಯುವಕರಿಗೆ ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಹಠಯೋಗದ ಪ್ರಕ್ರಿಯೆಗಳನ್ನು ಬೋಧಿಸುತ್ತಿದ್ದರು. ದೈವರಾತರು ಉಜ್ಜಯಿನಿಯಿಂದ ಬಂದಮೇಲೆ ಬಲವಂತರಾವ್ ಅವರಲ್ಲಿ ಹಠಯೋಗದ ಪ್ರಕ್ರಿಯೆಗಳಾದ ಆಸನ, ಪ್ರಾಣಾಯಾಮ, ಧೌತಿ ಮುಂತಾದವುಗಳನ್ನು ಅಭ್ಯಾಸ ಮಾಡುವುದಕ್ಕೆ ಪ್ರಾರಂಭಿಸಿದರು. ಇದೇ ಸಮಯದಲ್ಲಿ ದೈವರಾತರು ಅವರ ಅಜ್ಜನಿಂದ ಸ್ಥಾಪಿಸಲ್ಪಟ್ಟಿದ್ದ 'ಸಂಸ್ಕೃತ ವಿದ್ಯಾಪೀಠ'ದ ವಿದ್ಯಾರ್ಥಿಯಾಗಿ ಸಂಸ್ಕೃತ ವ್ಯಾಸಂಗವನ್ನು ಪ್ರಾರಂಭಿಸಿದರು. ಋಗ್ವೇದ ಮತ್ತು ಪ್ರಾಯಶಃ ಯಜುರ್ವೇದ ಅಧ್ಯಯನವೂ ಮೊದಲೇ ಆಗಿತ್ತಷ್ಟೆ. ಅವರು ಎಲ್ಲಿಯೇ ಹೋದರೂ ಸ್ವಾಧ್ಯಾಯದಿಂದ ದೂರವಾಗಲಿಲ್ಲ. ಮುಂಬಯಿಯ ಸಜ್ಜನರಿಂದ ಉಜ್ಜಯಿನಿಗೆ ರಾಮದಾಸರನ್ನು ಅನ್ವೇಷಿಸಿಕೊಂಡು ಹೊರಟಿದ್ದಾಗ 'ಋಗ್ವೇದ ಸಂಹಿತೆ'ಯನ್ನು ಕೇಳಿ ಪಡೆದುಕೊಂಡದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

೧. "ಆಶ್ರಮಾದ್ ಆಶ್ರಮಂ ಗಚ್ಛೇತ್"

ಸಂಸ್ಕೃತ ವ್ಯಾಸಂಗ, ಸ್ವಾಧ್ಯಾಯ ಯಜ್ಞ ಹಾಗೂ ಹಠಯೋಗ ಪ್ರಕ್ರಿಯೆಗಳ ಅಭ್ಯಾಸಗಳಲ್ಲಿ ಮುಳುಗಿ ಗಣೇಶ ವರ್ಷಕ್ಕೂ ಅಧಿಕ ಕಾಲ

ಕಳೆದಿರಬೇಕು. ಆಗ ಮಾತ್ರ ತಂದೆ ವಿಘ್ನೇಶ್ವರ ಭಟ್ಟರಿಗೆ ಮತ್ತೆ ಮಗನಿಗೆ ಮದುವೆ ಮಾಡುವ ಧೈರ್ಯ ಬಂದಿರಬೇಕು. ಮಗನು ಗಟ್ಟಿಯಾಗಿ ಗೋಕರ್ಣದಲ್ಲಿ ನಿಂತಿರುವುದನ್ನು ನೋಡಿ ಪ್ರಾಯಃ ಮನಸ್ಸಿನಲ್ಲಿ ವಿಶ್ವಾಸ ತಾಳಿ ಮತ್ತೆ ಅವನ ಮದುವೆಯ ಪ್ರಸ್ತಾಪವನ್ನು ಸಾವಕಾಶವಾಗಿ ಮಾಡತೊಡಗಿದರು. ಮಗನು ಆಧ್ಯಾತ್ಮಿಕ ಪ್ರವೃತ್ತಿ ಉಳ್ಳವನಾದರೂ ವಿಘ್ನೇಶ್ವರ ಭಡತಿಯವರಿಗೆ ಎಲ್ಲಾ ತಂದೆ ತಾಯಿಗಳ ಹಾಗೆ ಅದು ಸ್ವಲ್ಪ ಸ್ವಚ್ಛಂದ ವೃತ್ತಿಯಾಗಿಯೂ ಕಂಡಿರಬೇಕು. ಅದಕ್ಕೆ ಕಡಿವಾಣ ಹಾಕಬೇಕು ಎಂದರೆ ಧಾರ್ಮಿಕವಾಗಿಯೂ, ಸಾಮಾಜಿಕವಾಗಿಯೂ ಹೊಣೆಗಾರಿಕೆಯೂ, ಉತ್ತರದಾಯತ್ವವೂ ಇರುವ ಗೃಹಸ್ಥಾಶ್ರಮದ ಪರಿಧಿಗೆ ಮಗನನ್ನು ತಂದರೆ ಶ್ರೇಯಸ್ಕರ ಎಂದು ಆ ದಿಸೆಯಲ್ಲಿ ಪ್ರವೃತ್ತರಾದರು. ತಂದೆ ಮತ್ತು ಎಲ್ಲ ಬಂಧುಗಳ ಪ್ರಯತ್ನ ಫಲ ಕಂಡಿತು. ಆಗ ದೈವರಾತರಿಗೆ ಹದಿನೈದು ಹದಿನಾರರ ವಯೋಮಾನ. ವಧುವಾದ ಆರಂಧತಿಗೆ ಒಂಬತ್ತು ಹತ್ತು ವರ್ಷ ವಯಸ್ಸು. ಅವಳಿಗಿನ್ನೂ ಆಡುವ ವಯಸ್ಸು. ಗಣೇಶನಾದರೋ ಯಾರೊಂದಿಗೂ ಸೇರದೇ ತನ್ನದೇ ಸ್ವಾಧ್ಯಾಯ ಮತ್ತು ಅಧ್ಯಾತ್ಮ ಲೋಕದಲ್ಲಿ ವಿಹರಿಸುತ್ತ ಕನಸು ಕಾಣುವ ಯೌವನದ ಹೊಸ್ತಿಲಿಗೆ ಬಂದಾತ. ಇಬ್ಬರೂ ಕಾಲಕ್ಕೆ ಅಧೀನವಾಗಿ ಸೇರದೇ ಹಸೆಮಣೆಯನ್ನೇರಿದರು. ವಿವಾಹವು ಸಂಪನ್ನವೂ ಆಯಿತು. ಇದರಿಂದ ಅತ್ಯಧಿಕ ಸಂತೋಷವಾದದ್ದು ತಂದೆಯಾದ ವಿಘ್ನೇಶ್ವರ ಭಡತಿಯವರಿಗೆ. ತಾಯಿಯಿಲ್ಲದ ಮಗನಿಗೆ ಮದುವೆ ಮಾಡಿ ಮುಗಿಸಿದ ಸಂತೃಪ್ತಿ ವಿಘ್ನೇಶ್ವರ ಭಡತಿಯವರಿಗಾಗಿತ್ತು.

೨. ಶ್ರೀ ವಾಸುದೇವಾನಂದ ಸರಸ್ವತೀ ಸಂದರ್ಶನ

ಮಹಾರಾಷ್ಟ್ರ ರಾಜ್ಯದ ಸಾವಂತವಾಡಿಯಲ್ಲಿ ಹುಟ್ಟಿ ಜಗದಗಲ ಯೋಗ, ಜ್ಞಾನ ಮತ್ತು ತಪಸ್ಸುಗಳ ಸುಗಂಧವನ್ನು ಪಸರಿಸುವಂತೆ ಮಾಡಿದವರು ಶ್ರೀ ವಾಸುದೇವಾನಂದ ಸರಸ್ವತೀ ಸ್ವಾಮಿಯವರು. ಅವರು ಟೇಂಬೇ ಮಹಾರಾಜರೆಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರು. ದೈವರಾವತರು ಬಲವಂತರಾವ್ ಅವರಲ್ಲಿ ಹಠಯೋಗ ಕಲಿಯುತ್ತಿರುವಾಗ ಟೇಂಬೇ ಮಹಾರಾಜರು ಬನವಾಸಿಗೆ ಬಂದ ವಿಷಯ ದೈವರಾತರಿಗೆ ಬಲವಂತರಾವ್ ಮೂಲಕ ತಿಳಿಯಿತು. "ನಾನು ನಿತ್ಯದಂತೆ ಬಲವಂತರಾಯರಲ್ಲಿಗೆ

ಹಠಯೋಗದ ಅಭ್ಯಾಸಕ್ಕೆ ಹೋಗಲು ಅಂದು ಅವರು ನನಗೆ ಮಹಾತಪಸ್ವಿ ಶ್ರೀ ವಾಸುದೇವಾನಂದ ಸರಸ್ವತೀ ಟೇಂಬೇ ಸ್ವಾಮಿಯವರು ಬನವಾಸಿಗೆ ಬಂದಿರುವುದಾಗಿ ಹೇಳಿದರು. ಅನಂತರ ನಾವಿಬ್ಬರೂ ಅವರನ್ನು ಸಂದರ್ಶಿಸುವುದಕ್ಕಾಗಿ ಬನವಾಸಿಗೆ ಹೋಗುವದೆಂದು ನಿಶ್ಚಯಿಸಿದೆವು. ಅದರಂತೆ ಬಲವಂತರಾಯರು ಮತ್ತು ನಾನು ಇಬ್ಬರೂ ಗೋಕರ್ಣದಿಂದ ಎತ್ತಿನ ಗಾಡಿಯಲ್ಲಿ ಕುಳಿತು ಶಿರಸಿಗೆ ಹೋಗಿ ಅಲ್ಲಿಂದ ಮುಂದೆ ಬನವಾಸಿಯನ್ನು ತಲುಪಿದೆವು. ಬನವಾಸಿಯ ಮಧುಕೇಶ್ವರ ದೇವಾಲಯದ ಚಂದ್ರಶಾಲೆಯ ಮೂಲೆಯಲ್ಲಿ ಒಂದು ಕಡೆ ಶ್ರೀ ವಾಸುದೇವಾನಂದ ಸ್ವಾಮಿಯವರು ಒಬ್ಬರೇ ಕುಳಿತಿದ್ದರು. ನಾವು ಅವರಲ್ಲಿಗೆ ಹೋಗಿ ಕೈಮುಗಿದು ಗೋಕರ್ಣಕ್ಕೆ ಸಂದರ್ಶನವೀಯುವಂತೆ ಪ್ರಾರ್ಥಿಸಿದೆವು. ಆಗ ಅವರು ತಮ್ಮ ಪ್ರವಾಸದ ವಿಷಯವನ್ನು ನಮಗೆ ಸಂಕ್ಷಿಪ್ತವಾಗಿ ವಿವರಿಸಿದರು. ಆಮೇಲೆ ನಾವಿಬ್ಬರೂ ಅವರಿಂದ ಅಪ್ಪಣೆ ಪಡೆದು ಊರಿಗೆ ಮರಳಿದೆವು."[2] ದೈವರಾತರು ಗಣೇಶನಾಗಿದ್ದಾಗಲೇ ವಾಸುದೇವಾನಂದರನ್ನು ಸಂದರ್ಶಿಸಿದ ಘಟನೆಯನ್ನು ವಿವರಿಸುವ ಅವರ ಶಬ್ದಗಳು ಇವು. ಆಗಿನ್ನೂ ದೈವರಾತರು ದೈವರಾತರಾಗಿರಲಿಲ್ಲ.

ಆ ಎರಡು ಜನ ಸಾಧಕರು ಬನವಾಸಿಗೆ ಹೋಗಿ ತಪಸ್ವಿಗಳನ್ನು ಸಂದರ್ಶಿಸಿದ ಎರಡು ಮೂರು ದಿನಗಳ ಅನಂತರ ಟೇಂಬೇ ಮಹಾರಾಜರು ಗೋಕರ್ಣಕ್ಕೆ ಬಂದರು. ಗೋಕರ್ಣದ ಹೊರಗಿರುವ ಸಿದ್ಧೇಶ್ವರ ಕ್ಷೇತ್ರಕ್ಕೆ ಸಂನ್ಯಾಸಿಗಳೊಬ್ಬರು ಬಂದಿದ್ದಾರೆಂಬ ಸುದ್ದಿಯನ್ನು ಕೇಳಿದ ಬಲವಂತರಾವ್ ಮತ್ತು ಗಣೇಶ ಅಲ್ಲಿಗೆ ತೆರಳಿ ಅವರನ್ನು ಆದರಪೂರ್ವಕ ಗೋಕರ್ಣಕ್ಕೆ ಕರೆತಂದು ಭದ್ರಕಾಳೀ ಮಂದಿರದಿಂದ ವೇದಘೋಷದೊಂದಿಗೆ ಮಹಾ ಗಣಪತಿ ಮಂದಿರಕ್ಕೂ ಅನಂತರ ಮಹಾಬಲೇಶ್ವರ ಮಂದಿರಕ್ಕೂ ಕರೆತಂದರು. ಮಹಾಬಲೇಶ್ವರ ಮಂದಿರದಲ್ಲಿ ವಾಸುದೇವಾನಂದ ಸರಸ್ವತೀ ಸ್ವಾಮಿಯವರು ದಂಡವತ್ ಪ್ರಣಾಮಮಾಡಿ ಆಗ ತಮಗೆ ಸ್ಫುರಿಸಿದ ಎರಡು ಶ್ಲೋಕಗಳನ್ನು ಕಾಗದದ ಮೇಲೆ ಬರೆದು ದೇವರಿಗೆ ಸಮರ್ಪಿಸಿದರು.

೨. ಅಪ್ರಕಟಿತ ಆತ್ಮಚರಿತ್ರೆ; ಪುಟ ೫೪
ಆದರೆ ಕಸ್ತೂರಿ (ಕನ್ನಡ ಡೈಜೆಸ್ಟ್) ಜುಲೈ – ೭೪ರ (ಪುಟ – ೭೫) ಸಂಚಿಕೆಯ ಪಾವೆಂ ಅವರ ಲೇಖನದಲ್ಲಿ ಸ್ವಲ್ಪ ವ್ಯತ್ಯಾಸದೊಂದಿಗೆ ಈ ಘಟನೆ ದಾಖಲಿಸಲ್ಪಟ್ಟಿದೆ.

ಮಹಾಬಲೇಶ್ವರ ತ್ರಾಹಿ ಹಾಲಾಹಲ ಸಮುದ್ಭವಾತ್ ।
ಬಂಧಮೋಚನ ಕೃತ್ತವತ್ತಃ ಲೇಖಾಗ್ರೇಷ್ವಪಿ ದುರ್ಲಭಃ ॥
ಶ್ವಪಾಕೋಪ್ಯುಧೃತೇತ್ಸೇವಂ ರವೀಂದ್ವಗ್ನೀಕ್ಷಣಾಚ್ಯುತಂ ।
ತ್ರಾತಾರಂ ತ್ವಾಂ ಪ್ರಪನ್ನೋಽಸ್ಮಿ ಹಿತಕೃತ್ ಪರಿಪಾಹಿ ಮಾಮ್॥[3]

ಅನಂತರ ವಾಸುದೇವಾನಂದರು ತಾಮ್ರಗೌರಿ ಮಂದಿರದಲ್ಲಿ ದೇವಿಯ ದರ್ಶನವನ್ನು ಪಡೆದರು. ಬಲವಂತರಾವ್ ವ್ಯವಸ್ಥಾಪಕರಾಗಿದ್ದ ಅಹಲ್ಯಾಬಾಯಿ ಛತ್ರದ ಮಹಡಿಯಲ್ಲಿಯೇ ಅವರಿಗೆ ವಸತಿಯನ್ನು ಏರ್ಪಡಿಸಲಾಯಿತು. ಪುಣ್ಯಪುರುಷರನ್ನು ಸಂದರ್ಶಿಸುತ್ತ ಸೇವಿಸುತ್ತಲೇ ಬೆಳೆದ ಗಣೇಶನಿಗೆ ಟೇಂಬೇ ಮಹಾಜರಾಜರ ಸ್ನಾನ–ಪ್ರಾತರ್ವಿಧಿ ಮತ್ತು ಭಿಕ್ಷಾಟನಾದಿ ನಿತ್ಯಕರ್ಮಗಳಲ್ಲಿ ಅವರಿಗೆ ಸಹಾಯಕನಾಗಿ, ಸೇವಕನಾಗಿ ಗೋಕರ್ಣದಲ್ಲಿ ಅವರಿದ್ದಷ್ಟು ದಿನವೂ ಗಣೇಶ ಕಾರ್ಯನಿರ್ವಹಿಸಿದನು. ಒಂದು ದಿನ ಗಣೇಶ ಟೇಂಬೇ ಮಹಾರಾಜರ ಪಾದಪೂಜೆಯನ್ನು ಮಾಡಿ ಪಂಚಾಮೃತಾಭಿಷೇಕ ಪೂಜೆಯನ್ನು ನಿರ್ವರ್ತಿಸಿ "ನನಗೆ ಮಂತ್ರೋಪದೇಶ ಮಾಡಿ ತಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಬೇಕು" ಎಂದು ಪ್ರಾರ್ಥಿಸಿದ. ಅದನ್ನು ಒಪ್ಪಿ ಟೇಂಬೇ ಮಹಾರಾಜರು ಗಣೇಶನಿಗೆ ದತ್ತಾತ್ರೇಯನ ದ್ವಾದಶಾಕ್ಷರಿ ಮಂತ್ರವನ್ನು ಉಪದೇಶಿಸಿದರು.

ವಾಸುದೇವಾನಂದರದು ಅತ್ಯಂತ ಸರಳ ಜೀವನವಾಗಿತ್ತು. ದಿನಾಲೂ ಮಧ್ಯಾಹ್ನ ಮೂರು ಮನೆಗಳಲ್ಲಿ ಮಾತ್ರ ಭಿಕ್ಷಾನ್ನವನ್ನು ಸ್ವೀಕಾರ ಮಾಡುತ್ತಿದ್ದರು. ಅಕಸ್ಮಾತ್ತಾಗಿ ಅವರು ಭಿಕ್ಷೆ ಬೇಡುವದಕ್ಕೆ ಹೋದ ಮನೆಗಳಲ್ಲಿ ಯಾವುದೇ ಕಾರಣದಿಂದ ಭಿಕ್ಷೆ ದೊರೆಯದಿದ್ದರೆ ಅವರು ಉಪವಾಸದಿಂದ ಇದ್ದು ಬಿಡುತ್ತಿದ್ದರು. ಜೀವನ ನಿರ್ವಹಣೆಗೆ ಕನಿಷ್ಠ ವಸ್ತು ಸಂಗ್ರಹ ಅವರ ಇನ್ನೊಂದು ಗುಣವಾಗಿತ್ತು. ಒಂದು ದಂಡ, ಒಂದು ಕಮಂಡಲ, ಎರಡು ಕಾವಿ ರಾಟಿಗಳು ಇಷ್ಟೇ ನಿಜಕ್ಕೂ ಅವರ ಸಂಪತ್ತಾಗಿತ್ತು. ಸಾಧು ಸಂತರಿಗೆಲ್ಲ

೩. "ಹಾಲಾಹಲ ವಿಷದಿಂದ ದೇವತೆಗಳನ್ನು ರಕ್ಷಿಸಿದ ಹೇ ಮಹಾಬಲೇಶ್ವರ (ನನ್ನನ್ನು) ರಕ್ಷಿಸು, ಸೂರ್ಯ, ಚಂದ್ರ ಮತ್ತು ಅಗ್ನಿಗಳೆಂಬ ನಿನ್ನ ನೇತ್ರದಿಂದ ಈಕ್ಷಿಸಿದರೆ ಚಂಡಾಲನೂ ಉದ್ಧಾರವಾಗುತ್ತಾನೆಂಬುದನ್ನು ಕೇಳಿ ರಕ್ಷಕನಾದ ನಿನ್ನ ಬಳಿಸಾರಿದ್ದೇನೆ. ಹೇ ಹಿತವನ್ನುಂಟು ಮಾಡುವ ಪರಮೇಶ್ವರ ನನ್ನನ್ನು ರಕ್ಷಿಸು." ಈ ಶ್ಲೋಕದ ಮತ್ತೊಂದು ವೈಶಿಷ್ಟ್ಯವೆಂದರೆ ಈ ಶ್ಲೋಕದ ಪ್ರತಿಯೊಂದು ಪಾದದ ಮೊದಲನೇ ಅಕ್ಷರಗಳನ್ನು ಕ್ರಮವಾಗಿ ಜೋಡಿಸಿದರೆ ಶ್ಲೋಕದ ಮೊದಲನೇ ಪಾದವಾದ 'ಮಹಾಬಲೇಶ್ವರ ತ್ರಾಹಿ' ಎಂಬ ಪಾದ ಸಿದ್ಧವಾಗುತ್ತದೆ.

ಅನುಕರಣೀಯವಾದ ಮಾರ್ಗದಲ್ಲಿ ಅಕ್ಷರಶಃ ಸಂನ್ಯಾಸಿಗಳ ಬದುಕನ್ನು ಅವರು ಬದುಕುತ್ತಿದ್ದರು.

ಗಣೇಶನಿಗೆ ಸ್ವಲ್ಪಕಾಲದ ಅವಧಿಗೆ ಪೂಜನೀಯರಾದ ಗುರುಗಳು ದೊರಕಿದ್ದರು, ಗುರುಶುಶ್ರೂಷಾತತ್ಪರನಾಗಿದ್ದ ಗಣೇಶ ಸಾಯಂಕಾಲದ ವೇಳೆ ಪ್ರತಿನಿತ್ಯ 'ವಾಸುದೇವ ಮನನ' ಎಂಬ ಸಂಸ್ಕೃತ ಗ್ರಂಥವನ್ನು ಓದುವದೂ ಅದಕ್ಕೆ ವಾಸುದೇವಾನಂದರು ಮರಾಠಿಯಲ್ಲಿ ವ್ಯಾಖ್ಯಾನ ಮಾಡುವದೂ ಗೋಕರ್ಣದಲ್ಲಿ ಟೇಂಬೇ ಮಹಾರಾಜರು ಇದ್ದಷ್ಟು ದಿನಗಳ ವರೆಗೆ ನಿಯತ ದಿನಚರಿಯಾಗಿತ್ತು. ಅದರ ನಂತರ ವೇದ ವಿದ್ವಾಂಸ ಸಂಪನ್ನರಾದ ಗೋಕರ್ಣದ ವೇದವಿದ್ವಾಂಸರಿಂದ ಋಗ್ವೇದ ಸಂಹಿತೆ, ಯಜುರ್ವೇದ ಸಂಹಿತೆ ಹಾಗೂ ಬ್ರಾಹ್ಮಣಗಳ ಪಠನವು ಪದಕ್ರಮ, ಜಟಾ, ಘನ ಈ ಕ್ರಮದಲ್ಲಿ ನಡೆಯುತ್ತಿತ್ತು. ಅನಂತರ ಒಂದೊಂದು ದಿನ ಒಂದೊಂದು ವಿಶಿಷ್ಟವಾದ ಹಾಗೂ ಆಳವಾದ ತಾತ್ವಿಕ ವಿಷಯವನ್ನು ವಾಸುದೇವಾನಂದರು ವ್ಯಾಖ್ಯಾನಮಾಡುತ್ತಿದ್ದರು. ಒಂದು ದಿನ ವೇದ ವಾಙ್ಮಯದಲ್ಲಿ ನಿಹಿತವಾದ ದತ್ತಾತ್ರೇಯ ತತ್ತ್ವವನ್ನು ಟೇಂಬೇ ಮಹಾರಾಜರು ವಿವರಿಸಿದರು. ಮತ್ತೊಂದು ದಿನ ವೈದಿಕ ಋಭು ದೇವತಾ ತತ್ತ್ವವನ್ನು ವ್ಯಾಖ್ಯಾನಮಾಡಿದರು.[೪]

ಗೋಕರ್ಣದ ವಾಸ್ತವ್ಯದಲ್ಲಿ ವಾಸುದೇವಾನಂದರು ಇರುವಾಗ ಬಲವಂತರಾವ್ ಅವರು ಗಣೇಶನ ಪರವಾಗಿ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಿ ಅವನಿಗೆ ಹಠಯೋಗದಲ್ಲಿ ಶಿಕ್ಷಣವನ್ನು ನೀಡಬೇಕೆಂದು ಪ್ರಾರ್ಥಿಸಿದರು. "ಗಣೇಶನು ಆಸನ, ಪ್ರಾಣಾಯಾಮಾದಿ ಯೋಗ ಕ್ರಿಯೆಗಳನ್ನು ಸ್ವಲ್ಪ ಅಭ್ಯಾಸಮಾಡಿದ್ದಾನೆ. ಭಕ್ತಿಮಾರ್ಗ ಮತ್ತು ಜ್ಞಾನಮಾರ್ಗಗಳೆರಡರಲ್ಲಿಯೂ ಅವನಿಗೆ ಆಸಕ್ತಿ ಇದೆ. ವೇದಾಧ್ಯಯನ ಸಂಪನ್ನನೂ ಆಗಿರುವದಲ್ಲದೇ ಅಲ್ಪ ಸ್ವಲ್ಪ ಜ್ಞಾನವನ್ನು ಹೊಂದಿದ್ದಾನೆ. ಆದ್ದರಿಂದ ಅವುಗಳೆಲ್ಲದರ ಪ್ರಗತಿಗಾಗಿ ಶಿಕ್ಷಣವನ್ನಿತ್ತರೆ ಉತ್ತಮ" ಎಂದು ಹೇಳಿದಾಗ ಟೇಂಬೇ ಮಹಾರಾಜರು 'ಆಗಲಿ' ಎಂದಷ್ಟೇ ಉತ್ತರವನ್ನು ಹೇಳಿದರು.[೫]

ಟೇಂಬೇ ಮಹಾರಾಜರು ಗೋಕರ್ಣದಲ್ಲಿ ಹದಿಮೂರು ದಿನಗಳ ವರೆಗೆ ಉಳಿದರು.[೬] ಅವರು ಹೊರಡುವ ದಿನ ವೇದಘೋಷದೊಂದಿಗೆ

೪. ಅಪ್ರಕಟಿತ ಆತ್ಮಚರಿತೆ; ಪುಟ ೫೬

೫. ಮುಂದೆ ಗರುಡೇಶ್ವರದಲ್ಲಿ ಟೇಂಬೇ ಮಹಾರಾಜರು ದೈವರಾತರಿಗೆ ಹಠಯೋಗದ ಸೂಕ್ಷ್ಮಾತಿ ಸೂಕ್ಷ್ಮ ರಹಸ್ಯವನ್ನು ಅಭ್ಯಾಸ ಮಾಡಿಸಿದರು.

೬. ಅಪ್ರಕಟಿತ ಆತ್ಮಚರಿತೆ; ಪುಟ ೫೭

ಸಿದ್ಧೇಶ್ವರ ಕ್ಷೇತ್ರದವರೆಗೆ ಗಣೇಶ ಮತ್ತು ವೈದಿಕರು ಅವರನ್ನು ಅನುಸರಿಸಿ ಹೋದರು. 'ಇದೇ ಗೋಕರ್ಣದ ಗಡಿ' ಎಂದು ಟೇಂಬೇ ಮಹಾರಾಜರು ಒಂದು ಗೆರೆಯನ್ನು ಎಳೆದು 'ನೀವಿನ್ನು ಹಿಂದಿರುಗಿ' ಎಂದು ಹೇಳಿದರು. ತಾವು ಮುಂದೆ ಮುಂದಕ್ಕೆ ನಡೆದರು.

೩. ವಾಸಿಷ್ಠ ಗಣಪತಿ ಮುನಿಗಳ ಗೋಕರ್ಣ ಆಗಮನ

ಗಣೇಶನ ದಿನಚರಿ ಮತ್ತೆ ಯಥಾಸ್ಥಿತಿಗೆ ಮರಳಿತು. ಅವನೀಗ ಸರಿಸುಮಾರು ಇಪ್ಪತ್ತು ವರ್ಷ ವಯೋಮಾನದ ಬಲಿಷ್ಠನಾದ ತರುಣನಾಗಿದ್ದ. ಇಂತಹ ತರುಣನ ಪೂರ್ವವಯಸ್ಸಿನಲ್ಲಿಯೇ ಸಂಪನ್ನವಾಗಲಿರುವ ಮಹತ್ಸಾಧನೆಯೊಂದಕ್ಕೆ ರಂಗವನ್ನು ಸಜ್ಜುಗೊಳಿಸುವದಕ್ಕೋ ಎಂಬಂತೆ ವಾಸಿಷ್ಠ ಗಣಪತಿ ಮುನಿಗಳೆಂಬವರು ಗೋಕರ್ಣಕ್ಕೆ ಆಗಮಿಸಿದರು. ಆಂಧ್ರ ಮೂಲದವರಾದ ಗಣಪತಿ ಮುನಿಗಳು ಅರುಣಾಚಲದ ರಮಣ ಮಹರ್ಷಿಗಳ ಶಿಷ್ಯರಾಗಿದ್ದರು. ವೇದಗಳ ವಿಶೇಷವಾದ ಅಧ್ಯಯನಕ್ಕೆಂದೇ ಅವರು ಶ್ರೀ ಶಂಕರಾಚಾರ್ಯರ ಕಾಲಟಿಯಿಂದ ಮಂಗಳೂರು ಮಾರ್ಗವಾಗಿ ಗೋಕರ್ಣಕ್ಕೆ ಆಗಮಿಸಿದರು. ಮಂಗಳೂರಿನಿಂದ ಗೋಕರ್ಣದವರೆಗೆ ಜಲಯಾನದ ಮೂಲಕ ಸಮುದ್ರಮಾರ್ಗದಿಂದ ಬಂದ ವಾಸಿಷ್ಠ ಮುನಿಗಳಿಗೆ 'ಸಮುದ್ರ ಜ್ವರ' ತಗಲಿ ತಿಂಗಳ ಪರ್ಯಂತ ಅವರು ಬಳಲುವಂತಾಯಿತು.[೭] ಸಮುದ್ರಯಾನದ ಮೂಲಕ ಬಂದದ್ದರಿಂದ ವಡಭಾಂಡೇಶ್ವರ ಮಾರ್ಗವಾಗಿ ಬಂದ ಗಣಪತಿ ಮುನಿಗಳು ಪ್ರಪ್ರಥಮವಾಗಿ ಗೋಕರ್ಣದಲ್ಲಿ ಆಗ ನಾಗಬೀದಿಯಲ್ಲಿರುವ ವೆಂಕಟರಮಣ ಉಪಾಧ್ಯ ಎಂಬ ಕೋಟದ ಪ್ರಖ್ಯಾತ ಸಂಸ್ಕೃತ ವಿದ್ವಾಂಸರ ಮನೆಯಲ್ಲಿ ಇಳಿದುಕೊಂಡರು. ಗಣಪತಿ ಮುನಿಗಳು ತಮ್ಮ ಪತ್ನಿ ವಿಶಾಲಾಕ್ಷಮ್ಮ ಮತ್ತು ಮಗನ ಜೊತೆಯಲ್ಲಿ ಬಂದಿದ್ದರು.

೭. ಗಣಪತಿ ಮುನಿಗಳ ಜೀವನಚರಿತ್ರೆಯನ್ನು ಅವರ ಪ್ರಖ್ಯಾತ ಶಿಷ್ಯರಲ್ಲೊಬ್ಬರಾದ ಟಿ. ವಿ. ಕಪಾಲಿಶಾಸ್ತ್ರಿ ಗಳು ಸಂಸ್ಕೃತದಲ್ಲಿ 'ವಾಸಿಷ್ಠ ವೈಭವಮ್' ಎಂಬ ಹೆಸರಿನಲ್ಲಿ ಗದ್ಯ ಪದ್ಯಾತ್ಮಕವಾದ ಚಂಪೂ ಶೈಲಿಯಲ್ಲಿ ಬರೆದಿದ್ದಾರೆ. 'ವಾಸಿಷ್ಠ ವೈಭವ'ದ ಹದಿನೇಳನೇ ಪ್ರಕರಣ ಗಣಪತಿ ಮುನಿಗಳ ಗೋಕರ್ಣವಾಸದ ವಿವರಣೆಗಳಿಂದ ಕೂಡಿದೆ. ದೈವರಾತರ ಬರಹವು ಮತ್ತಷ್ಟು ವಿಶದವಾಗಿ ಗಣಪತಿ ಮುನಿಗಳ ಗೋಕರ್ಣವಾಸವನ್ನು ಆತ್ಮೀಯವಾಗಿ ಬಿಚ್ಚಿಡುತ್ತದೆ. ಪ್ರಸ್ತುತ ಇವೆರಡನ್ನೂ ಆಧರಿಸಿ ಗಣಪತಿ ಮುನಿಗಳ ಗೋಕರ್ಣ ವಾಸ್ತವ್ಯವನ್ನು ಚಿತ್ರಿಸುವದಕ್ಕೆ ಪ್ರಯತ್ನಿಸಲಾಗಿದೆ. 'ವಾಸಿಷ್ಠ ವೈಭವ'ದ ಗದ್ಯ ಪದ್ಯಗಳೆರಡೂ ಹೃದ್ಯವಾಗಿದ್ದು ಸಂಸ್ಕೃತ ಬಲ್ಲವರು ಅವಶ್ಯ ಆನಂದಿಸಬಹುದಾದ ಗ್ರಂಥವಾಗಿದೆ.

ಆಂಧ್ರ ದೇಶೀಯರಾದ ಗಣಪತಿ ಮುನಿಗಳದು ಅಷ್ಟೇನೂ ಆಕರ್ಷಕವಲ್ಲದ ಬಾಹ್ಯ ವ್ಯಕ್ತಿತ್ವ; ಕೃಶದೇಹಿ, ಕಪ್ಪು ಮೈಬಣ್ಣ. ಅವರ ಆಂತರಿಕ ವಿದ್ವತ್ತು ಮತ್ತು ತಪೋ ಸೌಂದರ್ಯಗಳ ಹತ್ತಿರದ ಪರಿಚಯ ಒಮ್ಮೆಲೇ ಯಾರಿಗೂ ಆಗುವಂತಿರಲಿಲ್ಲ. ಅನಾರೋಗ್ಯದಿಂದ ಬಳಲಿದ ಅವರು ಒಂದು ತಿಂಗಳು ವಿಶ್ರಾಂತಿ ಪಡೆದು ಆಮೇಲೆ ಸಾವಾಕಾಶವಾಗಿ ತಮ್ಮ ವಿದ್ವತ್ತಿನ ಸುಗಂಧವನ್ನು ಬೀರಿದರು.

ಗಣಪತಿ ಮುನಿಗಳು ಪ್ರತಿನಿತ್ಯ ಕೋಟಿತೀರ್ಥಕ್ಕೆ ನಸುಕಿನಲ್ಲಿಯೇ ಸ್ನಾನಕ್ಕೆ ಬರುತ್ತಿದ್ದರು. ಕೆಲವು ಯುವಕರು ಅವರ ವಿದ್ವತ್ತೆಯನ್ನೂ, ಕಾವ್ಯರಚನಾ ಸಾಮರ್ಥ್ಯವನ್ನೂ ತಿಳಿಯದೆ ಅವರನ್ನು ಅಪಹಾಸ್ಯ ಮಾಡುತ್ತಿದ್ದರು. "ಕಾಕಃ ಸ್ನಾನಾರ್ಥಂ ಆಗತಃ" ಎಂದು ಆ ಹುಡುಗರು ಸಂಸ್ಕೃತದಲ್ಲಿ ಅಪಹಾಸ್ಯ ಮಾಡಿದರು. ಗಣಪತಿ ಮುನಿಗಳು ಮೌನವಾಗಿಯೆ ಇದ್ದರು. ಕೆಲವೇ ದಿನಗಳಲ್ಲಿ ಸಾವಕಾಶವಾಗಿ ಯಾವಾಗ ಅವರ ಪಾಂಡಿತ್ಯ ಪ್ರಕಟವಾಗತೊಡಗಿತೋ ಅದೇ ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಗಣಪತಿ ಮುನಿಗಳಲ್ಲಿಗೆ ಬಂದು ಅವರ ಜ್ಞಾನದ ಆಗಾಧತೆಯನ್ನು ಪರೀಕ್ಷಿಸುವುದಕ್ಕೆ ಒಂದೊಂದೇ ಕ್ಲಿಷ್ಟವಾದ ವಿವಿಧ ಶಾಸ್ತ್ರ ವಿಷಯಕವಾದ ಪ್ರಶ್ನೆಗಳನ್ನು ಕೇಳತೊಡಗಿದರು. ಗಣಪತಿ ಮುನಿಗಳು ಮಾತ್ರ ಯಾವೊಂದು ಪೂರ್ವಾಗ್ರಹವೂ ಇಲ್ಲದೆ ಪ್ರಾಂಜಲ ಅಂತಃಕರಣದಿಂದ ಆ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದರು. ಜಟಿಲವಾದ ವಿಷಯವನ್ನು ಸರಳವಾಗಿ ಸರಸವಾಗಿ ವಿವರಿಸುವ ಪಾಂಡಿತ್ಯ ಮತ್ತು ಬೋಧನಾ ಸಾಮರ್ಥ್ಯಗಳೆರಡನ್ನೂ ಗಣಪತಿಮುನಿಗಳು ಹೊಂದಿದ್ದರು. ಸಹಜವಾಗಿಯೇ ಅವರನ್ನು ಇಕ್ಕಟ್ಟಿಗೆ ಸಿಲುಕಿಸುವದಕ್ಕಾಗಿಯೇ ಪ್ರಶ್ನೆಗಳನ್ನು ಕೇಳುತ್ತಿದ್ದ ತಿಳಿಗೇಡಿ ವಿದ್ಯಾರ್ಥಿಗಳು ಇದರಿಂದ ತುಂಬಾ ಮುಖಭಂಗವನ್ನು ಹೊಂದುವಂತಾಯಿತು. ತಮ್ಮ ಕೃತ್ಯಗಳಿಗೆ ಪಶ್ಚಾತ್ತಾಪವನ್ನು ಅನುಭವಿಸಿದ ಆ ವಿದ್ಯಾರ್ಥಿಗಳು ಗಣಪತಿ ಮುನಿಗಳಲ್ಲಿ ಶಿಷ್ಯತ್ವವನ್ನು ಯಾಚಿಸಿದರು. ಗಣಪತಿ ಮುನಿಗಳು ಆಗ "ಕಾಗೆಯು ಏನು ಕಲಿಸಬಲ್ಲದಪ್ಪಾ" ಎಂದು ನಗುತ್ತಾ ಮಾರ್ಮಿಕವಾಗಿ ಉತ್ತರ ಕೊಟ್ಟರು.[೮] ಆದರೂ ಶಮಾಗುಣಸಂಪನ್ನರಾದ ಗಣಪತಿ ಮುನಿಗಳು ಗೋಕರ್ಣದಲ್ಲಿರುವ ಅವಧಿಯಲ್ಲಿ ಬೇರೆ ಬೇರೆ ಶಾಸ್ತ್ರಗಳನ್ನು ಆ ವಿದ್ಯಾರ್ಥಿಗಳಿಗೆ ಬೋಧಿಸಿದರು. ಜ್ಯೋತಿಷ್ಯ ಶಾಸ್ತ್ರ, ಅಲಂಕಾರ ಶಾಸ್ತ್ರಾದಿಗಳನ್ನು ಬೋಧಿಸತೊಡಗಿದಂತೆ ಗಣಪತಿ ಮುನಿಗಳ ಸುತ್ತಲೂ ಹಗಲಿರುಳು ಎನ್ನುವ ಭೇದವಿಲ್ಲದೇ

೮. ಅಪ್ರಕಟಿತ ಆತ್ಮಚರಿತೆ; ಪುಟ ೩೩–೩೪

ಜ್ಞಾನಪಿಪಾಸುಗಳೂ, ಜಿಜ್ಞಾಸುಗಳೂ ಆದ ಸಹೃದಯರ ಜಾತ್ರೆಯೇ ನೆರೆಯುವದಕ್ಕೆ ಪ್ರಾರಂಭವಾಯಿತು.

ಇವೆಲ್ಲದರ ಮೊಟ್ಟಮೊದಲನೆಯ ಪರಿಣಾಮವೆಂದರೆ ಗಣಪತಿಮುನಿಗಳಿಗೆ ಮತ್ತು ಅವರ ಕುಟುಂಬ ವರ್ಗಕ್ಕೆ ಉತ್ತಮವಾದ ವಸತಿ ಮತ್ತು ಆಶನ, ವಸನಗಳ ವ್ಯವಸ್ಥೆ ಏರ್ಪಟ್ಟಿದ್ದು.

ಈ ನಡುವೆ ಗಣಪತಿ ಮುನಿಗಳ ಗೋಕರ್ಣಾಗಮನದ ದಿನದಿಂದ, ಗಣೇಶನು ಸಂಸ್ಕೃತ ವಿದ್ಯಾಪೀಠದ ತನ್ನ ವರ್ಗಗಳಿಗೆ ಹೋಗುವಾಗ ಬರುವಾಗ ಅವರ ವಸತಿಗೆ ಹೋಗಿ ಬರುತ್ತಿದ್ದ. ಆದರೆ ಅವರ ಜೊತೆಯಲ್ಲಿ ಮಾತನಾಡುವ ಅವಕಾಶ ಅವನಿಗೆ ಬಂದಿರಲಿಲ್ಲ. ಗಣೇಶನಿಗೆ ತೆಲಗು ಭಾಷೆ ಬರುತ್ತಿರಲಿಲ್ಲ. ಆದರೂ ಗಣೇಶ ಮಾತ್ರ ಹೋಗುತ್ತಲೇ ಇದ್ದ. ಒಂದು ದಿನ ಗಣಪತಿ ಮುನಿಗಳು ಗಣೇಶನನ್ನು "ನೀನು ದಿನಾಲು ನಾಲ್ಕು ಬಾರಿ ಯಾಕೆ ಬಂದು ಹೋಗುತ್ತಿ ?" ಎಂದು ಸಂಜ್ಞಾ ಭಾಷೆಯ ಮೂಲಕವೇ ಕೇಳಿದರು. "ತಮ್ಮನ್ನು ನೋಡುವುದಕ್ಕೆಂದು ಬಂದು ಹೋಗುತ್ತಿದ್ದೇನೆ, ಇನ್ನಾವ ಕಾರಣಕ್ಕಾಗಿಯೂ ಅಲ್ಲ, ನಾನು ಬರುವದರಿಂದ ತಮಗೆ ತೊಂದರೆಯಾಗುವದಾದರೆ ಇನ್ನು ಮುಂದೆ ಬರುವದಿಲ್ಲ" ಎಂದು ಗಣೇಶ ಹೇಳಿದ. ಅದಕ್ಕೆ ಗಣಪತಿ ಮುನಿಗಳು ಅರ್ಧ ಕನ್ನಡ ಅರ್ಧ ತೆಲುಗು ಭಾಷೆಗಳಲ್ಲಿ "ನೀನು ಬರುವುದರಿಂದ ನನಗೇನೂ ತೊಂದರೆಯಿಲ್ಲ; ನೀನು ಬೇಕಾದಾಗ ಬರಬಹುದು" ಎಂದು ಹೇಳಿದರು.

ಕೇವಲ ವಿದ್ಯಾರ್ಥಿಗಳಲ್ಲದೇ ಗೋಕರ್ಣದ ಅನೇಕ ಪ್ರಮುಖರು ಕ್ರಮಕ್ರಮವಾಗಿ ಗಣಪತಿ ಮುನಿಗಳ ಶಿಷ್ಯರಾದರು. ಆದರೆ ಗಣಪತಿ ಮುನಿಗಳು ಗೋಕರ್ಣಕ್ಕೆ ಬಂದದ್ದು ಮಾತ್ರ ವೇದಾಧ್ಯಯನ ಮತ್ತು ವೇದನಿಹಿತವಾದ ತತ್ತ್ವಾರ್ಥದ ಅವಗಾಹನೆಗಾಗಿಯಾಗಿತ್ತು. "ಅಧೀತ ಸಾಂಗೋಪಾಂಗಾದಿ ವೇದ ಸಂಹಿತಾನಾಂ ದ್ವಿಜಾತಿ ಶತಾನುಮಾವಾಸಸ್ಥಲಮಿದಂ ಪುಣ್ಯಭೂಖಂಡ ಮಂಡಲಂ (ಗೋಕರ್ಣ)"[೯] (ಸಾಂಗೋಪಾಂಗವಾಗಿ ವೇದ ಸಂಹಿತೆಗಳನ್ನು ಅಧ್ಯಯನ ಮಾಡಿದ ನೂರಾರು ಶ್ರೋತ್ರೀಯರು ವಾಸಿಸುತ್ತಿರುವ ಭೂಮಂಡಲದ ಅತ್ಯಂತ ಪುಣ್ಯಭೂಮಿ ಗೋಕರ್ಣ ಇದಾಗಿದೆ) ಎಂದು ಗಣಪತಿ ಮುನಿಗಳು ಗೋಕರ್ಣಕ್ಕೆ ಆಗಮಿಸಿದ್ದರು. ಗೋಕರ್ಣದಲ್ಲಿ ಅವರ ಪರಿಚಯ ವೃದ್ಧಿಯಾದಂತೆ ಅವರು ವೇದಗ್ರಂಥಗಳನ್ನು ಕುರಿತು

೯. 'ವಾಸಿಷ್ಠ ವೈಭವಮ್' – ಪುಟ ೭೩

ವಿಚಾರಿಸತೊಡಗಿದರು. "ವೇದ ಗ್ರಂಥವು ಯಾರಲ್ಲಿ ದೊರಕುತ್ತದೆ ? ನಾನು ವೇದವನ್ನು ಅಧ್ಯಯನ ಮಾಡಲಿಕ್ಕೆಂದೇ ಇಲ್ಲಿಗೆ ಬಂದಿದ್ದೇನೆ" ಎಂದು ತಮ್ಮ ಇಚ್ಛೆಯನ್ನು ಶಿಷ್ಯರಲ್ಲಿ ವ್ಯಕ್ತಪಡಿಸಿದರು. ಮುದ್ರಣಗೊಂಡ ವೇದಗ್ರಂಥಗಳ ಕಾಲ ಅದಾಗಿರಲಿಲ್ಲ. ಕೆಲವರಲ್ಲಿ ಮಾತ್ರ ವಿರಳವಾಗಿ ಕೈ ಬರಹದ ವೇದ ಗ್ರಂಥಗಳ ಪ್ರತಿಗಳು ಇರುತ್ತಿದ್ದವು. ಹಾಗೆ ಗ್ರಂಥಗಳನ್ನು ಹೊಂದಿದವರೂ ಸಾಧಾರಣವಾಗಿ ವೇದಗಳ ಹಸ್ತಪ್ರತಿಗಳನ್ನು ಇತರರಿಗೆ ಕೊಡುತ್ತಿರಲಿಲ್ಲ; ಅದರಲ್ಲೂ ಮನೆಯ ಹೊರಗಂತೂ ಯಾರಿಗೂ ಅವುಗಳನ್ನು ಕೊಡುತ್ತಿರಲಿಲ್ಲ. ಊರ ಪ್ರಮುಖರು ಗಣಪತಿಮುನಿಗಳ ಪರವಾಗಿ ವಿಚಾರಿಸಿ ಅನಂತ ಉಪಾಧ್ಯಾಯರೆಂಬವರ ಮನವೊಲಿಸಿ ಅವರ ಮನೆಗೇ ಹೋಗಿ ವೇದಗ್ರಂಥವನ್ನು ಅಭ್ಯಾಸ ಮಾಡಲು ಅನುಕೂಲ ಕಲ್ಪಿಸಿಕೊಟ್ಟರು. ಗಣಪತಿ ಮುನಿಗಳು ಪ್ರತಿದಿನ ಒಂದು ತಾಸು ಅನಂತ ಉಪಾಧ್ಯಾಯರ ಮನೆಗೆ ಹೋಗಿ ಋಗ್ವೇದದ ಒಂದು ಅಷ್ಟಕವನ್ನು ಅಧ್ಯಯನ ಮಾಡಿ ಹಿಂದಿರುಗುತ್ತಿದ್ದರು. ಗಣಪತಿ ಮುನಿಗಳ ಈ ಚರ್ಯೆಯನ್ನು ನೋಡಿದ ಅನಂತ ಉಪಾಧ್ಯಾಯರು ಗಣಪತಿ ಮುನಿಗಳ ಕೆಲವು ಶಿಷ್ಯರೊಂದಿಗೆ "ಹುಚ್ಚು ಶಾಸ್ತ್ರಿ, ನಾವು ಆರೆಂಟು ವರ್ಷಗಳ ಪರ್ಯಂತ ಅಧ್ಯಯನ ಮಾಡಿದರೂ ಸರಿಯಾಗಿ ಬರುವುದಿಲ್ಲ. ಕೇವಲ ಹಾಳೆ ತಿರುವಿಹಾಕಿದರೆ ಇವನಿಗೇನು ತಿಳಿಯುತ್ತದೇ ಮಣ್ಣು. ಎಂಟು ವರ್ಷಗಳಲ್ಲಿ ಕಲಿಯಲಾಗದಿರುವದನ್ನು ಇವನು ಎಂಟು ದಿನಗಳಲ್ಲಿಯೇ ಕಲಿಯುತ್ತಾನಂತೆ" ಎಂದು ವಿನೋದ ಮಾಡಿದರು. ಎಂಟು ದಿನಗಳಾದ ಮೇಲೆ ಗಣಪತಿ ಮುನಿಗಳು ವೇದದ ಹಸ್ತಪ್ರತಿಯನ್ನು ಕೊಟ್ಟ ಬಗೆಗೆ ಕೃತಜ್ಞತೆಯನ್ನು ಸಲ್ಲಿಸಿದಾಗ ಅನಂತ ಉಪಾಧ್ಯಾಯರು "ಏನು ! ವೇದವನ್ನು ಇಷ್ಟು ಬೇಗ ಓದಿಯಾಯಿತಾ, ಎಲ್ಲಿ ಸ್ವಲ್ಪ ಹೇಳಿ ನೋಡೋಣ, ನಾನು ಕೇಳುತ್ತೇನೆ" ಎಂದು ಗಣಪತಿ ಮುನಿಗಳಿಗೆ ಪರಿಹಾಸ್ಯ ಮಾಡಿದರು. ಅದಕ್ಕೆ ಗಣಪತಿ ಮುನಿಗಳು ವಿನಯದಿಂದ "ನನಗೆ ತಿಳಿದಷ್ಟು ಹೇಳುತ್ತೇನೆ" ಎಂದು ಪದ್ಮಾಸನ ಹಾಕಿ ಕೈ ಮುಗಿದು ಕುಳಿತು ವೇದವನ್ನು ಪಠನ ಮಾಡಲು ಪ್ರಾರಂಭಿಸಿದರು. ಗಣಪತಿಮುನಿಗಳ ಮುಖದಿಂದ ಸ್ಖಾಲಿತ್ಯ ಶೂನ್ಯವಾದ ಹಾಗೂ ಓತಪ್ರೋತವಾದ ವೇದವಾಣಿ ನಿಸ್ಸೃತವಾಗತೊಡಗಿತು. ಇದನ್ನು ಕಂಡ ಅನಂತ ಉಪಾಧ್ಯಾಯರು ಬೆರಗಾಗಿ ಹೋದರು. ಗಣಪತಿಮುನಿಗಳ ಸರ್ವಜ್ಞ ಸ್ವರೂಪ ಮತ್ತು ದಿವ್ಯ ಜ್ಞಾನ ಶಕ್ತಿಯ ಅರಿವು ಆಗ ಅವರಿಗಾಗಿತ್ತು.[೧೦]

---

೧೦. ಅಪ್ರಕಟಿತ ಆತ್ಮಚರಿತೆ; ಪುಟ ೩೫–೩೬

೪. ಗಣೇಶ ದೈವರಾತನಾದದ್ದು

ಗಣಪತಿ ಮುನಿಗಳು ಹೀಗೆ ಏಕಪಾಠದಿಂದ ವೇದಾಧ್ಯಯನ ಸಂಪನ್ನರಾದ ಮೇಲೆ ವೇದಾರ್ಥಜ್ಞಾನದಲ್ಲಿರುವ ಉಮಾಮಹೇಶ್ವರ ತಪೋವನಕ್ಕೆ ಹೋಗಿ ಇರಲು ಬಯಸಿದರು. ಗೋಕರ್ಣದಲ್ಲಿ ಊರಿನ ಮಧ್ಯದಲ್ಲಿರುವಷ್ಟು ದಿನಗಳಲ್ಲಿಯೂ ಅವರ ವಸತಿ ಬೆಳಗಿನಿಂದ ಸಾಯಂಕಾಲದ ವರೆಗೂ ಸದಾ ಜನರಿಂದ ತುಂಬಿರುತ್ತಿದ್ದುದರಿಂದ ಅವರಿಗೆ ಸ್ವಲ್ಪ ವ್ಯವಧಾನವೂ ದೊರಕದೇ ಇರುವದೂ ಅವರು ಅನತಿ ದೂರದಲ್ಲಿರುವ ನಿರ್ಜನಪ್ರದೇಶವನ್ನು ಅನ್ವೇಷಿಸುವದಕ್ಕೆ ನಿಮಿತ್ತವಾಯಿತು. ಅವರು ತಮ್ಮ ಇಚ್ಛೆಯನ್ನು ಪ್ರಕಟಪಡಿಸಿದ ಕೂಡಲೇ ನಾರಾಯಣ ಪಂಡಿತ ಮತ್ತು ವೆಂಕಟರಮಣ ಪಂಡಿತ ಎಂಬ ಪ್ರಸಿದ್ಧ ಜ್ಯೋತಿಷಿಗಳು ಮತ್ತು ಇತರ ಪ್ರಮುಖರು ಆಹಾರಧ್ಯಾನಗಳು ಮತ್ತಿತರ ವ್ಯವಸ್ಥೆಯನ್ನೂ ಉಮಾಮಹೇಶ್ವರ ತಪೋವನದ ವಸತಿಗಾಗಿ ಮಾಡಬೇಕಾದ ಇನ್ನಿತರ ಸಿದ್ಧತೆಗಳನ್ನೂ ಮಾಡಿದರು. ಅಡಿಗೆ ಮತ್ತಿತರ ಸಹಾಯಗಳನ್ನು ಮಾಡಲು ಯಾರಾದರೂ ಇನ್ನೊಬ್ಬ ಮಹಿಳಾ ಸಹಾಯಕಿಯ ಅಗತ್ಯವೆಂದು ಕಂಡುಕೊಂಡ ಅವರೆಲ್ಲ ಗೋಕರ್ಣದಲ್ಲಿರುವ ಕೆಲವು ಹೆಂಗಸರನ್ನು ವಿಚಾರಿಸಿದರು. ನಿರ್ಜನಪ್ರದೇಶವಾದ ಉಮಾಮಹೇಶ್ವರ ಮಂದಿರದ ತಪೋವನದಲ್ಲಿ ಭಾಷೆಯೂ ಬರದೇ ಇರುವ ಜನರೊಂದಿಗೆ ಇರುವುದಕ್ಕೆ ಯಾರೂ ಸಿದ್ಧರಿರಲಿಲ್ಲ. ಗಣಪತಿ ಮುನಿಗಳು ಯಾವುದೇ ಕಾರ್ಯನಿಮಿತ್ತ ಗೋಕರ್ಣಕ್ಕೆ ಬಂದರೆ ಅವರ ಪತ್ನಿಯಾದ ವಿಶಾಲಾಕ್ಷಮ್ಮನವರು ಏಕಾಂಗಿಯಾಗಿ ಬಿಡುತ್ತಾರೆ, ಮಗ ಇನ್ನೂ ಸಣ್ಣ ಬಾಲಕನಷ್ಟೆ! ಎಂಬ ಕಾರಣವೂ ಇನ್ನೋರ್ವ ವ್ಯಕ್ತಿಯ ಹುಡುಕುವಿಕೆಯಲ್ಲಿ ಕಾರಣವಾಯಿತು.

ಒಂದು ದಿನ ಸಾಯಂಕಾಲ ಗಣೇಶ ಶಾಲೆಯಿಂದ ಮನೆಗೆ ಮರಳುವಾಗ ಗಣಪತಿಮುನಿಗಳು ಗಣಪತಿ ದೇವಸ್ಥಾನದ ಸನಿಹ ಉಮಾಹೇಶ್ವರ ತಪೋವನಕ್ಕೆ ಹೋಗುವ ಮಾರ್ಗದಲ್ಲಿ ನಿಂತಿರುವುದನ್ನು ಕಂಡು "ಮುಸ್ಸಂಜೆಯಾಗುತ್ತಾ ಬಂದಿದೆ, ನೀವೇಕೆ ಇಲ್ಲಿ ನಿಂತುಕೊಂಡಿದ್ದೀರಿ ?" ಎಂದು ಪ್ರಶ್ನಿಸಿದನು. ಗೋಕರ್ಣಕ್ಕೆ ಬಂದು ಕೆಲವು ದಿನಗಳಲ್ಲಿ ಕನ್ನಡವನ್ನು ಕಲಿತಿದ್ದ ಗಣಪತಿ ಮುನಿಗಳು ಕನ್ನಡದಲ್ಲಿಯೆ ಈಗ ಪೂರ್ಣ ವ್ಯವಹರಿಸಬಲ್ಲವರಾಗಿದ್ದರು. ಅವರು ತಮ್ಮ ತೊಂದರೆಯನ್ನು ವಿವರಿಸಿದರು. ಅದಕ್ಕೆ ಗಣೇಶನು "ಓ ! ಇದಕ್ಕಾಗಿ ನೀವು ಇಷ್ಟು ಚಿಂತಿಸುವದೇ, ನನಗೆ ತಿಳಿಸಿದ್ದರೆ ನಾನೇ ಬರುತ್ತಿದ್ದೆನಲ್ಲಾ ನಿಮ್ಮ ಸಂಗಡ ತಪೋವನಕ್ಕೆ" ಎಂದನು. ಅದಕ್ಕೆ ಅವರು "ನಿನಗೆ ಅಡಿಗೆ ಮಾಡಲು ಬರುತ್ತದೆಯೇ ?" ಎಂದು ಕೇಳಿದರು. ಅದಕ್ಕೆ ಉತ್ತರವಾಗಿ ಗಣೇಶನು 'ಹೌದು' ಎಂದು ಹೇಳಿದ.

"ಹಾಗಾದರೆ ಯಾವಾಗ ಬರುತ್ತಿ?" ಎಂದು ಅವರು ಕೇಳಿದ್ದಕ್ಕೆ ಹಿಂದೆ ಮುಂದೆ ನೋಡದೇ ಗಣೇಶನು "ಈ ದಿನವೇ, ಈಗಲೇ ಬೇಕಾದರೂ ಬರಲು ಸಿದ್ಧನಿದ್ದೇನೆ" ಎಂದು ಉತ್ತರಿಸಿದ. "ಇದಕ್ಕೆ ನಿನ್ನ ಪಾಲಕರು ಒಪ್ಪುತ್ತಾರೆಯೇ ? ಅವರ ಅನುಮತಿಯನ್ನು ಪಡೆದು ಬಾ" ಎಂದು ಗಣಪತಿ ಮುನಿಗಳು ಹೇಳಿದಾಗ ಗಣೇಶ ಅದಕ್ಕೆ ಅಷ್ಟೇ ದಿಟ್ಟವಾಗಿ "ಅನ್ಯಾನ್ಯ ಕಾರ್ಯಗಳಲ್ಲಾದರೋ ಪಾಲಕರು ನನಗೆ ಶಾಸಿಸಲು ಅರ್ಹರು, ಇಂತಹ ಸತ್ಕಾರ್ಯದಲ್ಲಿ ನನ್ನನ್ನು ನಿವಾರಣ ಮಾಡುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ, ನಾನು ಸರ್ವವಿಧದಲ್ಲಿಯೂ ಸ್ವತಂತ್ರನಾಗಿದ್ದೇನೆ" ಎಂದು ಹೇಳಿದ. ಮರುಕ್ಷಣದಲ್ಲಿಯೇ ಗಣೇಶನು ಗಣಪತಿ ಮುನಿಗಳನ್ನು ಅನುಸರಿಸಿ ಉಮಾಮಹೇಶ್ವರ ತಪೋವನಕ್ಕೆ ತೆರಳಿದ.[೧೧] ತಪೋವನಕ್ಕೆ ತೆರಳಿದ ಗಣೇಶ

---

೧೧. ಅಪ್ರಕಟಿತ ಆತ್ಮಚರಿತೆ; ಪುಟ ೩೭
ಈ ಘಟನೆಯು ವಾಸಿಷ್ಠ ವೈಭವದಲ್ಲಿಯೂ ನಿರೂಪಿತವಾಗಿದೆ. ಕಪಾಲಿಶಾಸ್ತ್ರಿಗಳ ಚಟುಲ, ಸರಳ ಸಂಸ್ಕೃತದಲ್ಲಿ ಈ ಘಟನೆ ನಿರೂಪಿತವಾದ ಬಗೆಯನ್ನು ನೋಡಬಹುದು.
"ತತ್ರ ಪಂಡಿತೇಂದ್ರೇಣ ಮುನಿನಾ ಪಾಕಾದಿ ಸಾಹಾಯ್ಯಕಾಯ
ಪರಿಜನಮಪೇಕ್ಷಮಾಣೇನ ನಿರೀಕ್ಷಿತಃ ಕೋಽಪಿ ವಿಂಶತಿ
ವರ್ಷಕಲ್ಪೋ ವಿಪ್ರಯುವಾ । ಸ ಕ್ಷೇತ್ರವಾಸೀ ವಾಸಿಷ್ಠ ಪಾದೈರ್ಬಹುಧಾ
ದೃಷ್ಟಪೂರ್ವೋಽಪಿ ಅಧುನೈವ ಸ್ವಮನೋರಥಂ ಶುಶೂಷುಜನಸಾ
ಪೇಕ್ಷಂ ಉಮಾಮಹೇಶ್ವರಮಂದಿರಾವಾಸಂ ಆವೇದಿತಃ ಸದ್ಯ ಏವ
ಸನ್ನದ್ಧೋಽಸ್ಮಿ ಭವಂತಮನುಗಂತುಮ್ ತಾಪಸೇಂದ್ರಮಭಾಣೀತ್ ।
ತದಾಕರ್ಣ್ಯ ಗಣಪತಿಮುನಿರ್ಮಹಾನುಭಾವೋಽಸ್ಯ ಶುಶ್ರೂಷೋಃ
ಸ್ವಾಭಿಮುಖಂ ಹೃದಯಮಾಲೋಕ್ಯ ಲೋಕಜ್ಞಃ ಏವಮಚಿಂತ –
"ಉದಾರ ಪ್ರಕೃತಿಃ ಸಾರಸ್ವಾನಿವ ಲಕ್ಷ್ಯತೇ ಬಾಲಃ ।
ಪ್ರಸ್ಫುಟಂ ಚಾಸ್ಯ ಬ್ರಹ್ಮವರ್ಚಸಮ್ ।
ಅನುಗ್ರಾಹಾಸದಮೇವೇತ್ಸಸಂಶಯಮ್ । ಪರಂ ಕಥಮಯಂ
ಮಾತಾಪಿತ್ರೋರಭ್ಯನುಜ್ಞಾಮಲಬ್ಧ್ವಾ 'ಏಷ ಆಗತೋಸ್ಮಿ'
ಇತಿ ಭಣತಿ" ಇತಿ ವಿಚಾರ್ಯ ಪ್ರಾಹ–
ಆವೇದ್ಯತಾಂ ಗುರುಜನೋ ಯದಿ ತೇ ಮತಾ ಮತ್
ಸೇವಾ ನವಾ, ತಮನುಮಾನ್ಯ ಮದಂತಮೇಹಿ ।
ವಾಸಿಷ್ಠ ವಾಚಮಿತಿ ಸೋಽಪಿ ನಿಶಮ್ಯ ಸಾಧು–
ಸ್ತತ್ಕಾಲಯುಕ್ತಮಭಿಯುಕ್ತಮುವಾಚ ಬಾಲಃ ॥ ೧೭೮ ॥
ಭಾವತ್ಕಪಾದಯುಗಲೀ ಭಜನಾಭ್ಯನುಜ್ಞಾಂ
ಯಾಚೇ ಭವಂತಮಿತರೋಽತ್ರ ತು ನಾಧಿಕಾರೀ ।
ಕಾರ್ಯಾಂತರೇಷು ಗುರವೋ ಮಮಃ ಶಾಸಿತಾರಃ
ಸಂತ್ವೀದೃಶೇಷು ನ ಕದಾಪಿ ಮಮಾಸ್ತಿ ನಾಥಃ ॥ ೧೭೯ ॥
ಸರ್ವಥಾಸ್ಮಿ ಸ್ವತಂತ್ರೋಽಹಂ ಗುರುಸೇವಾರತೋ ಜನಃ
ತ್ವತ್ಪಾದ ಪರಿಚರ್ಯಾರ್ಥಿ ಸಿದ್ಧೋಽಯಮನುಗೃಹ್ಯತಾಮ್ ॥
ವಾಸಿಷ್ಠ ವೈಭವಮ್ – ಪುಟ ೭೮–೭೯

ಗುರುದಂಪತಿಗಳಿಗೆ ಸ್ವಗೋತ್ರ ಪ್ರವರಪೂರ್ವಕ, 'ವಿಶ್ವಾಮಿತ್ರ ದೈವರಾತ ಔದಲ' ಎಂದು, ಅಭಿಧಾನವನ್ನು ಸಮರ್ಪಿಸಿದ.

ಯುವಕನ ಗೋತ್ರ ಪ್ರವರವನ್ನು ತಿಳಿದು ಗಣಪತಿ ಮುನಿಗಳು ಇಂತಹ ಗೋತ್ರ ಪ್ರವರಗಳಿಂದ ಜನಿಸಿ ತೇಜಸ್ಸಿನಿಂದ ಬೆಳಗುತ್ತಿದ್ದ ಆತನ ಮುಖದಲ್ಲಿ ಮಿನುಗುತ್ತಿರುವ ಕಾಂತಿಯನ್ನು ಕಂಡು ಅವನಿಗೆ 'ದೈವರಾತ' ಎಂದು ನಾಮಕರಣ ಮಾಡಿದರು.[೧೨]

೫. ಗುರುಶುಶ್ರೂಷೆಯಾ ವಿದ್ಯಾ

ಹೀಗೆ ವಾಸಿಷ್ಠ ಗಣಪತಿ ಮುನಿಗಳಿಂದ 'ದೈವರಾತ' ಎಂದು ಕರೆಯಲ್ಪಟ್ಟು ಮುಂದೆ ಅದೇ ಹೆಸರಿನಿಂದಲೇ ಪ್ರಖ್ಯಾತರಾದ ದೈವರಾತರು ವಾಸಿಷ್ಠ ಗಣಪತಿ ಮುನಿಗಳ ಸೇವೆಯನ್ನು ಸರ್ವವಿಧದಲ್ಲಿಯೂ ಮಾಡಿ ಕೃತಕೃತ್ಯರಾದರು. ಉಮಾಮಹೇಶ್ವರ ತಪೋವನದಲ್ಲಿ ದೈವರಾತರು ಸಲ್ಲಿಸಿದ ಸೇವೆ ಅನುಪಮ ಹಾಗೂ ಅನುಕರಣೀಯವಾಗಿದೆ.

ವಿವಿಧ ಕಾರ್ಯಗಳಲ್ಲಿ ಸಹಾಯ ಮಾಡುವದಕ್ಕೆಂದು ತಪೋವನಕ್ಕೆ ಗಣಪತಿ ಮುನಿಗಳು ಒಬ್ಬ ಯುವಕನನ್ನು ಕರೆದುಕೊಂಡು ಬಂದದ್ದಕ್ಕೆ ವಿಶಾಲಾಕ್ಷಮ್ಮನವರು ಹೊಸ್ತಿಲಲ್ಲಿ ಆಕ್ಷೇಪವನ್ನೆತ್ತಿದರು. ಗಣಪತಿ ಮುನಿಗಳು ಪತ್ನಿಯನ್ನು ಸಮಾಧಾನ ಮಾಡುತ್ತ ತಾನಾಗಿಯೇ ಸ್ವಸಂತೋಷದಿಂದ ಒಪ್ಪಿ ಬಂದಿರುವದನ್ನೂ ಮತ್ತು ಗೋಕರ್ಣದ ವಾಸ್ತವ್ಯದಲ್ಲಿರುವಾಗ ದಿನಕ್ಕೆ ನಾಲ್ಕು ಸಲ ಗಣೇಶನು ಬರುತ್ತಿದ್ದುದನ್ನು ನೆನಪಿಸಿಕೊಳ್ಳುವಂತೆ ಹೇಳಿದರು.

ತಪೋವನಕ್ಕೆ ಬಂದ ಸ್ವಲ್ಪ ಹೊತ್ತಿಗೆ ಸಂಜೆಯಾಯಿತು. ವಿಶಾಲಾಕ್ಷಮ್ಮ ತಾಯಿಯವರು ಸಂಧ್ಯಾಕಾಲದ ದೀಪವನ್ನು ಬೆಳಗಿದರು. ದೈವರಾತರು ತಡಮಾಡಲಿಲ್ಲ; "ಇಂದಿನ ಸಾಯಂಕಾಲದ ಊಟಕ್ಕೆ ಏನು ಅಡಿಗೆ ಮಾಡಲಿ ?" ಎಂದು ಗುರುಪತ್ನಿಯನ್ನು ಕೇಳಿದರು. 'ಅನ್ನ, ಸಾರು ಮಾತ್ರ ಸಾಕು' ಎಂದು ವಿಶಾಲಾಕ್ಷಿ ತಾಯಿಯವರು ಹೇಳಿದರು. ಅದರಂತೆ ದೈವರಾತರು ಅಡಿಗೆಯನ್ನು ಪ್ರಾರಂಭಮಾಡಿಯೇ ಬಿಟ್ಟರು. ಸಂತ ರಾಮದಾಸ ಸ್ವಾಮಿಗಳ ಸಹವಾಸದಲ್ಲಿ ತೀರ್ಥಾಟನೆ ಮಾಡುತ್ತಿದ್ದಾಗ ಇನ್ನೂ ಚಿಕ್ಕವಯಸ್ಸಿನಲ್ಲಿಯೇ ಪಾಕಶಾಲೆಯ ಪರಿಚಯ ದೈವರಾತರಿಗಾಗಿತ್ತು. ಮುಕ್ಕಾಲು ತಾಸಿನೊಳಗೆ ದೈವರಾತರು ಅಡಿಗೆಯನ್ನು ಮಾಡಿ ಗುರುದಂಪತಿಗಳನ್ನು ಊಟಕ್ಕೆ

---

೧೨. ಅಪ್ರಕಟಿತ ಆತ್ಮಚರಿತೆ; ಪುಟ ೩೭ – ವಾಸಿಷ್ಠ ವೈಭವಮ್, ಪುಟ ೭೯

ಆಮಂತ್ರಿಸಿದರು. 'ಇಷ್ಟು ಬೇಗ ಅಡಿಗೆಯಾಯಿತೆ' ಎಂದು ಉದ್ಗಾರವೆತ್ತುತ್ತ ವಿಶಾಲಾಕ್ಷಿ ತಾಯಿಯೂ, ಗಣಪತಿ ಮುನಿಗಳೂ ಊಟಕ್ಕೆ ಕುಳಿತುಕೊಂಡರು. ಗಣಪತಿ ಮುನಿಗಳು ಅಂಗೈಯನ್ನು ಮುಂದೆ ಮಾಡಿ ಸಾರನ್ನು ಹಿಡಿದುಕೊಂಡು ರುಚಿನೋಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಊಟವಾದ ಮೇಲೆ ತುಸು ಹೊತ್ತು ಮೂವರೂ ಮಾತನಾಡುತ್ತಾ ಇದ್ದು ಅನಂತರ ಮಲಗಿದರು. ಮರುದಿನ ಮುಂಜಾನೆ ನಸುಕಿನಲ್ಲಿಯೇ ದೈವರಾತರು ಎದ್ದು ತಪೋವನದ ಮುಂಬದಿಯ ಅಂಗಳವನ್ನು ಚೊಕ್ಕಟವಾಗಿ ಗುಡಿಸಿ ಸಾರಿಸಿ ರಂಗವಲ್ಲಿಯನ್ನು ಹಾಕಿ ಸ್ನಾನಕ್ಕೆ ತೆರಳಿದರು. ಅನಂತರ ಎದ್ದು ಬಂದ ವಿಶಾಲಾಕ್ಷಿ ತಾಯಿ ಅಂಗಳದಲ್ಲಿ ಹಾಕಿದ ಸುಂದರವಾದ ರಂಗವಲ್ಲಿಯನ್ನು ಕಂಡು ಆಶ್ಚರ್ಯಾನಂದಗಳಿಂದ ಪುಲಕಿತರಾಗಿ ಗಣಪತಿ ಮುನಿಗಳನ್ನು ಕರೆದು ತೋರಿಸಿದರು. ದೈವರಾತರು ಸ್ನಾನ ಮುಗಿಸಿ ಬಂದು ಯಾವ ಕೆಲಸವನ್ನು ಮಾಡಬೇಕೆಂದು ವಿಧೇಯರಾಗಿ ಗುರುದಂಪತಿಗಳನ್ನು ಕೇಳಿದರು. ಅದಕ್ಕೆ ವಿಶಾಲಾಕ್ಷಿ ತಾಯಿಯವರು ಮೊದಲು ಕಾಫಿ ಮಾಡಿಕೊಡೆಂದು, ಅನಂತರ ಮಧ್ಯಾಹ್ನದ ಊಟಕ್ಕೆ ಅನ್ನ, ಹುಳಿ, ಸಾರು, ಪಲ್ಲೆಗಳನ್ನು ಮಾಡುವದಕ್ಕೆ ಹೇಳಿದರು. ಮಧ್ಯಾಹ್ನದಲ್ಲಿ ಊಟ ಮಾಡುತ್ತಿರುವಾಗ ದಂಪತಿಗಳು ಅಡಿಗೆ ರುಚಿಯಾಗಿದೆಯೆಂದು ಹೇಳುತ್ತ ಊಟ ಮಾಡಿದರು. ಆದರೆ ಅವರಿಗೆ ಊಟ ಬಡಿಸಿದ ನಂತರ ಊಟ ಮಾಡಿದ ದೈವರಾತರಿಗೆ ಅಡಿಗೆ ರುಚಿಯಾಗಿ ಇಲ್ಲದಿರುವದು ಅರಿವಿಗೆ ಬಂದಿತು. ಅಡಿಗೆಗೆ ಬೇಕಾದ ಒಳ್ಳೆಯ ಮಸಾಲೆಯ ಸಾಂಬಾರ ಪದಾರ್ಥಗಳೂ, ಕಾಯಿಪಲ್ಲೆಗಳೂ ಅಲ್ಲಿ ಇರಲಿಲ್ಲ. ಕ್ರಮಕ್ರಮವಾಗಿ ದೈವರಾತರು ಅಡಿಗೆಗೆ ಬೇಕಾದ ಎಲ್ಲ ಸಾಮಗ್ರಿಗಳನ್ನು ಸಂಗ್ರಹ ಮಾಡಿಕೊಳ್ಳುತ್ತ ಗುರುದಂಪತಿಗಳಿಗೆ ರುಚಿಯಾದ ಅಡಿಗೆ ಮಾಡಿ ಬಡಿಸತೊಡಗಿದರು.

ತ್ರಿಕರಣಪೂರ್ವಕವಾಗಿ ದೈವರಾತರು ಗುರುಸೇವೆಯಲ್ಲಿ ತತ್ಪರರಾದರು. ಗಣಪತಿ ಮುನಿಗಳು ದೈವರಾತರ ಇದಕ್ಕೂ ಹಿಂದಿನ ವೇದಾಧ್ಯಯನ, ಯೋಗ ಪ್ರಕ್ರಿಯೆಗಳ ಅನುಭವಗಳೆಲ್ಲವನ್ನೂ ತಿಳಿದುಕೊಂಡು ಸೂಕ್ಷ್ಮದೃಷ್ಟಿಯಿಂದ ದೈವರಾತರ ಅಧ್ಯಾತ್ಮ ವಿಷಯಕವಾದ ಜಿಜ್ಞಾಸೆಯನ್ನೂ ಅವಲೋಕಿಸಿ ವೇದಾಂತ ಶಾಸ್ತ್ರಾಂತರ್ಗತವಾದ ಉಪಾಸನಾ ರಹಸ್ಯವನ್ನು ಬೋಧಿಸತೊಡಗಿದರು. ಪ್ರತಿದಿನ ಭೋಜನಾನಂತರ ಗಣಪತಿ ಮುನಿಗಳು ಮುಖ್ಯಪ್ರಾಣೋಪಾಸನ, ದಹರೋಪಾಸನ, ವೈಶ್ವಾನರ ವಿದ್ಯಾ ಮುಂತಾದವುಗಳನ್ನು ದೈವರಾತರ ಗ್ರಹಣ ಶಕ್ತಿಗನುಸಾರವಾಗಿ ರಾಜಯೋಗ

ಪದ್ಧತಿಯಿಂದ ಬೋಧಿಸುತ್ತಿದ್ದರು.[೧೩] ವಿಶಾಲಾಕ್ಷಿ ತಾಯಿಯವರು ಮಲಗಿ ನಿದ್ರಿಸಿದ ಮೇಲೆ ಗಣಪತಿ ಮುನಿಗಳು ದೈವರಾತರನ್ನು ಕರೆದುಕೊಂಡು ಸನಿಹವೇ ಇರುವ ಸಮುದ್ರ ತೀರದ ಕಲ್ಲುಬಂಡೆಯ ಮೇಲೆ ಹೋಗಿ ಕುಳಿತು ರಾಜಯೋಗವನ್ನು ಕುರಿತು ವಿವರಿಸುತ್ತಿದ್ದರು. ಆಚಾರ್ಯರು ಮತ್ತು ಅಂತೇವಾಸಿಯಾದ ದೈವರಾತರು ಒಮ್ಮೊಮ್ಮೆ ರಾತ್ರಿ ಎಷ್ಟಾಯಿತು ಎಂಬುದನ್ನು ಮರೆತು ಸಮುದ್ರ ತೀರದಲ್ಲಿ ಕಳೆಯುತ್ತ ಬೆಳಗಾಗುವದಕ್ಕೆ ಸ್ವಲ್ಪ ಮೊದಲು ಆಶ್ರಮಕ್ಕೆ ಮರಳುತ್ತಿದ್ದುದೂ ಇತ್ತು. ಶುನಃಶೇಫನಿಗೆ ವಿಶ್ವಾಮಿತ್ರನು ನೆರಳಾದರೆ ಗಣೇಶನಿಗೆ ವಾಸಿಷ್ಠ ಗಣಪತಿ ಮುನಿಗಳು ಬೆಳಕಾದರು. ತನಗೆ ತಾನೆ ಗುರುವನ್ನರಸುತ್ತ ಗುರುಸೇವೆಗೆ ಸರ್ವಸಮರ್ಪಣ ಭಾವದಿಂದ ಆತ್ಮ ನಿವೇದನೆ ಮಾಡಿಕೊಂಡು ತನ್ನೆಲ್ಲ 'ಏಷಣೆ'ಗಳನ್ನೂ ತ್ಯಜಿಸಿ ಗುರುವಿನಿಂದ ಹಿಂದೆ ಗುಲಾಮನಾಗಿ ಹೋಗುವದೊಂದೆ ಗಣೇಶನ ಗುರಿಯಾಗಿತ್ತು. ಆಧ್ಯಾತ್ಮಿಕ ವಿಷಯಕವಾದ ಜ್ಞಾನದಾಹವು ಗಣೇಶನನ್ನು ಗಣಪತಿ ಮುನಿಗಳ ಪರಿಚರ್ಯೆಗೆ ಪ್ರೇರೇಪಿಸಿತು. "...... ಅವನ ಜೀವನಕ್ಕೆ ಗಣಪತಿ ಮುನಿಗಳ ಸಮಾಗಮ ಯೋಗದಿಂದಾಗಿ ಅಲೌಕಿಕ ಆಧ್ಯಾತ್ಮಿಕ ಕಾಂತಿ ದೊರೆಯಿತು. ಹೀಗೆ ಗಣೇಶನು ದೈವರಾತನಾದನು."[೧೪]

ಗಣಪತಿ ಮುನಿಗಳು ಪ್ರತಿಪಕ್ಷದ ಪ್ರತಿಪದೆಯಂದು ಕೋಟಿತೀರ್ಥದ ಪಶ್ಚಿಮದಿಕ್ಕಿನಲ್ಲಿರುವ ಶ್ರೀಕೃಷ್ಣ ಮಂದಿರದಲ್ಲಿ[೧೫] ತತ್ತ್ವವಿಷಯಕವಾದ ವ್ಯಾಖ್ಯಾನವನ್ನು ಮಾಡುತ್ತಿದ್ದರು. ಮಧ್ಯಾಹ್ನಾನಂತರ ತುಸು ಇಳಿಹೊತ್ತಿನಲ್ಲಿ ನಡೆಯುತ್ತಿದ್ದ ಗಣಪತಿ ಮುನಿಗಳ ವ್ಯಾಖ್ಯಾನವನ್ನು ಕೇಳಲು ಎಲ್ಲ ವಯೋಮಾನದ ವಿದ್ಯಾರ್ಥಿಗಳು, ವಿದ್ವಾಂಸರು, ಊರ ಪ್ರಮುಖರು ಸೇರುತ್ತಿದ್ದರು. ಅದು ಕೇವಲ ಗಣಪತಿ ಮುನಿಗಳ ವ್ಯಾಖ್ಯಾನದ ವೇಳೆಯಾಗಿರದೇ ಎಲ್ಲರೂ ಸೃಜನಶೀಲರಾಗಿ ಶಾಸ್ತ್ರವಾಕ್ಯ ಪ್ರತಿಪಾದನೆಯಲ್ಲಿ ಭಾಗವಹಿಸುವ ವೇದಿಕೆಯಾಗಿತ್ತು. ಮುಂದಿನ ಪ್ರತಿಪದೆಯಲ್ಲಿ ಯಾವ ವಿಷಯಕವಾದ ಜಿಜ್ಞಾಸೆ ನಡೆಯುತ್ತದೆ ಎಂದು ಹಿಂದಿನ ಪ್ರತಿಪದೆಯ ವ್ಯಾಖ್ಯಾನದ ಕೊನೆಯಲ್ಲಿಯೇ

---

೧೩. ಅಪ್ರಕಟಿತ ಆತ್ಮಚರಿತೆ, ಪುಟ ೪೦
"ಮುನಿವರಗುರು ದೀಕ್ಷಾದರ್ಶಿತಾಃ ಸಾರವಿದ್ಯಾ
ಉಪನಿಷದುಪದಿಷ್ಟಾಃ ಪ್ರಾಣವೈಶ್ವಾನರಾದ್ಯಾಃ ।
ಅಸುಕರ ಹಠಯೋಗ ಪ್ರಕ್ರಿಯಾಪೂತಗಾತ್ರಂ
ತಮಿವ ಮೃಗಯಮಾಣಾಃ ಪ್ರಾಪ್ನುವನ್ನಶ್ರಮೇಣ ॥ 'ವಾಶಿಷ್ಠ ವೈಭವಮ್' – ಪುಟ ೭೦

೧೪. ಅಪ್ರಕಟಿತ ಆತ್ಮಚರಿತೆ, ಪುಟ ೩೮–೩೯

೧೫. ಕೃಷ್ಣಮಂದಿರಕ್ಕೆ ಕಷ್ಣಾಪುರ ಎಂದು ಕರೆಯುವ ವಾಡಿಕೆ ಗೋಕರ್ಣದಲ್ಲಿ ಇದೆಯಂತೆ, ವಾಸಿಷ್ಠ ವೈಭವ ಗ್ರಂಥದಲ್ಲಿ ಕೃಷ್ಣಾಪುರ ಎಂದೇ ಉಲ್ಲೇಖಿಸಲಾಗಿದೆ.

ತಿಳಿಸಲಾಗುತ್ತಿತ್ತು. ಎಲ್ಲ ವಿದ್ಯಾರ್ಥಿಗಳೂ, ವಿದ್ವಾಂಸರೂ ತಮ್ಮ ತಮ್ಮ ಶಕ್ತ್ಯಾನುಸಾರ ದತ್ತ ವಿಷಯವನ್ನು ಕುರಿತು ಅಭ್ಯಾಸಮಾಡಿ ಲೇಖನಗಳನ್ನು ಸಿದ್ಧಪಡಿಸಿಕೊಂಡು ಬಂದು ಓದುತ್ತಿದ್ದರು. ಚರ್ಚೆ ನಡೆಯುತ್ತಿತ್ತು. ಕೊನೆಯಲ್ಲಿ ಗಣಪತಿ ಮುನಿಗಳು ವ್ಯಾಖ್ಯಾನ ಮಾಡಿ ಉಪಸಂಹಾರ ಮಾಡುತ್ತಿದ್ದರು. ಒಮ್ಮೆ 'ಬ್ರಾಹ್ಮಣಾಚಾರ' ಎಂಬ ವಿಷಯವನ್ನು ಕುರಿತು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸತಕ್ಕದ್ದು ಎಂದು ನಿರ್ಣಯಿಸಲ್ಪಟ್ಟಿತು. ನಂತರದ ಪ್ರತಿಪದೆಯಲ್ಲಿ ಮತ್ತೆ ಎಲ್ಲರೂ ಸೇರಿದಾಗ ಅನೇಕ ವಿದ್ವಾಂಸರು, ವಿದ್ಯಾರ್ಥಿಗಳು ತಾವು ಬರೆದುಕೊಂಡು ಬಂದಿದ್ದ ಲೇಖನಗಳನ್ನು ಸಭೆಯಲ್ಲಿ ಮಂಡಿಸಿದರು. ದೈವರಾತರ ದೊಡ್ಡ ತಂದೆಯ ಮಗನಾದ ದೇವರು ಭಟ್ಟರೆಂಬವರು ಸ್ನಾನ, ಆಹ್ನಿಕ, ದೇವಪೂಜಾ, ಉಪಾಸನೆ ಇತ್ಯಾದಿ ನಿತ್ಯಕರ್ಮಗಳ ರೂಪದಲ್ಲಿರುವ 'ಬ್ರಾಹ್ಮಣಾಚಾರ'ವನ್ನು ಕುರಿತು ಪ್ರಸ್ತಾವಿಸಿದರು. ವೆಂಕಟರಮಣ ಪಂಡಿತರು ಉಪನಯನ, ವಿವಾಹಾದಿ ಷೋಡಶ ಸಂಸ್ಕಾರಗಳನ್ನು ಕುರಿತು ವಿಷಯವನ್ನು ಮಂಡಿಸಿದರು. ಎಲ್ಲರೂ ಮಾತಾಡಿ ಮುಗಿಸಿದ ಮೇಲೆ ದೈವರಾತರಿಗೆ ತಾವೂ ಕೂಡ 'ಬ್ರಾಹ್ಮಣಾಚಾರ' ವಿಷಯದ ಕುರಿತು ವ್ಯಾಖ್ಯಾನ ಮಾಡಬೇಕು ಎಂದು ತತ್ಕಾಲದಲ್ಲಿ ಉತ್ಸುಕತೆ ಮೂಡಿತು. ದೈವರಾತರೇನೂ ಯಾವುದೇ ಶಾಸ್ತ್ರದಲ್ಲಿ ಪ್ರಗಲ್ಭ ವಿದ್ವಾಂಸರೇನೂ ಆಗಿರಲಿಲ್ಲ. ಭಾಷಾಪಾಂಡಿತ್ಯವೂ ಅವರಿಗಿರಲಿಲ್ಲ. ಆದರೆ ಪ್ರಾಥಮಿಕವಾದ ಶಬ್ದಗಳ ಸ್ವರೂಪ, ಧಾತುಗಳ ಪರಿಚಯ ಇವು ಅವರಿಗಿದ್ದವು. ಉಪನಿಷತ್ತುಗಳು ಬಾಲ್ಯದಿಂದಲೇ ಪಾಠ ಮಾಡಲ್ಪಟ್ಟಿದ್ದರಿಂದ ಕಂಠಸ್ಥವಾಗಿದ್ದವು. ಉಳಿದ ಯಾವುದನ್ನೂ ಕಂಠಪಾಠ ಮಾಡುವ ಸ್ವಭಾವ ಅವರದ್ದಾಗಿರಲಿಲ್ಲ. ಏನಾದರೂ ವಿದ್ಯೆ ಪ್ರಾಪ್ತವಾಗುವುದಾದರೆ ಅದು ಗುರುಶುಶ್ರೂಷೆಯಿಂದ ಮತ್ತು ಗುರು ಅನುಗ್ರಹದಿಂದ ಮಾತ್ರ ಎಂದು ಅವರ ನಂಬಿಕೆಯಾಗಿತ್ತು. ಅವತ್ತಿನ ಗೋಷ್ಠಿಯಲ್ಲಿ ಮಾತ್ರ ಅವರು ಮಾಡಿದ 'ಬ್ರಾಹ್ಮಣಾಚಾರ' ಕುರಿತ ಹೊಸಬಗೆಯ, ಪಾರಂಪರಿಕವಾಗಿ ಮಾಡುವ ವಿವರಣೆಗೆ ಹೊರತಾದ ನವವಿಧದಲ್ಲಿ ಮಂಡಿಸಿದ ಮಾತು ಅಲ್ಲಿ ಸೇರಿದ್ದವರಲ್ಲಿ ವಿಚಾರದ ಸಂಚಲನವನ್ನೇ ಉಂಟುಮಾಡಿಬಿಟ್ಟಿತು. ಸಂಸ್ಕೃತ ವ್ಯಾಕರಣದಂತೆ 'ಬ್ರಾಹ್ಮಣಾಚಾರ' ಎಂಬ ಶಬ್ದವನ್ನು ಎರಡು ವಿಧವಾಗಿ ವಿಂಗಡಿಸಬಹುದು. 'ಬ್ರಾಹ್ಮಣಸ್ಯ ಆಚಾರಃ' (ಬ್ರಾಹ್ಮಣನ ಆಚಾರ) ಎಂದು ಒಂದು ವಿಧದಲ್ಲಿ ವಿಗ್ರಹಿಸಬಹುದು. ಮತ್ತು ಈ ಕ್ರಮವೇ ಸಾಮಾನ್ಯವಾಗಿ ಇಂತಹ ಶಬ್ದ ಪ್ರಯೋಗದಲ್ಲಿ ಎಲ್ಲರೂ ಒಪ್ಪುವ ಪ್ರಯೋಗವಾಗಿದ್ದು ಅಂದಿನ ಗೋಷ್ಠಿಯಲ್ಲಿ ಮಾತನಾಡಿದವರೆಲ್ಲ ಸಹಜವಾಗಿ ಒಪ್ಪಿತವಾಗುವ ಆ ಎಳೆಯನ್ನು ಹಿಡಿದುಕೊಂಡೇ, ಅಂದರೆ ಬ್ರಾಹ್ಮಣನು ಅವಶ್ಯವಾಗಿ ಪಾಲಿಸಬೇಕಾದ ಶಾಸ್ತ್ರ ವಿಹಿತವಾದ ಕರ್ಮಗಳನ್ನು,

ಆಚಾರ ಸಂಹಿತೆಯನ್ನೂ ಕುರಿತೇ ತಮ್ಮ ತಮ್ಮ ವಿಷಯಗಳನ್ನು ಮಂಡಿಸಿದ್ದರು. ಆದರೆ ದೈವರಾತರು ಇದಕ್ಕೆ ವ್ಯತಿರಿಕ್ತವಾಗಿ 'ಬ್ರಾಹ್ಮಣಾಯ ಆಚಾರಃ[೧೬] (ಬ್ರಾಹ್ಮಣನಿಗಾಗಿ–ಬ್ರಾಹ್ಮಣಪ್ರಾಪ್ತಿಯ ಸಲುವಾಗಿ) ಎಂದು ಇನ್ನೊಂದು ವಿಧವಾಗಿ ವಿಂಗಡಿಸಿಕೊಂಡು ಅದರ ಆಧಾರದ ಮೇಲೆ ತಮ್ಮ ವ್ಯಾಖ್ಯಾನವನ್ನು ಮಾಡಿದರು. ಬ್ರಾಹ್ಮಣ ಎಂದರೆ ವೇದಾಂತ ವೇದ್ಯವಾದ ಆ ಪರಬ್ರಹ್ಮ ವಸ್ತುವನ್ನು ತತ್ತ್ವತಃ ತಿಳಿದವನು. ಅಂತಹ ಬ್ರಹ್ಮವನ್ನು ತಿಳಿದವನಾಗುವದಕ್ಕಾಗಿ ಅನುಸರಿಸಬೇಕಾದ ಆಚಾರ, ಬ್ರಹ್ಮವನ್ನು ತಿಳಿಯುವದಕ್ಕೆ ಅನುಸರಿಸಬೇಕಾದ ಆಚಾರ ಅರ್ಥಾತ್ ಸಾಧನವೆಂದರೆ ತಪಸ್ಸು, ಶೂದ್ರಯೋನಿಯಲ್ಲಿ ಜನ್ಮ ತಾಳಿದವನೂ ತಪಸ್ಸಿಗೆ ಅಧಿಕಾರಿಯೇ ಆಗಿರುತ್ತಾನೆ. ಮತ್ತು ತಪೋರೂಪವಾದ ಸಾಧನದಿಂದ ಬ್ರಹ್ಮ ಪ್ರಾಪ್ತಿಗೂ ಅಧಿಕಾರಿಯಾಗಿದ್ದಾನೆ. ಅರ್ಥಾತ್ ಬ್ರಹ್ಮವನ್ನರಿತವನಾಗುವದಕ್ಕೆ ಅರ್ಹನೇ ಆಗುತ್ತಾನೆ. ಬ್ರಹ್ಮವನ್ನು ಅರಿತವನಾಗುವದು ಅಥವಾ ಬ್ರಾಹ್ಮಣನಾಗುವದು ಅದಕ್ಕೆ ಅನುಸರಿಸುವ ಸಾಧನ ಅಥವಾ ಆಚಾರ. 'ಬ್ರಾಹ್ಮಣಾಯ ಆಚಾರಃ' ವಿಶ್ವಾಮಿತ್ರನು ಕ್ಷತ್ರಿಯನಾಗಿದ್ದರೂ ತಪಸ್ಸಿನಿಂದ ಬ್ರಾಹ್ಮಣನಾದನು. ಇದು ಅಂದು ದೈವರಾತರು ಮಾಡಿದ 'ಬ್ರಾಹ್ಮಣಾಚಾರ' ವಿಷಯ ಪ್ರಸ್ತಾವನೆಯ ಸಾರಾಂಶ. ಇದಕ್ಕೆ ಉಪನಿಷದ್ವಾಕ್ಯಗಳ ಆಧಾರವನ್ನು ದೈವರಾತರು ಉದ್ಧರಿಸಿದ್ದರು.[೧೭]

ಅನಿರೀಕ್ಷಿತವಾಗಿ ಪ್ರಕಟವಾದ ದೈವರಾತರ ಪ್ರತಿಭೆಯನ್ನು ಕಂಡು ಗಣಪತಿ ಮುನಿಗಳು ಆಶ್ಚರ್ಯಚಕಿತರಾದರು. ಹೀಗೊಂದು ವ್ಯಾಖ್ಯಾನವನ್ನು ಈ ಯುವಕ ಮಾಡಿಯಾನೆಂಬ ಕಲ್ಪನೆಯೂ ಅವರಿಗಿರಲಿಲ್ಲ. ಅಲ್ಲಿ ಸೇರಿದ್ದ ಸಭಿಕರಲ್ಲಿಯೂ ಇದು ಗೊಂದಲವನ್ನುಂಟು ಮಾಡದೇ ಇರಲಿಲ್ಲ. ಸುಭದ್ರ ವೈಚಾರಿಕತೆಯ ಲೇಪದಿಂದ ಕೂಡಿದ ಶಾಸ್ತ್ರ ವಾಕ್ಯಗಳ ಆಧಾರದ

---

೧೬. 'ತಾದರ್ಥ್ಯೇ ಚತುರ್ಥೀ ವಾಚ್ಯಾ' ಎಂಬ ವಾರ್ತಿಕವನ್ನು ಆಧರಿಸಿ ಚತುರ್ಥಿ ವಿಭಕ್ತ್ಯಂತವಾಗಿ ವಿಂಗಡಿಸಲಾಗಿದೆ.

೧೭. ಈ ಘಟನೆಯು ಅ. ಆತ್ಮಚರಿತ್ರೆಯಲ್ಲಿ ವಿಸ್ತೃತವಾಗಿ ವಿವರಿಸಲ್ಪಟ್ಟಿದೆ. ಅವರು ಉದ್ಧರಿಸಿದ ಉಪನಿಷದ್ವಾಕ್ಯಗಳೆಂದರೆ

i. ತಪಸಾ ಬ್ರಹ್ಮ ವಿಜಿಜ್ಞಾಸಸ್ವ ತೈತ್ತಿರೀಯ ಉಪನಿಷತ್ತು

ii. ಋತಂ ತಪಃ ಸತ್ಯಂ ತಪಃ ಶ್ರುತಂ ತಪಃ ಶಾಂತಂ ತಪೋ ದಮಸ್ತಪಃ ಶಮಸ್ತಪೋ ದಾನಂ ತಪೋ ಯಜ್ಞಃ ತಪೋ ಭೂರ್ಭುವಸ್ಸುವರ್ಬ್ರಹ್ಮೈತದುಪಾಸ್ಸ್ವೈತತ್ತಪಃ ಮಹಾನಾರಾಯಣ

iii. ಬ್ರಹ್ಮ ದುರ್ಜ್ಞೇಯಮಪಿ ತತ್ತ್ವತಃ ಸತಾಂ ಭವತಿ ಸುಜ್ಞೇಯಾಂ ತತ್ ಪರಮಂ ತಪಾಃ

ಹೂರಣದಿಂದ ತುಂಬಿದ ಕಡುಬು ಅದಾಗಿತ್ತಾದರೂ ಅದು ಅವರ ಕಂಠದಲ್ಲಿ ಇಳಿಯುವದು ಮಾತ್ರ ದುಸ್ತರವಾಗಿತ್ತು. ಏಕೆಂದರೆ ಅದು ಸಂಪ್ರದಾಯದಿಂದ ಸ್ವಲ್ಪ ದೂರವೇ ಇತ್ತು. ಇದರಿಂದಾಗಿ ಆ ವಿದ್ವದ್ ಪರಿಷತ್ತಿನಲ್ಲಿ ಗುಸು-ಗುಸು ಮಾತು ಪ್ರಾರಂಭವಾಯಿತು. ನಾರಾಯಣ ಪಂಡಿತರೆಂಬವರು ದೊಡ್ಡದಾಗಿಯೇ "ಗಣಪತಿ ಮುನಿಗಳೇ ದೈವರಾತರಿಗೆ ಇದನ್ನು ಹೇಳಿಕೊಟ್ಟಿರಬೇಕು" ಎಂದು ಹೇಳಿದರು. ಗಣಪತಿ ಮುನಿಗಳು "ನಾನೇನೂ ಹೀಗೆಯೇ ಮಾತಾಡಬೇಕು ಎಂದು ಹೇಳಿಕೊಟ್ಟಿಲ್ಲ; ಅಲ್ಲದೇ ಇವತ್ತು ದೈವರಾತನು ಮಾತಾಡುತ್ತಾನೆ ಎಂದೇ ನನಗೆ ಮೊದಲು ತಿಳಿದಿರಲಿಲ್ಲ" ಎಂದು ಹೇಳಿದರು. ಕೊನೆಯದಾಗಿ ಮಾತನಾಡಿದ ಗಣಪತಿ ಮುನಿಗಳು ಅಲ್ಲಿ ಸೇರಿದವರಿಗೆ ಸಮಾಧಾನವಾಗುವ ಹಾಗೆ ಮಾತುಗಳನ್ನಾಡಿ ಸಭೆ ಮುಗಿದ ನಂತರ ತಪೋವನಕ್ಕೆ ತೆರಳಿದರು.[೧೮]

ಗಣಪತಿ ಮುನಿಗಳಿಗಿಂತ ಮೊದಲೇ ದೈವರಾತರು ತಪೋವನಕ್ಕೆ ಬಂದು ಸಂಜೆಯ ಅಡಿಗೆಯನ್ನು ತಯಾರಿಸಿ ಗಣಪತಿ ಮುನಿಗಳು ಆಶ್ರಮಕ್ಕೆ ಬಂದ ಕೂಡಲೇ ಬಡಿಸುತ್ತ ವಿಶಾಲಾಕ್ಷಿ ತಾಯಿಗೆ ಸಂಜೆ ಸಭೆಯಲ್ಲಿ ನಡೆದ ಸಂಗತಿಯೆಲ್ಲವನ್ನೂ ಹೇಳುತ್ತ, "ಸಭೆಯಲ್ಲಿ ನಾನು ಗುರುಗಳ ಮಾತನ್ನು ಖಂಡಿಸಬಾರದೆಂದು ಸುಮ್ಮನಾಗಿದ್ದೆನು. ಆದರೆ ಈಗ ನಿಮ್ಮ ಮಧ್ಯಸ್ಥಿಕೆಯಲ್ಲಿ ಪುನಃ ನನ್ನ ಮಾತನ್ನು ಸಮರ್ಥಿಸುತ್ತೇನೆ" ಎಂದರು. ಗಣಪತಿ ಮುನಿಗಳು ಅದಕ್ಕೆ "ನಿನ್ನ ಮಾತೇನೋ ಸರಿಯಾಗಿತ್ತು, ಸತ್ಯವಾಗಿತ್ತು; ಆದರೆ ಅಲ್ಲಿ ಅವರೆಲ್ಲರ ವಿರುದ್ಧ ಅದನ್ನು ಸಮರ್ಥಿಸುವದು ಉಚಿತವಲ್ಲವೆಂದು ಅವರಿಗೆ (ಸಭೆಯಲ್ಲಿದ್ದವರಿಗೆ) ಸಮಾಧಾನವಾಗುವಂತೆ ವ್ಯಾಖ್ಯಾನ ಮಾಡಬೇಕಾಯಿತು. ಹಾಗೊಮ್ಮೆ ನಾನು ಸಮರ್ಥಿಸುವದೇ ಆದರೆ ಅದರಿಂದ ದೊಡ್ಡ ಗೊಂದಲಮಯ ವಾತಾವರಣವೇ ಅಲ್ಲಿ ಸೃಷ್ಟಿಯಾಗುತ್ತಿತ್ತು. ಸತ್ಯವು ಯಾವಾಗಲೂ ಅಪ್ರಿಯವೂ, ನಿಷ್ಠುರವೂ ಆಗಿರುತ್ತದೆ. ಅದು ಯಾರಿಗೂ ಇಷ್ಟವಾಗುವುದಿಲ್ಲ. ಸತ್ಯದ ಹೊರಗೆ ಲೇಪವಾಗಿರುವ ಮಿಥ್ಯೆ, ಆಡಂಬರಗಳೇ ಎಲ್ಲರಿಗೂ ಪ್ರಿಯವಾಗುತ್ತದೆ" ಎಂದು ಹೇಳಿದರು. ನಂತರದ ದಿನಗಳಲ್ಲಿ 'ಕೋಪ', 'ಉಪಾಸನಾ' ಇತ್ಯಾದಿಗಳ ಬಗೆಗೂ ಕೃಷ್ಣಮಂದಿರದಲ್ಲಿ ಚರ್ಚೆ

೧೮. "ದೈವರಾತರು ಕೊಟ್ಟ ವಿಶ್ವಾಮಿತ್ರನ ಉದಾಹಣೆ ಸರಿಯಾದುದಲ್ಲ. ಏಕೆಂದರೆ ವಿಶ್ವಾಮಿತ್ರನು ಬ್ರಹ್ಮತೇಜಸ್ಸಿನಿಂದ ಅಭಿಮಂತ್ರಿತವಾದ ಚರುವಿನಿಂದ ಜನ್ಮಪಡೆದವನು" ಎಂದೆಲ್ಲಾ ಹೇಳಿದರು ಎಂದು ಅ. ಆತ್ಮಚರಿತ್ರೆಯಲ್ಲಿ ನಿರೂಪಿಸಲಾಗಿದೆ. ರಾಮಾಯಣದ ಬಾಲಕಾಂಡದಲ್ಲಿ ಬಂದ ವಿಶ್ವಾಮಿತ್ರವೃತ್ತಾಂತಲ್ಲಿ ಈ ಅಂಶ ಉಲ್ಲೇಖವಾಗಿಲ್ಲ.

ನಡೆಯಿತು. ಅವುಗಳಲ್ಲಿ ಕೆಲವು ಶಾಸ್ತ್ರ ಗೋಷ್ಠಿಗಳಲ್ಲಿ ದೈವರಾತರು ವಿಶಿಷ್ಟವಾದ ವಾದವನ್ನು ಮಂಡಿಸಿ ವಿಷಯಗಳ ಬೇರೆ ಬೇರೆ ಆಯಾಮಗಳ ದರ್ಶನ ಮಾಡಿಸಿದರು.

ಉಮಾಮಹೇಶ್ವರ ಮಂದಿರದ ಆವಾರದಲ್ಲಿ ಸ್ಥಾಪಿಸಿಕೊಂಡ ತಪೋವನದಲ್ಲಿ ನಾಲ್ಕಾರು ತಿಂಗಳುಗಳನ್ನು ಕಳೆದು ಗಣಪತಿ ಮುನಿಗಳ ಕುಟುಂಬ ದೈವರಾತರೊಂದಿಗೆ ಮತ್ತೆ ಗೋಕರ್ಣಕ್ಕೆ ಬಂದು ಇರತೊಡಗಿತು. ಸಣ್ಣ ಬೆಲೆ ಎಂದು ಗೋಕರ್ಣದಲ್ಲಿ ಗುರುತಿಸುವ ಸಮುದ್ರತೀರದ ಒಂದು ಭಾಗದಲ್ಲಿರುವ ಯಜ್ಞಶಾಲೆಯ ಸಮೀಪ ಒಂದು ಕುಟೀರವನ್ನು ಕಟ್ಟಿಕೊಂಡು ಗಣಪತಿ ಮುನಿಗಳು ತಮ್ಮ ಪರಿವಾರದೊಂದಿಗೆ ಅಲ್ಲಿ ಇರತೊಡಗಿದರು. ಆಗ ಸಂಸ್ಕೃತ ವಿದ್ಯಾಪೀಠದಲ್ಲಿ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳು ಬೆಳಿಗ್ಗೆ, ಮಧ್ಯಾಹ್ನ ಎರಡೂ ಹೊತ್ತಿನಲ್ಲಿಯೂ ಅಲ್ಲಿಗೆ ಬಂದು ಕಾವ್ಯ, ನಾಟಕ, ಅಲಂಕಾರಶಾಸ್ತ್ರ, ಜ್ಯೋತಿಷ ಮತ್ತು ವೇದಭಾಷ್ಯಗಳನ್ನು ಗಣಪತಿ ಮುನಿಗಳಿಂದ ಕಲಿಯುತ್ತಿದ್ದರು. ಅದೇ ವೆಂಕಟರಮಣ ಪಂಡಿತರು ಮತ್ತು ವೆಂಕಟರಮಣ ಶಾಸ್ತ್ರಿ ಹೊಸ್ಮನೆ ಮೊದಲಾದವರು ಗಣಪತಿ ಮುನಿಗಳಲ್ಲಿ ಬಂದು ಜ್ಯೋತಿಷ್ಯ ಶಾಸ್ತ್ರವನ್ನು ಆಳವಾಗಿ ಅಭ್ಯಾಸ ಮಾಡಲು ತೊಡಗಿದರು. ಪರಾಶರ ಸಂಹಿತೆ ಅತಿವಿಸ್ತಾರವಾದುದರಿಂದಲೂ ಮತ ಭೇದಗಳ ಪ್ರಸ್ತಾಪ ಆ ಗ್ರಂಥದಲ್ಲಿ ವಿದ್ಯಾರ್ಥಿಗಳಿಗೆ ಆಯಾಸ ಮಾಡುತ್ತಿದ್ದುದರಿಂದಲೂ ಗಣಪತಿ ಮುನಿಗಳು 'ನಿರ್ಣಯ ಸಂಗ್ರಹ' ಎಂಬ ಎಂಬತ್ತೆರಡು (೮೨) ಶ್ಲೋಕಗಳಿರುವ ನೂತನ ಗ್ರಂಥವನ್ನೇ ರಚಿಸಿ ವಿದ್ವಾಂಸರಿಗೂ, ವಿದ್ಯಾರ್ಥಿಗಳಿಗೂ ಉಪಕಾರವನ್ನೇ ಮಾಡಿದರು.[೧೯] ದೈವರಾತರು ಸದಾ ನೆರಳಿನಂತೆ ಗಣಪತಿ ಮುನಿಗಳನ್ನು ಅನುಸರಿಸಿಯೇ ಇರುತ್ತಿದ್ದರಿಂದ ಗೋಕರ್ಣದಲ್ಲಿನ ಗಣಪತಿ ಮುನಿಗಳ ವಾಸ್ತವ್ಯದಲ್ಲಿ ಪಡೆದ ವಿದ್ಯಾ ಸಂಸ್ಕಾರ ಅಮೂಲ್ಯವಾದದ್ದಾಗಿತ್ತು. ಪ್ರತ್ಯಕ್ಷವಾಗಿ ದೈವರಾತರಿಗೆ ಉಪಾಸನಾದಿಗಳನ್ನು ಉಪದೇಶ ಮಾಡಿದ್ದಲ್ಲದೇ ತಮ್ಮ ಸಹವಾಸದಲ್ಲಿ ಸದಾ ಇರುತ್ತಿದ್ದ ದೈವರಾತರಿಗೆ ಜ್ಞಾನಸುಧೆಯನ್ನೇ ಉಣಬಡಿಸಿ

೧೯. ಅ. ಆತ್ಮಚರಿತ್ರೆಯಲ್ಲಿ 'ಲಘುಪಾರಾಶರಿ' ಎಂದು ಪ್ರಸ್ತಾಪಮಾಡಲಾಗಿದ. ವಾಸಿಷ್ಠ ವೈಭವದಲ್ಲಿ ಪರಾಶರ ಸಂಹಿತೆ ಎಂದು ಹೇಳಲಾಗಿದೆ. ಪೂರ್ವಸೂರಿಗಳ ಮತವನ್ನು ಒಂದು ಕಡೆಯಲ್ಲಿ ಸಂಗ್ರಹವಾಗಿ ಸಮಗ್ರವಾಗಿ ನಿರೂಪಿಸುವ ಹೋರಾನಿರ್ಣಯ ಸಂಗ್ರಹವನ್ನು ಇಲ್ಲಿಯೇ (ಗೋಕರ್ಣದಲ್ಲಿ) ಸದ್ಯವೇ ರಚಿಸಿದರು ಎಂದು ವಾಸಿಷ್ಠ ವೈಭವದಲ್ಲಿ ವರ್ಣಿಸಲಾಗಿದೆ.
ಅತ್ರೈವಾರಚಯತ್ ಸೋಽಪಿ ಹೋರಾನಿರ್ಣಯ ಸಂಗ್ರಹಮ್ ।
ಪ್ರಾಚಾಮಾಚಾರ್ಯ ವರ್ಯಾಣಾಮಾಹೃತ್ಯ ಮತಮೇಕತಃ ॥
ವಾಸಿಷ್ಠ ವೈಭವಮ್ – ಪುಟ ೬೮, ಶ್ಲೋಕ ೧೭೭

ಅವನು ಮಾಡುತ್ತಿದ್ದ ಸರ್ವವಿಧವಾದ ಗುರುಶುಶ್ರೂಷೆಗೆ ಸಮಸಮವಾಗಿಯೇ ವಿದ್ಯಾ ಪ್ರದಾನವನ್ನು ಮಾಡುತ್ತಿದ್ದರು.

ಗೋಕರ್ಣವಾಸದ ಮಧ್ಯದಲ್ಲಿ ಒಮ್ಮೆ ವಾಸಿಷ್ಠ ಗಣಪತಿ ಮುನಿಗಳು ತಮ್ಮ ಜನ್ಮ ಸ್ಥಾನಕ್ಕೂ ತೆರಳುವಂತಾಯಿತು. ಅವರ ತಂದೆಯವರಾದ ನರಸಿಂಹ ಶಾಸ್ತ್ರಿಗಳು ತೀವ್ರ ಅಸ್ವಸ್ಥಗೊಂಡಿದ್ದಾರೆಂದು ತಿಳಿದು ತಮ್ಮ ಊರಿಗೆ ತೆರಳಿ ತಂದೆಯು ಮರಣ ಹೊಂದಿದ್ದರಿಂದ ಅವರ ಔರ್ಧ್ವ ದೈಹಿಕ ಸಂಸ್ಕಾರಗಳನ್ನು ಮುಗಿಸಿ ತಿರುಗಿ ಗೋಕರ್ಣಕ್ಕೆ ಬಂದರು.

ಅವರು ತಿರುಗಿ ಬಂದ ಸ್ವಲ್ಪವೇ ದಿನಗಳಲ್ಲಿ ಉಪ್ಪುಂದ ಉಪಾಧ್ಯಾಯರೆಂಬ ಯಾಜ್ಞಿಕರಿಂದ 'ಜ್ಯೋತಿಷ್ಟೋಮ' ಯಾಗವು ಗೋಕರ್ಣದಲ್ಲಿ ನಡೆಯಿತು. ಯಾಗ ನಡೆದಷ್ಟೂ ದಿನಗಳು ಗಣಪತಿ ಮುನಿಗಳ ಅಧ್ಯಕ್ಷತೆಯಲ್ಲಿ ವೈದಿಕ ಪರಿಷತ್ತು ಸಂಘಟಿಸಿದ್ದ ಸಭೆಯಲ್ಲಿ ವೈದಿಕ ತತ್ತ್ವಗಳನ್ನು ಬಹು ಸುಂದವಾಗಿ ಗಣಪತಿ ಮುನಿಗಳು ವಿವರಿಸುತ್ತಿದ್ದರು.

ವಾಸಿಷ್ಠ ಗಣಪತಿ ಮುನಿಗಳ ವಾಸ್ತವ್ಯ ಗೋಕರ್ಣದ ನಾಗಬೀದಿಯಲ್ಲಿರುವ 'ಸರಸೂ ಮನೆ' ಎಂಬಲ್ಲಿಗೆ ಮತ್ತೊಮ್ಮೆ ಸ್ಥಳಾಂತರಗೊಂಡಿತು. ಅಲ್ಲಿ ಸುಮಾರು ಆರು ತಿಂಗಳು ಗಣಪತಿ ಮುನಿಗಳು ವಾಸವಾಗಿದ್ದರು. ಆ ಸಮಯದಲ್ಲಿ ಗಣಪತಿ ಮುನಿಗಳು ಎರಡೂ ಹೊತ್ತು ಬೆಳಿಗ್ಗೆ ಮತ್ತು ಮಧ್ಯಾಹ್ನ ವೇದವಾಙ್ಮಯ ಸಾರ ಮತ್ತು ಸಾಯಣ ಭಾಷ್ಯಗಳನ್ನು ಕುರಿತು ಪ್ರವಚನ ಮಾಡುತ್ತಿದ್ದರು.

ಆಗ ಪ್ರತಿದಿನ ಸಾಯಂಕಾಲ ರಥ ಬೀದಿಯ ಮಧ್ಯದಲ್ಲಿರುವ ನಾರಾಯಣ ಪಂಡಿತರೆಂಬವರ ಮನೆಯ ವಾಳಿಗೆಯ ಮೇಲೆ ಪುರಾಣಗಳಲ್ಲಿಯ ಉಪಾಖ್ಯಾನಗಳನ್ನಾಧರಿಸಿ ಪ್ರವಚನಗಳನ್ನು ಮಾಡುತ್ತಿದ್ದರು. ಸದಾ ಗಣಪತಿ ಮುನಿಗಳ ಹಿಂದೆಯೇ ಇರುತ್ತಿದ್ದ ದೈವರಾತರು ಪುರಾಣ ಪ್ರವಚನಗಳಿಗೆ ಮಾತ್ರ ಉಪಸ್ಥಿತರಿರುತ್ತಿರಲಿಲ್ಲ. ಅದಕ್ಕೆ ಗಣಪತಿ ಮುನಿಗಳು ಕೇಳಲಾಗಿ "ಪುರಾಣದ ಕಥೆಗಳನ್ನು ಕೇಳಲು ನಾನು ಬರುವುದಿಲ್ಲ. ಹಲವು ವಿರೋಧಗಳಿಂದ ಅವು ಕೂಡಿರುತ್ತವೆ. ಪ್ರತಿಯೊಂದು ಪುರಾಣದಲ್ಲಿಯೂ ಒಂದೊಂದು ದೇವತೆಯೇ ಶ್ರೇಷ್ಠವೆಂದು ಪ್ರತಿಪಾದಿತವಾಗಿರುವುದು ಉಳಿದ ದೇವಾನುದೇವತೆಗಳೆಲ್ಲ ಉಕ್ತ ಶ್ರೇಷ್ಠ ದೇವತೆಯ ದಾಸಾನುದಾಸರಂತೆ ಚಿತ್ರಿತವಾಗಿರುವದು ಕಂಡು ಬರುತ್ತದೆ. ಉದಾಹರಣೆಗೆ ಭಾಗವತದಲ್ಲಿ ಹರಿಯೇ ಸರ್ವೋತ್ತಮನೆಂದೂ ಶಿವ ಪುರಾಣಗಳಲ್ಲಿ ಶಿವನೇ ಶ್ರೇಷ್ಠನೆಂದೂ; ದೇವಿಭಾಗವತದಲ್ಲಿ ದೇವಿಯೇ ಶ್ರೇಷ್ಠಳೆಂದೂ ಪ್ರತಿಪಾದಿತವಾಗಿದೆ. ಇದರಿಂದ ಶೈವ, ವೈಷ್ಣವ ಮುಂತಾದ ಮತಗಳು ಪ್ರಾದುರ್ಭವಿಸಿ ಪ್ರಾಬಲ್ಯವನ್ನು ಪಡೆದು

ಇತಿಹಾಸದುದ್ದಕ್ಕೂ ಸಾಕಷ್ಟು ಅನಾಹುತಗಳು ನಡೆದಿವೆ. ಇದರಿಂದ ತಮ್ಮ ತಮ್ಮ ಆರಾಧ್ಯ ದೇವರೇ ಶ್ರೇಷ್ಠ ಎಂದು ಸಮಾಜ ವಿಘಟಿತವಾಗಿದೆ. ಅಲ್ಲದೇ ಪುರಾಣದಲ್ಲಿಯ ಕೆಲವು ಕಾಮಪ್ರಚೋದಕ, ರಾಗರಂಜಕ ಕಥೆಗಳಿಂದಲೂ ಜನರು ಪುರಾಣಗಳ ಕಡೆಗೆ ಆಕರ್ಷಿತರಾಗಲು ಕಾರಣವಾಗಿವೆ. ಈ ಎಲ್ಲ ಕಥೆಗಳಿಗಿಂತಲೂ ಹೆಚ್ಚಾಗಿ ವಿಸ್ತಾರವಾದ ಪುರಾಣ ಸಾಹಿತ್ಯದ ಪ್ರಾಚುರ್ಯದಿಂದಾಗಿ ಸಕಲ ವಿದ್ಯೆಗಳಿಗೂ ಆಕರವಾದ ಜ್ಞಾನ, ವಿಜ್ಞಾನಸಂಪನ್ನವಾದ ಪ್ರಪಂಚದ, ಪರಮಾತ್ಮನ ಇನ್ನೊಂದು ಮೂರ್ತವಾದ ಪ್ರತಿರೂಪವಾಗಿರುವ ವೇದದ ಮಹತ್ತ್ವವರಿಯದೇ ವೇದವಾಙ್ಮಯದಿಂದ ಜನ ದೂರ ದೂರ ಬರುವಂತಾದದ್ದು. ಆದ್ದರಿಂದ ನಿತ್ಯ ಸತ್ಯವಾದ ವೇದವನ್ನು ಬಿಟ್ಟು ಪುರಾಣ ಕೇಳಲು ನಾನು ಇಚ್ಛಿಸುವದಿಲ್ಲ" ಎಂದು ದೈವರಾತರು ಉತ್ತರಿಸಿದರು. ಗಣಪತಿ ಮುನಿಗಳು ಪುರಾಣ ಕಥಾ ವ್ಯಾಖ್ಯಾನವನ್ನು ನಿಲ್ಲಿಸಿ ವೇದ ಕಥಾ ವ್ಯಾಖ್ಯಾನವನ್ನು ಪ್ರಾರಂಭಿಸಿದರು.[೨೦]

ಒಂದು ದಿನ ಮಹಾಬಲೇಶ್ವರ ದೇವಾಲಯದ ಪಶ್ಚಿಮ ಭಾಗದ ಚಂದ್ರಶಾಲೆಯ ಮಹಡಿಯ ಮೇಲೆ ಒಂದು ಸಭೆಯು ನಡೆಯಿತು. ಆ ಸಭೆಯಲ್ಲಿ ಮೊದಲೇ ನಿರ್ಣಯಿಸಲ್ಪಟ್ಟ 'ಶಿವೋತ್ಕರ್ಷ' ಎಂಬ ವಿಷಯದ ಮೇಲೆ ಆಂಧ್ರ ಪ್ರದೇಶದ ಆಗಿನ ಕಾಲದ ಸುಪ್ರಸಿದ್ಧ ವಿದ್ವಾಂಸರಲ್ಲೊಬ್ಬರಾದ ಅನಂತ ಶಾಸ್ತ್ರಿಗಳೆಂಬವರು ಕನ್ನಡದಲ್ಲಿ ಉತ್ತಮವಾಗಿ ಉಪನ್ಯಾಸ ನೀಡಿದರು. ಅನಂತರ ಗಣಪತಿ ಮುನಿಗಳು ಸಂಸ್ಕೃತದಲ್ಲಿ ವೇದೋಪನಿಷತ್ತುಗಳು, ಇತಿಹಾಸ ಪುರಾಣಗಳು ಮೊದಲಾದ ದಿವ್ಯವಾದ ಸಾಹಿತ್ಯವನ್ನಾಧರಿಸಿ ಮಾಡಿದ ವ್ಯಾಖ್ಯಾನ ಅಲ್ಲಿ ನೆರೆದವರ ಚಿತ್ತದಲ್ಲಿ ಗಣಪತಿ ಮುನಿಗಳಿಗೆ ಶಾಶ್ವತವಾದ ಸ್ಥಾನವನ್ನು ಕಲ್ಪಿಸಿತು.

ಗಣಪತಿ ಮುನಿಗಳು ಗೋಕರ್ಣವಾಸವನ್ನು ಮುಗಿಸಿ ಸಿಕಂದರಾಬಾದದ ಕಡೆಗೆ ಪ್ರಯಾಣ ಬೆಳೆಸಿದರು. ಗಣೇಶನನ್ನು ದೈವರಾತ ಎಂದು ಸಂಬೋಧಿಸುತ್ತ ಅವನ ಅಂತರಂಗದ ನೆಲವನ್ನು ಸದಾಚಾರವೆಂಬ ನೇಗಿಲಿನಿಂದ ಉತ್ತು ಹದ ಮಾಡಿ ಅಧ್ಯಾತ್ಮ ವಿದ್ಯೆಯ ಬೀಜಾರೋಪಣ ಮಾಡಿ ಹೊರಟ ಗಣಪತಿ ಮುನಿಗಳನ್ನು ಅನುಸರಿಸಿ ದೈವರಾತರು ಸ್ವಲ್ಪ ದೂರ ನಡೆದ ಮೇಲೆ ಟೇಂಬೇ ಮಹಾರಾಜರನ್ನು ಸೇರುವದಕ್ಕಾಗಿ ಅವರಿಂದ ಅಗಲಿದರು.

---

೨೦. ಅಪ್ರಕಟಿತ ಆತ್ಮಚರಿತೆ; ಪುಟ ೪೬-೪೭

೭. ಯೋಗೈಶ್ವರ್ಯದ ಆಮೋದ

(೧೯೧೩ – ೧೯೧೪)

ಮಂತ್ರೋ ಲಯೋಹಠೋ ರಾಜಯೋಗಾಂತಭೂರ್ಮಿಕಾಃ ಕ್ರಮಾತ್
ಏಕ ಏವ ಚತುರ್ಧಾಯಂ ಮಹಾಯೋಗೋಽಭಿಧೀಯತೇ ॥

(ಯೋಗಶಿಖೋಪನಿಷದ್)

ದೈವರಾತರು ಗಣಪತಿ ಮುನಿಗಳನ್ನು ಅನುಸರಿಸಿ ಕುಮಟಾವನ್ನು ತಲುಪಿ ಅವರ ಸಂಗಡವೇ ಹಡಗಿನಲ್ಲಿ ಪ್ರಯಾಣ ಮಾಡಿ ಮುಂಬಯಿಯನ್ನು ತಲುಪಿದರು. ಮುಂಬಯಿಯಿಂದ ಗಣಪತಿ ಮುನಿಗಳು ಮತ್ತು ಅವರ ಪತ್ನೀ ಪುತ್ರರು ಸಿಕಂದರಾಬಾದಿಗೆ ತೆರಳಿದರು. ದೈವರಾತರು ಟೇಂಬೇ ಮಹಾರಾಜರನ್ನು ಪುನಃ ಸಂದರ್ಶಿಸುವದಕ್ಕಾಗಿ ಅವರ ನೆಲೆಯನ್ನು ಅನ್ವೇಷಿಸುತ್ತ ಉಜ್ಜಯಿನಿಗೆ ಹೋಗಿ ರಾಮಮಂದಿರವೊಂದರಲ್ಲಿ ಟೇಂಬೇ ಮಹಾರಾಜರ ಶಿಷ್ಯರಾದ ಮಾರ್ಕಂಡೇಯ ಎಂಬವರನ್ನು ಕಂಡು ಟೇಂಬೇ ಮಹಾರಾಜರ ಕುರಿತಾದ ಮಾಹಿತಿಯನ್ನು ಕೇಳಿ ತಿಳಿದುಕೊಂಡರು. ಟೇಂಬೇ ಮಹಾರಾಜರು ಬಡೋದೆಯ ಸಮೀಪ ಗರುಡೇಶ್ವರ ಎಂಬ ನರ್ಮದಾ ನದೀ ತೀರದ ಪುಣ್ಯಕ್ಷೇತ್ರದಲ್ಲಿದ್ದಾರೆಂದು ತಿಳಿದು ದೈವರಾತರು ಗರುಡೇಶ್ವರಕ್ಕೆ ಹೋದರು.

ದೈವರಾತರು ಗಣಪತಿ ಮುನಿಗಳೊಂದಿಗೆ ಗೋಕರ್ಣದಲ್ಲಿರುವಾಗಲೇ ದೈವರಾತರು ಯೋಗ ಪ್ರಕ್ರಿಯೆಗಳ ಪ್ರಾಥಮಿಕ ಅಭ್ಯಾಸಗಳನ್ನು ಹೇಳಿಕೊಟ್ಟಿದ್ದ ಬಲವಂತರಾವ್ ಭಾಗವತ್ ಅವರು ಗೋಕರ್ಣವನ್ನು ಬಿಟ್ಟು ಹೋಗಿ ಬ್ರಹ್ಮಾನಂದರೆಂಬ ಗುರುಗಳಿಂದ ಸಂನ್ಯಾಸಾಶ್ರಮವನ್ನು ಸ್ವೀಕಾರಮಾಡಿದ್ದರು. ಅವರ ಸಂನ್ಯಾಸಾಶ್ರಮದ ಯೋಗಪಟ್ಟದ ಹೆಸರು 'ಪ್ರದ್ಯುಮ್ನಾನಂದ' ಎಂದು

ಇಡಲಾಗಿತ್ತು. 'ಪ್ರದ್ಯುಮ್ನಾನಂದರು' ಮತ್ತು ಅವರ ಗುರುಗಳಾದ ಬ್ರಹ್ಮಾನಂದರಿಬ್ಬರೂ ಗರುಡೇಶ್ವರದಲ್ಲಿಯೇ ಇದ್ದರು.

ದೈವರಾತರು ಗರುಡೇಶ್ವರಕ್ಕೆ ಹೋಗಿ ಅಲ್ಲಿ ಕುಟೀರವೊಂದರಲ್ಲಿ ಇದ್ದ ಟೇಂಬೇ ಮಹಾರಾಜರನ್ನು ಕಂಡು ಅವರ ಪಾದಗಳಲ್ಲಿ ವಂದಿಸಿಕೊಂಡರು. ಟೇಂಬೇ ಮಹಾರಾಜರೇ 'ಪ್ರದ್ಯುಮ್ನಾನಂದರು' ಮತ್ತು ಅವರ ಗುರುಗಳು ಸನಿಹದಲ್ಲಿರುವ ಇನ್ನೊಂದು ಪರ್ಣಕುಟಿಯಲ್ಲಿದ್ದಾರೆಂದು ದೈವರಾತರಿಗೆ ತಿಳಿಸಿ ಅವರನ್ನು ಕಾಣುವಂತೆ ಆದೇಶಿಸಿದರು. ದೈವರಾತರು ಅದರಂತೆ 'ಪ್ರದ್ಯುಮ್ನಾನಂದರನ್ನೂ ಅವರ ಗುರು ಬ್ರಹ್ಮಾನಂದರನ್ನೂ ಸಂದರ್ಶಿಸಿ ಅವರ ಅನುಮತಿ ಪಡೆದು ಅವರ ಪರ್ಣಕುಟಿಯಲ್ಲಿ ಇರತೊಡಗಿದರು.

ಟೇಂಬೇ ಮಹಾರಾಜರು ಪ್ರತಿದಿನ ನಸುಕಿನಲ್ಲಿಯೇ ಗರುಡೇಶ್ವರದಿಂದ ಇನ್ನೂ ತಗ್ಗಿನ ಪ್ರದೇಶದಲ್ಲಿರುವ ನಾರದೇಶ್ವರಕ್ಕೆ ಹೋಗಿ ಅಲ್ಲಿ ಹರಿಯುತ್ತಿರುವ ನರ್ಮದೆಯಲ್ಲಿ ಸ್ನಾನಾಹ್ನಿಕಗಳನ್ನು ಮುಗಿಸಿ ನಾರದೇಶ್ವರದಲ್ಲಿ ಎಂಟು ಗಂಟೆಯಿಂದ ಹತ್ತು ಗಂಟೆಯ ವರೆಗೆ ಉಪನಿಷದ್ ಭಾಷ್ಯದ ಮೇಲೆ ವ್ಯಾಖ್ಯಾನ ಮಾಡುತ್ತಿದ್ದರು. ಗರುಡೇಶ್ವರದ ಟೇಂಬೇ ಮಹಾರಾಜರ ಶಿಷ್ಯರ ಮತ್ತು ಅನುಯಾಯಿಗಳ ಸಂಖ್ಯೆ ನೂರರಿಂದ ನೂರೈವತ್ತು. ಆದರೆ ಪ್ರತಿನಿತ್ಯ ನಾರದೇಶ್ವರಕ್ಕೆ ಟೇಂಬೇ ಮಹಾರಾಜರ ವ್ಯಾಖ್ಯಾನ ಕೇಳಲು ಬಂದ ನಂತರ ಗರುಡೇಶ್ವರಕ್ಕೂ ಬಂದು ಸಂಜೆಯ ತನಕ ಇದ್ದು ಹೋಗುತ್ತಿದ್ದರು. ಹತ್ತು ಗಂಟೆಯ ವರೆಗೆ ವ್ಯಾಖ್ಯಾನ ಮಾಡಿ ಗರುಡೇಶ್ವರಕ್ಕೆ ಬಂದ ಕೂಡಲೇ ಟೇಂಬೇ ಮಹಾರಾಜರು ದೈವರಾತರಿಗೆ ಪ್ರತಿದಿನವೂ ಎಷ್ಟು ಸಂಖ್ಯೆಯಲ್ಲಿ ಶ್ರೋತೃವರ್ಗ ಇತ್ತು ಎಂಬುದನ್ನು ಹೇಳುತ್ತಿದ್ದರು. ಗರುಡೇಶ್ವರದಲ್ಲಿ ವಿವಿಧ ಪರ್ಣಕುಟೀರಗಳಲ್ಲಿ ಇರುವವರಿಗೂ ಮತ್ತು ಸಂದರ್ಶಕರಾಗಿ ಬರುವ ಭಕ್ತಾದಿಗಳಿಗೂ ಸೇರಿಸಿ ಮಧ್ಯಾಹ್ನದ ಭೋಜನದ ಏರ್ಪಾಟು ದೈವರಾತರದ್ದೆ ಆಗಿತ್ತು. ದೈವರಾತರು ಗರುಡೇಶ್ವರಕ್ಕೆ ಹೋದ ದಿನದಿಂದಲೇ ಈ ಹೊಣೆಗಾರಿಕೆ ದೈವರಾತರ ಮೇಲೆ ಬಂದಿತ್ತು. ಒಂದು ದಿನ ಇನ್ನೂರು, ಒಂದು ದಿನ ಮುನ್ನೂರು ಹೀಗೆ ಭಕ್ತಾದಿಗಳ ಸಂಖ್ಯೆ ಇರುತ್ತಿತ್ತು. ಅಪರೂಪಕ್ಕೊಮ್ಮೆ ವಿಶೇಷ ಪರ್ವದ ದಿನಗಳಲ್ಲಿ ಈ ಸಂಖ್ಯೆ ಸಾವಿರದ ವರೆಗೂ ಮುಟ್ಟುತ್ತಿತ್ತು. ಹದಿನೈದು–ಹದಿನಾರು ಲೀಟರ್ ಹಿಡಿಯುವ ಎಣ್ಣೆಯ ಡಬ್ಬವನ್ನೇ ಅಳತೆಯ ಪಾತ್ರೆಯನ್ನಾಗಿ ಮಾಡಿಕೊಂಡು ದೈವರಾತರು ಜನರ ಸಂಖ್ಯೆಗೆ ಸರಿಯಾಗಿಯೇ ದೊಡ್ಡ ಪ್ರಮಾಣದಲ್ಲಿ ಅಡಿಗೆಯನ್ನು ಮಾಡುತ್ತಿದ್ದರು. ಬೇರೆ ಕಡೆಗಳಲ್ಲಿ ಸಕ್ಕರೆಯಿಂದ ಮಾಡಲಾಗುವ ಖಾದ್ಯಗಳಿಗೂ ಇಲ್ಲಿ ಬೆಲ್ಲವನ್ನು

ಬಳಸಲಾಗುತ್ತಿತ್ತು. ಧವಸ, ಧಾನ್ಯ ಹಾಗೂ ಇತರ ಸಾಮಗ್ರಿಗಳು ಎಲ್ಲಿಂದ ಬರುತ್ತಿದ್ದವು. ಅಷ್ಟು ದೊಡ್ಡ ಪ್ರಮಾಣದಲ್ಲಿ ಸಮಾರಾಧನೆ ಹೇಗೆ ನಡೆಯುತ್ತಿತ್ತು; ಅದೂ ಆ ದೂರದ ನದೀತೀರದ ಕ್ಷೇತ್ರದಲ್ಲಿ ಎಂದು ಊಹಿಸುವದಕ್ಕೂ ಆಗದ ರೀತಿಯಲ್ಲಿ ದಾನಿಗಳಿಂದ ಎಲ್ಲ ಸಾಮಗ್ರಿಗಳ ಸಂಗ್ರಹ ಹರಿದು ಬರುತ್ತಿತ್ತು. ಮುಂಬಯಿಯ ಎರಡು ಮೂರು ಜನ, ಪರ್ಸುಭಾಯಿ, ಶೇಣವಿ, ಸಮನೀಸ್ ಮುಂತಾದವರು ಟೇಂಬೇ ಮಹಾರಾಜರ ಭಕ್ತರಿಂದ ಭೋಜನ ಸಂತರ್ಪಣೆಗೆ ಬೇಕಾದ ಎಲ್ಲ ವಿಧದ ಸಹಾಯಗಳು, ಏರ್ಪಾಟು ಮಾಡಲ್ಪಡುತ್ತಿದ್ದವು. ಮಹಾರಾಜರ ಆಶ್ರಯದಲ್ಲಿ ಮಧ್ಯಾಹ್ನ ಮಾತ್ರ ಸಂತರ್ಪಣೆಯ ವ್ಯವಸ್ಥೆ ಇತ್ತಷ್ಟೆ. ರಾತ್ರಿಯಲ್ಲಿ ಹನ್ನೆರಡು ಗಂಟೆಯ ವರೆಗೆ ಭಜನೆ ನಡೆದ ಮೇಲೆ ಪ್ರಸಾದದ ರೂಪದಲ್ಲಿ ಆ ಸಮಯದವರೆಗೆ ಅಲ್ಲಿ ಇರುವ ಜನರಿಗೆ ಉಪಹಾರವನ್ನು ಕೊಡುತ್ತಿದ್ದರು.

ದೈವರಾತರು ಪ್ರತಿದಿನ ಮಧ್ಯಾಹ್ನದ ಅಡಿಗೆಯ ಕೆಲಸ ಮುಗಿದ ಮೇಲೆ ಟೇಂಬೇ ಮಹಾರಾಜರ ಮುಂದೆ ಕುಳಿತು ಋಗ್ವೇದ ಸಂಹಿತೆಯ ಕೆಲವು ಭಾಗಗಳನ್ನು ಪಠನ ಮಾಡುತ್ತಿದ್ದರು. ಮಧ್ಯಾಹ್ನದ ಊಟವಾದ ಮೇಲೆ ಮಧ್ಯಾಹ್ನದ ನಂತರದಲ್ಲಿ ದೈವರಾತರು ಭಗವದ್ಗೀತೆಯ ಶ್ಲೋಕಗಳನ್ನು ಸಂಸ್ಕೃತದ ಶ್ರೀಧರೀ ಭಾಷ್ಯವನ್ನು ಟೇಂಬೇ ಮಹಾರಾಜರ ಮುಂದೆ ಕುಳಿತು ಓದುತ್ತಿದ್ದರು. ಮಹಾರಾಜರು ಮರಾಠಿಯಲ್ಲಿ ಅದರ ಅರ್ಥವನ್ನು ಜನರಿಗೆ ವಿವರಿಸುತ್ತಿದ್ದರು. ಸಮಯಾವಕಾಶ ದೊರೆತಾಗೆಲ್ಲ ದೈವರಾತರು ಟೇಂಬೇ ಮಹಾರಾಜರಿಂದ ಹಠಯೋಗದ ಪ್ರಕ್ರಿಯೆಗಳನ್ನು ಅಭ್ಯಾಸಮಾಡುತ್ತಿದ್ದರು. ಟೇಂಬೇ ಮಹಾರಾಜರಲ್ಲಿಗೆ ಕ್ವಚಿತ್ತಾಗಿ ಹಠಯೋಗದ ಪ್ರಾಥಮಿಕ ಪ್ರಕ್ರಿಯೆಗಳನ್ನು ಅಭ್ಯಾಸ ಮಾಡಲು ಬರುವ ಜನರಿಗೆ ಮಹಾರಾಜರ ಆದೇಶದನ್ವಯ ದೈವರಾತರೇ ಹಠಯೋಗದ ಪ್ರಕ್ರಿಯೆಗಳನ್ನು ಕಲಿಸುತ್ತಿದ್ದರು. ಗರುಡೇಶ್ವರದಲ್ಲಿ ಟೇಂಬೇ ಮಹಾರಾಜರ ಸನ್ನಿಧಿಯಲ್ಲಿ ನಡೆಯುತ್ತಿದ್ದ ಎಲ್ಲ ಚಟುವಟಿಕೆಗಳಲ್ಲಿಯೂ ದೈವರಾತರು ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಆಗಾಗ ಅಲ್ಲಿ ನಡೆಯುವ ಹೋಮ, ಹವನಾದಿಗಳಲ್ಲಿಯೂ ದೈವರಾತರು ಇರಲೇಬೇಕಾಗುತ್ತಿತ್ತು. ಋಗ್ವೇದವಲ್ಲದೇ ಅಧ್ವರ್ಯುವೇದವೆಂದೇ ಪ್ರಖ್ಯಾತವಾದ ಯಜುರ್ವೇದವನ್ನೂ ತಮ್ಮ ಅತ್ಯಂತ ಪೂರ್ವವಯಸ್ಸಿನಲ್ಲಿಯೇ ಅಭ್ಯಾಸಮಾಡಿಕೊಂಡಿದ್ದೂ ಅಲ್ಲದೇ ಯಜ್ಞ ಯಾಗಾದಿಗಳ ಪ್ರಕ್ರಿಯೆಗಳ ಸಮಗ್ರ ಪರಿಚಯವೂ ದೈವರಾತರಿಗಿತ್ತು. ಒಮ್ಮೊಮ್ಮೆ ಮುಂಜಾನೆ ಹತ್ತು ಗಂಟೆಯ ನಂತರವೂ ಜನರು ಬರುತ್ತಲೇ ಇರುತ್ತಿದ್ದರು.

ಒಂದೊಂದು ದಿನ ಟೇಂಬೇ ಮಹಾರಾಜರು ಸಂತರ್ಪಣೆಗೆ ವಿಶೇಷವಾದ ಪಕ್ವಾನ್ನವನ್ನು ಮಾಡಲು ಹೇಳುತ್ತಿದ್ದರು. ಆಗ ಕೂಡಲೇ ಎಷ್ಟೇ ಸಂಖ್ಯೆಯ ಜನರು ಭೋಜನಕ್ಕೆ ಇದ್ದರೂ ಭೋಜನದ ವೇಳೆಗೆ ಅವರು ಹೇಳಿದ ಖಾದ್ಯವನ್ನು ಮಾಡಿ ದೈವರಾತರು ಬಡಿಸುತ್ತಿದ್ದರು. ಟೇಂಬೇ ಮಹಾರಾಜರು ದೈವರಾತರನ್ನು 'ಗಜತಾಯಿ' ಎಂದೇ ಸಂಬೋಧಿಸುತ್ತಿದ್ದುದು ದೈವರಾತರ ಈ ಎಲ್ಲ ಯೋಗದಾನಗಳಿಗೆ ಅಕ್ಷರಶಃ ಪೂರಕವೇ ಆಗಿತ್ತು.

ದೈವರಾತರು ಪ್ರತಿದಿನ ಮುಂಜಾನೆ ಟೇಂಬೇ ಮಹಾರಾಜರ ಸನ್ನಿಧಾನ – ಸಂಕೀರ್ಣದಲ್ಲಿರುವ ದತ್ತಾತ್ರೇಯ ಮೂರ್ತಿಯ ಮುಂದೆ ಸುಂದರವಾದ ರಂಗೋಲಿಯನ್ನು ರಚಿಸಿ ಅಲಂಕರಿಸುತ್ತಿದ್ದರು. ಚುಕ್ಕೆಗಳನ್ನು ಹಾಕಿ, ಅವುಗಳ ಸಂಯೋಗ ಸಂರಚನೆಗಳಿಂದ ರಂಗೋಲಿಯನ್ನು ಚಿತ್ರಿಸಿ ಆಂಧ್ರ ಮತ್ತು ದ್ರಾವಿಡ ಶೈಲಿಗಳಿಂದ ಸುತ್ತಲೂ ಸುಳುವು ಮತ್ತು ವಕ್ರರೇಖೆಗಳಿಂದ ಅಲಂಕರಿಸಿ, ಅರಿಷಿಣ ಕುಂಕುಮಗಳಿಂದ ಸುಂದರವಾಗಿ ಹೊಳಪು ಹಾಕಿ ಅಂದವಾಗಿ ರಂಗೋಲಿಗಳನ್ನು ರಚಿಸುವದು ದೈವರಾತರ ವೈಶಿಷ್ಟ್ಯವಾಗಿತ್ತು. ಒಂದು ದಿನ ರಚಿಸಿದ ರಂಗೋಲಿಯನ್ನು ಇನ್ನೊಂದು ದಿನ ಹಾಕುತ್ತಿರಲಿಲ್ಲ. ದೈವರಾತರ ರಂಗವಲ್ಲಿಗಳು ಟೇಂಬೇ ಮಹಾರಾಜರಿಗೆ ಇಷ್ಟವಾಗಿರುತ್ತಿದ್ದವು. ಒಂದೊಂದು ದಿನ ಮಾತ್ರವೇ ಇರುವ ಸುಂದರವಾದ ರಂಗವಲ್ಲಿಗಳನ್ನು ಅವರು ಮೂರು–ನಾಲ್ಕು ದಿನಗಳವರೆಗೆ ಬದಲಿಸದಂತೆ ದೈವರಾತರಿಗೆ ಸೂಚನೆ ಕೊಟ್ಟರು. ಹೆಣ್ಣುಮಕ್ಕಳು ಆ ತಪೋವನಕ್ಕೆ ಬಂದ ದಿನ ರಂಗವಲ್ಲಿಯನ್ನು ತೋರಿಸಿ ಮಹಾರಾಜರು "ಇದು ಗಜಾತಾಯಿಯು ಬರೆದ ರಂಗೋಲಿ, ಪುನಃ ನೋಡಲು ಸಿಗುವುದಿಲ್ಲ, ನೀವೂ ಕಲಿತುಕೊಳ್ಳಿರಿ" ಎಂದು ಹೇಳುತ್ತಿದ್ದರು.

ದತ್ತಪೂರ್ಣಿಮೆಯ ದಿವಸ ದತ್ತಾತ್ರೇಯ ಮಂದಿರದ ಹೊರಗಿನ ಅಂಗಳವನ್ನು ದತ್ತ ಮಹೋತ್ಸವವನ್ನಾಚರಿಸುವ ಉದ್ದೇಶದಿಂದ ಸಿದ್ಧಪಡಿಸಿ ತಳಿರು–ತೋರಣಗಳಿಂದ ಅಲಂಕರಿಸಲಾಗಿತ್ತು. ದೈವರಾತರು ದತ್ತಾತ್ರೇಯ ವಿಗ್ರಹದ ಮುಂದೆ ವಿಶೇಷವಾದ ರಂಗವಲ್ಲಿಯನ್ನು ರಚಿಸಿದ್ದರು. ಆ ದಿವಸದ ಸಂಜೆಯ ಭಜನೆ, ಪೂಜೆ ಹಾಗೂ ಉತ್ಸವಗಳ ನಂತರ ವಿತರಿಸುವದಕ್ಕಾಗಿ ಪ್ರಸಾದ – ಭಕ್ಷ್ಯಗಳ ತಯಾರಿಯಲ್ಲಿ ನಿರತನಾಗಿದ್ದರು. ಸಂಧ್ಯಾಕಾಲದಲ್ಲಿ ಸೇರಿದ್ದ ಜನರೆಲ್ಲ ಮಂದಿರದ ಮುಂದಿನ ಅಂಗಳದಲ್ಲಿ ಭಜನೆಯನ್ನು ಆರಂಭಿಸಿದ್ದರು. ಆ ವೇಳೆಗೆ ಅಲ್ಲಿ ಟೇಂಬೇ ಮಹಾರಾಜರೊಂದಿಗೆ ಬ್ರಹ್ಮಾನಂದ ಸ್ವಾಮಿಗಳೂ ಅವರ ಶಿಷ್ಯರಾದ ಪ್ರದ್ಯುಮ್ನಾನಂದರೂ (ಪೂರ್ವದಲ್ಲಿ

ಬಲವಂತರಾವ್ ಭಾಗವತರು) ಉಪಸ್ಥಿತರಿದ್ದರು. ವಾಸುದೇವಾನಂದ ಸರಸ್ವತೀ ಸ್ವಾಮಿಗಳು (ಟೇಂಬೇ ಮಹಾರಾಜರು) ಭಜನೆ ಅಲ್ಲಿ ಸ್ವಲ್ಪ ನೀರಸವಾಗಿ ನಡೆಯುತ್ತಿದ್ದುದನ್ನೂ ಏನೂ ರಭಸವಿಲ್ಲದುದನ್ನೂ ಕಂಡು "ಭಜನೆಯಲ್ಲಿ ಕಳೆಯಿಲ್ಲ, ಆ ಗಜಾತಾಯಿಯನ್ನು ಕರೆಯಿರಿ" ಎಂದು ಅಪ್ಪಣೆ ಮಾಡಿದರು. ಜನರು ಬಂದು ಮಹಾರಾಜರ ಆದೇಶವನ್ನು ದೈವರಾತರಿಗೆ ಹೇಳಿದರು. ದೈವರಾತರು ತಡಮಾಡಲಿಲ್ಲ. ಪ್ರಸಾದ ಭಕ್ಷ್ಯದ ತಯಾರಿಯನ್ನು ಅಲ್ಲಿಗೇ ನಿಲ್ಲಿಸಿ ಭಜನೆ ನಡೆಯುತ್ತಿದ್ದ ಪ್ರಾರಂಗಣಕ್ಕೆ ಬಂದರು. ಕಾಲಿಗೆ ಗೆಜ್ಜೆ ಕಟ್ಟಿದರು; "ದಿಗಂಬರ ಶ್ರೀಪಾದವಲ್ಲಭ ದಿಗಂಬರ" ಎಂಬ ಭಜನೆಯನ್ನು ಹಾಡುತ್ತ ನರ್ತಿಸುವದಕ್ಕೆ ಪ್ರಾರಂಭಿಸಿದರು. ಇದರಿಂದ ಟೇಂಬೇ ಮಹಾರಾಜರಿಗೆ ಆನಂದವಾಯಿತು.

ಇಂತಹದೇ ಇನ್ನೊಂದು ಪ್ರಸಂಗವೂ ನಡೆದದ್ದು ಉಲ್ಲೇಖಿತವಾಗಿದೆ. ಮಹಾಶಿವರಾತ್ರಿಯಂದು ಟೇಂಬೇ ಮಹಾರಾಜರು ಪರ್ಣಕುಟೀರದ ಎದುರು ಮಹಾರಾಜರು ನರ್ಮದಾ ನದಿಗೆ ಮುಖ ಮಾಡಿ ಆಸೀನರಾಗಿದ್ದರು. ರಾತ್ರಿ ಒಂಬತ್ತು ಗಂಟೆಯ ವೇಳೆ, ಅದೆಷ್ಟೋ ಜನ ಭಕ್ತರು ಅವರ ಸುತ್ತಲೂ ನಾಲ್ಕೂ ದಿಕ್ಕಿನಲ್ಲಿ ಕುಳಿತು ಭಜನೆ ಮಾಡುತ್ತಿದ್ದರು. ಅಂದು ರಾತ್ರಿ ಪೂರ್ಣ ಜಾಗರಣದಿಂದಿದ್ದು ಶಿವರಾತ್ರಿಯನ್ನು ಆಚರಿಸುವ ಉದ್ದೇಶ ಅವರದಿತ್ತು. ಸ್ವಲ್ಪ ಸ್ವಲ್ಪ ರಾತ್ರಿಯಾದಂತೆಲ್ಲಾ ಭಜನೆ ಮಾಡುವವರು ತೂಕಡಿಸತೊಡಗಿದರು. ಇದರಿಂದ ಭಜನೆಯು ನೀರಸವಾಗತೊಡಗಿತು. ಆಗ ಮಹಾರಾಜರು "ಗಜತಾಯಿಯನ್ನು ಕರೆಯಿರಿ" ಎಂದು ಆದೇಶಿಸಿದರು. ಅಲ್ಲಿದ್ದವರಲ್ಲಿ ಯಾರೋ ಕೆಲವರು "ಅವನು ರುದ್ರಾಭಿಷೇಕ ಮಾಡುತ್ತಿದ್ದಾನೆ" ಎಂದು ಹೇಳಿದರು. "ರುದ್ರಾಭಿಷೇಕವನ್ನು ಬೇರೆ ಯಾರಾದರೂ ಮಾಡಲಿ; ಅವನನ್ನು ಭಜನೆಗೆ ಕರೆಯಿರಿ" ಎಂದು ಟೇಂಬೇ ಮಹಾರಾಜರು ಆದೇಶಿಸಿದರು. ಆದೇಶ ದೈವರಾತರಿಗೆ ಅಲ್ಲಿದ್ದವರಲ್ಲಿ ಯಾರಿಂದಲೋ ತಲುಪಿದ ಕೂಡಲೇ ದೈವರಾತರು ಸ್ವಲ್ಪವೂ ತಡ ಮಾಡದೇ ಅಲ್ಲಿಗೆ ಬಂದು ಕಾಲಿಗೆ ಗೆಜ್ಜೆಯನ್ನು ಕಟ್ಟಿ ಲಯಬದ್ಧವಾಗಿ ಕುಣಿಯುತ್ತ ಭಜನೆ ಮಾಡಲು ಪ್ರಾರಂಭಿಸಿದರು. ಅಂದು ಶಿವರಾತ್ರಿಯಾದುದರಿಂದ "ಶಿವಹರಶಂಕರ ಗೌರೀಶಂ । ವಂದೇ ಗಂಗಾಧರಮೀಶಂ।" ಎಂಬ ಭಜನೆಯನ್ನು ದೈವರಾತರು ಮಾಡಿದರು. ಅನಂತರ ಯಜುರ್ವೇದಾಂತರ್ಗತವಾದ ಪ್ರಸಿದ್ಧವಾದ ರುದ್ರಾಧ್ಯಾಯದ ತಾತ್ಪರ್ಯದಿಂದ ಕೂಡಿದ ಲೌಕಿಕ ಸಂಸ್ಕೃತ ಸಾಹಿತ್ಯದ ಶ್ಲೋಕ ಬಂಧಗಳಲ್ಲಿ ರಚಿಸಲ್ಪಟ್ಟ ಭಜನೆಯನ್ನು ನರ್ತನದೊಂದಿಗೆ ದೈವರಾತರು ಪ್ರಸ್ತುತ ಪಡಿಸಿದರು. ಅದರ ಧ್ರುವಪದವು ಹೀಗಿತ್ತು–

ಭಗವಾನ್ ಭರ್ಗ ಸಮಗ್ರ ವಿಭೂತೇ ।
ಭಾವಿತ ಭದ್ರದ ರುದ್ರ ನಮಸ್ತೇ ॥

ವಾಸುದೇವಾನಂದ ಸರಸ್ವತೀ ಸ್ವಾಮಿಗಳು ದೈವರಾತರ ಭಜನೆಯನ್ನು, ನರ್ತನವನ್ನು ನೋಡಿ "ರುದ್ರನ ತಾಂಡವ ನೃತ್ಯದಂತೆ ಕಾಣುತ್ತದೆ" ಎಂದು ಉದ್ಗಾರವೆತ್ತಿದರು. ನರ್ತನ ಮತ್ತು ಭಜನೆಗಳಿಂದ ಯಾರಿಗೂ ಬೆಳಗಾದುದೇ ಗೊತ್ತಾಗಲಿಲ್ಲ.[೧]

ದೈವರಾತರು ದಿವ್ಯವಾದ ಯೋಗ ವಿದ್ಯೆಯ ಸೂಕ್ಷ್ಮಾತಿಸೂಕ್ಷ್ಮವಾದ ಪ್ರಕ್ರಿಯೆಗಳನ್ನು ವಾಸುದೇವಾನಂದ ಸರಸ್ವತೀ ಟೇಂಬೆಯವರಿಂದ ಅಭ್ಯಾಸ ಮಾಡಿದರು. ಖೇಚರಿಮುದ್ರಾ, ವಜ್ರೋಲಿ ಮುದ್ರಾ ಮುಂತದವುಗಳನ್ನು ಅವರು ಟೇಂಬೇ ಮಹಾರಾಜರಿಂದ ಉಪದೇಶ ಪಡೆದು ಸಾಧಿಸಿದರು. ಪ್ರಾಥಮಿಕವಾಗಿ ಆಸನ, ನವಲಿ, ಧೌತಿ, ಬಸ್ತಿ, ನೇತಿ ಇವುಗಳನ್ನು ಕಲಿತು ಅವುಗಳ ಅಭ್ಯಾಸವು ಸಮರ್ಪಕವಾಗಿ ಆದ ನಂತರ ಮುಂದಿನ ವಿಶಿಷ್ಟ ಕ್ರಿಯೆಗಳನ್ನು ಕಲಿತರು. ಅವರು ಅಭ್ಯಾಸ ಮಾಡಿದ ಹಠಯೋಗ ಪ್ರಕ್ರಿಯೆಗಳಲ್ಲಿ ಮುಖ್ಯವಾದವುಗಳು ಇವು.

೧. **ಖೇಚರಿ ಮುದ್ರಾ :** ಖೇಚರಿ ಮುದ್ರೆಗೆ ಇನ್ನೊಂದು ಹೆಸರಿದೆ– ಲಂಬಿಕಾಯೋಗ ಎಂದು. ಈ ಮುದ್ರೆಯಲ್ಲಿ ನಾಲಿಗೆಯನ್ನು ಗೋವುಗಳ ನಾಲಿಗೆಯಂತೆ ಉದ್ದ ಮಾಡಿಕೊಂಡು ನಾಲಿಗೆಯನ್ನು ಬಾಯಿಯ ಒಳಗೆ ಗಂಟಲಿನ ರಂಧ್ರದ ಮೂಲಕ ಹಾಯಿಸಿ ಮೂರ್ಧಾ ಸ್ಥಾನದ ಕಡೆಗೆ ಮೇಲ್ಮುಖವಾಗಿ ಒಯ್ಯಬೇಕು. ಕಿರುನಾಲಿಗೆಯಿಂದ ಮೇಲೆ ಮಸ್ತಕದವರೆಗಿರುವ ಛಿದ್ರದಲ್ಲಿ ನಾಲಿಗೆಯನ್ನು ಸೇರಿಸಿ ದೃಷ್ಟಿಯನ್ನು ಭ್ರೂಮಧ್ಯದಲ್ಲಿಟ್ಟು ಕುಳಿತುಕೊಳ್ಳುವದೆಂದರೆ ಖೇಚರಿ ಮುದ್ರೆಯು. ನಾಲಿಗೆಯನ್ನು ಹೊರತೆಗೆದು ಕಂಠದ ಕುಹರದ ರಂಧ್ರದ ಮೂಲಕ ಹುಬ್ಬುಗಳ ಮಧ್ಯದವರೆಗೆ ಮುಟ್ಟುವಂತಾಗುಷ್ಟು ನಾಲಿಗೆಯು ಉದ್ದವಾಗಬೇಕು. ಅದಕ್ಕಾಗಿ ಛೇದನ,

---

೧. ಈ ಪ್ರಕರಣವು ಪೂರ್ಣವಾಗಿ ಅಪ್ರಕಟಿತ ಆತ್ಮಚರಿತ್ರೆಯ ವಿವರಗಳನ್ನು ಆಧರಿಸಿ ಬರೆದದ್ದಾಗಿದೆ. ಇದರ ಹೊರತಾಗಿ ಬ್ರಹ್ಮರ್ಷಿ ದೈವರಾತ – ಜೀವನ ಮತ್ತು ಕೃತಿ (ಇಂಗ್ಲೀಷ) ಈ ಕಿರುಹೊತ್ತಿಗೆ ಮತ್ತು ಕಸ್ತೂರಿ (ಕನ್ನಡ ಡೈಜೆಸ್ಟ), ಜುಲೈ ೧೯೭೩ರ ಲೇಖನಗಳು ಈ ಪ್ರಕರಣದ ನಿರೂಪಣೆಯಲ್ಲಿ ಪೂರಕ ಪ್ರಮಾಣಗಳನ್ನು ಒದಗಿಸುತ್ತ ದೃಢವಾದ ಆಧಾರವನ್ನು ನೀಡಿ ಈ ಪ್ರಕರಣದ ಬರವಣಿಗೆಗೆ ಬಲವನ್ನು ತಂದಿವೆ. ವಾಸುದೇವಾನಂದ ಸರಸ್ವತಿಗಳಿಂದ ಬರೆಯಲ್ಪಟ್ಟ 'ಯೋಗ ರಹಸ್ಯ' ಗ್ರಂಥದ ನೆರವನ್ನೂ ಇಲ್ಲಿ ಪಡೆಯಲಾಗಿದೆ.

ಚಾಲನ ಹಾಗೂ ಮೋಹನ ಹೀಗೆ ಮೂರು ಪ್ರಕಾರದ ಅಭ್ಯಾಸವನ್ನು ಆರು ತಿಂಗಳವರೆಗೆ ಮಾಡಲು ಹೇಳಲಾಗಿದೆ. ನೆತ್ತಿಯ ಮಧ್ಯಭಾಗದಲ್ಲಿರುವ ಚಂದ್ರ ಮಂಡಲದಿಂದ ಅಮೃತ ಬಿಂದುಗಳ ವರ್ಷಣವಾಗುತ್ತಿರುತ್ತದೆ. ಆ ಅಮೃತ ಬಿಂದುಗಳು ನಾಭಿಸ್ಥಾನದಲ್ಲಿರುವ ಅಗ್ನಿರೂಪಿ ಸೂರ್ಯಸ್ಥಾನದಲ್ಲಿ ಬಿದ್ದು ಭಸ್ಮವಾಗುತ್ತಿರುತ್ತವೆ. ವರ್ಷಿಸುತ್ತಿರುವ ಅಮೃತ ಬಿಂದುಗಳ ಪಾನಮಾಡುವದು ಅದು ಕೆಳಕ್ಕೆ ಬಿದ್ದು ವ್ಯರ್ಥವಾಗಿ ಭಸ್ಮವಾಗದಂತೆ ಮಾಡುವದು, ತನ್ಮೂಲಕ ದೀರ್ಘಾಯುಷ್ಯ ಪ್ರಾಪ್ತಿ, ರೋಗ, ಮುಪ್ಪು, ಹಸಿವು, ನೀರಡಿಕೆ, ನಿದ್ದೆ, ಗ್ಲಾನಿ, ಮೃತ್ಯು ಇವುಗಳ ಬಾಧೆ ಸ್ಪರ್ಶ ಮಾಡದಿರುವದು – ಇವು ಖೇಚರಿ ಮುದ್ರೆಯ ಅಭ್ಯಾಸದ ಪರಮಪ್ರಯೋಜನಗಳೆಂದು ಹೇಳಲಾಗುತ್ತದೆ.[೨]

೨. **ವಜ್ರೋಲಿ ಮುದ್ರಾ :** ಇದೊಂದು ಬಹು ಸೂಕ್ಷ್ಮವಾದ ಯೋಗ ಪ್ರಕ್ರಿಯೆಯಾಗಿದೆ. ಈ ಮುದ್ರೆಯ ಹಿಂದಿರುವ ತಾತ್ತ್ವಿಕ ನಿಲುವು ಅಷ್ಟೇ ವಿಶಿಷ್ಟವಾಗಿದೆ. ಲೌಕಿಕವಾಗಿ ಹಾಗೂ ಪಾರಮಾರ್ಥಿಕವಾಗಿ ಉನ್ನತಿ ಪಡೆಯಲು ಬ್ರಹ್ಮಚರ್ಯದ ಅವಶ್ಯಕತೆ ಬಗೆಗೆ ವಿಚಾರವಂತರಲ್ಲಿ ಭಿನ್ನಾಭಿಪ್ರಾಯವಿಲ್ಲ. ವೀರ್ಯದ ರಕ್ಷಣೆಯೇ ಬ್ರಹ್ಮಚರ್ಯವು. ವೀರ್ಯ ತಯಾರಾದ ಬಳಿಕ ಅದು ಹೊರಬೀಳಲು ಸಹಜವಾಗಿ ಪ್ರವೃತ್ತವಾಗುತ್ತದೆ. ಈ ಸಹಜವಾದ ಶರೀರಕ್ರಿಯೆಯನ್ನು ಕೃತ್ರಿಮವಾಗಿ ಹಾಗೂ ಅಸಹಜವಾದ ಒತ್ತಡದ ಮೂಲಕ ತಡೆದರೆ ಅದು ಹಾನಿಕಾರಕ ಎಂದು ಸಿದ್ಧವಾಗಿದೆ. ಸ್ವಾಭಾವಿಕವಾಗಿ ವೀರ್ಯ ತಯಾರಾಗಲೂ ಬೇಕು. ಆದರೆ ಅದು ನಷ್ಟವಾಗದೆ ಅದರ ರಕ್ಷಣೆಯಾಗಲೂ ಬೇಕು. ಸಹಜವಾಗಿ ಹೊರಬೀಳುವ ವೀರ್ಯವನ್ನು

---

೨. ಕಪಾಲಕುಹರೇ ಜಿಹ್ವಾ ಪ್ರವಿಷ್ಟಾ ವಿಪರೀತಗಾ ।
ಭ್ರುವೋರಂತರ್ಗತಾ ದೃಷ್ಟಿರ್ಮುದ್ರಾ ಭವತಿ ಖೇಚರೀ ॥

(ಹಠಯೋಗ ಪ್ರದೀಪಿಕಾ)

ಛೇದನ ಚಾಲನದೋಹೈಃ ಕಲಾಕ್ರಮೇಣ ವರ್ಧಯೇತ್ತಾವತ್ ।
ಸಾ ಯಾವದ್ ಭ್ರೂಮಧ್ಯೇ ಸ್ಪೃಶತಿ ತದಾ ಖೇಚರೀಸಿದ್ಧಿಃ ॥

(ಹಠಯೋಗ ಪ್ರದೀಪಿಕಾ)

ಸಹೃತ್ – ಜಿಹ್ವಾ ಚರತ್ಯಸ್ಯ ಖೇ..... (ದ್ವಿಸಾಹಸ್ರೀ – ಟೇಂಬೇ ಮಹಾರಾಜ ಕೃತ) ಮನಸ್ಸು ಹಾಗೂ ನಾಲಿಗೆ ಎರಡೂ ಭ್ರೂಮಧ್ಯದಲ್ಲಿಯ ಆಕಾಶದಲ್ಲಿ ಆಜ್ಞಾ ಚಕ್ರದಲ್ಲಿ ಹೋಗಿ ಸ್ಥಿರವಾಗಿ ನಿಲ್ಲುವದೇ ಖೇಚರಿ ಮುದ್ರಾ ಎಂದು ಸ್ವಯಂ ಟೇಂಬೇ ಮಹಾರಾಜರು ನಮ್ಮ 'ದ್ವಿ ಸಾಹಸ್ತಿ'ಯಲ್ಲಿ ಇದನ್ನು ವಿವರಿಸಿದ್ದಾರೆ.

ಮತ್ತೆ ಹಿಂದಕ್ಕೆಳೆದುಕೊಂಡು ಅದನ್ನು ಊರ್ಧ್ವಮುಖವಾಗಿ ಸುಷುಮ್ನಾ ನಾಡಿಯ ಮೂಲಕ ಪ್ರವಹಿಸುವಂತೆ ಮಾಡುವ ಅತ್ಯಂತ ಸಂಕೀರ್ಣ ಯೋಗಪ್ರಕ್ರಿಯೆ ವಜ್ರೋಲಿ ಮುದ್ರೆಯಾಗಿದೆ.

ಈ ಮುದ್ರೆಯ ಅಭ್ಯಾಸ ಮಾಡುವಾಗ ಆರಂಭದಲ್ಲಿ ಮೂತ್ರದ್ವಾರದಿಂದ ನೀರು, ಹಾಲು ಮತ್ತು ಜೇನುತುಪ್ಪವನ್ನು ಒಳಗೆ ಎಳೆದುಕೊಂಡು ಅದನ್ನು ಮೂತ್ರ ಕೋಶದವರೆಗೆ ಮುಟ್ಟಿಸಿ ಸ್ವಲ್ಪ ಹೊತ್ತು ಅಲ್ಲಿಟ್ಟುಕೊಂಡು ಹೊರಗೆ ಬಿಡುವದನ್ನು ಅಭ್ಯಾಸ ಮಾಡಲಾಗುತ್ತದೆ. ಇದರಿಂದ ಮುಂದೆ ಸ್ತ್ರೀಯೋನಿಯಲ್ಲಿ ಬಿದ್ದ ವೀರ್ಯವನ್ನು ಪುನಃ ಒಳಗೆ ಎಳೆದುಕೊಂಡು ವೀರ್ಯ ಕೋಶದ ದ್ವಾರದಲ್ಲಿ ನಿಲ್ಲಿಸಲು ಕ್ರಮವಾಗಿ ಊರ್ಧ್ವರೇತಸ್ಸಿನ ಸಿದ್ಧಿಯುಂಟಾಗುವದು. ಆದರೆ ಸಮರ್ಥರಾದ ಗುರುಗಳ ಎದುರಿಗೆ ಅಭ್ಯಾಸಮಾಡಲು ಮಾತ್ರ ಯೋಗ್ಯವಾದ ಪ್ರಕ್ರಿಯೆ ಇದಾಗಿದೆ. ಸ್ವಲ್ಪ ವ್ಯತ್ಯಾಸವಾದರೂ ತುಂಬ ಅಪಾಯಕಾರಿಯಾದ ಪ್ರಕ್ರಿಯೆ ಇದಾಗಿದೆ.

೩. **ಕುಂಡಲಿನೀ ಉತ್ಥಾನ ಮತ್ತು ಸಮಾಧಿ :** ದೈವರಾತರು ವಾಸುದೇವಾನಂದ ಸರಸ್ವತೀ ಸ್ವಾಮಿಗಳಿಂದ ಖೇಚರೀ, ವಜ್ರೋಲಿ ಮುದ್ರೆಗಳಂತಹ ಸೂಕ್ಷ್ಮ ಯೋಗ ಪ್ರಕ್ರಿಯೆಗಳನ್ನು ಅಭ್ಯಾಸ ಮಾಡಿದ್ದಲ್ಲದೇ ಆ ಎಲ್ಲ ಪ್ರಕ್ರಿಯೆಗಳ ಪರಮ ಪ್ರಯೋಜನ ಹಾಗೂ ಗುರಿಯಾದ ಕುಂಡಲಿನೀ ಶಕ್ತಿಯ ಉತ್ಥಾಪನ ಮತ್ತು ತದ್ವಾರಾ ಸಮಾಧಿಸ್ಥಿತಿಯ ಸಾಧನೆಯನ್ನು ಅಭ್ಯಾಸ ಮಾಡಿದರು.

ಹಠಯೋಗ ಪ್ರದೀಪಿಕೆಯಿಂದ ಹಿಡಿದು ಎಲ್ಲ ಯೋಗ ಶಾಸ್ತ್ರದ ಗ್ರಂಥಗಳಲ್ಲಿ ಕುಂಡಲಿನೀ ಸ್ವರೂಪದ ಬಗೆಗೆ ಒಂದೇ ರೂಪದ ವರ್ಣನೆ ಮಾಡಲ್ಪಟ್ಟಿದೆ. ಗುದದ್ವಾರದಿಂದ ಎರಡು ಅಂಗುಲ ಮೇಲೆ, ನಾಭಿ ಮತ್ತು ಶಿಶ್ನಗಳ ಮಧ್ಯಂತರದಲ್ಲಿ 'ಕಂದ' ಎಂದು ಪಾರಿಭಾಷಿಕ ಶಬ್ದದಿಂದ ಕರೆದಿರುವ ಯಾವದೊಂದು ಕಮಲವನ್ನು ಸುತ್ತಿಟ್ಟ ವಸ್ತ್ರದಂತಿರುವ, ಹನ್ನೆರಡು ಅಂಗುಲ ಉದ್ದ ಹಾಗೂ ನಾಲ್ಕು ಬೆರಳು ಅಗಲವಿರುವ ಮೆತ್ತಗಿನ ಹಾಗೂ ಶುಭ್ರವಾದ ಸ್ವರೂಪವಿರುವ ಸ್ಥಾನವಿದೆ. ಇದೇ ಕುಂಡಲಿನಿಯ ಸ್ಥಾನ. ಕುಂಡಲಿನಿಯು ಹಾವಿನಂತೆ ಸುತ್ತು ಹಾಕಿಕೊಂಡು ಬಾಲವನ್ನು ಸುಷುಮ್ನಾ ರೂಪದ ಬ್ರಹ್ಮದ್ವಾರದ ಬಾಯಿಯ ಮೇಲಿಟ್ಟು ಬ್ರಹ್ಮದ್ವಾರವನ್ನು ತಡೆದು ಮಲಗಿದೆ. 'ಕಂದ' ತಾಡನದಿಂದ ಕುಂಡಲಿನೀ ಶಕ್ತಿಯು ಜಾಗ್ರತವಾಗಿ ಸುಷುಮ್ನಾ ನಾಡಿಯ ಮೂಲಕ ಮೇಲೇರಿ ಹತ್ತುವದು. ಹೀಗೆ ಕ್ರಮವಾಗಿ ಮೇಲೇರಿ ಬ್ರಹ್ಮರಂಧ್ರದಲ್ಲಿ ಸ್ಥಿರವಾಗತೊಡಗುತ್ತದೆ. ಸರ್ಪಾಕಾರದ ಆ ನಾಡಿಯ ಮುಖವು

ತೆರೆಯುವಂತೆ ಮಾಡಲು ಮಹಾಬಂಧ, ಮಹಾವೇಧ ಮತ್ತು ತಾಡನ ಎಂಬ ಮೂರು ಪ್ರಧಾನ ಸಾಧನಗಳನ್ನು ಪ್ರಾರಂಭದಲ್ಲಿ ಅನುಸರಿಸಬೇಕಾಗುವದು.

ದೈವರಾತರು ತಮ್ಮ ಕೆಲವು ಟಿಪ್ಪಣಿಗಳಲ್ಲಿ ಯೋಗಶಾಸ್ತ್ರದ ವಿಷಯಗಳನ್ನು ತಮ್ಮದೇ ಶಬ್ದಗಳಲ್ಲಿ ವಿವರಿಸಿದ್ದಾರೆ. ಅವುಗಳನ್ನು ಅವಲೋಕಿಸಿದಾಗ ಆ ಬರಹಗಳ ಹಿಂದೆ ಸ್ವಾನುಭವದ ಆಧಾರವಿರುವದು ಗೋಚರವಾಗುತ್ತದೆ. ಟೇಂಬೇ ಮಹಾರಾಜರ ಅನುಗ್ರಹ ಹಾಗೂ ಆಶೀರ್ವಾದಗಳಿಗೆ ಪಾತ್ರರಾದ ದೈವರಾತರು ಪ್ರತ್ಯಕ್ಷವಾಗಿ ಉಲ್ಲೇಖಿಸಿದ ಯೋಗಪ್ರಕ್ರಿಯೆಗಳಿಗೆ ಹೊರತಾಗಿಯೂ ಇನ್ನೂ ಹಲವು ಯೋಗವಿದ್ಯೆಗಳನ್ನು ಟೇಂಬೇ ಮಹಾರಾಜರಿಂದ ಪಡೆದಿರಬೇಕು ಎಂಬುದು ವೇದ್ಯವಾಗುತ್ತದೆ. 'ಸ್ವರೋದಯ' ಶಾಸ್ತ್ರಕ್ಕೆ ಸಂಬಂಧಪಟ್ಟ ಅವರ ಟಿಪ್ಪಣಿಗಳು ಇದಕ್ಕೆ ಪ್ರಮಾಣವಾಗಿವೆ. ಅವರ ಟಿಪ್ಪಣಿಯ ಸಾರಾಂಶವನ್ನು ಇಲ್ಲಿ ಸಂಗ್ರಹಿಸಲಾಗಿದೆ.

"'ಸ್ವರೋದಯ' ಶಾಸ್ತ್ರವು ಪ್ರಾಣವಾಯುವಿಗೆ ಸಂಬಂಧಿಸಿದ ಯೋಗಸಾಧನೆಯ ವಿಷಯದ್ದಾಗಿದೆ. ಅದು 'ಶಿವಸ್ವರೋದಯ' ಎಂಬ ಗ್ರಂಥದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿದೆ. ದೇಹದ ಎಡಭಾಗದಲ್ಲಿ 'ಇಡಾ' ಎಂಬ ನಾಡಿಯಿದೆ. ಅದು ನಾಭಿಯಿಂದ ಆರಂಭಿಸಿ ನಾಸಿಕಾ ರಂಧ್ರದ ಎಡಭಾಗದಲ್ಲಿ ಕೊನೆಗೊಳ್ಳುತ್ತದೆ. ಇದಕ್ಕೆ ಚಂದ್ರನು ಅಧಿದೇವತೆಯಾಗಿದ್ದರಿಂದ 'ಚಂದ್ರನಾಡಿ' ಎಂದೂ ಇದಕ್ಕೆ ಹೆಸರಿದೆ. ಇದು 'ಶಾಂತ', 'ಶೀತ', 'ಸೌಮ್ಯ' ಮತ್ತು 'ಶುಭ' ನಾಡಿಯಾಗಿದೆ. ಇದರಂತೆ ದಕ್ಷಿಣಕ್ಕೆ ಪಿಂಗಲ ನಾಡಿಯಿದೆ. ಅದಕ್ಕೆ ಸೂರ್ಯನು ಅಧಿದೇವತೆಯಾಗಿದ್ದಾನೆ. ಆದ್ದರಿಂದ ಅದನ್ನು 'ಉಷ್ಣ', 'ಕ್ರೂರ', 'ಅಶುಭ' ನಾಡಿಯೆಂದು ಹೇಳಲಾಗಿದೆ. ಈ ಎರಡೂ ನಾಡಿಗಳ ಸಂಧಿಗೆ 'ಸುಷುಮ್ನಾ' ಎಂದು ಹೆಸರಿದೆ. 'ಸುಮ್ನಂ' ಎಂದರೆ ಸುಖ, 'ಸುಷುಮ್ನಾ' ಎಂದರೆ ಉತ್ತಮ ಸುಖವುಳ್ಳದ್ದು ಎಂದರ್ಥ.

ಪ್ರತಿದಿವಸ ಸೂರ್ಯೋದಯದಿಂದ ಆರಂಭಿಸಿ ಚಂದ್ರ ಮತ್ತು ಸೂರ್ಯನಾಡಿಗಳು ನಡೆಯುತ್ತವೆ. ನಾಡಿ ನಡೆಯಲು ಆರಂಭಿಸಿ ನಲವತ್ತೈದು ನಿಮಿಷಗಳ ನಂತರ ಇನ್ನೊಂದು ನಾಡಿಯನ್ನು ಪ್ರವೇಶಮಾಡುತ್ತದೆ. ಹೀಗೆ ಕ್ರಮವಾಗಿ ಬದಲಾವಣೆ ಹೊಂದುತ್ತ ನಡೆಯುತ್ತಿರುತ್ತದೆ. ಈ ಎರಡೂ ನಾಡಿಗಳು ಸಂಧಿಸುವ ಸ್ಥಾನವೇ ಸುಷುಮ ಸ್ಥಾನವಾಗಿದೆ. ಇದು ಬಹು ಗುಪ್ತವಾದ ಶಾಸ್ತ್ರವಾಗಿದೆ. ಈ ನಾಡಿಯ ಉದಯ ಸಮಯದಲ್ಲಿ ಧ್ಯಾನ, ಜಪ, ತಪಗಳಿಗೆ ತ್ವರಿತ ಸಿದ್ಧಿಯುಂಟಾಗುತ್ತದೆ. ಅಹೋರಾತ್ರಿ ಕಾಲಗಳಲ್ಲಿ

ಪ್ರಾಣ ನಿರೀಕ್ಷಣೆ ಮಾಡಿ ಇದನ್ನು ಸಾಧಿಸತಕ್ಕದ್ದು. ಕೊನೆಯದಾಗಿ ಅಲೌಕಿಕವಾದ ಒಂದು ವಿಶಿಷ್ಟ ಸಾಧನವು ಉಪದೇಶಿಸಲ್ಪಟ್ಟಿದೆ.

ಶಶಾಂಕಂ ವಾರಯೇದ್ ರಾತ್ರೌ ದಿವಾ ವಾರಯೇದ್ ಭಾಸ್ಕರಮ್ ।
ಯೋ ಜಾನಾತಿ ಕ್ರಿಯಾಮೇತಾಂ ಸ ಯೋಗೀ ಕಾಲಜಿದ್ಭವೇತ್ ॥

ರಾತ್ರಿಯಲ್ಲಿ ಚಂದ್ರ ನಾಡಿಯನ್ನು ನಿಲ್ಲಿಸುವುದು ಮತ್ತು ಹಗಲಿನಲ್ಲಿ ಸೂರ್ಯನಾಡಿಯನ್ನು ನಿಲ್ಲಿಸುವದು, ಈ ಕ್ರಿಯೆಯನ್ನು ಯಾವಾತನು ಸಾಧಿಸಿ ತಿಳಿದುಕೊಂಡಿದ್ದಾನೆಯೋ ಆ ಯೋಗಿಯು ಕಾಲವನ್ನು ಜಯಿಸಿದವನಾಗುತ್ತಾನೆ.

ಇದರಿಂದ ಸುಷುಮ್ನಾ ನಾಡಿಯ ತತ್ತ್ವದಿಂದ ಕೂಡಿದ ಚಂದ್ರ ಸೂರ್ಯ ಸಂಗಮದ ಯೋಗವು ಸಂಪೂರ್ಣವಾಗಿ ಸಿದ್ಧವಾಗುತ್ತದೆ. ಇದನ್ನು ನಾನು ಸವಿಸ್ತಾರವಾಗಿ ಋಗ್ವೇದ ಮಂತ್ರಗಳ ಆಧಾರವಚನಗಳಿಂದ 'ಯೋಗಸುಧಾ' ಮತ್ತು 'ವಾಕ್‌ಸುಧಾ' ಗ್ರಂಥಗಳಲ್ಲಿ ನಿರೂಪಿಸಿದ್ದೇನೆ."[೩]

ಗರುಡೇಶ್ವರದಲ್ಲಿ ವಾಸುದೇವಾನಂದ ಸರಸ್ವತೀ ಸ್ವಾಮಿಗಳ ಕೆಲವು ಪವಾಡ ಸದೃಶವಾದ ಕಾರ್ಯಗಳನ್ನು ದೈವರಾತರು ತಮ್ಮ ಟಿಪ್ಪಣೆಗಳಲ್ಲಿ ಸ್ಮರಿಸಿದ್ದಾರೆ. ಅವುಗಳಲ್ಲಿ ಒಂದು ಘಟನೆ ಹೀಗಿದೆ – ಒಂದು ದಿನ ಪೂರ್ವಸೂಚನೆ ಇಲ್ಲದೆ ಊಟದ ವೇಳೆಗೆ ಸರಿಯಾಗಿ ನಿರೀಕ್ಷೆಗೂ ಮೀರಿ ಜನ ಬಂದರು. ಊಟಕ್ಕೆ ಮಾಡಿದ ಅನ್ನದ ಪರಿಮಾಣ ತುಂಬಾ ಕಡಿಮೆಯಾಗಿತ್ತು. ಹೊಸದಾಗಿ ಅನ್ನ ಮಾಡುವದಕ್ಕೆ ವ್ಯವಧಾನವೂ ಇರಲಿಲ್ಲ. ಟೇಂಬೇ ಮಹಾರಾಜರಿಗೆ ಈ ಸುದ್ದಿ ಮುಟ್ಟಿತು. ಸದ್ಯವೇ ಟೇಂಬೇ ಮಹಾರಾಜರು ಒಂದು ದೀವಟಿಗೆಯನ್ನು ಹಿಡಿದು ಅನ್ನದ ರಾಶಿಗೆ ಮೂರು ಪ್ರದಕ್ಷಿಣೆ ಮಾಡಿ ದೀವಟಿಗೆಯನ್ನು ಅನ್ನದ ರಾಶಿಯಲ್ಲಿ ನೆಟ್ಟು ಮೇಲಿನಿಂದ ಒಂದು ಕಾಷಾಯ ವಸ್ತ್ರವನ್ನು ಮುಚ್ಚಿ "ಈಗ ಅನ್ನವನ್ನು ಬಡಿಸಿರಿ" ಎಂದು ಹೇಳಿದರು. ಅನಂತರ ಅನ್ನವು ಎಲ್ಲರೂ ಉಂಡು ಹೆಚ್ಚಾಗಿ ಉಳಿಯುವಂತಾಯಿತು.

"ಇದಲ್ಲದೇ ಇನ್ನೂ ಅದೆಷ್ಟೋ ಅದ್ಭುತಗಳನ್ನು ನಾನು ಅವರ ಸನ್ನಿಧಿಯಲ್ಲಿ ಕಂಡಿದ್ದೇನೆ. ಕೇವಲ ಹಠಯೋಗವೇ ಅಲ್ಲದೆ ವಾಸುದೇವಾನಂದರಿಗೆ ರಾಜಯೋಗದ ಪಾತಂಜಲ ಯೋಗಸೂತ್ರದಲ್ಲಿ

೩. ಅಪ್ರಕಟಿತ ಆತ್ಮಚರಿತೆ; ಪುಟ ೬೬–೬೭

ಹೇಳಿದ ರೀತಿಯಲ್ಲಿ ಅಂತರಿಕ್ಷದಲ್ಲಿ ವಾಯುವಿನಂತೆ ಸಂಚರಿಸುವದು, ಅಂತರ್ಧಾನವಾಗುವದು, ನೀರಿನ ಮೇಲೆ ತಮ್ಮ ಕಾಷಾಯವಸ್ತ್ರವನ್ನು ಹಾಸಿ ಅದರ ಮೇಲೆ ಕುಳಿತು ನದಿಯ ಈ ಕಡೆಯ ದಡದಿಂದ ಆ ಕಡೆಯ ದಡವನ್ನು ಸೇರುವದು ಇವೆಲ್ಲ ಅದ್ಭುತಗಳನ್ನು ನಾನು ನನ್ನ ಕಣ್ಣಾರೆ ಕಂಡಿದ್ದೇನೆ". ದೈವರಾತರು ತಮ್ಮ ಟಿಪ್ಪಣಿಯಲ್ಲಿ ಟೇಂಬೇ ಮಹಾರಾಜರ ಅದ್ಭುತಕಾರ್ಯಗಳನ್ನು ಹೀಗೆ ದಾಖಲಿಸಿದ್ದಾರೆ.[೪]

ವಾಸುದೇವಾನಂದ ಸರಸ್ವತೀ ಸ್ವಾಮಿಗಳಂತಹ ಶ್ರೇಷ್ಠ ಆಚಾರ್ಯರು ದೊರಕಿದ್ದು ದೈವರಾತರ ಸುಕೃತದ ಫಲವೇ ಆಗಿದೆ. ಟೇಂಬೇ ಮಹಾರಾಜರ ಉಪದೇಶ ಹಾಗೂ ಪ್ರತ್ಯಕ್ಷ ಮಾರ್ಗದರ್ಶನದಿಂದ ದೈವರಾತರು ಯೋಗೈಶ್ವರ್ಯ ಸಂಪನ್ನರಾದರು. ಗರುಡೇಶ್ವರದ ವಾಸ್ತವ್ಯದ ಅವಧಿಯಲ್ಲಿ ದೈವರಾತರು ಸಲ್ಲಿಸಿದ ಗುರುಶುಶ್ರೂಷೆಯು ಅನ್ಯಾದೃಶವೂ ಸರ್ವವಿಧದಲ್ಲಿ ಪೂರ್ಣವೂ ಆಗಿತ್ತು.

ಶಿವರಾತ್ರಿಯ ನಂತರ ಟೇಂಬೇ ಮಹಾರಾಜರು ದೈವರಾತರಿಗೆ – "ನೀನು ವೇದಾಧ್ಯಯನ ಸಂಪನ್ನನಾಗಿರುವೆ; ವೇದ ಭಾಷ್ಯವನ್ನು ಅಧ್ಯಯನ ಮಾಡಬೇಕು, ವೇದದ ಅರ್ಥವನ್ನು ನೀನು ತಿಳಿಯಬೇಕು. ಅದಕ್ಕಾಗಿ ನೀನು ವ್ಯಾಕರಣಶಾಸ್ತ್ರದ ಅಧ್ಯಯನ ಮಾಡಬೇಕು. ನೀನು ಇಲ್ಲಿದ್ದರೆ (ಗರುಡೇಶ್ವರದಲ್ಲಿ) ಅಡಿಗೆ, ಭಜನೆ ಮುಂತಾದವುಗಳಲ್ಲಿ ನಿನ್ನ ಬಹಳ ಸಮಯ ಕಳೆದು ಹೋಗುತ್ತದೆ. ನೀನು ಕಾಶಿಗೆ ಹೋಗು. ಅಲ್ಲಿ ಬಾಬಾಸಾಹೇಬ ಜಮಖಂಡಿಕರ ಎಂಬ ನನಗೆ ಪರಿಚಿತರಾದ ವೈಯಾಕರಣಿಗಳಿದ್ದಾರೆ. ನೀನು ಅವರಲ್ಲಿ ಹೋಗಿ ಅಧ್ಯಯನ ಮಾಡಬೇಕು" ಎಂದು ಆಜ್ಞೆ ಮಾಡಿದರು. ದೈವರಾತರನ್ನು ಕಾಶಿಗೆ ಕರೆದುಕೊಂಡು ಹೋಗಿ ಪ್ರಸಿದ್ಧ ವೈಯಾಕರಣಿಗಳಾದ ಜಮಖಂಡಿಕರ ಅವರ ಬಳಿಗೆ ಮುಟ್ಟಿಸುವ ಕಾರ್ಯವನ್ನು ಟೇಂಬೇ ಮಹಾರಾಜರು ಪ್ರದ್ಯುಮ್ನಾನಂದರಿಗೆ ವಹಿಸಿದರು.

---

೪. ಅಪ್ರಕಟಿತ ಆತ್ಮಚರಿತೆ; ಪುಟ ೬೩–೬೪

೮. ತಪಸ್ಸಮಾಧಿಯ ಪ್ರಮೋದ

ತಪಸಾ ಬ್ರಹ್ಮ ವಿಜಿಜ್ಞಾಸಸ್ವ । ತಪೋ ಬ್ರಹ್ಮೇತಿ । ಸ ತಪೋಽತಪ್ಯತ ॥
ತೈತ್ತಿರೀಯ ಉಪನಿಷದ್

ದೈವರಾತರು ಗರುಡೇಶ್ವರದಿಂದ ಟೇಂಬೇ ಮಹಾರಾಜರ ಅಣತಿಯಂತೆ ವಾರಣಾಸಿ (ಕಾಶಿ)ಗೆ ವೈದಿಕ ಸಾಹಿತ್ಯದ ಸಮಗ್ರ ಅರ್ಥಪ್ರತಿಪತ್ತಿಗೆ ಸಾಧನವಾದ ವ್ಯಾಕರಣಾದಿ ಶಾಸ್ತ್ರಗಳ ಮತ್ತು ವೇದಾಂಗಗಳ ಅಭ್ಯಾಸಕ್ಕಾಗಿ ತೆರಳಿದರು. ಅಲ್ಲಿ ಕೆಲವು ಕಾಲ ಇದ್ದು ಪ್ರಸಿದ್ಧರಾದ ಆಚಾರ್ಯರಿಂದ ಮಾರ್ಗದರ್ಶನ ಪಡೆದು ಅಲ್ಲಿಂದ ಅಹಮದಾಬಾದ ಸಮೀಪವಿರುವ ಮಾತೃ–ಗಯಾ ಸಿದ್ಧಪುರ ಕ್ಷೇತ್ರಕ್ಕೆ ಬಂದರು. ವಾರಣಾಸಿಯಲ್ಲಿ ನಡೆದ ಒಂದು ನಾಟಕೀಯ ತಿರುವು ದೈವರಾತರ ಔಪಚಾರಿಕ ಶಿಕ್ಷಣಕ್ಕೆ ಮಂಗಲವನ್ನು ಹಾಡಿದ ಘಟನೆಯನ್ನು ನಾಲ್ಕನೇ ಪ್ರಕರಣದಲ್ಲಿ ಪ್ರಸ್ತಾವಿಸಲಾಗಿದೆ. ಪ್ರಾಯಶಃ ವೇದಗಳ ಅರ್ಥ ಪ್ರತಿಪತ್ತಿಯೇ ಮುಂತಾದ ಸೂಕ್ಷ್ಮ ಹಾಗೂ ತಾತ್ತ್ವಿಕ ಅರಿವು ಕೇವಲ ತಪಸ್ಸಿನಿಂದ ಮಾತ್ರ ಸಾಕ್ಷಾತ್ಕಾರವಾಗಲು ಸಾಧ್ಯ ಎಂಬ ನಿಲುವು ಪ್ರಬಲವಾಗಿ ದೈವರಾತರ ಅಂತಃಕರಣವನ್ನು ಸ್ಪರ್ಶಿಸಿರಬಹುದು. ಅದಕ್ಕಾಗಿ ಆಚಾರ್ಯದ್ವಾರಾ ಕೈಗೊಳ್ಳುವ ಔಪಚಾರಿಕ ಶಾಸ್ತ್ರಾಧ್ಯಯನಕ್ಕೆ ವಿದಾಯ ಹೇಳಿ ತಪಸ್ಸಿನ ಮಾರ್ಗಕ್ಕೆ ಅವರು ಶರಣಾದರು.

ಕಾಶಿಯಿಂದ ಮುಂಬಯಿಗೆ ಬಂದ ದೈವರಾತರು ಪುನಃ ಗರುಡೇಶ್ವರಕ್ಕೆ ಹೋದರು. ಅದೇ ಸಮಯದಲ್ಲಿ ಕಾಶಿಯಲ್ಲಿ ಅಧ್ಯಯನ ಮಾಡುತ್ತಿದ್ದ ದೈವರಾತರ ತಂದೆಯ ಸಹೋದರ ಪುತ್ರನಾದ ನಾರಾಯಣ ಎಂಬವರು ಮುಂಬಯಿವರೆಗೆ ದೈವರಾತರ ಜೊತೆಗೆ ಬಂದು ನಂತರ ಗೋಕರ್ಣಕ್ಕೆ ಮರಳಿದರು. ದೈವರಾತರು ಗರುಡೇಶ್ವರಕ್ಕೆ ಹೊಗುವಷ್ಟರಲ್ಲಿ ಟೇಂಬೇ

ಮಹಾರಾಜರ ದೇಹಾಂತ್ಯವಾಗಿತ್ತು. ಟೇಂಬೇ ಮಹಾರಾಜರು ಸಮಾಧಿ ಹೊಂದಿದ ವರ್ಷ ಶಾಲಿವಾಹನ ಶಕೆ ೧೮೩೬ನೇ ಆನಂದ ಸಂವತ್ಸರ ಆಷಾಢ ಶುದ್ಧ ಪ್ರತಿಪದೆಯ ದಿವಸ (ಕ್ರಿ.ಶ. ೧೯೧೪).[೧] ದೈವರಾತರು ಹೋಗುವಷ್ಟರಲ್ಲಿ ಟೇಂಬೇ ಮಹಾರಾಜರು ವಾಸವಾಗಿದ್ದ ಹಾಗೂ ತಪಸ್ಸನ್ನು ಆಚರಿಸಿದ್ದ ಪರ್ಣಕುಟೀರದಲ್ಲಿ ಟೇಂಬೇ ಮಹಾರಾಜರ ಸಮಾಧಿಯನ್ನು ಮಾಡಿ ಮಂದಿರವೊಂದನ್ನು ಭಕ್ತರೆಲ್ಲರೂ ಸೇರಿ ನಿರ್ಮಾಣಮಾಡಿದ್ದರು. ವಿಧಿವತ್ತಾಗಿ ಪ್ರತಿಷ್ಠಾ ಮಹೋತ್ಸವಾದಿಗಳನ್ನು ಮಾಡಿದರು. ದೈವರಾತರು ಆ ಎಲ್ಲ ಕಾರ್ಯಗಳಲ್ಲಿ ಪಾಲ್ಗೊಂಡರು. ಮೂರು ದಿನಗಳವರೆಗೆ ನಡೆದ ಉತ್ಸವ ಸದೃಶ್ಯವಾದ ಸಮಾರಂಭದಲ್ಲಿ ಸಾವಿರಾರು ಜನ ಪಾಲ್ಗೊಂಡಿದ್ದರು. ಗರುಡೇಶ್ವರದ ಸಮಾಧಿ ಪ್ರತಿಷ್ಠಾನ ಸಮಾರಂಭ ಮುಗಿದ ನಂತರ ದೈವರಾತರು ಮಾತೃಗಯಾ ಸಿದ್ಧಪುರಕ್ಕೆ ತೆರಳಿದರು.

೧. ಮಾತೃಗಯಾ–ಸಿದ್ಧಪುರ, ಅರಾಬಲೇಶ್ವರಗಳಲ್ಲಿ ತಪಾಚರಣೆ

ದೈವರಾತರು ಮಾತೃಗಯಾ ಕ್ಷೇತ್ರಕ್ಕೆ ಬಂದು ಅಲ್ಲಿ ಚಾತುರ್ಮಾಸ್ಯವನ್ನು ಕೈಕೊಂಡರು. ಅಲ್ಲಿ ಕಳೆದ ನಾಲ್ಕಾರು ತಿಂಗಳ ಅವಧಿಯಲ್ಲಿ ದೈವರಾತರು ಕಠೋರವಾದ ತಪವನ್ನಾಚರಿಸಿದರು. ಪಂಚಗವ್ಯ, ಬೇವಿನ ತೊಪ್ಪಲು ಮತ್ತು ಹಾಲು ಇವುಗಳನ್ನು ಮಾತ್ರ ಸೇವಿಸಿ ಜೀವಾಧಾರಣೆ ಮಾಡುತ್ತ ಚಾತುರ್ಮಾಸ್ಯವನ್ನು ಆಚರಿಸಿದರು.[೨]

ಮಾತೃಗಯಾ – ಸಿದ್ಧಪುರ ಕ್ಷೇತ್ರದಲ್ಲಿರುವ ಹಾಟಕೇಶ್ವರ ಮಂದಿರ ಸಂಕೀರ್ಣದಲ್ಲಿ ದೈವರಾತರು ಚಾತುರ್ಮಾಸ್ಯವನ್ನು ಕೈಗೊಂಡರು. ಮಂದಿರ

---

೧. ಯೋಗರಹಸ್ಯ – ಸಮಾಜ ಪುಸ್ತಕಾಲಯ, (೧೯೮೫) ಪುಟ ೨೩; ದೈವರಾತರ ಬರಹಗಳಲ್ಲಿ ಟೇಂಬೇ ಮಹಾರಾಜರ ದೇಹಾಂತ್ಯದ ಕಾಲ ೧೯೧೪ ನೇ ಇಸ್ವಿ ಎಂದು ದಾಖಲಿಸಲ್ಪಟ್ಟಿದೆ. ನಿಖರವಾದ ಟೇಂಬೇ ಮಹಾರಾಜರ ದೇಹಾಂತ್ಯದ ಕಾಲದ ಆಧಾರದಿಂದ ೧೯೧೦ ರಿಂದ ೧೯೧೫ರ ನಡುವಿನ ದೈವರಾತರ ಜೀವನದ ಘಟನೆಗಳ ಕಾಲನಿರ್ಣಯ ಸುಲಭವಾಗುತ್ತದೆ. ಅದರಂತೆ ಗಣಪತಿ ಮುನಿಗಳ ಪ್ರಪ್ರಥಮ ಗೋಕರ್ಣಾಗಮನ ೧೯೧೨ನೇ ಇಸ್ವಿಯಲ್ಲಿ ಎಂಬ ಗಣಪತಿ ಮುನಿಗಳ ಪುತ್ರನ ತೆಲುಗು ಲೇಖನವೂ ಒಂದು ಮಹತ್ವದ ಪ್ರಮಾಣವಾಗುತ್ತದೆ.

೨. ಅಪ್ರಕಟಿತ ಆತ್ಮಚರಿತೆ
ಕಸ್ತೂರಿ, ಕನ್ನಡ ಡೈಜೆಸ್ಟ್, ಪುಟ ೭೫, ಮಾತೃಗಯಾದಲ್ಲಿ ನಡೆದ ಘಟನಾವಳಿಗಳ ನಿರೂಪಣೆ ಮೇಲೆ ಉಲ್ಲೇಖಿಸಿದ ಎರಡೂ ಗ್ರಂಥಗಳಲ್ಲಿ ಮಾಡಲ್ಪಟ್ಟಿದೆ. ಆದರೆ ಕಸ್ತೂರಿಯಲ್ಲಿ ಸಂಕ್ಷಿಪ್ತವಾಗಿ ಈ ಘಟನಾಕ್ರಮ ನಿರೂಪಿಸಲ್ಪಟ್ಟಿದೆ ಮಾತ್ರವಲ್ಲದೇ ಅಲ್ಪ–ಸ್ವಲ್ಪ ವ್ಯತ್ಯಾಸವೂ ಗೋಚರಿಸುತ್ತದೆ.

ಸಮುಚ್ಚಯದಲ್ಲಿ ದೈವರಾತರ ಜೊತೆಗೆ ಆತ್ಮಾನಂದ ಸರಸ್ವತೀ ಅಭಿಧಾನದಿಂದ ಕೂಡಿದ ಇನ್ನೊಬ್ಬ ಸಾಧಕರೂ ಇದ್ದರು.

ದೈವರಾತರು ಮಾತೃಗಯಾ ಸಿದ್ಧಪುರಕ್ಕೆ ಬಂದು ವಾಸ ಮಾಡಿದ ಪ್ರಾರಂಭದ ದಿನಗಳಲ್ಲಿಯೇ ಅಲ್ಲೊಂದು ವೈದಿಕ ಸಮ್ಮೇಲನ ನಡೆಯಿತು. ದೈವರಾತರು ಆ ವೇದ ಪರಿಷತ್ತಿನಲ್ಲಿ ಪಾಲ್ಗೊಂಡಿದ್ದರಿಂದ ಬಡೋದಾ ಮೊದಲಾದ ಊರುಗಳಿಂದ ಬಂದಿದ್ದ ವೇದ ಹಾಗೂ ಸಂಸ್ಕೃತ ವಿದ್ವಾಂಸರುಗಳಿಗೆ ದೈವರಾತರ ಪರಿಚಯವಾಯಿತು. ಅದರಿಂದಾಗಿ ದೈವರಾತರಿಗೆ ತಾವು ಸಂಕಲ್ಪಿಸಿಕೊಂಡಂತೆ ಪಂಚಗವ್ಯದಿಂದ ಚಾತುರ್ಮಾಸ್ಯವನ್ನು ಆಚರಿಸುವದಕ್ಕೆ ಆ ವಿದ್ವಾಂಸರಲ್ಲಿ ಕೆಲವರು ಅನುಕೂಲಮಾಡಿಕೊಟ್ಟರು.

ಹೀಗೆ ದೈವರಾತರ ಸಂಪರ್ಕಕ್ಕೆ ಬಂದವರಲ್ಲಿ ವ್ಯಾಕರಣಾಚಾರ್ಯ ಮಾಣಿಕಲಾಲ ಶಾಸ್ತ್ರಿಗಳು ಹಾಗೂ ಸಂಸ್ಕೃತ ಪ್ರಾಧ್ಯಾಪಕರಾಗಿ ಕಾಲೇಜಿನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಶಿವಶಂಕರ ಭಾಷಾಲಾಲ ಅವರು ಪ್ರಮುಖರು.

ಮಾಣಿಕಲಾಲ ಶಾಸ್ತ್ರಿಗಳು ದೈವರಾತರ ಕೋರಿಕೆಯಂತೆ ಸಿದ್ಧಪುರದ ಧನಿಕ ಗೃಹಸ್ಥರಾದ ಮಘನಲಾಲ್ ಅವರನ್ನು ಸಂಪರ್ಕಿಸಿ ದೈವರಾತರಿಗೆ ಪಂಚಗವ್ಯವನ್ನು ಸಿದ್ಧಪಡಿಸಲು ಬೇಕಾದ ಹಾಲು, ತುಪ್ಪ ಮೊದಲಾದ ಪರಿಕರಗಳನ್ನು ಚಾತುರ್ಮಾಸ್ಯ ವ್ರತದುದ್ದಕ್ಕೂ ಒದಗಿಸುವಂತೆ ಏರ್ಪಾಡು ಮಾಡಿಕೊಟ್ಟರು. ಅದಕ್ಕೆ ಪ್ರತಿಯಾಗಿಯೋ ಎನ್ನುವಂತೆ ಮಾಣಿಕಲಾಲರ ಇಂಗಿತದಂತೆ ದೈವರಾತರು ಅವರಿಗೆ ಬ್ರಹ್ಮಸೂತ್ರ – ಶಂಕರ ಭಾಷ್ಯದ ಅಧ್ಯಾಪನವನ್ನು ಮಾಡತೊಡಗಿದರು.

ದೈವರಾತರು ಆಷಾಢ ಶುದ್ಧ ಏಕಾದಶಿಯಿಂದ ಪಂಚಗವ್ಯ ವ್ರತವನ್ನು ಪ್ರಾರಂಭಿಸಲು ಸಂಕಲ್ಪಿಸಿ ಎಲ್ಲ ಏರ್ಪಾಡುಗಳನ್ನು ಮಾಡಿಕೊಂಡಿದ್ದರು. ಅಷ್ಟರಲ್ಲಿಯೇ ದೈವರಾತರ ವಿಚಾರಗಳನ್ನು ತಿಳಿದ ಮಾತೃಗಯಾ – ಸಿದ್ಧಪುರದ ಹಾಗೂ ಸುತ್ತಮುತ್ತಲಿನ ಊರುಗಳ ಕೆಲವು ಪ್ರಮುಖರ ನಿಯೋಗ ದೈವರಾತರ ಬಳಿಗೆ ಬಂದು ದೈವರಾತರಲ್ಲಿ ತಮ್ಮ ಕಷ್ಟವನ್ನು ಪರಿಹರಿಸಿಕೊಡುವಂತೆ ಪ್ರಾರ್ಥಿಸಿಕೊಂಡಿತು. ದೈವರಾತರ ಮಾತುಗಳಲ್ಲಿ ಆ ಘಟನೆ ನಿರೂಪಿಸಲ್ಪಟ್ಟಿದ್ದು ಹೀಗೆ– "ಆಷಾಢ ಶುದ್ಧ ಏಕಾದಶಿಯಂದು ಪಂಚಗವ್ಯ ಪ್ರಾಶನ ವ್ರತವನ್ನು ಸ್ವೀಕರಿಸಬೇಕೆಂದು ನಿಶ್ಚಯಿಸಿದ್ದೆನು. ಊರ ಪ್ರಮುಖರು ಬಂದು, 'ನಮ್ಮಲ್ಲಿ ಮಳೆಯಿಲ್ಲದೇ ಏಳೆಂಟು ವರ್ಷಗಳಾದವು; ಎಲ್ಲೆಲ್ಲೂ ಹಾಹಾಕಾರವಾಗುತ್ತಿದೆ.

ಅದಕ್ಕೇನಾದರೂ ಉಪಾಯವನ್ನು ಹೇಳಬೇಕೆಂದು ಪ್ರಾರ್ಥಿಸಿದರು. ಅದಕ್ಕೆ ನಾನು 'ಊರಿನ ಕೆಲವು ವೈದಿಕ ಜನರು ಬಂದರೆ ಒಂದು ವೈದಿಕ ಮಂತ್ರವನ್ನು ಮತ್ತು ಅದರ ಅನುಷ್ಠಾನವಿಧಿಯನ್ನು ಬರೆದುಕೊಡುತ್ತೇನೆಂದೆ. ಇದರಿಂದ ಅವಶ್ಯವಾಗಿ ಮಳೆಯು ಬರುವದೆಂದು ಹೇಳಿದೆ, ಆದರೆ ಯಾರೊಬ್ಬರೂ ಬರಲಿಲ್ಲ. ಆದರೂ ನಾನೊಬ್ಬನೇ ಆಷಾಢ ಶುದ್ಧ ಏಕಾದಶಿಯಂದು ಮುಂಜಾನೆ ಪಂಚಗವ್ಯವನ್ನು ತಯಾರಿಸಿ ಸರಸ್ವತೀ ನದಿಯಲ್ಲಿ ನಿಂತು ಆ ಮಂತ್ರವನ್ನು ಜಪಿಸಲು ಪ್ರಾರಂಭಿಸಿದೆನು. ಈ ಮಂತ್ರದ ಜಪವನ್ನು ಇಪ್ಪತ್ನಾಲ್ಕು ತಾಸುಗಳ ಪರ್ಯಂತ ಅವಿಚ್ಛಿನ್ನವಾಗಿ ಜಪಿಸಬೇಕೆಂದು ಸಂಕಲ್ಪಿಸಿ ಅದರಂತೆ ಪ್ರವೃತ್ತನಾಗಿದ್ದೆನು. ಹಾಗೆ ಜಪಿಸುತ್ತಿರುವಾಗ ಮಧ್ಯರಾತ್ರಿಯಲ್ಲಿ ಮಳೆ ಸುರಿಯಲು ಪ್ರಾರಂಭವಾಯಿತು. ಆಗ ನದೀದಡದ ಮೇಲೆ ನೂರಾರು ಜನರು ಬಂದು ಸೇರಿದರು. "ನೀವು ಕೂಡಲೇ ನದೀದಡಕ್ಕೆ ಬರಬೇಕು, ಇಲ್ಲವಾದರೆ ನೀರಿಲ್ಲದ ಸರಸ್ವತೀ ನದಿಯು ನೀರಿನಿಂದ ತುಂಬಿ ನಿಮ್ಮನ್ನು ಸೆಳೆದೊಯ್ಯುತ್ತದೆ" ಎಂದು ಕೂಗಿ ಹೇಳುತ್ತಿದ್ದರು. ಆದರೆ ನಾನು ಮಾತ್ರ ನಿರ್ಭಯದಿಂದ ಮತ್ತು ನಿಶ್ಚಲ ಚಿತ್ತದಿಂದ ಜಪವನ್ನು ಮುಂದುವರಿಸಿದೆ. ನಾನು ಮಾಡಿದ ಸಂಕಲ್ಪದ ಪ್ರಕಾರ ಮರುದಿನ ಸೂರ್ಯೋದಯದವರೆಗೆ ಜಪಿಸಿ ಮಂತ್ರ ಪಠನವನ್ನು ಪೂರ್ಣಗೊಳಿಸಿದೆ. ಆ ಮಂತ್ರದ ವಿವರ ಹೀಗಿದೆ–

ದೀರ್ಘತಮಾ ಋಷಿಃ
"ದಿವ್ಯಂ ಸೂಪರ್ಣಂ ವಾಯಸಂ ಬೃಹಂತಂ....
ಸರಸ್ವತಂ ಅವಸೇ ಜ್ಯೋಹವೀಮಿ"

(ಋಗ್ವೇದ – ೧–೧೬೪–೫೨)

ಅಲ್ಲಿಯ ಭೂಮಿಗೆ ಅವಶ್ಯವಿದ್ದಷ್ಟು ಮಳೆಯು ದಿನಾಲು ಬರುವದಕ್ಕಾರಂಭಿಸಿತು. ಮರುದಿನ ಅಲ್ಲಿಯ ಜನರೆಲ್ಲ ಬಂದು ನನ್ನನ್ನು ಅಭಿನಂದಿಸಿದರು. ಇದರೊಂದಿಗೆ ಪಂಚಗವ್ಯ ವ್ರತವೂ ನಿಯತವಾಗಿ ಆರಂಭವಾಯಿತು.....[೩]

ಈ ಅವಧಿಯಲ್ಲಿ ದೈವರಾತರು ಕಠಿಣವಾದ ತಪಾಚರಣೆಯಲ್ಲಿ ನಿರತರಾದಂತೆ ಅಧ್ಯಯನ – ಅಧ್ಯಾಪನರೂಪವಾದ ತಪಸ್ಸನ್ನೂ ನಡೆಸಿದರು. ಹಿಂದೆಯೇ ಪ್ರಸ್ತಾವಿಸಿದಂತೆ ಬ್ರಹ್ಮಸೂತ್ರ ಭಾಷ್ಯವನ್ನು ಮಾಣಿಕಲಾಲ ಶಾಸ್ತ್ರಿಗಳಿಗೆ ಬೋಧಿಸುತ್ತಿದ್ದಂತೆ ಹಾಟಕೇಶ್ವರ ಮಂದಿರ – ಸಮುಚ್ಚಯದ ಸನಿಹವಿರುವ

---

೩. ಅಪ್ರಕಟಿತ ಆತ್ಮಚರಿತೆ; ಪುಟ ೭೫

ಸಾರಸ್ವತೇಶ್ವರ ದೇವಾಲಯದ, ಮಹಾರಾಷ್ಟ್ರ ಮೂಲದ ಅಮೃತಲಾಲ ಭಟ್ಟರಿಗೆ ಶುಕ್ಲ–ಯಜುರ್ವೇದ ಭಾಷ್ಯವನ್ನು ಪಾಠ ಮಾಡುತ್ತಿದ್ದರು. ಮತ್ತು ಅವರಿಂದ ಶುಕ್ಲಯಜುರ್ವೇದವನ್ನು ಸಸ್ವರವಾಗಿ ಉಚ್ಚರಿಸುವದನ್ನು ಪಾಠ ಮಾಡಿಸಿಕೊಂಡು ಶುಕ್ಲಯಜುರ್ವೇದ ಮಂತ್ರ ಪಠನವನ್ನು ಅಧ್ಯಯನ ಮಾಡಿದರು. ಭಾಷಾಲಾಲರಿಗೆ ಹಠಯೋಗ ಪ್ರಕ್ರಿಯೆಗಳನ್ನು ಅವರ ಪ್ರಾರ್ಥನೆಯಂತೆ ಹೇಳಿ ಕೊಡುತ್ತಿದ್ದರು.

ಆತ್ಮಚರಿತ್ರೆಯ ಪುಟಗಳಲ್ಲಿ ಇನ್ನೊಂದು ಸವಿಶೇಷವಾದ ಘಟನೆಯ ಉಲ್ಲೇಖವಿದೆ. ನಿಯತವಾಗಿ ಪಂಚಗವ್ಯದ ಉದ್ದೇಶಕ್ಕಾಗಿ ವ್ಯಕ್ತಿಯೋರ್ವ ಹಾಲನ್ನು ತಂದುಕೊಡುತ್ತಿದ್ದ. ಒಂದು ದಿನ ಪ್ರತಿನಿತ್ಯದಂತೆ ಹಾಲನ್ನು ದೈವರಾತರ ಬಳಿ ಇಟ್ಟು ಮರಳಿ ಹೊರಡುವದರಲ್ಲಿದ್ದ. ದೈವರಾತರು ಬ್ರಹ್ಮಸೂತ್ರದ ಪಾಠವನ್ನು ಮಾಡುತ್ತಿದ್ದರು. ಹೊಸಲಿನಾಚೆ ಹೆಜ್ಜೆ ಇಡುತ್ತಿದ್ದ ವ್ಯಕ್ತಿಯನ್ನು ಕರೆದು "ನಿನ್ನ ಹಾಲನ್ನು ನೀನೆ ತೆಗೆದುಕೊಂಡು ಹೋಗೆಂದು" ದೈವರಾತರು ಆ ವ್ಯಕ್ತಿಗೆ ಹೇಳಿದರು. ಆ ವ್ಯಕ್ತಿ ಏಕೆ ? ಎಂದು ಕೇಳಲಾಗಿ ದೈವರಾತರು ಹಾಲು ಶುದ್ಧವಾಗಿಲ್ಲ, ಅದಕ್ಕೆ ಮತ್ತೇನನ್ನೋ ಮಿಶ್ರಣ ಮಾಡಿದ್ದೀಯಾ ಎಂದು ಹೇಳಿದರು. ಆ ವ್ಯಕ್ತಿ ಇದಕ್ಕೆ ಒಪ್ಪದೇ ಅದು ಶುದ್ಧ ಆಕಳ ಹಾಲು ಎಂದು ಹೇಳುತ್ತಲೇ ಇದ್ದ. ಬ್ರಹ್ಮಸೂತ್ರ ಪಾಠವನ್ನು ಕೇಳುತ್ತಿದ್ದ ಮಾಣಿಲಾಲ ಶಾಸ್ತ್ರಿಗಳೂ ಆ ವ್ಯಕ್ತಿಯ ಪ್ರಾಮಾಣಿಕತೆಯನ್ನು ಎತ್ತಿ ಹಿಡಿದು ಆ ವ್ಯಕ್ತಿಯನ್ನೇ ಸಮರ್ಥಿಸುತ್ತಿದ್ದರು. ಆದರೆ ದೈವರಾತರು ಮಾತ್ರ ಸೋಲನ್ನು ಒಪ್ಪಿಕೊಳ್ಳದೇ ಆ ವ್ಯಕ್ತಿಯ ಮುಖದಿಂದ ಸತ್ಯವು ಪ್ರಕಟವಾಗುವಂತೆ ಮಾಡುವಲ್ಲಿ ಯಶಸ್ವಿಯಾದರು. ವಾಸ್ತವವಾಗಿ ಆ ವ್ಯಕ್ತಿ ಆ ದಿವಸ ಗೋಕ್ಷೀರಕ್ಕೆ ಕಾರಣಾಂತರದಿಂದ ಕುರಿಯ ಹಾಲನ್ನು ಸೇರಿಸಿದ್ದ. ತನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮಿಸಬೇಕೆಂದು ಪ್ರಾರ್ಥಿಸಿಕೊಂಡ. ಬೇರೆಯ ಶುದ್ಧ ಗೋಕ್ಷೀರವನ್ನು ತಂದುಕೊಟ್ಟ. ದೈವರಾತರ ಶುದ್ಧಾಂತಃಕರಣ ದರ್ಪಣದಲ್ಲಿ ಸತ್ಯವು ಪ್ರತಿಫಲನವಾದ ವಿಧದಿಂದ ಮಾಣಿಕಲಾಲರು ಬೆರಗಾದದ್ದು ಮಾತ್ರ ಸುಳ್ಳಲ್ಲ.

ದೈವರಾತರು ಈ ವಿಧವಾಗಿ ಮಾತೃಗಯೆ ಸಿದ್ಧಪುರದಲ್ಲಿ ತಪವನ್ನಾಚರಿಸುತ್ತ ಸರಿಸುಮಾರು ಎರಡು ತಿಂಗಳುಗಳನ್ನು ಕಳೆದರು. ದೈವರಾತರು ಈ ಸಮಯದಲ್ಲಿ ಮತ್ತಷ್ಟು ಏಕಾಂತವನ್ನು ಬಯಸಿ ಮಾತೃಗಯೆಯಿಂದ ಸ್ವಲ್ಪ ದೂರವಿರುವ ಜನವಸತಿ ಇಲ್ಲದ ಅರಾಬಲೇಶ್ವರ ಎಂಬ ಈಶ್ವರಧಾಮಕ್ಕೆ ನಡೆದರು. ಆಳೆತ್ತರದ ಸ್ವಯಂಭೂ ಈಶ್ವರಲಿಂಗವಿರುವ ಆ ಸ್ಥಾನವೂ ಸರಸ್ವತೀ ನದಿಯ ದಕ್ಷಿಣ ದಿಕ್ಕಿನ ದಂಡೆಯ ಮೇಲಿದ್ದು ಅಲ್ಲಿ

ಈಶ್ವರನ ಸಣ್ಣಗುಡಿಯ ಹೊರತಾಗಿ ಮತ್ತೇನೂ ಇರಲಿಲ್ಲ. ಎರಡು ಅಂಕಣದ ನಂದಿಮಂಟಪ ಮತ್ತು ಒಂದು ಅಂಕಣದ ಗರ್ಭಗೃಹ ಬಿಟ್ಟರೆ ಅಲ್ಲಿ ಇನ್ನೇನೂ ಇಲ್ಲದ ಕಾರಣ ದೈವರಾತರು ಸಿದ್ಧಪುರದ ತಮ್ಮ ಪರಿಚಿತರ ಸಹಾಯದಿಂದ ಈಶ್ವರನ ಗುಡಿಯ ಪಕ್ಕದಲ್ಲಿ ಒಂದು ಪರ್ಣಕುಟಿಯನ್ನು ನಿರ್ಮಿಸಿಕೊಂಡು ಅಲ್ಲಿ ಇರತೊಡಗಿದರು. ಪ್ರತಿದಿನ ಈಶ್ವರನ ಪೂಜೆಗಾಗಿ ಸಿದ್ಧಪುರದಿಂದ ಒಮ್ಮೆ ಮಾತ್ರ ಅರ್ಚಕರು ಬಂದು ಪೂಜೆಯನ್ನು ಮಾಡಿ ಹೋದರೆ ಅಲ್ಲಿ ಇನ್ಯಾರ ಸುಳಿವೂ ಕೂಡ ಇರುತ್ತಿರಲಿಲ್ಲ.

ಸಿದ್ಧಪುರದ ಸಜ್ಜನರೊಬ್ಬರು ದೈವರಾತರ ಸೇವಾ ಕೈಂಕರ್ಯಕ್ಕೆ ಕಟಿಬದ್ಧರಾದದ್ದು ಸುದೈವವೇ ಸರಿ. ಅವರು ಸವತ್ಸ ಧೇನುವೊಂದನ್ನು ಅರಾಬಲೇಶ್ವರಕ್ಕೆ ತಂದು ದೈವರಾತರ ಪಂಚಗವ್ಯ ವ್ರತಕ್ಕೆ ಭಂಗ ಬಾರದಂತೆ ನೋಡಿಕೊಳ್ಳತೊಡಗಿದರು. ಮಾಣಿಕಲಾಲ ಶಾಸ್ತ್ರಿಗಳು ಅರಾಬಲೇಶ್ವರಕ್ಕೆ ಬಂದು ವಾಸಮಾಡದಿದ್ದರೂ ಪ್ರತಿದಿನ ಅರಾಬಲೇಶ್ವರಕ್ಕೆ ಬಂದು ಹೋಗುತ್ತಿದ್ದರು. ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಪ್ರತಿದಿನ ಮಾತೃಗಯೆಯಿಂದ ಅರಾಬಲೇಶ್ವರಕ್ಕೆ ಬಂದು ನದಿಯಲ್ಲಿ ಸ್ನಾನ ಮಾಡಿ ಅಹ್ನಿಕಗಳನ್ನು ಮುಗಿಸಿ ತಾಸು ಎರಡು ತಾಸುಗಳವರೆಗೆ ಶುಕ್ಲಯಜುರ್ವೇದವನ್ನು ಪಠಿಸುತ್ತ ಬ್ರಹ್ಮಯಜ್ಞವನ್ನು ಸಂಪನ್ನಗೊಳಿಸುತ್ತಿದ್ದರು. ತಾವೇ ಸ್ವಲ್ಪ ಅಡಿಗೆ ಮಾಡಿ ಸಾಯಂಕಾಲದ ವರೆಗಿದ್ದು ಸ್ನಾನ, ಸಂಧ್ಯಾದಿ ಸಾಯಂಕಾಲೀನ ಆಹ್ನಿಕವನ್ನು ಮುಗಿಸಿ ಮಾತೃಗಯೆಗೆ ತೆರಳುತ್ತಿದ್ದರು. ಬ್ರಹ್ಮಸೂತ್ರದ ಭಾಷ್ಯದ ಅಭ್ಯಾಸವೂ ಕ್ರಮವಾಗಿ ಮುಂದುವರಿದಿತ್ತು. ದೈವರಾತರ ದಿನಚರಿ ಅರಾಬಲೇಶ್ವರದಲ್ಲಿ ಸ್ವಲ್ಪಮಟ್ಟಿಗೆ ಮಾತ್ರ ಬದಲಾಗಿತ್ತು ಎನ್ನಬಹುದು. ಮಾತೃಗಯೆ ಸಿದ್ಧಪುರಕ್ಕಿಂತ ಇಲ್ಲಿ ಹೆಚ್ಚು ಏಕಾಂತ ಹಾಗೂ ತಪಸ್ಸಿಗೆ ವ್ಯವಧಾನ ಸಿಕ್ಕಿದ್ದವು. ಪ್ರತಿದಿನ ಮುಂಜಾನೆ ನದಿಯಲ್ಲಿ ಮಿಂದು ಪ್ರಾತರಾಹ್ನಿಕವನ್ನು ಮುಗಿಸಿ ವಿಧಿವತ್ತಾಗಿ, ಪ್ರಮಾಣಬದ್ಧವಾಗಿ ಪಂಚಗವ್ಯವನ್ನು ಸಿದ್ಧಪಡಿಸಿ ಹವನದ ದ್ವಾರಾ ದೇವತೆಗಳಿಗೆ ಅರ್ಪಿಸಿ ಅನಂತರ ತಾವು ಸ್ವೀಕರಿಸುತ್ತಿದ್ದರು. ಇದರ ಹೊರತಾಗಿ ಬೇವಿನ ತೊಪ್ಪಲನ್ನು ಮಾತ್ರ ಆ ದಿನಗಳಲ್ಲಿ ದೈವರಾತರು ಸ್ವೀಕರಿಸುತ್ತಿದ್ದರು. ಎರಡು ಅಧ್ಯಾಯ ಋಗ್ವೇದ ಪಠನವೂ ಪ್ರತಿನಿತ್ಯ ನಡೆಯುತ್ತಿತ್ತು. ಟೇಂಬೇ ಮಹಾರಾಜರಿಂದ ಹಠಯೋಗದ ಸೂಕ್ಷ್ಮ ಪ್ರಕ್ರಿಯೆಗಳನ್ನು ಅಭ್ಯಾಸ ಮಡಿದ್ದ ದೈವರಾತರು ಉಳಿದೆಲ್ಲ ಸಮಯವನ್ನು ತಪಸ್ಸಿನಲ್ಲಿ ಕಳೆಯುತ್ತಿದ್ದರು. ಹೀಗೆ ತಪಸ್ಸಿನಲ್ಲಿ ನಿರತರಾಗಿ ಏಕಾಂತದಲ್ಲಿ ಅರಾಬಲೇಶ್ವರದಲ್ಲಿ ಕೆಲವು ದಿನಗಳನ್ನು ಕಳೆದ ದೈವರಾತರಿಗೆ ವೈದಿಕ ದೇವಿಸೂಕ್ತದ ಮೇಲೆ ವಿಸ್ತಾರವಾದ ಭಾಷ್ಯವನ್ನು

ಬರೆಯಬೇಕೆಂಬ ವೃತ್ತಿಯು ಅಂತಃಕರಣದಲ್ಲಿ ಮೂಡಿತು. ದೈವರಾತರೇ ಅದನ್ನು ಹೀಗೆ ವ್ಯಕ್ತಪಡಿಸುತ್ತಾರೆ– "ಆ ವೇದಮಾತೆಯ ಪ್ರೇರಣೆಯಿಂದ ಪ್ರತಿದಿನ ಋಗ್ವೇದ ಸಂಹಿತೆಯ ಎರಡು ಅಧ್ಯಾಯಗಳನ್ನು ಪಾರಾಯಣ ಮಾಡುತ್ತಿದ್ದೆ. ಸ್ವಲ್ಪ ದಿನಗಳ ಅನಂತರ ವೇದ ಮಂತ್ರಗಳ ಮೇಲೆ ಸಂಸ್ಕೃತ ಭಾಷೆಯಲ್ಲಿ ಭಾಷ್ಯವನ್ನು ಬರೆಯಬೇಕೆಂದು ನಮ್ಮಲ್ಲಿ ಒಂದು ವೃತ್ತಿಯು ಉದಿಸಿತು. ಅದರಿಂದ ಸರಸ್ವತೀ ಮಂತ್ರವಾದ "ಚತ್ವಾರಿ ವಾಕ್ ಪರಿಮಿತಾ ಪದಾನಿ" ಎಂಬ ಮಂತ್ರವನ್ನೂ ಬಹು ವಿಸ್ತೃತವಾಗಿಯೂ, ಆಳವಾದ ತಾತ್ತ್ವಿಕ ಅರ್ಥಗರ್ಭಿತವಾದದ್ದೂ ಆದ ಭಾಷ್ಯವನ್ನು ರಚಿಸಿರುವೆನು....."[೪]

ದೈವರಾತರು ಅರಾಬಲೇಶ್ವರದಲ್ಲಿರುವಾಗ ಇನ್ನೊಬ್ಬ ವೈದಿಕ ವಿದ್ವಾಂಸರು ಪ್ರತಿ ಸೋಮವಾರ ಅರಾಬಲೇಶ್ವರಕ್ಕೆ ಬಂದು ಈಶ್ವರ ಪೂಜೆಯನ್ನು ಮಾಡಿ ದೈವರಾತರ ದರ್ಶನ ಪಡೆದು ಹೋಗುತ್ತಿದ್ದರು. ಅವರು ಹರಗೋವಿಂದ ಘನಪಾಠಿ ಎನ್ನುವವರು. ಸೇಠ ಮಫನಲಾಲ ಎಂಬ ಮುಂಬೈಯ ವ್ಯಾಪಾರಿಗಳೊಬ್ಬರು ಹರಗೋವಿಂದ ಘನಪಾಠಿಗಳ ಮೂಲಕ ದೈವರಾತರ ವಿಷಯವನ್ನು ತಿಳಿದು ಅರಾಬಲೇಶ್ವರಕ್ಕೆ ಬಂದು ದೈವರಾತರ ದರ್ಶನ ಪಡೆದು ದೈವರಾತರಿಂದ ಲೌಕಿಕ ಸಂಪತ್ತನ್ನು ಅಭಿವೃದ್ಧಿಪಡಿಸಿಕೊಂಡ ವೃತ್ತಾಂತದ ಪ್ರಸ್ತಾವನೆಯೊಂದು ಅಪ್ರಕಟಿತ ಆತ್ಮಚರಿತ್ರೆಯಲ್ಲಿ ಬಂದಿದೆ. ಆಶ್ವೀನ ಮಾಸದ ಕೃಷ್ಣ ಚತುದರ್ಶಿಯಂದು ದೈವರಾತರು ಯಂತ್ರವೊಂದನ್ನು ಬರೆದು ಆ ವ್ಯಾಪಾರಿಗಳಿಗೆ ಕೊಟ್ಟರು. ಮುಂಬೈಯ ಆ ವ್ಯಾಪಾರಿಗಳು ಅದರ ಮೂಲಕ ಕ್ರಮ ಕ್ರಮವಾಗಿ ವ್ಯಾಪಾರದಲ್ಲಿ ಅಭಿವೃದ್ಧಿಯನ್ನು ಹೊಂದಿ ಅಪಾರ ಐಶ್ವರ್ಯವನ್ನು ಪಡೆದರಂತೆ. ದೈವರಾತರದು ಬಹು ಆಯಾಮಗಳನ್ನು ಹೊಂದಿದ ವಿಶಿಷ್ಟ ವ್ಯಕ್ತಿತ್ವ. ತಂತ್ರ–ಮಂತ್ರ ಹಾಗೂ ಯಂತ್ರಗಳೆಲ್ಲದರಲ್ಲೂ ಅಪಾರ ಪರಿಣತಿ ಇತ್ತು.[೫] ದೈವರಾತರದು ಸರಳ, ಮುಗ್ಧ ಹಾಗೂ ನಿರ್ಮಲಾಂತಃಕರಣದ ವ್ಯಕ್ತಿತ್ವ. ತಾವಾಗಿಯೇ ಮೇಲೆ ಬಿದ್ದು ಅನ್ಯರ ಸಂಕಟವನ್ನು ಪರಿಹಾರ ಮಾಡುವ

---

೪. ಅಪ್ರಕಟಿತ ಆತ್ಮಚರಿತೆ; ಪುಟ ೬೬
ದೈವರಾತರು ರಚಿಸಿದ ಭಾಷ್ಯದ ಉಪಲಬ್ಧಿಯ ಕುರಿತು ಮಾತ್ರ ಏನೂ ಹೇಳುವಂತಿಲ್ಲ. ದೈವರಾತರು ಹಲವು ಕೃತಿಗಳನ್ನು ರಚಿಸಿದ ಕುರಿತು ಪ್ರಮಾಣಗಳಿವೆಯಾದರೂ ಅವು ಮುಂದೆ ಏನಾದವು; ಅಪ್ರಕಟಿತ ರೂಪದಲ್ಲಿಯಾದರೂ ಉಪಲಬ್ಧವಿರಬೇಕಿತ್ತಲ್ಲ ಎಂಬ ಶಂಕೆ ಮೂಡುತ್ತದೆ. ದೇಶದ ತುಂಬ ತಿರುಗಾಟ, ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ, ಬೇರೆ ಕಾಲಘಟ್ಟಗಳಲ್ಲಿ ರಚಿಸಿದ ಕೆಲವಾದರೂ ಬರಹಗಳು ಉಳಿದು ಪ್ರಕಟವಾದದ್ದೊಂದು ಸುದೈವವೆನ್ನಬೇಕು.

೫. ಅಪ್ರಕಟಿತ ಆತ್ಮಚರಿತೆ; ಪುಟ ೬೬–೬೭

ಪರೋಪಕಾರದ ಪ್ರವೃತ್ತಿ ಅವರದಾಗಿತ್ತು; ಇನ್ನು ಅನ್ಯರು ಬಂದು ಸಹಾಯ ಯಾಚಿಸಿದರಂತೂ ಏನು, ಎತ್ತ ಎಂದು ಕೇಳದೇ ಸಹಾಯಕ್ಕೆ ಧಾವಿಸುತ್ತಿದ್ದರು.

ದೈವರಾತರು ಅರಾಬಲೇಶ್ವರದಲ್ಲಿ ಪಂಚಗವ್ಯ ಪ್ರಾಶನ ಮಾಡುತ್ತ ಚಾತುರ್ಮಾಸ್ಯದ ಶೇಷ ಅವಧಿಯನ್ನು ತಪಾಚರಣೆಯ ಮೂಲಕ ಕಳೆದು ವಾಸಿಷ್ಠ ಗಣಪತಿ ಮುನಿಗಳನ್ನು ಸೇರಲು ಮುಂಬೈ ಮೂಲಕ ಓರಿಸಾ ಪ್ರಾಂತಕ್ಕೆ ತೆರಳಿದರು. ಹಾಗೆ ತೆರಳುವದಕ್ಕೆ ಮೊದಲು ಅರಾಬಲೇಶ್ವರದ ವಾಸದ ಅಂತ್ಯದಲ್ಲಿ ಇನ್ನೊಂದು ಘಟನೆ ನಡೆಯಿತು. ಅದನ್ನು ಪ್ರಸ್ತಾವಿಸದೆ ಹೋದರೆ ನ್ಯೂನತಾ ದೋಷವೇ ಆದೀತು.

ದೈವರಾತರು ಅರಾಬಲೇಶ್ವರದಲ್ಲಿರುವಾಗ ಶಾರದಾ ಪೀಠವೆಂದು ಪ್ರಸಿದ್ಧವಾದ ದ್ವಾರಕಾ ಪೀಠದಲ್ಲಿ ಪೀಠಾಧೀಶ್ವರರಿರಲಿಲ್ಲ. ಬಡೋದಾ ಸಂಸ್ಥಾನವು ಬಹಳ ಕಾಲದಿಂದ ಈ ಪೀಠದ ವಿಷಯದಲ್ಲಿ ಮಧ್ಯಪ್ರವೇಶಿಸುತ್ತ ಬಂದಿದೆ. ದೈವರಾತರಿಗೂ ಬಡೋದೆಯ ರಾಜವಂಶದ ಕಡೆಯಿಂದಲೇ ಒಂದು ಆಮಂತ್ರಣ ಅರಾಬಲೇಶ್ವರದಲ್ಲಿರುವಾಗ ಬಂದಿತ್ತೆಂದು ಅವರು ಆತ್ಮಚರಿತ್ರೆಯ ಟಿಪ್ಪಣಿಗಳಲ್ಲಿ ಉಲ್ಲೇಖಿತವಾಗಿದೆ.

ಮಾತೃಗಯೆಯಲ್ಲಿ ವೈದಿಕ ಸಮ್ಮೇಲನದಲ್ಲಿ ಪರಿಚಿತರಾಗಿದ್ದ ಶಿವಶಂಕರ ಭಾಷಾಲಾಲ ಎಂಬ ಮಹನೀಯರು ಬಡೋಡೆಯ ರಾಜಸತ್ತೆಯ ಪ್ರತಿನಿಧಿಗಳಾಗಿ ಈಗ ದೈವರಾತರ ಬಳಿಗೆ ಬಂದು ದ್ವಾರಕಾಪೀಠಕ್ಕೆ ಉತ್ತರಾಧಿಕಾರಿಯಾಗಬೇಕೆಂದು ಕೇಳುವದಕ್ಕೆ ಬಂದಿದ್ದರು. ದೈವರಾತರಲ್ಲಿ ಹಠಯೋಗವನ್ನು ಸ್ವಲ್ಪಕಾಲ ಅಭ್ಯಾಸ ಮಾಡಿದ್ದರಿಂದ ಭಾಷಾಲಾಲರಿಗೆ ದೈವರಾತರ ವ್ಯಕ್ತಿತ್ವದ ಪರಿಚಯ ಹತ್ತಿರದಿಂದಲೇ ಇತ್ತು. ದ್ವಾರಕಾಪೀಠದ ಶಿಷ್ಯವೃಂದ ಮತ್ತು ಬಡೋದೆಯ ರಾಜಸತ್ತೆಯ ಮಧ್ಯೆ ಉತ್ತರಾಧಿಕಾರಿಯ ವಿಷಯದಲ್ಲಿ ಮತಭೇದವೂ ಇತ್ತು. ಆ ಕಾಲದ ಅತಿದೊಡ್ಡ ಸಂಸ್ಕೃತ ಗ್ರಂಥಾಲಯದ ಉನ್ನತಾಧಿಕಾರಿಗಳಾದ ವಿನಯತೋಷ ಭಟ್ಟಾಚಾರ್ಯ ಎಂಬ ಮಹನೀಯರಿಂದ ದೈವರಾತರ ವಿದ್ವತ್ತೆಯನ್ನು ಕೇಳಿದ ಬಡೋದೆಯ ಮಹಾರಾಜರು ದೈವರಾತರನ್ನೇ ದ್ವಾರಕಾ ಪೀಠಾಧೀಶರನ್ನಾಗಿ ಮಾಡುವದಕ್ಕಾಗಿ ದೈವರಾತರನ್ನು ಒಪ್ಪಿಸುವದಕ್ಕಾಗಿ ಭಾಷಾಲಾಲರನ್ನು ಕಳುಹಿಸಿಕೊಟ್ಟಿದ್ದರು. ಆದರೆ ದೈವರಾತರು ಇದಕ್ಕೆ ಸುತರಾಂ ಒಪ್ಪಿಗೆಯನ್ನು ನೀಡಲಿಲ್ಲ. ದೈವರಾತರ ಅಭಿಪ್ರಾಯವನ್ನು ಅವರ ಮಾತುಗಳಲ್ಲಿಯೇ ಕೇಳಬೇಕು– "ಅವರ (ಬಡೋದೆಯ ಮಹಾರಾಜರ) ಈ ಪ್ರೇಮಾಗ್ರಹದ ವಿನಂತಿಯನ್ನು ಕೇಳಿ ನನಗೆ ಸಂತೋಷವಾಯಿತು. ಅದಕ್ಕೆ ಉತ್ತರವಾಗಿ– 'ಸನ್ಯಾಸವು ಎಲ್ಲದಕ್ಕೂ

ಒಂದು ಉಚ್ಚವಾದ ಸ್ಥಾನವು. ಅದು ತ್ಯಾಗದಿಂದ ತಾನಾಗಿ ಉದಿಸುವ ಒಂದು ಅಲೌಕಿಕವಾದ ಬ್ರಹ್ಮಾತ್ಮ ನಿಷ್ಠೆಯು, ಅದು ಕೃತಿಸಾಧ್ಯವಲ್ಲ. ಆ ವೈರಾಗ್ಯ ದೇವತೆಯು ನನ್ನನ್ನು ಅನುಗ್ರಹಿಸುವದಾದರೆ ಅದಕ್ಕೆ ನನ್ನ ಶರೀರವನ್ನು, ನನ್ನ ಆತ್ಮವನ್ನು ಸಮರ್ಪಿಸುತ್ತೇನೆ. ಈಗಲೇ ಬಂದು ಅನುಗ್ರಹಿಸಲಿ. ಹಾಗೆ ಅನುಗ್ರಹಿಸಿದರೆ ನಾನು ಕೃಷ್ಣಾಜಿನದ ಮೇಲೆ ಕುಳಿತ ಈ ಶಿಲಾತಲವೇ ಜಗದ್ಗುರು ಪೀಠವಾಗಿ ಸಲ್ಲುವದು. ಆಗ ನನ್ನ ಸ್ವತಂತ್ರವಾದ ಈ ಜಗದ್ಗುರು ಪೀಠಕ್ಕಿಂತಲೂ ಪರತಂತ್ರವಾದ ದ್ವಾರಕಾಪೀಠವು ಹೆಚ್ಚಿನದಾಗಲಾರದು. ಹಾಗೆ ವೈರಾಗ್ಯದೇವತೆಯ ಅನುಗ್ರಹವಿಲ್ಲದೇ ನಾನು ಏರಿದ ಆ ದ್ವಾರಕಾಪೀಠವು ನನ್ನ ಅಧೋಗತಿಗೆ ಕಾರಣವಾಗಬಹುದೆ'ಂದು ಸ್ಪಷ್ಟವಾಗಿ ತಿಳಿಸಿದೆನು" ಭಾಷಾಲಾಲರು ಇಷ್ಟಕ್ಕೂ ನಿಲ್ಲದೇ ಗೋಕರ್ಣಕ್ಕೆ ಹೋಗಿ ದೈವರಾತರ ತಂದೆಯವರಿಂದಲೇ ಅನುಮತಿಯನ್ನು ತರುತ್ತೇನೆಂದಾಗ ದೈವರಾತರು "ನೀವು ಬರೀ ಮಾತಿನಿಂದ ದಾನರೂಪವಾಗಿ ನನ್ನನ್ನು ಪಡೆದು ಬರಬಹುದು; ನಾನು ಅವರಿಗೆ (ತಂದೆಗೆ) ಮಾರಿ ಹೋದವನಲ್ಲ, ಸ್ವತಂತ್ರನು". ಎಂದು ಕಠೋರವಾಗಿಯೇ ಹೇಳಿದರು. ಇದನ್ನು ಕೇಳಿದ ನಂತರ ಭಾಷಾಲಾಲರು ನಿರಾಸೆಯಿಂದ ಬಡೋದೆಗೆ ತೆರಳಿದರು.[೬]

ದೈವರಾತರು ನಂತರ, ಕಾರ್ತಿಕಮಾಸದ ಪೂರ್ಣಿಮೆಯ ದಿವಸ ಪಂಚಗವ್ಯ ವ್ರತವನ್ನು ಸಂಪನ್ನಗೊಳಿಸಬೇಕೆಂದು ನಿಶ್ಚಯಿಸಿದರು. ಆ ದಿವಸ ಅರಾಬಲೇಶ್ವರದಲ್ಲಿ ಮಾಣಿಕಲಾಲ ಶಾಸ್ತ್ರಿಗಳು, ಹರಗೋವಿಂದ ಘನಪಾಠಿಗಳು, ಮಾಘನಲಾಲ ಸೇಠ ಮೊದಲಾಗಿ ಹಲವು ಜನರು ಮತ್ತು ಬಹಳ ವೈದಿಕ ವಿದ್ವಾಂಸರು ಉಪಸ್ಥಿತರಿದ್ದರು. ಪ್ರಾತಃಕಾಲದಲ್ಲಿ ಅರಾಬಲೇಶ್ವರನಿಗೆ ರುದ್ರಾಭಿಷೇಕ ಪೂಜೆಯನ್ನು ನೆರವೇರಿಸಲಾಯಿತು. ಮಧ್ಯಾಹ್ನ ಬ್ರಾಹ್ಮಣ ಭೋಜನ ಮೊದಲಾದವುಗಳಿಂದ ವ್ರತವನ್ನು ಸಾಂಗವಾಗಿ ದೈವರಾತರು ಮುಗಿಸಿದರು. ಮಘನಲಾಲ ಸೇಠರು ದಕ್ಷಿಣೆಯೇ ಮುಂತಾದ ವೆಚ್ಚವನ್ನು ಭರಿಸಿದರು. ಮಘನಲಾಲರ ವಿನಂತಿಯನ್ವಯ ದೈವರಾತರು ಅರಾಬಲೇಶ್ವರದಲ್ಲಿ ಅವತ್ತು ತಮ್ಮ ಮುಂದಿನ ಧ್ಯೇಯ ಉದ್ದೇಶಗಳನ್ನು ಹೀಗೆ ನಿರೂಪಿಸಿದರು. "ವೈದಿಕವಿದ್ಯೆಯ ಪುನರುಜ್ಜೀವನವೇ ನನ್ನ ಜೀವನದ

---

೬ ಪೂರ್ಣವಾಗಿ ಈ ವೃತ್ತಾಂತವು ಅಪ್ರಕಟಿತ ಆತ್ಮಚರಿತ್ರೆಯ ಟಿಪ್ಪಣಿಗಳನ್ನು ಆಧರಿಸಿದೆ. ಬಲದೇವ ಉಪಾಧ್ಯಾಯರು 'ಶ್ರೀ ಶಂಕರಾಚಾರ್ಯರು' ಕೃತಿಯಲ್ಲಿ ದ್ವಾರಕಾಪೀಠದ ಕುರಿತು ಪ್ರಸ್ತಾಪಿಸುವಾಗ ಬಡೋದೆಯ ರಾಜಸತ್ತೆಯು ದ್ವಾರಕಾಪೀಠದ ವ್ಯವಹಾರದಲ್ಲಿ ಬಹಳ ಕಾಲದಿಂದಲೂ ಹಸ್ತಕ್ಷೇಪ ಮಾಡುತ್ತಿತ್ತೆಂಬ ಅಂಶವನ್ನು ದಾಖಲಿಸಿದ್ದಾರೆ.

ಮುಖ್ಯ ಧ್ಯೇಯವಾಗಿದೆ. ಅದಕ್ಕಾಗಿ ಪ್ರಾಚೀನ ಋಷಿಕುಲ ಆಶ್ರಮದ ಶಿಕ್ಷಣ ಪದ್ಧತಿಯನ್ನು ಆಧರಿಸಿ ಒಂದು ಆಶ್ರಮವನ್ನು ಸ್ಥಾಪಿಸುವ ಸಂಕಲ್ಪವನ್ನು ಅರಾಬಲೇಶ್ವರನ ಈ ದಿವ್ಯ ಸನ್ನಿಧಾನದಲ್ಲಿ ಮಾಡುತ್ತೇನೆ." ಅದಕ್ಕೆ ಸೇರಿದ್ದ ಜನರು ಅಂತಹ ಆಶ್ರಮದ ಸ್ಥಾಪನೆ ಇಲ್ಲಿಯೇ ಆಗಲಿ, ನಾವೆಲ್ಲರೂ ನಿಮ್ಮನ್ನು ಅನುಸರಿಸುತ್ತೇವೆ" ಎಂದರು. ಅದಕ್ಕೆ ದೈವರಾತರು– "ಯೋಗಾಯೋಗದಿಂದ ಆಶ್ರಮವನ್ನು ಸ್ಥಾಪಿಸುವ ಅವಕಾಶವು ಎಲ್ಲಿ, ಹೇಗೆ ಬರುವದೋ ಬರಲಿ; ನಾನು ಇಲ್ಲೇ ಈಗಲೇ ಸ್ಥಾಪಿಸುತ್ತೇನೆ ಎಂದು ನಿಶ್ಚಿತವಾಗಿ ಹೇಳಲಾರೆನು" ಎಂದು ಹೇಳಿದರು.[೭] ಅರಾಬಲೇಶ್ವರದಿಂದ ದೈವರಾತರು ಮುಂದೆ ಓರಿಸ್ಸಾ ಪ್ರಾಂತಕ್ಕೆ ಪ್ರಯಾಣ ಬೆಳೆಸಿದರು.

೭. ಅಪ್ರಕಟಿತ ಆತ್ಮಚರಿತೆ; ಪುಟ ೬೮

೯. ಮಂತ್ರ ದರ್ಶನದ ಆನಂದ

(೧೯೧೬–೧೯೧೭)[೧]

ಋಷೀಣಾಂ ತಪ್ಯತಾಮುಗ್ರಂ ತಪಃ ಪರಮದುಷ್ಕರಮ್ ।
ಮಂತ್ರಾಃ ಪ್ರಾದುರ್ಬಭೂವುರ್ಹಿ ಪೂರ್ವಮನ್ವಂತರೇಷ್ವಿಹ ॥
ರಸೋ ವೈ ಸಃ । ರಸಂ ಹ್ಯೇ ವಾಯಂ ಲಬ್ಧ್ವಾ
ಆನಂದಿ ಭವತಿ ।

ತೈತ್ತಿರೀಯ ಉಪನಿಷದ್

೧. ಅರಾಬಲೇಶ್ವರದಿಂದ ಮಂದಾಸಾ ನಡುವೆ ಮುಂಬೈ ವಾಸ

ಅರಾಬಲೇಶ್ವರದಲ್ಲಿ ಆಶ್ರಮಸ್ಥಾಪನೆಯ ಸಂಕಲ್ಪವನ್ನು ಮಾಡಿದ ದೈವರಾತರು ವಾಸಿಷ್ಠ ಗಣಪತಿ ಮುನಿಗಳನ್ನು ಸೇರುವ ಕಾತರದಿಂದ ಆಂಧ್ರಪ್ರದೇಶಕ್ಕೆ ಹೋಗುವದಕ್ಕೆ ಸಿದ್ಧರಾದರು. ಆದರೆ ಅವರಿಂದ ಉಪಕೃತರಾದ ಮಘನಲಾಲರು ಮುಂಬೈಗೆ ಬಂದು ತಮ್ಮ ಮನೆಯಲ್ಲಿ ಆತಿಥ್ಯವನ್ನು

೧. ೧೯೧೪ನೇ ಇಸ್ವಿಯಲ್ಲಿ ಟೇಂಬೇ ಮಹಾರಾಜರು ಬ್ರಹ್ಮೀಭೂತರಾದರು. ದೈವರಾತರು ಅದೇ ವರ್ಷದಲ್ಲಿ ಮಾತೃಗಯೆಯಲ್ಲಿ ತಪವನ್ನಾಚರಿಸುತ್ತ ಇದ್ದರು. ೧೯೧೪ನೇ ಇಸ್ವಿಯ ಕೊನೆಯಲ್ಲಿ ಅವರು ಮಂದಾಸಾ ತಲುಪಿದರು. ೧೯೧೫ನೇ ಇಸ್ವಿಯಲ್ಲಿ ಫೆಬ್ರುವರಿ–ಮಾರ್ಚನಲ್ಲಿ ಬರುವ ಮಹಾಶಿವರಾತ್ರಿಪರ್ವವನ್ನು ವಾಸಿಷ್ಠ ಮುನಿಗಳೊಂದಿಗೆ ಸೇರಿ ಮಹೇಂದ್ರಗಿರಿಯಲ್ಲಿ ಕಳೆದರು. ಈ ಅಧ್ಯಾಯದಲ್ಲಿ ನಿರೂಪಿತವಾದ ಎಲ್ಲ ಮುಖ್ಯವಾದ ಘಟನೆಗಳಿಗೆ ಕಪಾಲಿಶಾಸ್ತ್ರಿಗಳಿಂದ ರಚಿತವಾದ 'ವಾಸಿಷ್ಠ ವೈಭವಂ', ವಾಸಿಷ್ಠ ಗಣಪತಿ ಮುನಿಗಳಿಂದ ರಚಿತವಾದ 'ರಮಣಗೀತಾ', ಪಾ. ವೆಂ. ಆಚಾರ್ಯರಿಂದ ಬರೆಯಲ್ಪಟ್ಟ 'ಕಸ್ತೂರಿ' ಕನ್ನಡ ಮಾಸಪತ್ರಿಕೆಯ ಅಗ್ರಲೇಖಗಳು ಪ್ರಮಾಣಗಳಾಗಿವೆ. ಅಪ್ರಕಟಿತ ಆತ್ಮಚರಿತ್ರೆ ಇನ್ನುಳಿದ ಘಟನೆಗಳ ವಿವರಗಳಿಗೆ ಆಧಾರವಾಗಿದೆ. ಕಾಲನಿರ್ಣಯದ ವಿಚಾರದಲ್ಲಿ ಧಾರವಾಡದ ಸಮಾಜ ಪುಸ್ತಕಾಲಯದಿಂದ ಪ್ರಕಟವಾದ 'ಯೋಗರಹಸ್ಯ' ಗ್ರಂಥಾಂತರ್ಗತವಾದ ಟೇಂಬೇ ಮಹಾರಾಜರ ಜೀವನ ಚರಿತ್ರೆ ಆಧಾರವಾಗಿದೆ.

ಸ್ವೀಕರಿಸಿಕೊಂಡೇ ಹೋಗಬೇಕೆಂದು ಆಗ್ರಹಮಾಡಿದ್ದರಿಂದ ದೈವರಾತರು ಮುಂಬೈಗೆ ಹೋಗಿ ನಾಲ್ಕಾರು ದಿನ ಮುಂಬೈಯಲ್ಲಿ ಕಳೆದರು.

ಈ ಅವಧಿಯಲ್ಲಿಯೇ ದೈವರಾತರಿಗೆ ನೇಪಾಳದ ರಾಜಪರಿವಾರದ ಸಂಪರ್ಕ ಮೊದಲ ಬಾರಿಗೆ ಉಂಟಾದದ್ದು. ಮತ್ತು ಈ ಸಂಪರ್ಕ ಮುಂದೆ ಜೀವನುದುದ್ದಕ್ಕೂ ಗಾಢವಾಗುತ್ತ ನಡೆಯಿತು. ಗೋಕರ್ಣಕ್ಕೆ ಮರಳಿದ ನಂತರ ಅವರು ಸತತವಾಗಿ ನೇಪಾಳಕ್ಕೆ ಭೇಟಿಕೊಡುತ್ತಲೇ ಇದ್ದು ವರ್ಷಗಟ್ಟಲೆ ಅಲ್ಲಿಯೇ ಇರುತ್ತಿದ್ದರು.

ದೈವರಾತರನ್ನು ಅನುಸರಿಸಿ ಅರಾಬಲೇಶ್ವರದಿಂದ ಮುಂಬೈ ವರೆಗೆ ಮಾಣಿಕಲಾಲರು ಮತ್ತು ಹರಗೋವಿಂದ ಘನಪಾಠಿಗಳೂ ಬಂದಿದ್ದರು. ಮಘನಲಾಲರ ಮನೆ ವಿಶಾಲವಾಗಿತ್ತು. ಮಘನಲಾಲರ ಬಂಗ್ಲೆಗೆ ನೆರೆಯಲ್ಲಿರುವ ಬಂಗ್ಲೆಯಲ್ಲಿ ನೇಪಾಳದ ರಾಜಪುರೋಹಿತರ ಪುತ್ರರಾದ ಭೋಗೇಂದ್ರರಾಜ ಪಂಡಿತರು ಪತ್ನೀ ಸಮೇತರಾಗಿ ಬಂದು ವಾಸಮಾಡಿಕೊಂಡಿದ್ದರು. ಮೂತ್ರ ರೋಗಕ್ಕೆ ಸಂಬಂಧಿಸಿದ ಚಿಕಿತ್ಸೆಯನ್ನು ಪಡೆಯುವುದಕ್ಕಾಗಿ ಅವರು ಮುಂಬೈಗೆ ಬಂದಿದ್ದರು. ಅವರ ಸೇವೆಗೆ ಶೇಷಕಾಂತ ಎಂಬವರೂ ಬಂದಿದ್ದರು. ಅವರು ಬಂದು ಹಲವಾರು ವಾರಗಳೇ ಉರುಳಿದ್ದವು. ಅದರಿಂದಾಗಿ ಮಘನಲಾಲರಿಗೆ ಅವರೊಂದಿಗೆ ಆತ್ಮೀಯ ಪರಿಚಯ ಏರ್ಪಟ್ಟಿತ್ತು. ಮಘನಲಾಲರು ದೈವರಾತರ ಪರಿಚಯವನ್ನು ಅವರಿಗೆ ಮಾಡಿಕೊಟ್ಟು ಆ ರಾಜ ಪುರೋಹಿತರ ಪುತ್ರಿಯರಿಗೆ ಬಂದ ಕಷ್ಟವನ್ನು ದೈವರಾತರಲ್ಲಿ ನಿವೇದಿಸಿದರು. ಭೋಗೇಂದ್ರ ಪಂಡಿತರು ಚಿಕಿತ್ಸೆಗಾಗಿ ಮುಂಬೈಗೆ ಬಂದು ಪ್ರಖ್ಯಾತ ವೈದ್ಯರನ್ನು ಭೇಟಿಯಾಗಿ ಚಿಕಿತ್ಸೆಯನ್ನು ಪಡೆದು ಆಗಲೇ ನಿರಾಸೆಯನ್ನು ಹೊಂದಿದ್ದರು. ಅವರನ್ನು ಪರೀಕ್ಷೆ ಮಾಡಿದ ವೈದ್ಯರು ಭೋಗೇಂದ್ರರು ಬದುಕಿ ಉಳಿಯುವುದೇ ಕಷ್ಟ; ಒಂದು ವೇಳೆ ಬದುಕಿದರೂ ಅವರಿಗೆ ಮಕ್ಕಳಾಗುವ ಸಂಭವವಂತೂ ಇಲ್ಲ ಎಂದು ಹೇಳಿಕಳುಹಿಸಿದ್ದರು. ದೈವರಾತರು ಮೂತ್ರಕೋಶದ ಕಾಯಿಲೆಗಳಿಗೆ ಪರಿಣಾಮಕಾರೀ ಚಿಕಿತ್ಸೆಯಾಗಬಹುದಾದ ಕೆಲವು ಯೋಗದ ಪ್ರಕ್ರಿಯೆಗಳನ್ನು ಭೋಗೇಂದ್ರ ಪಂಡಿತರಿಗೆ ಮಾಡಿ ತೋರಿಸಿದರು. ವಜ್ರೋಲಿ ಮುದ್ರೆಯಂತಹ ಗೋಪನೀಯ ಹಾಗೂ ಸೂಕ್ಷ್ಮ ಪ್ರಕ್ರಿಯೆಯನ್ನು ಮಾಡಿ ತೋರಿಸಿ ಅವರಲ್ಲಿ ಮತ್ತೊಮ್ಮೆ ಬದುಕುವ ವಿಶ್ವಾಸವನ್ನು ಮೂಡಿಸಿದರು. ಅವರ ಪತ್ನಿಯೂ ದೈವರಾತರನ್ನು

ಕಂಡು ನಮಸ್ಕರಿಸಿ ತಮ್ಮ ಕಷ್ಟವನ್ನು ಹೋಗಲಾಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡಳು. ದೈವರಾತರು ಅವಳಿಗೆ ಸಾಂತ್ವನ ಹೇಳಿ ಅವಳ ಬಂಜೆತನ ನಿವಾರಣೆಗಾಗಿ ಒಂದು ವನಸ್ಪತಿಯ ಔಷಧವನ್ನು ಸೇವಿಸುವಂತೆ ಹೇಳಿ ಆ ಔಷಧದ ವಿವರವನ್ನು ನೀಡಿದರು. ವಾಸುದೇವಾನಂದ ಸರಸ್ವತೀ ಸ್ವಾಮಿಗಳು (ಟೇಂಬೇ ಮಹಾರಾಜರು) ಶಿವಸ್ವರೋದಯ ಗ್ರಂಥವನ್ನಾಧರಿಸಿ ಉಪದೇಶಿಸಿದ ಔಷಧವದಾಗಿತ್ತು. ಬಿಳಿಯ ಶಂಖ ಪುಷ್ಪದ ಬಳ್ಳಿಯ ಎಲೆಗಳನ್ನು ಆಕಳ ಹಾಲಿನಲ್ಲಿ ಅರೆದು ಆ ರಸವನ್ನು ರಜಸ್ವಲೆಯಾದ ನಾಲ್ಕನೆಯ ದಿನದಿಂದ ಆರಂಭಿಸಿ ಮೂರು ದಿನಗಳ ಪರ್ಯಂತ ಸೇವಿಸಬೇಕು. ಉಪ್ಪು, ಹುಳಿ ಮತ್ತು ಖಾರಗಳನ್ನು ಆ ಮೂರು ದಿನಗಳಂದು ಸೇವಿಸಬಾರದು. ದೈವರಾತರು ಭೋಗೇಂದ್ರ ಪಂಡಿತ ದಂಪತಿಗಳಿಗೆ ಮಾರ್ಗದರ್ಶನ ಮಾಡಿ ಸಂತವಿಸಿದರು.[೨]

ದೈವರಾತರು ಮುಂಬೈಯಿಂದ ವಾಸಿಷ್ಠ ಮುನಿಗಳನ್ನರಸುತ್ತ ಸಿಕಂದರಾಬಾದಿಗೆ ಬಂದರು. ಪ್ರಾಯಶಃ ವಾಸಿಷ್ಠ ಗಣಪತಿ ಮುನಿಗಳು ಮದ್ರಾಸದ ಸಮೀಪವಿರುವ ಅರಣಾಚಲದ ರಮಣಾಶ್ರಮದಲ್ಲಿ ಇರಬಹುದೆಂಬ ಶಂಕೆಯಿತ್ತು ದೈವರಾತರಿಗೆ. ಸೇಠ ಮಘನಲಾಲರು ಮಾರ್ಗ ವ್ಯಯಕ್ಕೆ ಬೇಕಾಗುವಷ್ಟು ಹಣವನ್ನು ದೈವರಾತರಿಗೆ ಕೊಟ್ಟು ಕಳುಹಿಸಿದ್ದರು.

ಮೆಹಬೂಬ ನಗರದ ಕಾಲೇಜಿನಲ್ಲಿ ಆಯಿಲ ಸುಬ್ರಮಣ್ಯ ಶಾಸ್ತ್ರಿಗಳ ಮನೆಯಲ್ಲಿ ದೈವರಾತರು ಎರಡು–ಮೂರು ದಿನಗಳ ವಾಸ್ತವ್ಯ ಮಾಡಿ ವಿಶ್ರಾಂತಿಯನ್ನು ಪಡೆದರು. ಸುಬ್ರಮಣ್ಯ ಶಾಸ್ತ್ರಿಗಳು ವಾಸಿಷ್ಠ ಗಣಪತಿ ಮುನಿಗಳ ಆಪ್ತ ವಲಯಕ್ಕೆ ಸೇರಿದವರೇ ಆಗಿದ್ದು ವಾಸಿಷ್ಠ ಮುನಿಗಳು ಗೋಕರ್ಣದಲ್ಲಿದ್ದಾಗ ಬಂದಿದ್ದರು. ದೈವರಾತರು ಶಾಸ್ತ್ರಿಗಳನ್ನು ವಾಸಿಷ್ಠ ಮುನಿಗಳು ಎಲ್ಲಿದ್ದಾರೆಂದು ವಿಚಾರಿಸಿದಾಗ ವಾಸಿಷ್ಠ ಮುನಿಗಳು ಸಂಪ್ರತಿ ಓರಿಸಾ ಪ್ರಾಂತದಲ್ಲಿದ್ದಾರೆಂದು ತಿಳಿದು ಬಂದಿತು. ಓರಿಸಾ ಪ್ರಾಂತದ ಮಂದಾಸಾ ರಾಜ್ಯದಲ್ಲಿ ಇರುವದನ್ನು ತಿಳಿದ ದೈವರಾತರು ಅರುಣಾಚಲದ ಪ್ರಯಾಣವನ್ನು ನಿಲ್ಲಿಸಿ ಮಂದಾಸಾ ರಾಜ್ಯಕ್ಕೆ ಹೋಗುವ ಮಾರ್ಗ ವಿವರಗಳನ್ನು ಪಡೆದು ಮಂದಾಸಾಕ್ಕೆ ಪ್ರಯಾಣ ಮಾಡಿದರು.

---

೨. ಕಸ್ತೂರಿ (ಕನ್ನಡ ಡೈಜೆಸ್ಟ) ೧೯೬೪; ಪುಟ ೭೭; ಅಪ್ರಕಟಿತ ಆತ್ಮಚರಿತ್ರೆ, ಪುಟ ೭೦

೨. ಮಂದಾಸಾ–ಮಹೇಂದ್ರಗಿರಿಗಳಲ್ಲಿ ಗುರುವಿನೊಡನೆ ಸಮಾಗಮ – ತಪಸ್ಸು.[೩] (೧೯೧೫–೧೬)

ಓರಿಸಾ ಪ್ರಾಂತದ ಒಂದು ರಾಜ ಸಂಸ್ಥಾನ ಮಂದಾಸಾ ಎಂಬುದು. ವಾಸಿಷ್ಠ ಮುನಿಗಳನ್ನು ಆ ಸಂಸ್ಥಾನದ ದೊರೆಗಳು ಅತ್ಯಂತ ಪೂಜ್ಯಭಾವನೆಯಿಂದ ನೋಡುತ್ತಿದ್ದರು. ರಾಜಪರಿವಾರವು ವಾಸಿಷ್ಠ ಗಣಪತಿ ಮುನಿಗಳ ಶಿಷ್ಯತ್ವವನ್ನು ಅಂಗೀಕರಿಸಿ ಆ ಪ್ರಾಂತಕ್ಕೆ ಬಂದಾಗಲೆಲ್ಲ ಅವರನ್ನು ಭಕ್ತಿ ಸಮ್ಮಾನಗಳಿಂದ ಪೂಜಿಸುತ್ತಿದ್ದರು. ಪ್ರಸ್ತುತ ದೈವರಾತರು ಮಂದಾಸಾಕ್ಕೆ ಹೋದಾಗಲೂ ವಾಸಿಷ್ಠ ಗಣಪತಿ ಮುನಿಗಳು ಮತ್ತು ಅವರ ಪರಿವಾರ ರಾಜಾಶ್ರಯದಲ್ಲಿಯೇ ಇತ್ತು. ವಾಸಿಷ್ಠ ಮುನಿಗಳ ಪತ್ನೀ ವಿಶಾಲಾಕ್ಷಮ್ಮ, ಪುತ್ರ ಮಹಾದೇವ, ಪುತ್ರಿ ವಜ್ರೇಶ್ವರೀ ಮತ್ತು ಒಬ್ಬ ಶಿಷ್ಯ ವೆಂಕಟರಮಣ ಇವರೊಂದಿಗೆ ಸೇರಿಕೊಂಡರು.

ವಾಸಿಷ್ಠ ಮುನಿಗಳು ಪ್ರತಿನಿತ್ಯ ತಮ್ಮ ವಾಸಸ್ಥಾನದಿಂದ ಅರಮನೆಗೆ ತೆರಳಿ ಬೇರೆ ಬೇರೆ ವಿಷಯಗಳನ್ನು ಆಧರಿಸಿ ತೆಲಗು ಭಾಷೆಯಲ್ಲಿ ಉಪನ್ಯಾಸ ಮಾಡುತ್ತಿದ್ದರು. ದೈವರಾತರು ಮಂದಾಸಾ ತಲುಪಿದ ನಂತರ ಗುರುಗಳನ್ನು ಅನುಸರಿಸಿ ತಾವೂ ಅರಮನೆಗೆ ಹೋಗಿ ಉಪನ್ಯಾಸದ ವೇಳೆಯಲ್ಲಿ ವಾಸಿಷ್ಠ ಮುನಿಗಳ ಹಿಂಭಾಗದಲ್ಲಿ ಕುಳಿತುಕೊಳ್ಳುತ್ತಿದ್ದರು. ಹೀಗೆ ಎರಡು–ಮೂರು ದಿನಗಳು ಕಳೆದ ಮೇಲೆ ಮಹಾರಾಜರು ವಾಸಿಷ್ಠ ಮುನಿಗಳಲ್ಲಿ ದೈವರಾತರ ಬಗೆಗೆ ಕುತೂಹಲದಿಂದ ವಿಚಾರಿಸಿದರು. ವಾಸಿಷ್ಠ ಮುನಿಗಳು ಅದಕ್ಕೆ "ಇವನೂ ಒಬ್ಬ ಶಿಷ್ಯ" ಎಂದು ಮಹಾರಾಜರಿಗೆ ಪರಿಚಯ ಮಾಡಿಕೊಟ್ಟರು. ದೈವರಾತರಿಗೆ ಇದರಿಂದಾಗಿ ಮಹಾರಾಜರಿಂದ ಒಂದು ವಿಶೇಷ ಆಹ್ವಾನ ದೊರೆಯಿತು. ದ್ವಾದಶಿಯ ವಿಶೇಷ ಪಾರಣೆಗೆ (ಭೋಜನ ಸಂತರ್ಪಣೆಗೆ) ದೈವರಾತರು ಆಮಂತ್ರಿಸಲ್ಪಟ್ಟಿದ್ದರು.

ಮರುದಿನ ದ್ವಾದಶಿಯಂದು ರಾಜಸೇವಕನೊಬ್ಬ ಬಂದು ದೈವರಾತರನ್ನು ಗೌರವಪೂರ್ವಕವಾಗಿ ಕರೆದುಕೊಂಡೊಯ್ದು. ಅರಮನೆಯ ಒಳಾಂಗಣವೊಂದರಲ್ಲಿ ದೈವರಾತರು ಹಾದು ಹೋಗುವಾಗ ಅಲ್ಲಿಯ ದೃಶ್ಯ ದೈವರಾತರಿಗೆ ಅಚ್ಚರಿಯನ್ನುಂಟು ಮಾಡಿತು. ರಾಜಾಂಗಣದ ಮೂಲೆಗಳಲ್ಲಿ ಪಂಜರದಂತಿದ್ದ ಸಣ್ಣ ಸಣ್ಣ ಮನೆಗಳಲ್ಲಿ ಹಲವಾರು ಹುಲಿಗಳಿದ್ದವು. ಜಿಂಕೆ

---

೩. ಮಂದಾಸಾ ಮತ್ತು ಮಹೇಂದ್ರಗಿರಿಗಳಲ್ಲಿ ನಡೆದ ಘಟನಾವಳಿ ಮತ್ತು ಮಾಡಿದ ತಪಸ್ಸುಗಳು ವಿಸ್ತಾರವಾಗಿ ಆತ್ಮಚರಿತ್ರೆಯಲ್ಲಿ ನಿರೂಪಿತವಾಗಿದೆ.

ಮೊದಲಾದ ಪ್ರಾಣಿಗಳು ಆ ಒಳಾಂಗಣದಲ್ಲಿ ತಿರುಗಾಡಿಕೊಂಡು ಸುಖವಾಗಿದ್ದವು. ಅನಿರೀಕ್ಷಿತವಾಗಿ ಉದ್ದಕೋಡಿದ್ದ ಗಂಡುಜಿಂಕೆಯೊಂದು ಓಡುತ್ತ ಬಂದು ದೈವರಾತರ ಹೊಟ್ಟೆಗೆ ಕೋಡಿನಿಂದ ಇರಿಯುವದಕ್ಕೆ ಮುಂದಾಯಿತು. ಆಗ ದೈವರಾತರು ಅದರ ಕೊಂಬನ್ನು ಬಲವಾಗಿ ಹಿಡಿದು ಅದರ ತಿವಿತದಿಂದ ಪಾರಾದರು. ದೈವರಾತರು ಆ ಜಿಂಕೆಯಿಂದ ಪಾರಾಗುವದಕ್ಕೆ ಒಂದು ಕಾಳಗವನ್ನೇ ಮಾಡಬೇಕಾಯಿತು. ಎರಡೂ ಕೊಂಬುಗಳನ್ನು ಬಲವಾಗಿ ಹಿಡಿದು ದೈವರಾತರು ಹಿಂದಕ್ಕೆ ತಳ್ಳಿದರು. ಆದರೆ ಆ ಜಿಂಕೆ ಪುನಃ ಸಿಟ್ಟಿಗೆದ್ದು ಅಟ್ಟಿಸಿಕೊಂಡು ಬಂದು ದೈವರಾತರನ್ನು ಒಂದು ಮಾರು ಹಿಂದಕ್ಕೆ ತಳ್ಳಿತು. ದೈವರಾತರು ಈಗ ಬಿಡದೆ ಜಿಂಕೆಯ ಕೊಂಬುಗಳನ್ನು ಹಿಡಿದು ಎರಡು ಗೋಡೆಗಳ ಮಧ್ಯದ ಮೂಲೆಗೆ ಒತ್ತಿ ಹಿಡಿದು ನಿಲ್ಲಿಸಿದರು. ಈ ನಡುವೆ ಈ ಸೆಣಸಾಟದ ಗಲಭೆಯನ್ನು ಅರಿತ ಮಹಾರಾಜರು ಮಹಡಿಯಲ್ಲಿದ್ದವರು ಬಾಲ್ಕನಿಗೆ ಬಂದು ನೋಡಿ ತಕ್ಷಣವೇ ಸೇವಕರ ಮೂಲಕ ಜಿಂಕೆಯನ್ನು ಸರಪಳಿಯಿಂದ ಬಂಧಿಸಿ ಆ ಕಾಳಗದಿಂದ ದೈವರಾತರನ್ನು ಮುಕ್ತಗೊಳಿಸಿದರು. ಮತ್ತು ಈ ಘಟನೆಗಾಗಿ ದೈವರಾತರಲ್ಲಿ ವಿಷಾದವನ್ನು ವ್ಯಕ್ತಪಡಿಸಿ ಅವರನ್ನು ಆದರಪೂರ್ವಕವಾಗಿ ಸ್ವಾಗತಿಸಿ ಉಚಿತವಾದ ವ್ಯಾಘ್ರಾಸನವನ್ನು ನೀಡಿ ತಾವೂ ಒಂದು ವ್ಯಾಘ್ರಾಸನದ ಮೇಲೆ ಕುಳಿತು ಯೋಗಶಾಸ್ತ್ರ, ಹಠಯೋಗಗಳಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾವಿಸಿ ಸಂವಾದವನ್ನು ನಡೆಸಿದರು. ಆಸನ, ಪ್ರಾಣಾಯಾಮ, ಸಮಾಧಿ, ಖೇಚರೀ ಮದ್ರೆ, ವಜ್ರೋಲಿಮುದ್ರೆ ಮುಂತಾದ ಸೂಕ್ಷ್ಮ ಪ್ರಕ್ರಿಯೆಗಳನ್ನು ಕುರಿತು ಪ್ರಶ್ನೋತ್ತರ ಅವರಿಬ್ಬರ ಮಧ್ಯೆ ನಡೆಯಿತು. ಅನಂತರ ಮಹಾರಾಜರು ತಾವು ಕೈಗೊಂಡ ಹಲವು ಶಿಕಾರಿಯ ಸಾಹಸದ ಕಥೆಗಳನ್ನು ದೈವರಾತರಿಗೆ ವಿವರಿಸುತ್ತಿದ್ದರು. ಹಾಗೆ ಶಿಕಾರಿ ಮಾಡಲ್ಪಟ್ಟ ಮೃತವಾದ ದೊಡ್ಡ ಹುಲಿಯ ಪೂರ್ಣವಾದ ಚರ್ಮವನ್ನು ಉಪಯೋಗಿಸಿ ಜೀವಂತ ಹುಲಿಯಂತೆ ಸಿದ್ಧಪಡಿಸಿದ ಕೃತ್ರಿಮ ವ್ಯಾಘ್ರವನ್ನು ದೈವರಾತರಿಗೆ ತೋರಿಸಿದರು. ತಲೆ ನಾಲ್ಕೂ ಕಾಲುಗಳ ಉಗುರುಗಳು ಎಲ್ಲವೂ ಇದ್ದ ವ್ಯಾಘ್ರ ಚರ್ಮವೊಂದನ್ನು ದೈವರಾತರಿಗೆ ಉಡುಗೊರೆಯಾಗಿ ನೀಡಿದ ಮಹಾರಾಜರು ಯಥೋಚಿತವಾಗಿ ಸತ್ಕರಿಸಿ ತತ್ಕಾಲದಲ್ಲಿ ಬೀಳ್ಕೊಟ್ಟರು.

ದೈವರಾತರು ಮಂದಾಸಾಕ್ಕೆ ಬಂದಂದಿನಿಂದ ಮುಂಜಾನೆ ಕಾಫಿ ಮತ್ತು ಉಪಾಹಾರ, ಮಧ್ಯಾಹ್ನ ಮತ್ತು ಸಾಯಂಕಾಲದ ಅಡುಗೆಯ ಹೊಣೆಯನ್ನು ಹೊತ್ತಿದ್ದರು. ಗೋಕರ್ಣದ ವಾಸ್ತವ್ಯದಲ್ಲಿಯಂತೆ ಸರ್ವವಿಧದಲ್ಲಿಯೂ ದೈವರಾತರು ಗುರುಸೇವಾತತ್ಪರರಾದರು.

ಮಂದಾಸಾ ವಾಸ್ತವ್ಯದಲ್ಲಿ ಸರಿಸುಮಾರು ಎರಡು-ಎರಡೂವರೆ ಮಾಸ ಕಳೆಯಿತು. ಮಹಾಶಿವರಾತ್ರಿ ಸನ್ನಿಹಿತವಾಯಿತು. ಮಂದಾಸಾದಿಂದ ಹತ್ತೆಂಟು ಮೈಲುಗಳ ಅಂತರದಲ್ಲಿ ಮಹೇಂದ್ರಗಿರಿ ಎಂಬ ಸಮುದ್ರ ಮಟ್ಟದಿಂದ ಐದು ಸಾವಿರ ಅಡಿಗಳಷ್ಟು ಎತ್ತರವಿರುವ[೪] ಈಶ್ವರ ಸನ್ನಿಧಾನವೊಂದಿದೆ. ಅಲ್ಲಿ ಮಹಾಶಿವರಾತ್ರಿ ಪರ್ವದಲ್ಲಿ ಜಾತ್ರೆ ನಡೆಯುತ್ತದೆ. ಸುತ್ತಮುತ್ತಲಿನ ಹತ್ತಿಪ್ಪತ್ತು ಮೈಲುಗಳ ಅಂತರದಲ್ಲಿ ಇರುವ ಜನಪದಗಳ ಜನರೆಲ್ಲ ವರ್ಷಕ್ಕೊಂದು ದಿವಸ ಗಿರಿಯನ್ನು ಏರಿ ಈಶ್ವರನಿಗೆ ಪೂಜೆ ಸಲ್ಲಿಸುವದು ಅಲ್ಲಿನ ದೀರ್ಘಕಾಲೀನ ಸಂಪ್ರದಾಯವಾಗಿತ್ತು. 'ಗೋಕರ್ಣೇಶ್ವರ' ಎಂಬ ಅಭಿಧಾನದಿಂದ ಪ್ರಸಿದ್ಧವಾದ ಈಶ್ವರನ ಪೂಜೆ ಶಿವರಾತ್ರಿಯ ದಿನ ಹಗಲು ರಾತ್ರಿ ಪೂರ್ಣ ನಡೆಯುತ್ತಿತ್ತು. ಅಂಗಡಿ ಮುಂಗಟ್ಟುಗಳೂ ಬೇಕಾದಷ್ಟು ಬರುತ್ತವೆ. ದೈವರಾತರಿಗೆ ಮಹಾಶಿವರಾತ್ರಿಯನ್ನು ಮಹೇಂದ್ರಗಿರಿಯಲ್ಲಿ ಕಳೆಯಬೇಕೆಂಬ ಅಭಿಲಾಷೆ ಮೂಡಿತು. ವಾಸಿಷ್ಠ ಗಣಪತಿ ಮುನಿಗಳಿಗೆ ಹೇಳಿದ್ದೂ ಆಯಿತು. ಅದಕ್ಕೆ ವಾಸಿಷ್ಠ ಮುನಿಗಳು ಒಪ್ಪಿಗೆಯನ್ನು ಕೊಟ್ಟರು. ಅಷ್ಟಲ್ಲದೆ ದೈವರಾತರ ಸಂಗಡ ತಾವೂ ಹೊರಡುವದಕ್ಕೆ ಸಿದ್ಧರಾಗಿ ಬಿಟ್ಟರು. ವಾಸಿಷ್ಠ ಮುನಿಗಳನ್ನು ಅನುಸರಿಸಿ ಅವರ ಪತ್ನಿ ವಿಶಾಲಾಕ್ಷಮ್ಮನವರು ಹೊರಟರು. ವಾಸಿಷ್ಠ ಮುನಿಗಳ ಪರಿವಾರವೇ ಮಹೇಂದ್ರಗಿರಿಗೆ ಹೊರಟು ನಿಂತಾಗ ಮಹಾರಾಜರ ಅವಶ್ಯ ಸಹಾಯವೂ ದೊರಕಿತು. ಅಷ್ಟು ಎತ್ತರದ ಗಿರಿಯನ್ನು ಏರುವದಕ್ಕೆ ವಾಸಿಷ್ಠ ಮುನಿಗಳ ಪತ್ನಿ ವಿಶಾಲಾಕ್ಷಮ್ಮನವರಿಂದ ಸಾಧ್ಯವಿಲ್ಲ ಎಂದು ಅವರನ್ನು ಹೊತ್ತೊಯ್ಯಲು ಡೋಲಿಯನ್ನು ಏರ್ಪಾಡು ಮಾಡಲಾಯಿತು. ಮಹಾರಾಜರ ಸಚಿವರೊಬ್ಬರು ವಾಸಿಷ್ಠ ಮುನಿಗಳ ಜೊತೆಯಲ್ಲಿ ಸ್ವಯಂ ಉಪಸ್ಥಿತರಾಗಿ ಮಾರ್ಗದರ್ಶನ ಮಾಡಲು ಸೇವಕರೊಡನೆ ಸಜ್ಜಾದರು. ಡೋಲಿಯವರ ಸಂಗಡ ದೈವರಾತರು ಮುಂದೆ ಹೋಗಿ ಬೆಟ್ಟವನ್ನು ಮೂರು ಗಂಟೆಗೆಲ್ಲಾ ತಲುಪಿದರು. ಆದರೆ ಮಂತ್ರಿಗಳು, ವಾಸಿಷ್ಠ ಮುನಿಗಳು ಆಯಾಸಹೊಂದಿ ಇನ್ನೂ ನಾಲ್ಕು ಮೈಲುಗಳು ಇರುವಾಗ ನೀರಡಿಕೆಯಿಂದ ಬಳಲಿ ಕುಳಿತುಬಿಟ್ಟಿದ್ದಾರೆನ್ನುವ ವರ್ತಮಾನ ದೈವರಾತರಿಗೆ ತಿಳಿದು ಮರಳಿ ಬಂದು ವಾಟರ ಬ್ಯಾಗನಲ್ಲಿರುವ ನೀರನ್ನು ಕೊಟ್ಟು ಉಪಚರಿಸಿ ಮುನಿಗಳನ್ನೂ, ಮಂತ್ರಿಗಳನ್ನೂ ಬೆಟ್ಟಕ್ಕೆ ಕರೆದೊಯ್ದರು. ದೈವರಾತರು ಸಮಗ್ರ ಪರಿವಾರದ ವಸತಿಗಾಗಿ ರಾಜಸೇವಕರ ಸಹಾಯದಿಂದ ಒಂದು

೪. "ಅತ್ರಸ್ಥಿತಃ ಪಂಚಸಹಸ್ರಪಾದ ಸಮುನ್ನತಃ ಶೈಲವರೋ ಮಹೇಂದ್ರಃ...." ವಾಸಿಷ್ಠ ವೈಭವಂ; ಪುಟ ೭೬

ಪರ್ಣಶಾಲೆಯನ್ನೇ ತತ್ಕಾಲದಲ್ಲಿ ನಿರ್ಮಿಸಿದರು. ಜಾತ್ರೆಯ ನಿಮಿತ್ತ ಅಂಗಡಿಗಳು ಬಂದಿದ್ದವು. ಬಾಳೆಹಣ್ಣು, ಅವಲಕ್ಕಿ, ಮಿಠಾಯಿ ಪದಾರ್ಥಗಳು ಮುಂತಾದವು ಬಂದಿದ್ದರಿಂದ ಅನುಕೂಲವೇ ಆಗಿತ್ತು.

ಗೋಕರ್ಣೇಶ್ವರನ ಮಂದಿರ ಪುರಾತನವಾಗಿದ್ದು ಶಿಲಾ ನಿರ್ಮಿತವಾಗಿತ್ತು. ಬೀಗ, ಬಾಗಿಲುಗಳಿಲ್ಲದ ಆ ಮಂದಿರದಲ್ಲಿ ಶಿವಲಿಂಗ ಮಾತ್ರ ಎಲ್ಲ ಶಿವಸನ್ನಿಧಾನಗಳಲ್ಲಿರುವಂತೆ ಶಿಲಾ ನಿರ್ಮಿತವಾದದ್ದಾಗಿರಲಿಲ್ಲ. ಒಂದು ಹಸ್ತ ಪ್ರಮಾಣದ ಆಳವಾದ ಗೋಕರ್ಣಾಕೃತಿಯಲ್ಲಿರುವ ಭೂಮಿಯ ರಂಧ್ರವೇ ಅಲ್ಲಿ ಪೂಜಿಸಲ್ಪಡುವ ಶಿವಸನ್ನಿಧಿಯಾಗಿತ್ತು. ಅಲ್ಲಿ ನೀರು, ಹಾಲು, ಬಿಲ್ವಪತ್ರಿಗಳನ್ನು ಎಷ್ಟೇ ಹಾಕಿದರೂ ತೊಳೆದು ಹೋಗಿ ಮರೆಯಾಗಿ ಬಿಡುತ್ತಿತ್ತು. ವಾಸಿಷ್ಠರು ಅದಕ್ಕೆ ದಹರಗೋಕರ್ಣೇಶ್ವರ ಎಂದು ಕರೆದರು.[೫]

ಮುಸ್ಸಂಜೆಯಾದಂತೆ ಹತ್ತಾರು ಮೈಲಿಗಳ ಸುತ್ತಲಿನ ಹಳ್ಳಿಗಳಿಂದ ಜನರು ಬಂದು ಬಂದು ಜನಜಂಗುಳಿ ಏರ್ಪಟ್ಟಿತ್ತು. ರಾತ್ರಿ ಎಂಟು ಗಂಟೆಯ ವೇಳೆಗೆ ಸ್ವಲ್ಪ ಉಪಾಹಾರವನ್ನು ಮಾಡಿದ ವಾಸಿಷ್ಠ ಮುನಿಗಳ ಪರಿವಾರ ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಪಡೆದು ಈಶ್ವರನ ಪೂಜೆಗೆ ಸಜ್ಜಾಯಿತು.

ಹತ್ತುವರೆ-ಹನ್ನೊಂದು ಗಂಟೆಗೆ ದೈವರಾತರು ಈಶ್ವರನ ಪೂಜೆಗೆ ನೀರನ್ನು ತರಲು ಸಮೀಪದ ಬಾವಿಗೆ ತೆರಳಿದರು. ಕೆನ್ವಾಸ ಬಕೆಟ್ಟಿನಲ್ಲಿ ದೈವರಾತರು ನೀರನ್ನು ಸೇದಿಕೊಂಡು ಹೋಗುವಷ್ಟರಲ್ಲಿ ಜಾತ್ರೆಗೆ ಬಂದ ಭಕ್ತಜನರು ನೀರನ್ನು ಕೊಡುವಂತೆ ತಮ್ಮ ತಮ್ಮ ಪಾತ್ರೆಗಳನ್ನು ಮುಂದಕ್ಕೆ ತಂದೊಡ್ಡಿ ನೀರನ್ನೆಲ್ಲಾ ತೆಗೆದುಕೊಂಡರು. ದೈವರಾತರು ಮತ್ತೊಮ್ಮೆ ಬಾವಿಯಿಂದ ನೀರನ್ನು ಸೇದಿಕೊಂಡು ಬಂದಾಗಲೂ ಹಾಗೆಯೇ ಆಯಿತು. ದೈವರಾತರು ಪೂಜೆಮಾಡುವವರಿಗೆ ನೀರನ್ನು ಕೊಡುವದಿಲ್ಲ ಎನ್ನಲಾಗದೇ ನೀರನ್ನು ಜನರ ಪಾತ್ರೆಗಳಿಗೆ ಸುರಿಯುತ್ತ ನೀರನ್ನು ಬಾವಿಯಿಂದ ಸೇದುತ್ತಲೇ ಹೋದರು. ರಾತ್ರಿ ಕಳೆದು ಬೆಳಗಾಯಿತು. ಆಗ ದೈವರಾತರಿಗೆ ತಾವು ಪೂಜೆ ಮಾಡುವದಕ್ಕೆ ಆಗಲಿಲ್ಲವಲ್ಲ ಎಂಬ ಕೊರಗು ಹುಟ್ಟಿ ಹತಾಶೆಯಿಂದ ವಾಸಿಷ್ಠ ಗಣಪತಿ ಮುನಿಗಳಿಗೆ ಬಳಿಗೆ ನಡೆದ ಘಟನೆಯೆಲ್ಲವನ್ನು ನಿವೇದಿಸಿಕೊಂಡು ದುಃಖಪಟ್ಟರು. ಅದಕ್ಕೆ ವಾಸಿಷ್ಠ ಗಣಪತಿ ಮುನಿಗಳು ದೈವರಾತರನ್ನು ಸಾಂತ್ವನ ಮಾಡುತ್ತ ಹೀಗೆ ಹೇಳ ತೊಡಗಿದರು-" ಇವತ್ತು ನಿಜವಾಗಿ ಪೂಜೆಯು ನಿನ್ನೊಬ್ಬನ ಕೈಯಿಂದ ಮಾತ್ರ ನೆರವೇರಿದಂತಾಯಿತು.

೫. ಅಪ್ರಕಟಿತ ಆತ್ಮಚರಿತ್ರೆ; ಪುಟ ೮೩ - ವಾಸಿಷ್ಠ ವೈಭವಂ; ಪುಟ ೭೭

ಇದು ಮಹಾಶಿವರಾತ್ರಿಯ ಮಹಾಪೂಜೆಯು; ಏಕೆಂದರೆ ನೀನು ಕೊಟ್ಟ ನೀರಿನಿಂದ ಸಾವಿರಾರು ಜನರು ಗೋಕರ್ಣೇಶ್ವರನಿಗೆ ಪೂಜೆ ಮಾಡಿದರು. ನಿನೊಬ್ಬನೆ ಪೂಜೆ ಮಾಡಿದ್ದರೆ ಇಷ್ಟು ದೊಡ್ಡ ಪೂಜೆಯು ಆಗುತ್ತಿದ್ದಿಲ್ಲ," ಇದಕ್ಕೆ ವಾಸಿಷ್ಠ ಮುನಿಗಳ ಪತ್ನಿ ವಿಶಾಲಾಕ್ಷಮ್ಮನವರು ಧ್ವನಿಗೂಡಿಸಿದರು. ಅದನ್ನು ಕೇಳಿ ದೈವರಾತರಿಗೆ ಈ ಗಿರಿಯನ್ನು ಏರಿಬಂದದ್ದು ಸಾರ್ಥಕವೆನಿಸಿ ಸಮಾಧಾನಗೊಂಡು ಸಂತೋಷಪಟ್ಟರು.[೬]

ಮಹಾಶಿವರಾತ್ರಿ ಪರ್ವ ಕಳೆದು ಬೆಳಗಾಗುತ್ತಿದ್ದಂತೆ ಜನರೆಲ್ಲ ತಮ್ಮ ತಮ್ಮ ಸ್ಥಾನಕ್ಕೆ ಮರಳತೊಡಗಿದರು. ದೈವರಾತರು, ವಾಸಿಷ್ಠ ಮುನಿಗಳು, ವಿಶಾಲಾಕ್ಷಮ್ಮನವರು ಮತ್ತೆ ರಾಜಸೇವಕರು ಗಿರಿಯ ಮೇಲೆ ಉಳಿದರು. ಎಂಟು–ಒಂಬತ್ತು ಗಂಟೆಯ ಮೇಲೆ ಅಲ್ಲಿ ಅವರನ್ನು ಬಿಟ್ಟು ಒಂದು ನರಪಿಳ್ಳೆಯೂ ಉಳಿದಿರಲಿಲ್ಲ. ವಾಸಿಷ್ಠರು ಇನ್ನು ತಾವೂ ಹೊರಡಬಹುದು ಎಂದು ದೈವರಾತರಿಗೆ ಸೂಚಿಸಿದರು. ಆದರೆ ದೈವರಾತರು ಇದಕ್ಕೆ ಸಮ್ಮತಿಸದೆ ತಾವು ಇನ್ನು ಒಂದು ತಿಂಗಳ ಪರ್ಯಂತವಾದರೂ ಈ ಏಕಾಂತ ಪ್ರದೇಶದಲ್ಲಿ ತಪವನ್ನಾಚರಿಸುವದಕ್ಕೆ ಬಯಸುವದಾಗಿ ಹೇಳಿದಾಗ ವಾಸಿಷ್ಠ ಮುನಿಗಳು ತಾವೂ ದೈವರಾತರ ಜೊತೆಯಲ್ಲಿ ಬೆಟ್ಟದ ಮೇಲೆಯೇ ಇದ್ದು ತಪೋನಿರತರಾಗಲು ನಿರ್ಧರಿಸಿದರು. ಆದರೆ ವಿಶಾಲಾಕ್ಷಮ್ಮ ಮಾತ್ರ ಅಲ್ಲಿ ಇರುವಂತಿರಲಿಲ್ಲ. ಪುತ್ರ ಮಹಾದೇವ, ಪುತ್ರಿ ವಜ್ರೇಶ್ವರಿ ಮತ್ತು ವೆಂಕಟರಮಣ ಮಂದಾಸಾದಲ್ಲಿಯೇ ಇದ್ದರು. ಆದ್ದರಿಂದ ರಾಜ ಸೇವಕರ ಸಹಾಯದಿಂದ ವಿಶಾಲಾಕ್ಷಮ್ಮನವರನ್ನು ಮಂದಾಸಾಕ್ಕೆ ಕಳುಹಿಸಿಕೊಡಲು ನಿರ್ಧರಿಸಿ ಅದರಂತೆ ಡೋಲಿಯಲ್ಲಿ ಕುಳ್ಳಿರಿಸಿ ಮಂದಾಸಾಕ್ಕೆ ಕಳುಹಿಸಿಕೊಟ್ಟರು.

ದೈವರಾತರಿಗೆ ಅಲ್ಲಿ ಇನ್ನೂ ಕೆಲವು ಕಾಲ ಇದ್ದು ತಪವನ್ನಾಚರಿಸುವದಕ್ಕೆ ಮತ್ತೂ ಒಂದು ಕಾರಣವಿತ್ತು. ಮಹೇಂದ್ರಗಿರಿ ಪರಶುರಾಮನ ನಿತ್ಯ ಸನ್ನಿಧಾನವಿರುವ ಸ್ಥಾನ ಎಂದು ಪ್ರತೀತಿ ಇತ್ತು. ಶ್ರೀರಾಮಾಯಣ[೭] ಮತ್ತು

---

೬. ಅಪ್ರಕಟಿತ ಆತ್ಮಚರಿತ್ರೆ, ಪುಟ ೮೩

೭. ಶ್ರೀಮದ್ವಾಲ್ಮೀಕಿರಾಮಾಯಣಂ – ಬಾಲಕಾಂಡ – ಸರ್ಗ ೭೫–೭೬. ಮಿಥಿಲೆಯಿಂದ ವಿವಾಹಾನಂತರ ಅಯೋಧ್ಯೆಗೆ ಹೊರಟ ಶ್ರೀರಾಮನನ್ನು ಮಾರ್ಗಮಧ್ಯದಲ್ಲಿ ತಡೆದ ಪರಶುರಾಮ ಶ್ರೀರಾಮನಿಂದ ಪರಾಜಿತನಾಗಿ ಮಹೇಂದ್ರಗಿರಿಗೆ ತೆರಳುತ್ತಾನೆ.

ವಾಸಿಷ್ಠ ವೈಭವದಲ್ಲಿಯೂ ವಾಸಿಷ್ಠ ಮುನಿಗಳ ಮತ್ತು ದೈವರಾತರ ಮಹೇಂದ್ರಗಿರಿಯ ವೃತ್ತಾಂತವರ್ಣನೆಯಲ್ಲಿ ಈ ವಿಷಯ (ಪರಶುರಾಮಕ್ಷೇತ್ರವೆಂಬ) ಪ್ರಸ್ತಾವಿತವಾಗಿದೆ.

ವಾಸಿಷ್ಠ ವೈಭವಂ; ಪುಟ ೭೬

"ಮಹೇಂದ್ರಂ ವೈ ಗಿರಿಶ್ರೇಷ್ಠಂ ರಾಮೋ ನಿತ್ಯಮುಪಾಸತೇ" ಮಹಾಭಾರತ ಉದ್ಯೋಗಪರ್ವ

ಮಹಾಭಾರತಗಳಲ್ಲಿ ಈ ಸಂಗತಿ ಉಲ್ಲೇಖಿತವಾಗಿದೆ ಎಂದು ತಿಳಿದುಕೊಂಡಿದ್ದ ದೈವರಾತರಿಗೆ ಅಲ್ಲಿ ತಪವನ್ನಾಚರಿಸಿ ಪರಶುರಾಮನ ಸಾಕ್ಷಾತ್ ದರ್ಶನ ಪಡೆಯುವ ಕಾತರ.

ದೈವರಾತರು, ವಾಸಿಷ್ಠ ಗಣಪತಿ ಮುನಿಗಳು ಮಹೇಂದ್ರಗಿರಿಯ ಮೇಲೆ ತಪೋನಿರತರಾಗಿ ಅಲ್ಲೇ ಇನ್ನೂ ಸ್ವಲ್ಪ ಕಾಲ ಇರಲಿದ್ದಾರೆಂಬ ವಾರ್ತೆಯನ್ನು ತಿಳಿದ ಮಂದಾಸಾ ಮಹಾರಾಜರು ಅವರಿಗೆ ಆಹಾರದ ಏರ್ಪಾಡನ್ನು ಒಂದು ಮಿತಿಯಲ್ಲಿ ವ್ಯವಸ್ಥೆ ಮಾಡಿಕೊಟ್ಟರು. ಮಹೇಂದ್ರಗಿರಿಯಿಂದ ಕೆಳಗೆ ನಾಲ್ಕು ಮೈಲು ದೂರದಲ್ಲಿರುವ ಹಳ್ಳಿಯೊಂದರ ಗ್ರಾಮಾಧಿಕಾರಿಗೆ ಮಹಾರಾಜರಿಂದ ಆಜ್ಞೆಯಾಯಿತು. ಅದರಂತೆ ಆತನು ವಾರಕ್ಕೆರಡು ಬಾರಿ ಸ್ವಲ್ಪ ಗೋದಿಹಿಟ್ಟು, ಗಟ್ಟಿಬೆಲ್ಲ ಮತ್ತು ಒಂದು ಸಿದ್ದೆ ಹಾಲು (ಒಂದು ಲೀಟರ್ ಪ್ರಮಾಣ ಸರಿಸುಮಾರು) ಮತ್ತು ಅವಶ್ಯಕವಾದ ಇತರ ಸಾಮಗ್ರಿಗಳನ್ನು ಬೆಟ್ಟದ ಮೇಲೆ ಮುಟ್ಟಿಸುತ್ತಿದ್ದನು. ಹಾಲನ್ನು ಒಂದೇ ದಿವಸದೊಳಗೆ ಉಪಯೋಗಿಸಿ ಮುಗಿಸುತ್ತಿದ್ದರು. ಪ್ರತಿದಿವಸ ಮಧ್ಯಾಹ್ನ ಪ್ರತಿಯೊಬ್ಬರಿಗೆ ಎರಡೆರಡು ರೊಟ್ಟಿಗಳಂತೆ ಮಾಡಿಕೊಂಡು ಗಟ್ಟಿಬೆಲ್ಲದೊಂದಿಗೆ ಸೇವಿಸುತ್ತಿದ್ದರು. ದೈವರಾತರಂತೂ ಪಾಕಪ್ರವೀಣರೂ ಆಗಿದ್ದರು; ಗುರುಶೂಶ್ರೂಷೆಯಲ್ಲಿ ಅದ್ವಿತೀಯರೂ ಆಗಿದ್ದರು. ಗುರುಶಿಷ್ಯರಿಬ್ಬರೂ ತಿಂಗಳಿಗೂ ಅಧಿಕ ಕಾಲ ತಪೋನಿರತರಾಗಿ ಆ ಏಕಾಂತದಲ್ಲಿ ಕಾಲ ಕಳೆಯುತ್ತಿದ್ದರು. ಗೋಕರ್ಣನಾಥೇಶ್ವರ ಮಂದಿರದ ಎದುರು ಇನ್ನೊಂದು ಮಂದಿರ, ಇನ್ನೂ ಶಿಥಿಲವಾದ ನರ–ನಾರಾಯಣ ದೇವತಾ ಆಯತನವಿತ್ತು. ಅದಕ್ಕೆ ಗೋಡೆಗಳಾಗಲೀ, ಛಾವಣಿಯಾಗಲಿ ಇರಲಿಲ್ಲ. ಮೇಲೆ ಕೆಲವು ಮರದ ಟೊಂಗೆಗಳನ್ನು ಮುಚ್ಚಿಕೊಂಡು ಅದನ್ನೇ ಆ ಇಬ್ಬರೂ ವಾಸಸ್ಥಾನವಾಗಿ ಮಾಡಿಕೊಂಡರು. ಶಿವರಾತ್ರಿ ಕಳೆದರೂ ಎತ್ತರದ ಪ್ರದೇಶವಾದ್ದರಿಂದ ಯಾವಾಗಲೂ ಮಂಜು ಸುರಿಯುತ್ತಿರುವ ಮೋಡಗಳಿಂದಾವೃತವಾದ ಆ ಬೆಟ್ಟದ ಮೇಲೆ ನೆಲವೂ ತಂಪು ತಂಪಿನಿಂದಲೇ ಕೂಡಿ ಮಲಗುವುದಕ್ಕೆ ಕಷ್ಟವಾದ್ದರಿಂದ ಸ್ವಲ್ಪ–ಹುಲ್ಲು, ಸೊಪ್ಪು ಸದೆಗಳನ್ನೂ ತಂದು ಹಾಸಿಕೊಂಡರು. ಸುತ್ತಮುತ್ತಲೂ ಬೆಟ್ಟದ ಮೇಲೂ, ಇಳಿಜಾರಿನ ತಪ್ಪಲುಗಳಲ್ಲೂ ದಟ್ಟವಾದ ಕಾಡು ಇದ್ದುದರಿಂದ ಹುಲಿಯೇ ಮುಂತಾದ ವನ್ಯ ಮೃಗಗಳೂ ಇದ್ದವು. ಸಂಜೆಯಾಯಿತೆಂದರೆ ವನ್ಯಮೃಗಗಳ ಸಂಚಾರ ಪ್ರಾರಂಭವಾಗಿ ಬಿಡುತ್ತಿತ್ತು. ಹಗಲು ಏಕಾಂತದಲ್ಲಿ ಆ ಸ್ಥಾನ ತಪಸ್ಸಿಗೆ ಆದರ್ಶವಾದ ಸನ್ನಿವೇಶವಾಗಿದ್ದರೆ ರಾತ್ರಿ ಮಾತ್ರ ಭಯಾನಕವೇ ಆಗಿತ್ತು. ಅದಕ್ಕಾಗಿ ಎರಡೂ ದೇವಸ್ಥಾನಗಳ

ಮಧ್ಯದಲ್ಲಿ ಬೆಂಕಿಯನ್ನು ಉರಿಸುತ್ತ ಛಳಿಯಿಂದ ರಕ್ಷಣೆಯನ್ನು, ಪ್ರಾಣಿಗಳ ಭಯದಿಂದ ಮುಕ್ತಿಯನ್ನು ಪಡೆದರು. ಅಗ್ನಿಯ ಸಮೀಪ ಕುಳಿತು ಜಪಾನುಷ್ಠಾನ ಮಾಡುತ್ತಿದ್ದರು. ಸಂಜೆಯಾಯಿತೆಂದರೆ ಹುಲಿಯ ಘರ್ಜನೆ ಕೇಳುತ್ತಿತ್ತು. ಆದರೆ ಬೆಂಕಿ ಉರಿಯುತ್ತಿದ್ದುದರಿಂದ ಪ್ರಾಣಿಗಳ ಭಯ ಇರಲಿಲ್ಲ. ದೈವರಾತರು ಶುದ್ಧ ವೈದಿಕ ಪರಂಪರೆಯನ್ನು ಹೊಂದಿದ್ದರಿಂದ "ಜಾವೇದಸೇ ಸುನಾಮ ಸೋಮಮರಾತೀಯತೋ ನಿದಹಾ ತಿವೇದಃ..." ಎಂಬ ವೈದಿಕ ಮಂತ್ರವಾನ್ನು ಜಪಿಸುತ್ತಿದ್ದರು. ವಾಸಿಷ್ಠ ಗಣಪತಿ ಮುನಿಗಳು "ಕ್ಲೇಶ ನಾಶನ ಶೂಲಪಾಣೇ" ಎಂಬ ತಂತ್ರ ಶಾಸ್ತ್ರದ ಪರಂಪರೆಗೆ ಸೇರಿದ ನವಾಕ್ಷರೀ ಮಂತ್ರದ ಅನುಷ್ಠಾನದಲ್ಲಿ ನಿರತರಾದರು.

ಮಹೇಂದ್ರಗಿರಿಯ ಪವಿತ್ರವಾದ ತಪೋಭೂಮಿಕೆಯಲ್ಲಿ ವಾಸಿಷ್ಠ ಗಣಪತಿ ಮುನಿಗಳು ದೈವರಾತರಿಗೆ ಶ್ರೀವಿದ್ಯಾ ಉಪಾಸನೆಯ 'ಷೋಡಶಾಕ್ಷರೀ' ಮಂತ್ರವನ್ನು ಉಪದೇಶಿಸಿದರು. ಶಿವರಾತ್ರಿಯಿಂದ ಪ್ರಾರಂಭವಾದ ತಪಸ್ಸು ಹಲವಾರು ದಿವಸಗಳು ನಡೆಯುತ್ತಿದ್ದಾಗ ಮಧ್ಯದಲ್ಲಿಯೇ ಈ ದಿವ್ಯ ಮಂತ್ರೋಪದೇಶವೂ ನಡೆಯಿತು. ಫಾಲ್ಗುಣ ಮಾಸದ ಪೂರ್ಣಿಮೆಯ ದಿವಸ ವಾಸಿಷ್ಠ ಗಣಪತಿ ಮುನಿಗಳು ಅದೇ ದಿವ್ಯ ಮಂತ್ರದಿಂದ ದೈವರಾತರ ಶಿರಸ್ಸಿನ ಮೇಲೆ ಪೂರ್ಣಾಭಿಷೇಕವನ್ನು ಮಾಡಿದರು. ಶ್ರೀಶಂಕರಾಚಾರ್ಯರ ಸಂಪ್ರದಾಯದ ಮಠಗಳಲ್ಲಿ ಸಂನ್ಯಾಸ ದೀಕ್ಷೆಯನ್ನು ಕೊಡುವ ಸಂದರ್ಭಗಳಲ್ಲಿ ದೀಕ್ಷೆಯನ್ನು ಕೊಡುವ ಆಚಾರ್ಯರು ಶಿಷ್ಯರಿಗೆ ದಿವ್ಯ ಮಂತ್ರಗಳಿಂದ ಪೂರ್ಣಾಭಿಷೇಕಮಾಡುವ ಸಂಪ್ರದಾಯ ಈಗಲೂ ಇದೆ ಎನ್ನುವದನ್ನು ದೈವರಾತರು ಸ್ಮರಿಸುತ್ತ ಈ ಘಟನೆಯನ್ನು ಉಲ್ಲೇಖಿಸಿದ್ದಾರೆ.[೮]

ದೈವರಾತರ ತಾಯಿ ನಾಗವೇಣಿ ಅಮ್ಮನವರು ಮರಣ ಹೊಂದಿದ ದಿನ ಫಾಲ್ಗುಣ ಮಾಸದ ಕೃಷ್ಣಪಕ್ಷದ ಚತುರ್ಥಿ ತಿಥಿ. ಅಂದು ದೈವರಾತರಿಗೆ ದೂರದ ಗೋಕರ್ಣಕ್ಕೆ ತೆರಳಿ ಈ ಪಿತೃಕಾರ್ಯವನ್ನು ಮಾಡುವಷ್ಟು ವ್ಯವಧಾನವಿರಲಿಲ್ಲ. ವಾಸಿಷ್ಠ ಗಣಪತಿ ಮುನಿಗಳನ್ನೇ ಬ್ರಾಹ್ಮಣರ ಸ್ಥಾನದಲ್ಲಿಟ್ಟುಕೊಂಡು ಶ್ರಾದ್ಧವನ್ನು ಸಾಂಗಗೊಳಿಸುವ ಸುಯೋಗವು

೮. ಅಪ್ರಕಟಿತ ಆತ್ಮಚರಿತ್ರೆ, ಪುಟ ೮೪
ಷೋಡಶಾಕ್ಷರೀ ದಿವ್ಯಮಂತ್ರದ ವರ್ಣನೆ ದೈವರಾತರ ವಾಣಿಯಲ್ಲಿ ಹೀಗೆ ಮೂಡಿ ಬಂದಿದೆ.
"ಭಗವತೀ ಸಾಷ್ಟವಿಂಶತಿವರ್ಣಾ ತ್ವಂ ಬೀಜಾತ್ಮಾ ಷೊಡಶವರ್ಣಾ ।
ಷೋಡಶೀ ತವಮನುರಯಮಭಿಷಿಕ್ತೋ ಮಂತ್ರಗಣಾನಾಮಧಿಪತಿರಿಷ್ಟಃ ॥"

ದೈವರಾತರಿಗೆ ಪ್ರಾಪ್ತವಾಯಿತು. ಪರಶುರಾಮನ ಸ್ಥಾನದಲ್ಲಿ ದೇಶ ಕಾಲಾದಿ ಸನ್ನಿವೇಶಗಳಿಗೆ ಉಚಿತವಾದ ರೀತಿಯಲ್ಲಿ ದೈವರಾತರು ಶ್ರಾದ್ಧವನ್ನು ಸಂಪನ್ನಗೊಳಿಸಿದರು.

ಈ ನಡುವೆ ಮಂದಾಸಾ ಮಹಾರಾಜರು ಆಪ್ತ ಸಮಾಲೋಚನೆಗಾಗಿ ವಾಸಿಷ್ಠ ಗಣಪತಿ ಮುನಿಗಳನ್ನು ಕರೆ ತರಲು ಡೋಲಿಯವರೊಂದಿಗೆ ಬಿಸಾಯಿ (ಆಹಾರವನ್ನು ಪೂರೈಸುತ್ತಿದ್ದ ಗ್ರಾಮಾಧಿಕಾರಿ) ಯನ್ನು ಕಳುಹಿಸಿಕೊಟ್ಟರು. ವಾಸಿಷ್ಠ ಮುನಿಗಳು ನಿರೂಪಾಯರಾಗಿ ದೈವರಾತರನ್ನು ಅಲ್ಲಿ ಬಿಟ್ಟು ಮಂದಾಸಾಕ್ಕೆ ತೆರಳಿದರು.

ವಾಸಿಷ್ಠ ಮುನಿಗಳು ಮಂದಾಸಾಕ್ಕೆ ಹೋದ ನಂತರ ದೈವರಾತರು ಏಕಾಂಗಿಯಾಗಿ ತಪಸ್ಸನ್ನು ಮುಂದುವರಿಸಿದರು. ವಾಸಿಷ್ಠ ಮುನಿಗಳಿದ್ದಾಗ ದಿನಕ್ಕೆರಡು ಗೋದಿಯ ರೊಟ್ಟಿಯನ್ನು ತಿನ್ನುತ್ತಿದ್ದವರು ಈಗ ಅದನ್ನೂ ತ್ಯಾಗ ಮಾಡಿ ಅರಣ್ಯದಲ್ಲಿ ಸಿಗುವ ನೆಲ್ಲಿಕಾಯಿಗಳನ್ನು ತಂದು ಅವುಗಳನ್ನು ಬೆಂಕಿಯ ಶಾಖದಲ್ಲಿ ಸ್ವಲ್ಪ ಸುಟ್ಟುಕೊಂಡು ತಿಂದು ನೀರನ್ನು ಕುಡಿದುಕೊಂಡು ಇದ್ದುಬಿಟ್ಟರು. ಒಂದೆರಡು ದಿನ ಬಿಟ್ಟು ಕಾಡಿನಲ್ಲಿ ಸಿಕ್ಕ ಗಡ್ಡೆಯೊಂದನ್ನು ತಿನ್ನೋಣವೆಂದು ಬಾಯಿಗೆ ಹಾಕಿದ ಕೂಡಲೇ ಬೆಂಕಿಹಾಕಿದ ಅನುಭವವಾಗಿ ಕ್ಷಣಾರ್ಧದಲ್ಲಿ ಬಾಯಿ, ನಾಲಿಗೆ, ತುಟಿಗಳೆಲ್ಲಾ ಸುಟ್ಟಂತಾಗಿ ಊದಿಕೊಂಡು ಬಿಟ್ಟವು. ಆ ನಿರ್ಜನವಾದ ಎತ್ತರದ ಬೆಟ್ಟದ ಮೇಲೆ ರಾತ್ರಿಯ ಹೊತ್ತಿನಲ್ಲಿ ಉಂಟಾದ ಸ್ಥಿತಿಗೆ ಏನು ಮಾಡಬೇಕೆಂದು ತಿಳಿಯದೆ ದೈವರಾತರು ಸ್ವಲ್ಪ ನೆಲ್ಲಿಕಾಯಿಗಳನ್ನೇ ಜಜ್ಜಿ ಬಾಯಿಯಲ್ಲಿಟ್ಟುಕೊಂಡು ಅದರ ಒಸರುತ್ತಿದ್ದ ರಸವನ್ನು ಬಾಯಿಯ ಒಳಗೆಲ್ಲಾ ತುಂಬಿಕೊಳ್ಳುತ್ತಾ, ತುಟಿಗಳಿಗೂ ನಾಲಿಗೆಯಿಂದ ಸವರಿಕೊಳ್ಳುತ್ತ ರಾತ್ರಿಯನ್ನು ಕಳೆದರು. ಬೆಳಗಾದ ಮೇಲೆ ಉಂಟಾದ ಉರಿ, ಊತಗಳ ವಿಕಾರವು ಸಾವಕಾಶವಾಗಿ ಉಪಶಮನವಾಗತೊಡಗಿದವು.[೯]

ಐದು ದಿನಗಳಾದ ಮೇಲೆ ವಾಸಿಷ್ಠ ಮುನಿಗಳು ಮಂದಾಸಾದಿಂದ ಪುನಃ ಮರಳಿಬಂದರು. ಮತ್ತೆ ತಪಸ್ಸು ಮುಂದುವರಿಸಿದರು. ಸರಿಸುಮಾರು ಒಂದು ತಿಂಗಳಿಗೂ ಹೆಚ್ಚು ಕಾಲ ಮಹೇಂದ್ರಗಿರಿಯಲ್ಲಿ ತಪವನ್ನಾಚರಿಸಿ ಗುರುಶಿಷ್ಯರಿಬ್ಬರೂ ಮಂದಾಸಾಕ್ಕೆ ಮರಳಿದರು.

೯. ಅಪ್ರಕಟಿತ ಆತ್ಮಚರಿತ್ರೆ, ಪುಟ ೮೫
ಪಾ. ವೆಂ. ಆಚಾರ್ಯರು ಕಸ್ತೂರಿಯ ತಮ್ಮ ಲೇಖನದಲ್ಲಿ ಈ ಘಟನೆಯನ್ನು ಉಲ್ಲೇಖಿಸಿದ್ದಾರೆ.

೩. ಶ್ರೀ ರಮಣಾಶ್ರಮಕ್ಕೆ ಪಯಣ

ಮಂದಾಸಾಕ್ಕೆ ಮರಳಿದ ಮೇಲೆ ದೈವರಾತರು ವಾಸಿಷ್ಠ ಗಣಪತಿ ಮುನಿಗಳ ಪರಿವಾರದ ಜೊತೆಯಲ್ಲಿ ಕೆಲವು ಕಾಲವನ್ನು ರಾಜಾಶ್ರಯದಲ್ಲಿ ಕಳೆದರು. ಒಂದು ದಿವಸ ಗುರುಗಳಲ್ಲಿ ಅರುಣಾಚಲದ ರಮಣಾಶ್ರಮಕ್ಕೆ ಹೋಗುವ ತಮ್ಮ ಇಂಗಿತವನ್ನು ನಿವೇದಿಸಿಕೊಂಡರು. ವಾಸಿಷ್ಠ ಮುನಿಗಳಿಗೂ ಮಂದಾಸಾದಲ್ಲಿದ್ದು ಮಾಡಬೇಕಾದ ಕರ್ತವ್ಯ ಯಾವುದನ್ನೂ ಕಾಣದೆ ತಮ್ಮ ಕುಟುಂಬವರ್ಗದ ಜೊತೆಯಲ್ಲಿ ತಾವೆಲ್ಲರೂ ರಮಣಾಶ್ರಮಕ್ಕೆ ಹೋಗುವದರ ಕುರಿತು ಸಮಾಲೋಚನೆ ನಡೆಸಿ ದೈವರಾತರ ಜೊತೆಯಲ್ಲಿ ತಾವೆಲ್ಲರೂ ಅರಣಾಚಲಕ್ಕೆ ಹೋಗುವ ನಿರ್ಧಾರಕ್ಕೆ ಬಂದು ಅದನ್ನು ದೈವರಾತರಿಗೆ ತಿಳಿಸಿದರು. ಮಂದಾಸಾದಲ್ಲಿ ಮಹಾರಾಜರು ಮಾಡಿಕೊಟ್ಟ ಸಕಲ ಸಹಾಯ ಅನುಕೂಲಗಳಿಗೆ ವಾಸಿಷ್ಠ ಗಣಪತಿ ಮುನಿಗಳು ತಮ್ಮ ಸಮಸ್ತ ಪರಿವಾರದ ಕಡೆಯಿಂದ ಮಹಾರಾಜರಿಗೆ ಕೃತಜ್ಞತೆಯನ್ನು ಹೇಳಿ ಶುಭಾಶೀರ್ವಾದ ಗೈದು ಬೀಳ್ಕೊಟ್ಟು ಮದ್ರಾಸ ಪ್ರಾಂತದ ಕಡೆಗೆ ಎಲ್ಲರೂ ಪಯಣಿಸಿದರು.

ಆಂಧ್ರಪ್ರದೇಶದ ಕಾಕಿನಾಡಾದಲ್ಲಿ ತೆಲಗು ಭಾಷೆಯ ಸಮ್ಮೇಳನವೊಂದಕ್ಕೆ ಮೊದಲೇ ವಾಸಿಷ್ಠ ಗಣಪತಿ ಮುನಿಗಳು ಆಹ್ವಾನಿತರಾದ್ದರಿಂದ ಅವರೊಬ್ಬರು ಪ್ರಯಾಣದ ಮಧ್ಯದಲ್ಲಿ ಆ ಸಮ್ಮೇಳನದಲ್ಲಿ ಪಾಲ್ಗೊಳ್ಳುವದಕ್ಕಾಗಿ ಉಳಿದ ಪರಿವಾರದ ಸಂಗಡ ಮದ್ರಾಸಿಗೆ ಹೋಗದೆ ಕಾಕಿನಾಡಾಕ್ಕೆ ಹೋದರು. ದೈವರಾತರು ವಾಸಿಷ್ಠ ಮುನಿಗಳ ಪರಿವಾರ ಮತ್ತು ವೆಂಕಟರಮಣ ಮದ್ರಾಸಿಗೆ ತೆರಳಿ ಆ ಕಾಲದಲ್ಲಿ ಪ್ರಸಿದ್ಧರಾದ ದೊರೈಸ್ವಾಮಿ ಎಂಬವರ ಮನೆಯಲ್ಲಿ ಇಳಿದುಕೊಂಡರು.

ದೈವರಾತರಂತೆಯೆ ಟಿ. ವಿ. ಕಪಾಲಿಶಾಸ್ತ್ರಿಗಳು ವಾಸಿಷ್ಠ ಗಣಪತಿ ಮುನಿಗಳ ಪ್ರಧಾನ ಶಿಷ್ಯರಲ್ಲೊಬ್ಬರು. ದೈವರಾತರು ಮದ್ರಾಸಿಗೆ ದೊರೈಸ್ವಾಮಿಯವರ ಮನೆಯಲ್ಲಿದ್ದಾಗಲೆ ದೈವರಾತರಿಗೂ ಕಪಾಲಿಶಾಸ್ತ್ರಿಗಳಿಗೂ ಮೊದಲ ಭೇಟಿಯಾದದ್ದು. ವಿಶಾಲಾಕ್ಷಮ್ಮನವರನ್ನು ನೋಡುವದಕ್ಕೆ ಕಪಾಲಿ ಶಾಸ್ತ್ರಿಗಳು ಬಂದರು. ಆಗ ಅವರು ಮದ್ರಾಸಿನ ಹೊರವಲಯದ ಚಿಕ್ಕ ಗ್ರಾಮವೊಂದರಲ್ಲಿ ಕಾರ್ಯನಿಮಿತ್ತ ವಾಸ ಮಾಡಿಕೊಂಡಿದ್ದರು. ಈ ಮೊದಲು ಕಪಾಲಿಶಾಸ್ತ್ರಿಗಳು ಗಣಪತಿ ಮುನಿಗಳಿಂದ ದೈವರಾತರನ್ನು ಕುರಿತು ತಿಳಿದುಕೊಂಡಿದ್ದರು. ಇಬ್ಬರು ಪ್ರಧಾನಶಿಷ್ಯರು ಸಾಂದರ್ಭಿಕವಾಗಿ ಭೇಟಿಯಾದ

ಸಂದರ್ಭದಲ್ಲಿ ದೈವರಾತರ ಮಾತುಗಳಿಂದ ದೈವರಾತರ ಅಧ್ಯಯನ, ಯೋಗಪ್ರಕ್ರಿಯೆಗಳ ಅಭ್ಯಾಸ, ತಪೋನುಷ್ಠಾನಗಳ ಹೆಚ್ಚಿನ ಪರಿಚಯ ಕಪಾಲಿಶಾಸ್ತ್ರಿಗಳಿಗಾಯಿತು.

ವಾಸಿಷ್ಠ ಮುನಿಗಳು ಆಂಧ್ರಪ್ರದೇಶದ ತಮ್ಮ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಇನ್ನೂ ಬಂದು ಮುಟ್ಟಿರಲಿಲ್ಲ. ಮದ್ರಾಸಿಗೆ ಬಂದು ಎರಡು-ಮೂರು ದಿನಗಳು ಕಳೆದ ನಂತರ ದೈವರಾತರೊಬ್ಬರೆ ಮದ್ರಾಸಿನಿಂದ ಅರುಣಾಚಲ ಸ್ಥಿತವಾದ ಶ್ರೀ ರಮಣಾಶ್ರಮಕ್ಕೆ ಹೊರಟರು.

೪. ಅರುಣಾಚಲವಾಸ-ಶ್ರೀರಮಣ ಸಹವಾಸ (೧೯೧೭)

ಮದ್ರಾಸಿನಿಂದ ಹೊರಟ ದೈವರಾತರು ಅರುಣಾಚಲವನ್ನು ತಲುಪಿ ರಮಣ ಮಹರ್ಷಿಗಳಿರುವ ಸ್ಕಂದಾಶ್ರಮವನ್ನು ಸೇರಿದರು. ರಮಣಮಹರ್ಷಿಗಳು ಸ್ಕಂದಾಶ್ರಮದ ಶಿಲಾತಲವೊಂದರ ಮೇಲೆ ಆಸೀನರಾಗಿ ಸಹಜ ಸಮಾಧಿ ಸ್ಥಿತಿಯ ಸೊಬಗನ್ನು ಅನುಭವಿಸುತ್ತಾ ಬಾಹ್ಯ ಪರಿವೆಯಿಲ್ಲದೆ ಆನಂದ ರಸದಲ್ಲಿ ಲೀನವಾಗಿದ್ದರು. ರಮಣ ಮಹಿರ್ಷಿಗಳ ಆ ಸಹಜ ಸುಂದರ ಸಂನಿಧಾನವನ್ನು ಕಂಡು ದೈವರಾತರು ಪುಳಕಿತರಾದರು. ಅವರ ಮಾರ್ಗಾಯಾಸವೆಲ್ಲ ಕ್ಷಣಾರ್ಧದಲ್ಲಿ ಮರೆಯಾಗಿ ಹೋಯಿತು. ಎದುರಿಗಿರುವ ಆ ದಿವ್ಯಚೇತನ ದೈವರಾತರ ಶುದ್ಧಾಂತಃಕರಣವನ್ನು ಬಂದು ಮೃದುವಾಗಿ ತಟ್ಟಿರಬೇಕು. ದೈವರಾತರ ಬಾಯಿಂದ ಅಪ್ರಯತ್ನ ಪುರಃಸರವಾಗಿ ರಮಣಸ್ತುತಿ ಛಂದೋರೂಪವನ್ನು ಧರಿಸಿ ಆವಿರ್ಭವಿಸುವುದಕ್ಕೆ ತೊಡಗಿತು.[೧೦]

– ಒಂದು –

ಶ್ರೀಮತ್ಪಾರಾಶರೋಽಯಂ ಪ್ರಮುದಿತವದನಃ ಪಾವನಃ ಪಾರ್ವತೀಯಃ
ಪ್ರತ್ಯಗ್ ದೃಗ್ ದೇವಕಲ್ಪೋ ವಿಗತಭವಭಯಃ ಸರ್ವದಾ ಸುಪ್ರಸನ್ನಃ
ಆತ್ಮನ್ಯೇವ ಪ್ರಲೀನಃ ಸಕಲಗುಣನಿಧಿರ್ಮೌನಮುದ್ರೋಪಪನ್ನೋ
ದೃಷ್ಟಃ ಸಂತೃಪ್ತಚಿತ್ತೋ ರಮಣ ಮುನಿರಹೋ ಸಚ್ಚಿದಾನಂದಲೀನಃ

---

೧೦. ಈ ಸ್ತುತಿಯು ಎಂಟು ಶ್ಲೋಕಗಳಲ್ಲಿದ್ದು ಇದು "ರಮಣ ವಿಭಕ್ತ್ಯಷ್ಟಕಮ್" ಎಂದು ಪ್ರಸಿದ್ಧವಾಗಿದೆ. ಮಹರ್ಷಿ ದೈವರಾತರ ಕೃತಿಯಾದ 'ಇಂದ್ರಯಜ್ಞ' ಎಂಬ ಗ್ರಂಥದಲ್ಲಿ ಪ್ರಕಟವಾಗಿದೆ.

– ಎರಡು –

ಯಂ ದೃಷ್ಟ್ವೈವಾವಶಿಷ್ಟಂ ಭವತಿ ಪುನರಹೋ ನೇಹ ಕರ್ತವ್ಯತಾಯಾಂ
ಸದ್ಯಶ್ಚಿತ್ತ ಪ್ರಸಾದಾದ್ವಿಗಲತಿ ಮನಸಃ ಸರ್ವಸಂಕಲ್ಪಜಾಲಮ್
ವೃತ್ತಿಃ ಶಾಮ್ಯತ್ಸನೇಕಾ ವಿಧಿಮನುಜನಿತಾ ದ್ವೇಷಿಣೋ ವಾ ನಿಷೇಧಾನ್
ಸಂತಂ ಪಾರಾಶರಂ ತಂ ಗುರುರಮಣಯತಿಂ ಸಂತತಂ ಚಿಂತಯಾಮಿ ॥

– ಮೂರು –

ಯೇನೇಯಂ ಚಿತ್ರಸೃಷ್ಟಿ ರ್ಬಹಿರಿವ ಮನಸಾ ಸ್ವಪ್ನವತ್ ಸಂಪ್ರದೃಷ್ಟಾ
ದೃಷ್ಟಿಃ ಪ್ರತ್ಯಗ್ಗತಾಪಿ ಪ್ರಣತಭಯಹರೀ ಸಂವಿಮೃಷ್ಟಾ ದಯಾದ್ರಾ
ಸ್ವಾರ್ಥಾಃ ಸಂಗಸ್ಯ ಹಾನಾತ್ ತದನುಗತಧಿಯಃ ಸರ್ವತಃ ಸನ್ನಿರಸ್ತಾಃ
ತ್ರಾತಸ್ತೇನೇಹ ಮರ್ತ್ಯೋ ರಮಣಭಗವತಾ ಧನ್ಯತಾಂ ಯಾತಿ ಸದ್ಯಃ ॥

– ನಾಲ್ಕು –

ಯಸ್ಮೈ ತತ್ತ್ವಾರ್ಥವೇತ್ರೇ ಪರಮಪವಿದೇ ಸ್ವಾತ್ಮನೋ ಬೋಧಯಿತ್ರೇ
ಸ್ವಾನಂದಸ್ಯಾಪಯಿತ್ರೇ ಜನಿಮರಣ ಭಯಾತ್ ಪ್ರಾಣಿಸ್ತ್ರಾಣಯಿತ್ರೇ ।
ಸ್ವಾತ್ಮಾನಾಂ ಪ್ರಾಪ್ಯ ಬುಧ್ಯಾ ಶರಣಮುಪಗತಾ ಧನ್ಯತಾ ಯಾಂತಿ ಲೋಕಾಃ
ತಸ್ಮೈ ಪಾರಾಶರಾಯೋಂ ರಮಣಭಗವತೇ ಜ್ಞಾನದಾತ್ರೇ ನಮಸ್ತೇ ॥

– ಐದು –

ಯಸ್ಮಾತ್ ಸಂಪೂರ್ಣಕಾಮಾತ್ ವಿಗತಕಲಿಮಲಾತ್ ದಿವ್ಯವಾಗಾತ್ಮದೇಹಾನ್
ನಿತ್ಯಂ ಪ್ರದ್ಯೋತಮಾನಾಜ್ಜಗತಿ ಹಿ ತಪಸಾ ಸಂಸ್ಥಿತಪ್ರಜ್ಞತೋಽನ್ಯಃ ।
ಸಂತಪ್ತಾನಾಂ ಪ್ರಜಾನಾಂ ವಿಷಯವಿಷಧರೈರ್ನೈವ ಕಂಚಿಚ್ಛರಣ್ಯಃ
ತಸ್ಮಾತ್ ಪಾರಾಶರಾನ್ಮೇ ರಮಣಮುನಿವರಾದಾತ್ಮನಃ ಸಂವಿದಸ್ತು ॥

– ಆರು –

ಯಸ್ಯಾಹಂ ಮೇಮತಿರ್ಹಿ ಸ್ವಯಮಿಹ ಗಲಿತಾ ಸಂವಿದೇವಾದ ಶಿಷ್ಟಾ
ಧರ್ಮಾಧರ್ಮಪ್ರಪಂಚಃ ಸಹ ವಿಧಿಭಿರಹೋ ಸನ್ಪ್ರಶಾಂತೋ ನಿಷೇಧೈಃ
ಇಷ್ಟಾನಿಷ್ಟಂ ಸಮಾನೇ ಸ್ಥಿತಿರಪಿ ಜಗತಿ ಪ್ರಾಣಿನಾಂ ವಾ ಹಿತಾರ್ಥಾ
ತಸ್ಯೇದಂ ಪದಯುಗ್ಮಂ ರಮಣಭಗವತಃ ಸಂಪ್ರಪದ್ಯೇ ಶರಣ್ಯಮ್ ॥

– ಏಳು –

ಯಸ್ಮಿನ್ನತ್ಯಾಶ್ರಮಸ್ಥೇ ಹ್ಯಮಮುಪಗತೇ ವೀತವರ್ಣ ಪ್ರಪಂಚೇ ।
ಬ್ರಹ್ಮಿಷ್ಠೇ ನಿತ್ಯತೃಪ್ತೇ ಪರಮರಸನಿಧೌ ಸಿದ್ಧಯೋಽಷ್ಟೌ ಪ್ರಣಮ್ರಾಃ ।
ಕಾಮಾಶ್ಚ ಪ್ರಾಪ್ತಕಾಮಾಃ ಸುಖಮಿಹ ಪರಮಂ ಸಂವಿಶಂತೀವ ನಿತ್ಯಂ ।
ತಸ್ಮಿನ್ ಪಾರಾಶರೇ ಮೇ ರಮಣ ಮುನಿವರೇ ಧೀಂದ್ರಿಯಾಣ್ಯಾರಮಂತಾಮ್॥

– ಎಂಟು –

ಸ್ವಾಮಿನ್ ಸರ್ವಾರ್ತಿಹಾರಿನ್ ನಯ ಪರಮಗುರೋ ನಿರ್ಮಲಜ್ಞಾನಮೂರ್ತೇ
ವಾಸಿಷ್ಠಸ್ಯ ಪ್ರಸಾದಾತ್ ತವ ಚರಣಯುಗಂ ಪ್ರಾಪ್ಯ ಸರ್ವೈರ್ದುರಾಪಮ್ ।
ಪೂರ್ಣಾಃ ಕಾಮಾ ಇಹೇತಿ ಪ್ರಪಿಹಿತಮನಸಾ ಧನ್ಯತಾಂ ಭಾವಯಂತಂ
ತ್ರಾಹೀಮಂ ಪಾಪಜಾಲಾದ್ ರಮಣ ಮುನಿಪತೆ ದೈವರಾತಂ ಪ್ರಪನ್ನಮ್ ॥
ರಮಣಂ ರಮಣೀಯ ಚಿದ್ವಿಕಾಸಂ ಶರಣಂ ಸಂಸ್ಮರಣೀಯಸದ್ವಿಲಾಸಮ್ ।
ಪರಮಂ ಪರಮಾರ್ಥ ತತ್ತ್ವಬೋಧಂ ಕಲಯೇ ಕಲ್ಮಷಕೀಲನ ಪ್ರಬೋಧಮ್॥

ನಾಲ್ಕಾರು ದಿನಗಳ ನಂತರ ದೈವರಾತರ ಆಚಾರ್ಯರಾದ ವಾಸಿಷ್ಠ ಗಣಪತಿ ಮುನಿಗಳು ಸಪತ್ನೀಕರಾಗಿ ಬಂದು ದೈವರಾತರನ್ನು ಸೇರಿಕೊಂಡರು. ಆಗ ದೈವರಾತರು ತಮ್ಮ ಈ 'ರಮಣ' 'ವಿಭಕ್ತ್ಯಷ್ಟಕ'ವನ್ನು ಗಣಪತಿ ಮುನಿಗಳಿಗೆ ತೋರಿಸಿದಾಗ ಗಣಪತಿ ಮುನಿಗಳು ಆ ಸ್ತೋತ್ರ ರಚನೆಯನ್ನು ತಾವು ರಚಿಸಿದ ರಮಣ ಸ್ತೋತ್ರಗಳಿಗಿಂತಲೂ ರಮಣರ ತತ್ತ್ವನಿಷ್ಠೆಯ ಸ್ವರೂಪವನ್ನು 'ರಮಣ ವಿಭಕ್ತ್ಯಷ್ಟಕ' ಉತ್ಕೃಷ್ಟವಾಗಿ ಪ್ರತಿಪಾದಿಸಿದೆ ಎಂದು ಕೊಂಡಾಡಿದರು.

ದೈವರಾತರು ರಮಣರ ಸಹವಾಸದಲ್ಲಿ ಆನಂದವಾಗಿ ಆಶ್ರಮದಲ್ಲಿರುವಾಗ ಒಂದು ದಿನ ರಮಣರನ್ನು ಉದ್ದೇಶಿಸಿ ಕೆಲವು ಪ್ರಶ್ನೆಗಳನ್ನು ಕೇಳಿ ರಮಣ ಮಹರ್ಷಿಗಳಿಂದ ಸ್ವಾನುಭವಪೂರ್ಣವಾದ ಉತ್ತರಗಳನ್ನು ಪಡೆದರು. ಈ ಸಂವಾದವು ಅನಂತರದ ಕಾಲದಲ್ಲಿ ವಾಸಿಷ್ಠ ಕೃತಿಯಾದ 'ರಮಣಗೀತೆ' ಯಲ್ಲಿ ಮೂರನೆಯ ಅಧ್ಯಾಯದ ರೂಪದಲ್ಲಿ ಪ್ರಕಟವಾಗಿದೆ. 'ರಮಣಗೀತಾ' ಕೃತಿಯು ಸಂಸ್ಕೃತದಲ್ಲಿದೆ. ಆದರೆ ದೈವರಾತರೇ ಸ್ವಯಂ ಉಲ್ಲೇಖಿಸಿದಂತೆ ದೈವರಾತರು ಪ್ರಶ್ನೆಗಳನ್ನು ಕನ್ನಡದಲ್ಲಿ ಕೇಳಿದರಂತೆ. ರಮಣ ಮಹರ್ಷಿಗಳು ತಮಿಳಿನಲ್ಲಿ ಉತ್ತರಗಳನ್ನು ಕೊಟ್ಟರು. ಗಣಪತಿ ಮುನಿಗಳು ಸಂಸ್ಕೃತದಲ್ಲಿ ಈ ಅದ್ಭುತ ಸಂವಾದವನ್ನು ಗ್ರಂಥಸ್ಥಗೊಳಿಸಿದರು.

ಶ್ರೀರಮಣ ಗೀತೆಯಿಂದ[೧೧] ಉದ್ಧರಿಸಲ್ಪಟ್ಟ ಈ ಸಂವಾದದ ಭಾಗ ಜೀವನದ ಪರಮ ತಾತ್ಪರ್ಯವನ್ನು ಸುಂದರವಾಗಿ ತಿಳಿಸಿಕೊಡುತ್ತದೆ.

---

೧೧. ದೈವರಾತ – ರಮಣ ಸಂವಾದವು "ರಮಣಾಶ್ರಮ – ತಿರುವಣ್ಣಾಮಲೈ" ಪ್ರಕಟಿಸಿದ ರಮಣಗೀತೆಯಿಂದ ಉದ್ಧೃತವಾದದ್ದಾಗಿದೆ. ರಮಣಗೀತಾ ಅನುವಾದಕರು ಡಾ॥ ಎಮ್. ಇ. ರಂಗಾಚಾರ, ೧೯೮೮.

– ಪ್ರಶ್ನೆ ಒಂದು –

ದೈವರಾತ ಉವಾಚ

ಕಿಂ ಕರ್ತವ್ಯಂ ಮನುಷ್ಯಸ್ಯ ಪ್ರಧಾನಮಿಹ ಸಂಸೃತೌ
ಏತಂ ನಿರ್ಧಾರ್ಯ ಭಗವಾನ್ ತನ್ಮೇ ವ್ಯಾಖ್ಯಾತುಮರ್ಹತಿ ।

(ಸಂಸಾರದಲ್ಲಿ ಮನುಷ್ಯನು ಮಾಡಬೇಕಾದ ಪ್ರಧಾನ ಕೆಲಸ ಯಾವುದು? ಭಗವಾನ್, ಅದನ್ನು ನಿರ್ಧರಿಸಿ ಕೃಪೆಯಿಂದ ನನಗೆ ವಿವರಿಸಿ)

– ಉತ್ತರ –

ಭಗವಾನ್ ಉವಾಚ

ಸ್ವಸ್ಯ ಸ್ವರೂಪಂ ವಿಜ್ಞೇಯಂ ಪ್ರಧಾನಂ ಮಹದಿಚ್ಛತಾ ।
ಪ್ರತಿಷ್ಠಾ ಯತ್ರ ಸರ್ವೇಷಾಂ ಫಲಾನಾಮುತಕರ್ಮಣಾಮ್ ॥

(ಶ್ರೇಯಸ್ಸನ್ನು ಅಪೇಕ್ಷಿಸುವವನು ತನ್ನ ನಿಜಸ್ವರೂಪವನ್ನು ಕಂಡುಕೊಳ್ಳಬೇಕು. ನಾವು ಮಾಡುವ ಎಲ್ಲ ಕ್ರಿಯೆಗಳಿಗೂ ಮತ್ತು ಅವುಗಳ ಫಲಗಳಿಗೂ ಅದೇ ಮೂಲವಾಗಿದೆ.)

– ಪ್ರಶ್ನೆ ಎರಡು –

ದೈವರಾತ ಉವಾಚ

ಸ್ವಸ್ಯ ಸ್ವರೂಪವಿಜ್ಞಾನೇ ಸಾಧನಂ ಕಿಂ ಸಮಾಸತಃ ।
ಸಿಧ್ಯೇತ್ ಕೇನ ಪ್ರಯತ್ನೇನ ಪ್ರತ್ಯಗ್ ದೃಷ್ಟಿರ್ಮಹೀಯಸೀ ॥

(ತನ್ನ ನಿಜಸ್ವರೂಪವನ್ನು ತಿಳಿಯಲು ಲಘುವಾದ ಉಪಾಯ ಯಾವುದು? ಯಾವ ಪ್ರಯತ್ನದಿಂದ ನಮಗೆ ಮಹತ್ವಪೂರ್ಣವಾದ ಅಂತರ್ದರ್ಶನವು (ಆತ್ಮ ದರ್ಶನವು) ಸಿದ್ದಿಸುತ್ತದೆ?)

– ಉತ್ತರ –

ಭಗವಾನ್ ಉವಾಚ

ವಿಷಯೇಭ್ಯಃ ಪರಾವೃತ್ಯ ವೃತ್ತೀಃ ಸರ್ವಾಃ ಪ್ರಯತ್ನತಃ ।
ವಿಮರ್ಶೇ ಕೇವಲಂ ತಿಷ್ಠೇತ್ ಅಚಲೇ ನಿರುಪಾಧಿಕೇ ॥

(ನಮ್ಮ ಆಲೋಚನೆಗಳನ್ನು ಇಂದ್ರಿಯ ವಿಷಯಗಳಿಂದ ಶ್ರಮವಹಿಸಿ ಹಿಂತಿರುಗಿಸಿಕೊಳ್ಳಬೇಕು. ಅನಂತರ ನಿರುಪಾಧಿಕವೂ ಅಚಲವೂ ಆದದ್ದರಲ್ಲಿ (ತತ್ವದಲ್ಲಿ) ಜಿಜ್ಞಾಸೆ ಮಾಡಬೇಕು.)

– ಪ್ರಶ್ನೆ ಮೂರು –

ದೈವರಾತ ಉವಾಚ

ಯಾವತ್ ಸಿದ್ಧಿರ್ಭವೇನ್ನೃಣಾಂ ಯೋಗಸ್ಯ ಮುನಿಕುಂಜರ ।
ತಾವಂತಂ ನಿಯಾಮಾಃ ಕಾಲಂ ಕಿಂ ಯತ್ನಮುಪಕುರ್ವತೇ ॥

(ಮುನಿಶ್ರೇಷ್ಠನೇ ಯೋಗಸಿದ್ಧಿ ಮನುಷ್ಯರಿಗೆ ಏರ್ಪಡುವವರೆಗೂ ನಿಯಮಗಳು ಆತ್ಮ ಪ್ರಾಪ್ತಿಯ ಪ್ರಯತ್ನದಲ್ಲಿ ಸಹಾಯ ಮಾಡುತ್ತವೆಯೆ? (ನಿಯಮಗಳು– ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯಗಳನ್ನು ಅನುಸರಿಬೇಕೆ? ಎಂಬುದು ಪ್ರಶ್ನೆ)

– ಉತ್ತರ –

ಭಗವಾನ್ ಉವಾಚ

ಪ್ರಯತ್ನಮುಪಕುರ್ವಂತಿ ನಿಯಮಾ ಯುಂಜತಾಂ ಸತಾಮ್ ।
ಸಿದ್ಧಾನಾಂ ಕೃತಕೃತ್ಯಾನಾಂ ಗಲಂತಿ ನಿಯಮಾಸ್ಸ್ವಯಮ್ ॥

(ಆತ್ಮದರ್ಶನಾಕಾಂಕ್ಷಿಗಳ ಪ್ರಾಮಾಣಿಕವಾದ ಪ್ರಯತ್ನಗಳಿಗೆ ನಿಯಮಗಳು ಸಹಾಯ ಮಾಡುತ್ತವೆ. ಯಾರು ಆತ್ಮದರ್ಶನವನ್ನು ಪಡೆದು ಕೃತಕೃತ್ಯರಾಗುತ್ತಾರೋ ಅವರನ್ನು ನಿಯಮಗಳು ತಾವಾಗಿಯೇ ಬಿಡುತ್ತವೆ.)

– ಪ್ರಶ್ನೆ ನಾಲ್ಕು –

ದೈವರಾತ ಉವಾಚ

ಕೇವಲೇನ ವಿಮರ್ಶೇನ ಸ್ಥಿರೇಣ ನಿರುಪಾಧಿನಾ ।
ಯಥಾ ಸಿದ್ಧಿಃ ತಥಾ ಮಂತ್ರೈರ್ಜಪ್ತೈಃ ಸಿದ್ಧಿರ್ಭವೇನ್ನ ವಾ ॥

(ಶುದ್ಧವೂ, ಸ್ಥಿರವೂ, ನಿರ್ವಿಷಯವೂ ಆದ ವಿಚಾರಮಾತ್ರದಿಂದ ನಾವು ಪಡೆಯುವ ಸಿದ್ಧಿಯನ್ನು ಮಂತ್ರಗಳ ಜಪದಿಂದಲೂ ಪಡೆಯಲು ಸಾಧ್ಯವೇ? ಅಥವಾ ಇಲ್ಲವೇ?)

– ಉತ್ತರ –

ಭಗವಾನ್ ಉವಾಚ

ಅಚಂಚಲೇನ ಮನಸಾ ಮಂತ್ರೈಃ ಜಪ್ತೈಃ ನಿರಂತರಮ್ ।
ಸಿದ್ಧಿಃ ಸ್ಯಾತ್ ಶ್ರದ್ಧಧಾನಾನಾಂ ಜಪ್ತೇನ ಪ್ರಣವೇನ ವಾ ॥

(ಚಿತ್ತ ಚಾಂಚಲ್ಯವಿಲ್ಲದೇ ನಿರಂತರವಾಗಿ ಜಪಿಸಲ್ಪಡುವ ಮಂತ್ರಗಳಿಂದಲೂ, ಅಥವಾ ಪ್ರಣವ ಜಪದಿಂದಲೂ ಶ್ರದ್ಧೆಯುಳ್ಳವರಿಗೆ ಸಿದ್ಧಿ ಏರ್ಪಡುತ್ತದೆ)

ವೃತ್ತಿರ್ಜಪೇನ ಮಂತ್ರಾಣಾಂ ಶುದ್ಧಸ್ಯ ಪ್ರಣವೇನ ವಾ
ವಿಷಯೇಭ್ಯಃ ಪರಾವೃತ್ತಾ ಸ್ವಸ್ವರೂಪಾತ್ಮಿಕಾ ಭವೇತ್ ॥

(ಮಂತ್ರಜಪದಿಂದಲೂ, ಅಥವಾ ಶುದ್ಧವಾದ ಪ್ರಣವಜಪದಿಂದಲೂ ನಮ್ಮ ಮನೋವೃತ್ತಿಗಳು ಐಂದ್ರಿಯಕವಾದ ವಿಷಯಗಳಿಂದ ಹಿಂತಿರುಗುತ್ತವೆ. ಮತ್ತು ನಮ್ಮ ನಿಜ–ಸ್ವರೂಪದೊಂದಿಗೆ ಒಂದಾಗುತ್ತವೆ)[೧೨]

ದೈವರಾತರಿಗಾಗ ಕೇವಲ ಇಪ್ಪತ್ತೈದರ ವಯಸ್ಸು. ಆದರೆ ಅವರು ರಮಣ ಮಹರ್ಷಿಗಳೊಂದಿಗೆ ನಡೆಸಿದ ಸಂವಾದ ತತ್ತ್ವ ಜಿಜ್ಞಾಸುಗಳಿಗೆ ಒಳ್ಳೆಯ ಮಾರ್ಗದರ್ಶಕ ಕೈಪಿಡಿಯಂತಿದೆ.

೫. ಪರ್ವತ ಪ್ರದಕ್ಷಿಣೆ

ದೈವರಾತರು ರಮಣ ಮಹರ್ಷಿಗಳ ಸಹವಾಸದಲ್ಲಿ ಕಳೆದ ಕಾಲ ಅತ್ಯಮೂಲ್ಯವಾದ ಕಾಲವಾಗಿತ್ತು. ಮಹರ್ಷಿಗಳು ಸರ್ವವಿಧದಿಂದಲೂ ದೈವರಾತರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಪವಿತ್ರವಾದ ಈಶ್ವರನ ಗೋಚರವಾದ ರೂಪವೆಂದೇ ಪ್ರಥಿತವಾದ ಅರುಣಾಚಲದ ಪ್ರದಕ್ಷಿಣೆಯನ್ನು ಮಾಡುವಂತೆ ಪ್ರೇರೇಪಿಸಿ ಸ್ವಯಂ ತಾವೇ ಪ್ರದಕ್ಷಿಣೆಯನ್ನು ಮಾಡಿಸಿದ ಸಂಗತಿ ನಿಜಕ್ಕೂ ಉಲ್ಲೇಖನೀಯ ವೃತ್ತಾಂತವಾಗಿದೆ. ದೈವರಾತರು ರಮಣಾಶ್ರಮಕ್ಕೆ ಬಂದ ಸ್ವಲ್ಪ ಸಮಯದ ನಂತರ ಒಂದು ದಿನ ಸಾಯಂಕಾಲ ಮಹರ್ಷಿಗಳು ದೈವರಾತರನ್ನುದ್ದೇಶಿಸಿ "ನೀನು ಈ ಪರ್ವತ ಪ್ರದಕ್ಷಿಣೆ ಮಾಡಿದ್ದೀಯಾ?" ಎಂದು ಕೇಳಿದರು. ಅದಕ್ಕೆ ದೈವರಾತರು "ಇಲ್ಲ" ಎಂದು ಹೇಳಿದರು. "ಹಾಗಾದರೆ ನೀನು ಅವಶ್ಯವಾಗಿ ಪರ್ವತ–ಪ್ರದಕ್ಷಿಣೆಯನ್ನು ಮಾಡಬೇಕು; ಇಲ್ಲಿ ಈ ಪರ್ವತವೇ ದೇವರು, ಕೆಳಗೆ ಊರಿನಲ್ಲಿರುವ ಅರುಣಾಚಲೇಶ್ವರ ಲಿಂಗವು ಈಶ್ವರಸ್ವರೂಪವಾಗಿರುವ ಈ ಪರ್ವತದ ಪ್ರತೀಕವಾಗಿದೆ." ಎಂದು ಮಹರ್ಷಿಗಳು ಪ್ರದಕ್ಷಿಣೆಯ ಮಹತ್ತ್ವವನ್ನು ದೈವರಾತರಿಗೆ ವಿವರಿಸಿದರು. "ನೀವು ಪ್ರದಕ್ಷಿಣೆ ಮಾಡಲು ಬಯಸಿದರೆ

೧೨. ದೈವರಾತರ ಬರಹದಲ್ಲಿಯೂ ಪ್ರಕಟವಾದ 'ರಮಣಗೀತಾ' ಪ್ರಕಾರವೂ ಈ ಸಂವಾದ ನಡೆದ ಕಾಲ ೧೯೧೭ನೇ ಇಸ್ವಿ ಜುಲೈ ೭ನೇ ದಿನಾಂಕ. ಶ್ರೀರಮಣಗೀತೆಯು ವಾಸಿಷ್ಠ ಗಣಪತಿ ಮುನಿಗಳ ಕೃತಿಯಾಗಿದೆ. ಒಟ್ಟೂ ಹದಿನೆಂಟು ಅಧ್ಯಾಯಗಳಿವೆ. ಒಂದೊಂದು ಅಧ್ಯಾಯವೂ ವಾಸಿಷ್ಠ ಮುನಿಗಳು, ವಿಶಾಲಾಕ್ಷಮ್ಮನವರು, ದೈವರಾತರು ಮತ್ತು ಇನ್ನಿತರ ಸಾಧಕರ ಪ್ರಶ್ನೆಗಳು ಮತ್ತು ರಮಣ ಮಹರ್ಷಿಗಳ ಉತ್ತರಗಳಿಂದ ಕೂಡಿದ್ದಾಗಿದೆ. ಈ ಗ್ರಂಥದ ಕೊನೆಯ ಅಧ್ಯಾಯವು ವಾಸಿಷ್ಠ ಮುನಿಗಳು ಮಾಡಿದ ರಮಣಸ್ತೋತ್ರದಿಂದ ಕೂಡಿದ್ದಾಗಿದೆ.

ನಿಮ್ಮ ಮಾರ್ಗದರ್ಶನದಲ್ಲಿಯೇ ನಾನು ಪ್ರದಕ್ಷಿಣೆಯಲ್ಲಿ ಪಾಲ್ಗೊಂಡು ಕೃತಕೃತ್ಯನಾಗುತ್ತೇನೆ" ಎಂದು ದೈವರಾತರು ವಿನಯಪೂರ್ವಕವಾಗಿ ಅರಿಕೆಮಾಡಿಕೊಂಡರು. "ಇಲ್ಲವಾದಲ್ಲಿ ನಾನು ಪ್ರದಕ್ಷಿಣೆ ಮಾಡಲು ಅಪೇಕ್ಷಿಸುವುದಿಲ್ಲ" ಎಂದೂ ಸ್ಪಷ್ಟವಾದ ಮಾತನ್ನು ದೈವರಾತರು ಆಡಿದರು. ಅದಕ್ಕೆ ರಮಣ ಮಹರ್ಷಿಗಳು "ಹಾಗೆಯೇ ಆಗಲಿ" ಎಂದು ಒಪ್ಪಿಕೊಂಡರು. ಅವತ್ತು ಹುಣ್ಣಿಮೆಯಾಗಿತ್ತು. ಬೆಳದಿಂಗಳು ಪೂರ್ಣವಾಗಿ ಬೆಳಗುತ್ತಿತ್ತು. ಸಾಯಂಕಾಲದ ಉಪಾಹಾರವನ್ನು ಮುಗಿಸಿದ ಮಹರ್ಷಿಗಳು ಅಂದೇ ಪ್ರದಕ್ಷಿಣೆಯನ್ನು ಮಾಡುವದಕ್ಕಾಗಿ ಹೊರಟು ನಿಂತರು. ದೈವರಾತರು ಮತ್ತು ಎಂಟು–ಹತ್ತು ಜನ ಶಿಷ್ಯರು ಮಹರ್ಷಿಗಳನ್ನು ಸೇರಿಕೊಂಡರು. ಅರುಣಾಚಲದ ನೆತ್ತಿಯ ಮೇಲಿರುವ ಮಹರ್ಷಿಗಳ ಸ್ಕಂದಾಶ್ರಮದಿಂದ ಕೆಳಗಿಳಿದು ಪರ್ವತದ ಪಾದವನ್ನು ತಲುಪಿ ಪ್ರದಕ್ಷಿಣೆಯನ್ನು ಪ್ರಾರಂಭಮಾಡಬೇಕಿತ್ತು. ಅದಕ್ಕಾಗಿ ಎಲ್ಲರೂ ಪರ್ವತವನ್ನು ಇಳಿಯತೊಡಗಿದರು. ಆ ದಾರಿ ತುಂಬಾ ಇಕ್ಕಟ್ಟಿನ ದಾರಿ, ಅಲ್ಲದೇ ತುಂಬಾ ತಿರುವು ಮುರುವುಗಳಿಂದ ಕೂಡಿತ್ತು. ದೈವರಾತರಿಗೆ ಭಕ್ತಿಯಿಂದ ನರ್ತನ ಮಾಡುತ್ತ ಸಾಗಬೇಕೆಂಬ ಆಸೆ, ಆದರೆ ದಾರಿ ದುರ್ಗಮವಾದದ್ದರಿಂದ ಕುಣಿಯುತ್ತ ಭಜನೆ ಮಾಡುತ್ತ ಹೋಗಬೇಕೆಂಬ ಆಸೆಯನ್ನು ತಾತ್ಕಾಲಿಕವಾಗಿ ಅದುಮಿಟ್ಟು ಕೇವಲ ಭಜನೆ ಮಾಡುತ್ತ ಮಹರ್ಷಿಗಳಿಗಿಂತ ಮುಂದೆ ಮುಂದೆ ಹೆಜ್ಜೆ ಹಾಕಿದರು

"ಶಿವಹರ ಶಂಕರ ಗೌರೀಶಂ ।
ವಂದೇ ಗಂಗಾ ಧರಮೀಶಂ ।
ರುದ್ರಂ ಪಶುಪತಿಮೀಶಾನಂ ।
ಕಲಯೇ ಕಾಶೀ ಪುರನಾಥಂ ।
ವಿಶ್ವೇಶಾ ತವ ಶರಣಂ ।
ವಿಶ್ವನ್ನಾಥಾ ತವ ಶರಣಂ ।
ನಂದಿವಾಹನ ನಾಗಭೂಷಣ ।
ಚಂದ್ರಶೇಖರ ತವ ಶರಣಂ । ......

ಹೀಗೆ ದೈವರಾತರ ಭಜನೆ ಸಾಗಿತ್ತು. ಮಹರ್ಷಿಗಳಿಗೆ ಪ್ರದಕ್ಷಿಣೆ ಮಾಡುತ್ತ ಭಜನೆ ಮಾಡುತ್ತ ದೈವರಾತರು ಪರ್ವತದ ಪ್ರದಕ್ಷಿಣೆಯ ದಾರಿಯುದ್ದಕ್ಕೂ ಭಕ್ತಿಯ ಮೋದಭರಿತ ವಾತಾವರಣವನ್ನೇ ಸೃಷ್ಟಿಸಿದರು. ಪರ್ವತವನ್ನು ಇಳಿದು ಪಾದಭೂಮಿಯನ್ನು ತಲುಪಿದ ನಂತರ ಪ್ರದಕ್ಷಿಣೆಯ ಮಾರ್ಗವು ಅಚ್ಚುಕಟ್ಟಾಗಿ ಅಗಲವಾಗಿ ನಿರ್ಮಿಸಲ್ಪಟ್ಟ ಮಾರ್ಗವಾಗಿತ್ತು. ಪ್ರದಕ್ಷಿಣೆಯ

ಒಟ್ಟೂ ದೂರ ಎಂಟು ಮೈಲುಗಳಷ್ಟಿತ್ತು. ಸ್ಕಂದಾಶ್ರಮದಿಂದ ಇಳಿದು ಪರ್ವತದ ಗುಂಟ ನಿರ್ಮಿಸಲಾದ ಮಾರ್ಗದಲ್ಲಿ ನಡೆಯುತ್ತ ಪರ್ವತದ ದಕ್ಷಿಣ ಭಾಗದಲ್ಲಿರುವ ಅಡಿವಣ್ಣಾಮಲೈ ಎಂಬ ಕ್ಷೇತ್ರಕ್ಕೆ ಮಹರ್ಷಿಗಳು ಮತ್ತು ಅವರ ಶಿಷ್ಯ ಸಮೂಹ ತಲುಪಿದಾಗ ಬೆಳಗಾಗಿತ್ತು. ಮಹರ್ಷಿಗಳು ಪ್ರದಕ್ಷಿಣೆ ಮಾಡುತ್ತ ಬರುತ್ತಿದ್ದಾರೆಂಬ ಸುದ್ದಿ ಅಷ್ಟು ಹೊತ್ತಿಗಾಗಲೇ ಹಬ್ಬಿತ್ತು. ಅಡಿವಣ್ಣಾಮಲೈ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಿಂದ ಸಾಕಷ್ಟು ಸಂಖ್ಯೆಯ ಭಕ್ತರು ಮಹರ್ಷಿಗಳ ದರ್ಶನಕ್ಕಾಗಿ ಅಲ್ಲಿ ಕಾಯುತ್ತಿದ್ದರು. ಆ ಎಲ್ಲ ಭಕ್ತರೂ ಮಹರ್ಷಿಗಳಿಗೆ ವಂದಿಸಿ ರಾತ್ರಿಯಿಂದಲೇ ಸ್ಕಂದಾಶ್ರಮದಿಂದ ಪಾದಚಾರಿಯಾಗಿ ಹೊರಟು. ಪ್ರದಕ್ಷಿಣೆಯ ಅರ್ಧದಾರಿಯನ್ನು ಕ್ರಮಿಸಿ ಆಯಾಸವನ್ನು ಹೊಂದಿರುವ ಮಹರ್ಷಿಗಳಿಗೆ ವಿಶ್ರಾಂತಿ ಪಡೆದು ಮುಂದಕ್ಕೆ ಸಾಗುವಂತೆ ಪ್ರಾರ್ಥಿಸಿದರು. ಅದಕ್ಕೆ ಮಹರ್ಷಿಗಳು ಸಮ್ಮತಿಸಿದರು. ಅಲ್ಲಿ ಸೇರಿದ ಭಕ್ತರೆಲ್ಲ ಭೋಜನದ ಏರ್ಪಾಡನ್ನು ಮಾಡಿದರು. ಭೋಜನಾನಂತರ ಒಂದು ತಾಸು ವಿಶ್ರಾಂತಿಯನ್ನು ಪಡೆದು ಪುನಃ ಮಹರ್ಷಿಗಳು ಮತ್ತು ದೈವರಾತರನ್ನೂ ಸೇರಿದಂತೆ ಅವರ ಶಿಷ್ಯವೃಂದ ಮತ್ತೆ ದೈವರಾತರ ಭಜನ–ನರ್ತನಗಳ ಸಮೇತ ಪರ್ವತದ ಉತ್ತರದ ಭಾಗದಲ್ಲಿರುವ ತಿರುವಣ್ಣಾಮಲೈ ತಲುಪಿತು. ನಂತರ ಅರುಣಾಚಲೇಶ್ವರನಿಗೆ ವಂದಿಸಿ ಪುನಃ ಸ್ಕಂದಾಶ್ರಮಕ್ಕೆ ಸೇರುವಾಗ ರಾತ್ರಿಯೇ ಆಗಿತ್ತು.[೧೩]

೬. ಸ್ಕಂದಾಶ್ರಮದಲ್ಲಿ ದೈವರಾತರ ದಿನಚರಿ

ಪ್ರತಿದಿನವೂ ಪ್ರಾತಃಕಾಲದಲ್ಲಿ ದೈವರಾತರು ಅರುಣಾಚಲದ ಪಾದದಲ್ಲಿರುವ ತಿರುಮಣ್ಣುಮಲೈ ಊರಿಗೆ ಹೋಗಿ ಹಾಲನ್ನು ತೆಗೆದುಕೊಂಡು ಸ್ಕಂದಾಶ್ರಮಕ್ಕೆ ಬಂದು ಕಾಫಿಯನ್ನು ಮಾಡಿ ಮಹರ್ಷಿಗಳಿಗೆ, ವಾಸಿಷ್ಠ ಗಣಪತಿ ಮುನಿಗಳಿಗೆ ಮತ್ತು ವಿಶಾಲಾಕ್ಷಮ್ಮನವರಿಗೆ ಕೊಟ್ಟು ತಾವು ನಂತರ ಸೇವಿಸುತ್ತಿದ್ದರು. ರಮಣ ಮಹರ್ಷಿಗಳಿಗೆ ಕೊಡುವಾಗ "ಇಂದ್ರಾಯ ಸ್ವಾಹಾ" ಎಂದು ಉಚ್ಚರಿಸುತ್ತ ಕೊಡುತ್ತಿದ್ದರು. ಗಣಪತಿ ಮುನಿಗಳಿಗೆ ಕೊಡುವಾಗ "ಬ್ರಹ್ಮಣಸ್ಪತಯೇ ಸ್ವಾಹಾ" ಎಂದೂ ವಿಶಾಲಾಕ್ಷಮ್ಮನವರಿಗೆ "ಸರಸ್ವತ್ಯೈ ಸ್ವಾಹಾ" ಎಂದೂ ಮಂತ್ರವನ್ನುಚ್ಚರಿಸಿ, ಭಕ್ತಿಯಿಂದ ಹವಿಸ್ಸನ್ನು ಅರ್ಪಿಸುವಂತೆ ಸಮರ್ಪಿಸುತ್ತಿದ್ದರು.

---

೧೩. ಈ ಅರುಣಾಚಲದ ಪ್ರದಕ್ಷಿಣೆಯ ವಿಚಾರ ರಮಣ ಮಹರ್ಷಿಗಳ ಇತಿಹಾಸದಲ್ಲಿ ಸವಿಸ್ತಾರವಾಗಿ ಬಂದಿದೆ ಮತ್ತು ಅದರಲ್ಲಿ ತಮ್ಮ ಹೆಸರು ಗಜಾನನ ಎಂದು ಪ್ರಸ್ತಾವಿಸಲ್ಪಟ್ಟಿದೆ ಎಂದು ದೈವರಾತರು ತಮ್ಮ ಆತ್ಮಚರಿತ್ರೆಯ ಟಿಪ್ಪಣಿಗಳಲ್ಲಿ ಹೇಳಿಕೊಂಡಿದ್ದಾರೆ.
ಅಪ್ರಕಟಿತ ಆತ್ಮಚರಿತ್ರೆ, ಪುಟ ೮೮–೮೯

ದೈವರಾತರು ಸ್ಕಂದಾಶ್ರಮದಲ್ಲಿರುವಾಗ ರಮಣ ಮಹರ್ಷಿಗಳ ತಾಯಿ ಅಳಗಮ್ಮಾಳರು ಅಲ್ಲಿಯೇ ಬಂದು ವಾಸಮಾಡಿಕೊಂಡಿದ್ದರು. ಅವರು ತುಂಬ ಮಡಿ–ಮೈಲಿಗೆ ಆಚಾರದವರಾದ್ದರಿಂದ ತಮ್ಮ ಅಡಿಗೆಯನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಮಹರ್ಷಿಗಳು ಆಗಾಗ ಹೋಗಿ ತಾಯಿಗೆ ಸಹಾಯ ಮಾಡಿ ಕೊಡುತ್ತಿದ್ದರು. ದೈವರಾತರು ಆಶ್ರಮಕ್ಕೆ ಹೋಗಿ ವಾಸಮಾಡತೊಡಗಿದ ನಂತರ ದೈವರಾತರ ಆಚಾರ, ಸಂಸ್ಕಾರಗಳ ಪರಿಚಯವಾದ ನಂತರ ಅಳಗಮ್ಮಾಳರ ಸೇವೆಯನ್ನು ಮಾಡುವದಕ್ಕೆ ದೈವರಾತರಿಗೆ ಅವಕಾಶ ದೊರೆಯಿತು. ಪ್ರತಿನಿತ್ಯ ಅವರಿಗೆ ಇಷ್ಟವಾದ ಅಡಿಗೆಯನ್ನು ದೈವರಾತರೇ ಸಿದ್ಧ ಮಾಡಿಕೊಡುವದಕ್ಕೆ ಪ್ರಾರಂಭಿಸಿದರು.

ಆದರೆ ಸ್ವಯಂ ದೈವರಾತರು ಮಾತ್ರ 'ಮಧುಕರಿ' ಯಿಂದಲೇ ತಮ್ಮ ಆಹಾರದ ಕನಿಷ್ಠ ಅವಶ್ಯಕತೆಯನ್ನು ಪೂರ್ಣಮಾಡಿಕೊಳ್ಳುತ್ತಿದ್ದರು. ಪ್ರತಿದಿನ ಮಧ್ಯಾಹ್ನದಲ್ಲಿ ಸ್ಕಂದಾಶ್ರಮದಿಂದ ಎರಡು ಮೈಲು ದೂರವಿರುವ ತಿರುವಣ್ಣಾಮಲೈಗೆ ಹೋಗಿ ಅಲ್ಲಿರುವ ಅಗ್ರಹಾರದಲ್ಲಿ ಭಿಕ್ಷೆಯನ್ನು ಬೇಡಿಕೊಂಡು ಸ್ಕಂದಾಶ್ರಮಕ್ಕೆ ಮರಳುತ್ತಿದ್ದರು. ದೈವರಾತರು ಭಿಕ್ಷಾಗ್ರಹಣ ಮಾಡಿ ಮರಳಿ ಆಶ್ರಮಕ್ಕೆ ಬರುವ ವೇಳೆಗೆ ಭಕ್ತಜನರು ತಂದ ಅನ್ನದಿಂದ ಮಹರ್ಷಿಗಳ ಭೋಜನ ಮುಗಿದಿರುತ್ತಾದರೂ ದೈವರಾತರು ಮಾತ್ರ ತಪ್ಪದೇ ತಮ್ಮ ಭಿಕ್ಷಾನ್ನದ ಜೋಳಿಗೆಯಿಂದ ಒಂದು ಮುಷ್ಟಿ ಭಿಕ್ಷಾನ್ನವನ್ನು ಮಹರ್ಷಿಗಳಿಗೆ "ಇಂದ್ರಾಯ ಸ್ವಾಹಾ" ಎಂದು ಸಮರ್ಪಿಸುತ್ತಿದ್ದರು. ಮಹರ್ಷಿಗಳೂ ಅದನ್ನು ಸ್ವೀಕರಿಸುತ್ತಿದ್ದರು. ಆಶ್ರಮದ ವಾಸದ ಆ ದಿನಗಳಲ್ಲಿ ದೈವರಾತರು ಹುಳಿ, ಉಪ್ಪು ಮುಂತಾದವುಗಳನ್ನು ತ್ಯಜಿಸಿದ್ದರು. ಆದ್ದರಿಂದ ಭಿಕ್ಷೆ ಹಾಕಿಸಿಕೊಳ್ಳುವಾಗ ಉಪ್ಪು, ಹುಳಿ ಮೊದಲಾದವುಗಳಿಂದ ಕೂಡಿದ ಯಾವ ಪದಾರ್ಥಗಳನ್ನೂ ಭಿಕ್ಷಾ ಜೋಳಿಗೆಗೆ ಹಾಕಿಸಿಕೊಳ್ಳುತ್ತಿರಲಿಲ್ಲ. ಅದನ್ನು ತಿಳಿದಿದ್ದ ರಮಣ ಮಹರ್ಷಿಗಳು ದೈವರಾತರು ನೀರಿನ ಸಮೀಪ ಹೋಗಿ ಊಟಕ್ಕೆ ಕುಳಿತುಕೊಳ್ಳುವಾಗ ಮಜ್ಜಿಗೆಯನ್ನು ಕಳುಹಿಸಿಕೊಡುವ ವ್ಯವಸ್ಥೆಯನ್ನು ಕಲ್ಪಿಸಿದ್ದರು.

ತಿರುವಣ್ಣಾಮಲೈಯಲ್ಲಿರುವ ದೇವಾಲಯದ ಒಳಗಿನ ವಿಶಾಲವಾದ ಪ್ರಾಂಗಣದಲ್ಲಿ ಆಗಾಗ ಧಾರ್ಮಿಕ ಉಪನ್ಯಾಸ, ತತ್ತ್ವಜಿಜ್ಞಾಸೆಯ ಸಭೆಗಳು ನಡೆಯುತ್ತಿದ್ದವು. ರಮಣಾನಂದ ನಿಲಯ ಎಂಬ ಸಭಾಂಗಣದಲ್ಲಿ ಅಲ್ಲಿಯ ಸ್ಥಾನಿಕರಿಂದಲೇ ಸ್ಥಾಪಿಸಲ್ಪಟ್ಟ ಸಂಸ್ಥೆ ಆ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿತ್ತು. ದೈವರಾತರು ಅಲ್ಲಿಯ ಧಾರ್ಮಿಕ ಕಾರ್ಯಕ್ರಮಗಳಿಗೆ ಹೋಗುತ್ತಿದ್ದರು.

ರಮಣ ಮಹರ್ಷಿಗಳು ಅರುಣಾಚಲಕ್ಕೆ ಬಂದು ರಹಸ್ಯವಾಗಿ ತಪವನ್ನಾಚರಿಸಿದ ವಿರೂಪಾಕ್ಷ ಗುಹೆಯ ಸಂದರ್ಶನವನ್ನು ದೈವರಾತರು ಮಾಡಿದರು. ಆ ಗುಹೆ, ಗುಹೆಯೊಳಗೆ ಇರುವ ಹಾಲಿನ ಬಣ್ಣದ ನೀರಿನಿಂದ ಸದಾ ಪ್ರವಹಿಸುತ್ತಿರುವ ಒಂದು ಪವಿತ್ರವಾದ ಜಲಾಶಯ, ಅಲ್ಲಿ ರಮಣರು ತಪವನ್ನಾಚರಿಸುತ್ತಿದ್ದಾಗಿನ ವಿವರಗಳು ದೈವರಾತರನ್ನು ಆಕರ್ಷಿಸಿದವು. ವಾಸಿಷ್ಠ ಗಣಪತಿ ಮುನಿ ದಂಪತಿಗಳ ಸೇವೆಯನ್ನು ಮಾಡುತ್ತ ಒಂದು ತಿಂಗಳು ದೈವರಾತರು ಆ ಗುಹೆಯಲ್ಲಿಯೇ ವಾಸಮಾಡಿಕೊಂಡಿದ್ದರು.

ಬೆಟ್ಟದ ಪಾದದಲ್ಲಿರುವ ತಿರುಮಣ್ಣುಮಲೈನಲ್ಲಿ ಇರುವ ಇನ್ನೋರ್ವ ಸಿದ್ಧಪುರುಷರ ಪ್ರಸ್ತಾಪವನ್ನು ದೈವರಾತರು ತಮ್ಮ ಆತ್ಮಚರಿತ್ರೆಯ ಟಿಪ್ಪಣಿಗಳಲ್ಲಿ ಮಾಡಿದ್ದಾರೆ. ಆ ಸಿದ್ಧ ಪುರುಷರು ಶೇಷಾದ್ರಿ ಸ್ವಾಮಿಗಳೆಂಬವರು. ರಮಣ ಮಹರ್ಷಿಗಳನ್ನೂ, ಶೇಷಾದ್ರಿ ಸ್ವಾಮಿಗಳನ್ನೂ ದೈವರಾತರು ತಮ್ಮ ಟಿಪ್ಪಣಿಗಳಲ್ಲಿ ವರ್ಣನೆ ಮಾಡಿದ್ದು ಹೀಗೆ–"ರಮಣ ಮಹರ್ಷಿಗಳು ನೈಷ್ಠಿಕ ಬ್ರಹ್ಮಚಾರಿಗಳೇ ಹೊರತು ಸಂನ್ಯಾಸಿಗಳಲ್ಲ. ಆದ್ದರಿಂದ ಅವರು ಬಿಳೇ ವಸ್ತ್ರದ ಕೌಪೀನವನ್ನು ಮಾತ್ರ ಧರಿಸುತ್ತಿದ್ದರು. ಬ್ರಹ್ಮಚಾರಿಗಳಾಗಿದ್ದರೂ ಯಜ್ಞೋಪವೀತವು ಅವರಿಗಿರಲಿಲ್ಲ. ಯಾವುದೋ ಸಮಯದಲ್ಲಿ ಮೊದಲು ಹಾಕಿದ ಉಪವೀತವು ಹರಿದು ಹೋದ ಮೇಲೆ ಪುನಃ ಹಾಕಿಕೊಳ್ಳಲಿಲ್ಲವಂತೆ. ಬೆಟ್ಟದ ಮೇಲೆ ಗೋವುಗಳನ್ನು ಕಾಯುವ ಉದ್ಯೋಗದಿಂದ ಬರುತ್ತಿದ್ದ ದನಗಾಹಿಗಳು ಮಹರ್ಷಿಗಳನ್ನು 'ಪರದೇಶಿ' ಎಂದು ಕರೆಯುತ್ತಿದ್ದರೆ ಮೊದಲಿಯಾರ್ ಮೊದಲಾದ ಆ ಸುತ್ತಮುತ್ತಲಿನ ಪ್ರಾಂತದ ಜನರು 'ಬ್ರಾಹ್ಮಣಭಾಯಿ' ಎಂದು ಕರೆಯುವದು ವಾಡಿಕೆಯಾಗಿತ್ತು. ಇಂತಹ ರಮಣ ಮಹರ್ಷಿಗಳು ಬಾಲಭಾವದಿಂದ ಇದ್ದರು. ಆದರೆ ಶೇಷಾದ್ರಿಸ್ವಾಮಿಗಳು ಉನ್ಮತ್ತ ಭಾವದವರು. ಅವರು ಒಂದು ಸ್ಥಾನದಲ್ಲಿ ಬಹುಕಾಲ ನಿಲ್ಲುತ್ತಿರಲಿಲ್ಲ. ಮಹರ್ಷಿಗಳು ಹೇಳುವ ವಾಕ್ಯೋಪದೇಶದಲ್ಲಿ ಉಪನಿಷತ್ತಿನ ರಹಸ್ಯಮಯ ತತ್ತ್ವಾರ್ಥಗಳು ಇದ್ದರೂ ಅವು ಎಲ್ಲರಿಗೂ ಅರ್ಥವಾಗುವಂತಿರುತ್ತಿರಲಿಲ್ಲ. ನಾನು ಇವರನ್ನು ನೋಡಿ ಆನಂದಪಟ್ಟಿದ್ದೇನೆ"[೧೪]

ದೈವರಾತರ ಅರುಣಾಚಲದ ಸ್ಕಂದಾಶ್ರಮವಾಸದ ಮಧ್ಯದಲ್ಲಿ ಮದರಾಸಿನ (ಚೆನ್ನೈ) ವರೆಗೆ ಹೋಗಿ ಬರುವ ಸಂದರ್ಭವೊಂದು ಬಂದಿತು. ವಾಸಿಷ್ಠ ಗಣಪತಿ ಮುನಿಗಳ ಪತ್ನಿಯವರಾದ ವಿಶಾಲಾಕ್ಷಮ್ಮನವರ

೧೪. ಅಪ್ರಕಟಿತ ಆತ್ಮಚರಿತ್ರೆ ಪುಟ ೯೪

ಗರ್ಭಕೋಶದಲ್ಲಿ ವ್ಯಾಧಿಯು ಪ್ರಾರಂಭವಾದದ್ದರಿಂದ ಅದರ ಚಿಕಿತ್ಸೆಗಾಗಿ ದೈವರಾತರು ವಿಶಾಲಾಕ್ಷಮ್ಮನವರನ್ನು ಮದ್ರಾಸಿನ ದೊರೈಸ್ವಾಮಿ ಎಂಬ ಗಣಪತಿ ಮುನಿಗಳ ಆತ್ಮೀಯ ಶಿಷ್ಯರ ಮನೆಯವರೆಗೆ ಬಿಟ್ಟು ಬರುವದಕ್ಕಾಗಿ ಮದ್ರಾಸಿಗೆ ತೆರಳಿದರು. ತಿರುಗಿ ಸ್ಕಂದಾಶ್ರಮಕ್ಕೆ ಬರುವಾಗ ದೈವರಾತರು ಶಿವಕಾಂಚಿ ಮತ್ತು ವಿಷ್ಣುಕಾಂಚಿ ಕ್ಷೇತ್ರಗಳ ದರ್ಶನವನ್ನು ಪಡೆದು ಬಂದರು.

ಶಿವಕಾಂಚಿ ಮತ್ತು ವಿಷ್ಣುಕಾಂಚಿ ಕ್ಷೇತ್ರಗಳಲ್ಲಿ ದೈವರಾತರು ಹತ್ತು–ಹನ್ನೆರಡು ದಿನಗಳನ್ನು ಕಳೆದರು. ಶಿವಕಾಂಚಿ ಕ್ಷೇತ್ರದಲ್ಲಿ ಕಳೆದ ಒಂದು ವಾರದ ಅವಧಿಯಲ್ಲಿ ಅಲ್ಲಿರುವ ಸಾಮವೇದದ ಪಾಠಶಾಲೆಯಲ್ಲಿ ಸಾಮವೇದವನ್ನು ಕಲಿಯುವ ಪ್ರಯತ್ನವನ್ನು ದೈವರಾತರು ಮಾಡಿದರು. ಆದರೆ ವಾಸಿಷ್ಠ ಮುನಿಗಳನ್ನು ತಿರುಗಿ ಬಂದು ಸೇರುವ ಧಾವಂತ ಅವರಿಗಿತ್ತು. ಆದ್ದರಿಂದ ಸಾಮವೇದಾಧ್ಯಯನದ ಆಸೆಯನ್ನು ಬಿಟ್ಟು ವಿಷ್ಣುಕಾಂಚಿಗೆ ಬಂದರು.

ವಿಷ್ಣುಕಾಂಚಿಯಲ್ಲಿ ಕಳೆದ ಮೂರು–ನಾಲ್ಕು ದಿನಗಳಲ್ಲಿ ದೈವರಾತರು ವೈಷ್ಣವ ಮತದ ಪ್ರಾಚುರ್ಯದಿಂದಾಗಿ ತೊಂದರೆಯನ್ನನುಭವಿಸುವಂತಾಯಿತು. ದೈವರಾತರು ಅಲ್ಲಿಯ ತೀರ್ಥದಲ್ಲಿ ಸ್ನಾನಮಾಡಿ ಸಂಧ್ಯಾವಂದನಾದಿ ನಿತ್ಯ ಕರ್ಮಗಳನ್ನು ಮುಗಿಸಿ 'ಮಧುಕರಿ' ಭಿಕ್ಷೆಗಾಗಿ ಹೋದರೆ ಅವರ ಹಣೆಯ ಮೇಲಿರುವ ಭಸ್ಮವನ್ನು ನೋಡಿ ಗೃಹಿಣಿಯರು ಭಿಕ್ಷೆ ನೀಡದೇ ಬಾಗಿಲನ್ನು ಹಾಕಿಕೊಂಡರಂತೆ.

ದೈವರಾತರು ಉಪವಾಸವಿರಬೇಕಾಯಿತು. ಸಾಯಂಕಾಲದ ವೇಳೆಗೆ ಆ ಊರಿನ ವಿದ್ವಾಂಸರೆಲ್ಲ ದೈವರಾತರು ಮುಂಜಾನೆಯ ವೇಳೆ ಸ್ನಾನ ಮಾಡಿದ ತೀರ್ಥಸ್ಥಾನದ ಸೋಪಾನಗಳ ಬಳಿ ಎಂದಿನಂತೆ ಸೇರಿದರು. ದೈವರಾತರನ್ನು ಕಂಡು ಅವರ ಪೂರ್ವಾಪರಗಳನ್ನು ವಿಚಾರಿಸಿಕೊಂಡು ಅವರು ಅದ್ವೈತ ಪರಂಪರೆಗೆ ಸೇರಿದವರು ಎಂಬುದನ್ನು ತಿಳಿದುಕೊಂಡು ವಾದಕ್ಕೆ ಮುಂದಾದರು. ದೈವರಾತರು ಎಲ್ಲ ಮತಗಳಿಗೂ "ದ್ವಾ ಸುಪರ್ಣಾನಿಯುಜೌ ಸಖಾಯಾ" ಎಂಬ ಮಂತ್ರವನ್ನು ಪ್ರಮಾಣವಾಗಿಟ್ಟುಕೊಂಡು ಮೂರೂ (ಅದ್ವೈತ–ದ್ವೈತ–ವಿಶಿಷ್ಟಾದ್ವೈತ) ಸಿದ್ಧಾಂತಗಳಲ್ಲಿ ವಸ್ತು ಸಿದ್ಧವಾದ ವಿರೋಧವು ಇಲ್ಲವೆಂದು ವಾದಿಸಿ ಅಲ್ಲಿಯ ಪಂಡಿತರನ್ನು ಸಂತೋಷಗೊಳಿಸಿದರು.

ದೈವರಾತರು ಅಲ್ಲಿಂದ ಪುನಃ ಶಿವಕಾಂಚಿಗೆ ಬಂದು ಸ್ಕಂದಾಶ್ರಮಕ್ಕೆ ಹಿಂದಿರುಗಿದರು. ಸ್ವಲ್ಪ ದಿನಗಳಲ್ಲಿ ವಿಶಾಲಾಕ್ಷಮ್ಮನವರೂ ಗುಣಮುಖರಾಗಿ

ಮರಳಿ ಬಂದು ಗಣಪತಿ ಮುನಿಗಳನ್ನು ಸೇರಿಕೊಂಡರು. ಶರನ್ನವರಾತ್ರಿ ಸಮೀಪಿಸುತ್ತಿತ್ತು. ವಾಸಿಷ್ಠ ಗಣಪತಿ ಮುನಿಗಳು ರಮಣ ಮಹರ್ಷಿಗಳ ಅನುಮತಿಯನ್ನು ಪಡೆದು ಪತ್ನೀ ಹಾಗೂ ದೈವರಾತರೊಂದಿಗೆ ತಪಸ್ಸಿಗಾಗಿ ರೇಣುಕಾಂಬಾ ಕ್ಷೇತ್ರವಾದ ಪಡವೇಟ್ಟಿಗೆ ಹೊರಟರು.

೭. ಮಂತ್ರದರ್ಶನ –ವೃತ್ತಾಂತ

ಪಡವೇಟ್ಟ ಎಂಬುದು ಅರುಣಾಚಲ ಕ್ಷೇತ್ರದ ಸಮೀಪವಿರುವ ಒಂದು ಶಕ್ತಿಕ್ಷೇತ್ರ, ರೇಣುಕಾಂಬಾ ಅಲ್ಲಿಯ ಅಧಿಷ್ಠಾತೃ–ದೇವತೆ. ಶರನ್ನವರಾತ್ರಿಯ ಪ್ರಾರಂಭಕ್ಕೆ ಸರಿಯಾಗಿ ವಾಸಿಷ್ಠ ಗಣಪತಿ ಮುನಿಗಳು, ವಿಶಾಲಾಕ್ಷಮ್ಮನವರು ಮತ್ತು ದೈವರಾತರು ಪಡವೇಟ್ಟಕ್ಕೆ ಬಂದು ತಪವನ್ನಾಚರಿಸುವದಕ್ಕೆ ಉದ್ಯುಕ್ತರಾದರು.

ರೇಣುಕಾಂಬಾ ಮಂದಿರದ ಎದುರಿಗೆ, ಹೋಗಿ ಬರುವ ಭಕ್ತರಿಗಾಗಿ ನಿರ್ಮಿಸಲ್ಪಟ್ಟ ಒಂದು ಧರ್ಮಶಾಲೆಯಿತ್ತು. ಸ್ವಲ್ಪ ದೂರದಲ್ಲಿ ಮಂದಿರದ ಅರ್ಚಕರ ಮನೆಯಿತ್ತು. ಸಕುಟುಂಬವಾಗಿ ಇರುವ ಅರ್ಚಕರ ಮನೆಯನ್ನು ಬಿಟ್ಟರೆ ಸನಿಹದಲ್ಲಿ ಬೇರೆ ಯಾವ ಜನವಸತಿಯೂ ಇರಲಿಲ್ಲ. ತಿರುವಣ್ಣಾಮಲೈ ಕಡೆಗೆ ಐದು ಮೈಲು ದೂರದಲ್ಲಿ ಚಂದವಾಶಿಲ್ (ಸುಂದರವಾದ ಬಾಗಿಲು) ಎಂಬ ಒಂದು ಸಣ್ಣ ಹಳ್ಳಿಯಿದ್ದು ಅಲ್ಲಿ ಪೋಸ್ಟ ಆಫೀಸ ಮತ್ತು ತಾರ ಆಫೀಸ್ ಇದ್ದವು. ನಿರ್ಜನವಾದ, ಹತ್ತಿರದಲ್ಲೆಲ್ಲೂ ಜನವಸತಿಯಿಲ್ಲದ ಪಡವೇಟ್ಟವು ತಪಸ್ಸಿಗೆ ಹೇಳಿಮಾಡಿಸಿದ ತಾಣವಾಗಿತ್ತು. ಪೂಜಾರಿಗಳೂ ಮುಂಜಾನೆ, ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿ ರೇಣುಕಾಂಬೆಯ ಪೂಜೆಯ ವೇಳೆಗಳಲ್ಲಿ ಬಂದು ಹೋದರೆಂದರೆ ಸಾಮಾನ್ಯವಾಗಿ ಮತ್ತೆ ಯಾರೂ ಬರುತ್ತಿರಲಿಲ್ಲ.

ರೇಣುಕಾಂಬೆಯ ಆ ಏಕಾಂತ ಹಾಗೂ ಪವಿತ್ರ ತಾಣದಲ್ಲಿ ಶರನ್ನವರಾತ್ರಿಯ ಪಾಡ್ಯದಿಂದಲೇ ಆ ಮೂವರೂ ತಪವನ್ನಾಚರಿಸಲು ಪ್ರಾರಂಭಿಸಿದರು.[೧೫] ಬ್ರಹ್ಮೀ ಕಾಲದಲ್ಲೆದ್ದು ಸ್ನಾನಮಾಡಿ ರೇಣುಕಾ ಮಂದಿರದ

೧೫. ದೈವರಾತರ ಟಿಪ್ಪಣಿಗಳಲ್ಲಿಯೂ, ವಾಸಿಷ್ಠಾನ್ವಯಭಾಷ್ಯಭೂಮಿಕೆಯಲ್ಲಿಯೂ ಈ ವಿಷಯದಲ್ಲಿ ತುಸು ವ್ಯತ್ಯಾಸವಿರುವದು ಕಂಡು ಬರುತ್ತದೆಯಾದರೂ ಶರನ್ನವರಾತ್ರಿಯಲ್ಲಿ ಅವರೆಲ್ಲರೂ ತಪವನ್ನಾಚರಿಸಲು ಪ್ರಾರಂಭಿಸಿದರು ಎಂಬ ವಿಷಯದಲ್ಲಿ ವ್ಯತ್ಯಾಸವಾಗದು (ಟಿಪ್ಪಣಿಯಲ್ಲಿ ಶರನ್ನವರಾತ್ರಿಯ ಪ್ರತಿಪದೆ ಎಂದೂ ಭಾಷ್ಯಭೂಮಿಕೆಯಲ್ಲಿ ಶರನ್ನವರಾತ್ರಿಯ ನವಮಿ ಎಂದೂ ಹೇಳಲಾಗಿದೆ.)

ಸಭಾಮಂಟಪದ ಒಂದೊಂದು ಸ್ತಂಭದ ಸಮೀಪವನ್ನು ಆಶ್ರಯಿಸಿ ಉಪಾಸನೆಯನ್ನು ಪ್ರಾರಂಭಿಸಿದರು. ದೈವರಾತರು ಮಹೇಂದ್ರ ಪರ್ವತದಲ್ಲಿ ಜಪಿಸಿದ "ಜಾತವೇದಸೇ ಸುನವಾಮ ಸೋಮಂ...." ಎಂಬ ಋಙ್ಮಂತ್ರವನ್ನೇ ಜಪಿಸತೊಡಗಿದ್ದರು. ವಾಸಿಷ್ಠ ಗಣಪತಿ ಮುನಿಗಳು ಪಂಚ ಬೀಜಾಕ್ಷರೀ ರೇಣುಕಾ ಮಂತ್ರವನ್ನು ಜಪಿಸುತ್ತಿದ್ದರು. ವಿಶಾಲಾಕ್ಷಮ್ಮನವರು ಮೂರು ಬೀಜಾಕ್ಷರದ ನೀರ ಸರಸ್ವತೀ ಮಂತ್ರವನ್ನು ಜಪಿಸುತ್ತಿದ್ದರು.

ಪ್ರತಿದಿನ ಬ್ರಾಹ್ಮೀ ಮುಹೂರ್ತದಲ್ಲಿ ಸ್ನಾನ ಮಾಡಿ ರೇಣುಕಾ ಮಂದಿರವನ್ನು ಸೇರಿದರೆ ನಿರಂತರವಾಗಿ ಮಧ್ಯಾಹ್ನದವರೆಗೂ ಅವರ ತಪವು ನಡೆಯುತ್ತಿತ್ತು. ದೈವರಾತರು ಮಾತ್ರ ಹತ್ತು ಘಂಟೆಯ ಹೊತ್ತಿಗೆ ಧರ್ಮಶಾಲೆಗೆ ಹೋಗಿ ಪಾಠ ಕಾರ್ಯದಲ್ಲಿ ತೊಡಗುತ್ತಿದ್ದರು. ವಾಸಿಷ್ಠ ದಂಪತಿಗಳು ಸರಿಸುಮಾರು ಹನ್ನೆರಡು ಗಂಟೆಗೆ ಬರುತ್ತಿದ್ದರು. ಹೆಸರುಬೇಳೆ, ಹಾಲು, ತುಪ್ಪ, ಮೊಸರು ಮೊದಲಾದವುಗಳಿಂದ ಕೂಡಿದ ಹೋಮಕ್ಕೆ ಬಳಸುವ ಹವಿಸ್ಸಿಗೆ ಸಮವಾದ ಆಹಾರವನ್ನು ಮಾತ್ರ ಅವರು ಆಹಾರವಾಗಿ ಸ್ವೀಕರಿಸುತ್ತಿದ್ದರು. ಹುಳಿ, ಉಪ್ಪು, ಮೆಣಸು ಈ ಮೊದಲಾದವುಗಳು ಪೂರ್ಣವಾಗಿ ಅವರಿಗೆ ವರ್ಜ್ಯವಾಗಿದ್ದವು.

ಈ ವಿಧವಾಗಿ ದೈವರಾತರ ಮತ್ತು ವಾಸಿಷ್ಠ ಮುನಿ ದಂಪತಿಗಳ ತಪಸ್ಸು ನಡೆಯುತ್ತಿತ್ತು. ಒಂದು ಒಂದೂವರೆ ತಿಂಗಳು ಹೀಗೆ ನಡೆದಿರಬೇಕು. ಒಂದು ದಿನ ವಾಸಿಷ್ಠ ಮುನಿಗಳು ಜಪವನ್ನು ಪ್ರಾರಂಭಿಸಿ ಸಾವಕಾಶವಾಗಿ ತಪಸ್ಸಿನ ಆಳಕ್ಕೆ ಇಳಿಯುತ್ತಿರುವಾಗ ನೀರವತೆಯಿಂದ ಕೂಡಿದ ವಾತಾವರಣದಲ್ಲಿ ಉಂಟಾದ ವಿಚಿತ್ರವಾದ ಧ್ವನಿಯಿಂದ ತಪಸ್ಸಿಗೆ ಭಂಗವುಂಟಾದಂತಾಗಿ ಬಹಿರ್ಮುಖರಾದರು. ಕಣ್ತೆರೆದು ಸುತ್ತಲೂ ನೋಡಿದರು. ಆ ಧ್ವನಿ ಬಂದದ್ದು ಸ್ವಲ್ಪ ದೂರದಲ್ಲಿ ಆಸೀನರಾಗಿದ್ದ ದೈವರಾತರು ಕುಳಿತ ದಿಕ್ಕಿನಿಂದ ಎಂದು ಕಂಡುಕೊಂಡ ವಾಸಿಷ್ಠ ಮುನಿಗಳು ತಾವು ಕುಳಿತಲ್ಲಿಂದ ಎದ್ದು ದೈವರಾತರ ಸಮೀಪಕ್ಕೆ ಹೋಗಿ ಮತ್ತೂ ಹತ್ತಿರದಿಂದ ಆಲಿಸಿದಾಗ ಅದು ದೂರದಿಂದ ಕೇಳಿದಂತೆ ಧ್ವನಿಮಾತ್ರವಾಗಿರದೇ ಶಬ್ದಗಳ ರೂಪದಲ್ಲಿರುವದು ಗೋಚರವಾಗತೊಡಗಿತು. ಆ ಶಬ್ದಗಳು ದೈವರಾತರ ಮುಖದಿಂದ ಮೆಲುದನಿಯಲ್ಲಿ ಪ್ರಾದುರ್ಭೂತವಾಗುತ್ತಿದ್ದವು. ವಾಸಿಷ್ಠ ಮುನಿಗಳಿಗೆ ಆಶ್ಚರ್ಯವೋ ಆಶ್ಚರ್ಯ. ದೈವರಾತರು ಮಾತ್ರ ಎಚ್ಚರದ ಸ್ಥಿತಿಯಲ್ಲಿರಲಿಲ್ಲ. ಆಳವಾದ ತಪಸ್ಸಿನಲ್ಲಿ ದೈವರಾತರ ಅಗೋಚರ ಪ್ರಜ್ಞಾ ಪ್ರವಾಹದಿಂದ ಆ ಶಬ್ದಗಳು ಪ್ರಕಟವಾಗುತ್ತಿದ್ದವು. ಆದರೆ ವಾಸಿಷ್ಠ ಮುನಿಗಳು

ಸಮೀಪಕ್ಕೆ ಬಂದು ಇವುಗಳನ್ನೆಲ್ಲಾ ಪರೀಕ್ಷಿಸುವಷ್ಟರಲ್ಲಿ ಮೆಲುದನಿಯಲ್ಲಿ ನಿಃಸೃತವಾಗುತ್ತಿದ್ದ ಶಬ್ದಗಳು ನಿಂತು ಹೋದವು. ಮರುದಿವಸ ವಾಸಿಷ್ಠ ಮುನಿಗಳು ಮಾತ್ರ ಹಿಂದಿನ ದಿನದ ಪುನರಾವರ್ತನೆಯ ಗಾಢವಾದ ನಿರೀಕ್ಷೆಯಿಂದ ಬರೆದುಕೊಳ್ಳುವದಕ್ಕೆ ಬೇಕಾದ ಸಾಮಗ್ರಿಗಳನ್ನು ಸಿದ್ಧಮಾಡಿಟ್ಟುಕೊಂಡು ಪ್ರತೀಕ್ಷೆ ಮಾಡುತ್ತಿದ್ದರು. ಊಹಿಸಿದಂತೆಯೇ ಮರುದಿನವೂ ದೈವರಾತರ ಮುಖದಿಂದ ಶಬ್ದಗಳು ನಿಃಸೃತವಾಗತೊಡಗಿದವು. ವಾಸಿಷ್ಠ ಮುನಿಗಳು ತಡಮಾಡದೇ ಆ ಶಬ್ದಗಳು ಉಚ್ಚಾರವಾದ ಕ್ರಮದಲ್ಲಿಯೇ ಸಾಧ್ಯವಾದಷ್ಟು ವೇಗದಿಂದ ಬರೆದಿಟ್ಟುಕೊಳ್ಳತೊಡಗಿದರು. ಕೆಲವು ಶಬ್ದಗಳು ಸ್ಪಷ್ಟವಾಗಿ ಅಶ್ರಾವ್ಯವಾಗಿದ್ದವು. ಕೆಲವು ವೇಳೆ ನಿರಂತರವಾಗಿ ಪ್ರಕಟವಾಗುತ್ತಿದ್ದ ಶಬ್ದಗಳ ವೇಗಕ್ಕೆ ಸಮವಾಗಿ ಬರೆದುಕೊಳ್ಳಲಾಗದೇ ಇರುವದರಿಂದ ಅಂತಹ ಎಲ್ಲವನ್ನು ಬಿಟ್ಟು ಉಳಿದ ಶಬ್ದ ಸಂತತಿಯನ್ನು ವಾಸಿಷ್ಠ ಮುನಿಗಳು ಬರೆದುಕೊಂಡರು. ಅಂದೇ ಸಾಯಂಕಾಲ ತಾವು ಬರೆದಿಟ್ಟುಕೊಂಡಿದ್ದ ಶಬ್ದಗಳ ಸಾಲುಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರು. ತಕ್ಷಣವೇ ಮೇಲ್ನೋಟಕ್ಕೆ ಅವು ವೈದಿಕ ವಾಙ್ಮಯಕ್ಕೆ ಸಮವಾಗಿ ಕಂಡವು. ವಾಸಿಷ್ಠ ಮುನಿಗಳು ಆಶ್ಚರ್ಯಚಕಿತರಾಗಿ ಪುನಃ ಪುನಃ ಆ ಶಬ್ದಗಳ ಸಂನಿಧಿಕ್ರಮವನ್ನು ಪರೀಕ್ಷಿಸುವದಕ್ಕೆ ತೊಡಗಿದರು. ಆಗ ಆ ಶಬ್ದಜಾಲವು ಋಗ್ವೇದ ಮಂತ್ರಗಳ ಛಂದೋಬಂಧದಲ್ಲಿರುವದು ಗೋಚರವಾಗತೊಡಗಿತು. ಅದೇ ಋಗ್ವೇದ ದೇವತೆಗಳು, ಅವೇ ವೈದಿಕ ಛಂದಸ್ಸುಗಳು, ಅವೇ ಉದಾತ್ತಾದಿ ಸ್ವರಗಳು ಮತ್ತು ನಾದ ಮತ್ತು ಅದೇ ವೇದದ ಭಾಷೆ, ವಾಸಿಷ್ಠ ಮುನಿಗಳು ಅವು ನೂತನ ವೇದಮಂತ್ರಗಳ ಆವಿಷ್ಕಾರ ಎಂಬ ನಿರ್ಣಯಕ್ಕೆ ಬಂದರು. "ವೇದಗಳು ಅನಂತವಾಗಿವೆ" (ಅನಂತಾ ವೈ ವೇದಾಃ); ಆದ್ದರಿಂದ ಪ್ರಾಚೀನ ಋಷಿಗಳಂತೆ ಅರ್ವಾಚೀನ ಋಷಿಗಳೂ ತಮ್ಮ ತಪಸ್ಸಿನ ಚರಮ ಸೀಮೆಯಲ್ಲಿ ನೂತನ ಮಂತ್ರಗಳ ದರ್ಶನವನ್ನು ಪಡೆಯಬಹುದು ಎಂಬ ತಮ್ಮ ತರ್ಕಪ್ರಾಮಾಣದಿಂದ ಲೌಕಿಕ ಶಬ್ದಗಳಲ್ಲವೆಂದೂ ಅವು ನಿಶ್ಚಯವಾಗಿಯೂ ನೂತನ ಛಂದೋದರ್ಶನಾವಿಷ್ಕಾರಗಳೆಂದೂ ನಿರ್ಣಯವನ್ನು ತಲುಪಿದರು. ಮರುದಿನದಿಂದ ಮತ್ತಷ್ಟು ಜಾಗರೂಕತೆಯಿಂದ ಆ ದಿವ್ಯ ಶಬ್ದಾವಿಷ್ಕಾರಗಳನ್ನು ಬರೆದುಕೊಳ್ಳುತ್ತಾ ನಡೆದರು. ದೈವರಾತರಿಗೆ ಆದ ಈ ನೂತನ ಮಂತ್ರಾವಿಷ್ಕಾರದ ದಿವ್ಯಾನುಭವ ಹಲವಾರು ದಿನಗಳವರೆಗೆ ಮುಂದುವರಿಯಿತು. ಅವುಗಳನ್ನು ಸಂಗ್ರಹಿಸಿದ ಮೇಲೆ ಪೂರ್ಣವಾಗಿ ದೊರಕಿದ ಋಕ್ಕುಗಳನ್ನು ಸೂಕ್ತಗಳಲ್ಲಿಯೂ ತದನಂತರ ಅನುವಾಕಗಳಲ್ಲಿಯೂ ಸಂಕಲನ ಮಾಡಿ ಅದೇ ಕ್ರಮದಲ್ಲಿಯೇ "ವಾಸಿಷ್ಠಾನ್ವಯ ಭಾಷ್ಯ" ಎಂಬ

ಶೀರ್ಷಿಕೆಯಡಿಯಲ್ಲಿ ಭಾಷ್ಯವನ್ನು ಬರೆಯುವದಕ್ಕೆ ಪ್ರಾರಂಭಿಸಿದರು. ಪ್ರಧಾನವಾಗಿ ದೇವತಾ ತತ್ತ್ವವನ್ನು ಆಧಾರವಾಗಿಟ್ಟುಕೊಂಡು ಸೂಕ್ತ ಅನುವಾಕಗಳ ನಿರ್ಮಾಣವನ್ನು ಮಾಡುತ್ತ ಹೋದರು. ದೈವರಾತರಿಗಾದ ದಿವ್ಯಾನುಭವ ಹದಿನಾರು ದಿನಗಳವರೆಗೆ ಮುಂದುವರಿಯಿತು. ಆ ಅವಧಿಯಲ್ಲಿ ಪೂರ್ಣವಾಗಿ ದೊರಕಿದ ಋಕ್ಕುಗಳ ಸಂಖ್ಯೆ ನಾಲ್ಕು ನೂರಾ ಐವತ್ತು. ಕೆಲವು ಮಂತ್ರಗಳು ವೇಗವಾಗಿ ದೈವರಾತರ ಮುಖದಿಂದ ಉಚ್ಚರಿಸಲ್ಪಡುವಾಗ ಬರೆದುಕೊಳ್ಳುವುದಕ್ಕೆ ವ್ಯವಧಾನವೇ ಸಿಕ್ಕದೇ ಅರ್ಧ ಋಕ್ಕುಗಳಾದವನ್ನೂ ವಾಸಿಷ್ಠ ಮುನಿಗಳು ತ್ಯಜಿಸಬೇಕಾಯಿತು. ಇನ್ನು ಕೆಲವು ಋಕ್ಕುಗಳು ಸ್ಪಷ್ಟವಾಗಿ ಕೇಳದೆ ಇರುವವುಗಳು. ಇಂತಹವುಗಳನ್ನು ಬಿಟ್ಟು ಪೂರ್ಣವಾಗಿ ದೊರಕಿದ ಋಕ್ಕುಗಳನ್ನು ಸಂಗ್ರಹಿಸಿ ಸಂಕಲನ ಮಾಡಿ ಮುಗಿದ ಮೇಲೆ ಆ ಒಟ್ಟು ಸಂಗ್ರಹಕ್ಕೆ "ಛಂದೋದರ್ಶನ" ಎಂಬ ಶೀರ್ಷಿಕೆಯನ್ನು ಕೊಟ್ಟು ಭಾಷ್ಯವನ್ನು ಬರೆದರು. ಇದು ನಡೆದದ್ದು ಶಾಲಿವಾಹನ ಶಕ ೧೮೩೯ ನೇ ಪಿಂಗಲ ಸಂವತ್ಸರದ ಕಾರ್ತಿಕ ಶುದ್ಧ ಪೂರ್ಣಿಮೆಯಿಂದ ಪ್ರಾರಂಭಿಸಿ ಹದಿನಾರು ದಿನಗಳ ಪರ್ಯಂತ (ಕ್ರಿ.ಶ. ೧೯೧೭ನೇ ಇಸ್ವಿಯಲ್ಲಿ) ದೈವರಾತರಿಗೆ ಮಂತ್ರದರ್ಶನದ ಅದ್ಭುತ ಯೋಗ ಪ್ರಾಪ್ತವಾಯಿತು.

"ವಾಸಿಷ್ಠನ್ವಯ ಭಾಷ್ಯ ಭೂಮಿಕಾ" ಎಂಬ ವಾಸಿಷ್ಠ ಗಣಪತಿ ಮುನಿಗಳಿಂದ ರಚಿತವಾದ ಭಾಷ್ಯದ ಪೀಠಿಕಾಭಾಗದಲ್ಲಿ ಸವಿಸ್ತಾರವಾಗಿ ಈ ಎಲ್ಲ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ದೈವರಾತರಿಗಾದ ನೂತನ ಋಗ್ವೇದ ಮಂತ್ರಾವಿಷ್ಕಾರಗಳ ಪ್ರಾಮಾಣ್ಯ, ದೈವರಾತರ ಪರಿಚಯ, ಮಂತ್ರಾವಿಷ್ಕಾರ ವೃತ್ತಾಂತದ ಆಮೂಲಾಗ್ರ ವಿವರಣೆ ಎಲ್ಲವೂ ವಾಸಿಷ್ಠಾನ್ವಯಭಾಷ್ಯ ಭೂಮಿಕೆಯಲ್ಲಿ ನಿರೂಪಿತವಾಗಿದೆ. ಆಚಾರ್ಯರಾದ ಗಣಪತಿ ಮುನಿಗಳಿಂದ ಶಿಷ್ಯ ದೈವರಾತರನ್ನು ಮತ್ತು ನೂತನ ಮಂತ್ರಾವಿಷ್ಕಾರವನ್ನು ಕುರಿತು ವ್ಯಕ್ತವಾದ ಮಾತುಗಳಿವು– "ಅಯಂ ಮೇ ಶಿಷ್ಯಜನೇಷು ಅನ್ಯತಮೋ ದೈವರಾತಃ, ಸೋಽಯಂ ಬಾಲ್ಯೇ ವಯಸಃ ಷೋಡಶಮವವರ್ಷೇಭ್ಯಃ ಪ್ರಾಗೇವ ಯೋಗನಿಷ್ಠಂ ಸನ್ ಮಯಾ ಸಹೈವ ಗೋಕರ್ಣಾತ್ ಪ್ರಸ್ಥಿತಃ ಶ್ರೀ ಭಗವತೋ ರಮಣಮಹರ್ಷೇಃ ದರ್ಶನಾರ್ಥಂ ಅರುಣಾಚಲಮುಪಾಗಚ್ಛತ್.... ತಥಾಪಿ ಗುರುಸೇವಾತತ್ಪರಯಾ ಮಯಾ ಸಹ ಪಡವೇಟ್ಟನಾಮಕಂ ಶ್ರೀ ರೇಣುಕಾಂಬಾಕ್ಷೇತ್ರಂ ಪ್ರತಿ ಸಮಾಗಚ್ಛತ್.... ತತಃ ತೀವ್ರಂ ತಪಶ್ಚರತಃ ತಸ್ಯಾಸ್ಯ ದೈವರಾತಸ್ಯ ಮುಖಾತ್ ಸಮಾಧಿದಶಾಯಾಂ ಕೇಚನ ಶಬ್ದಾಃ ಪ್ರಾದುರಭೂವನ್....! ತತ್ರ ಸಮಾಧೌ ದೈವರಾತಸ್ಯ ಮುಖಾದ್

ಯೋಗಾವೇಶೇನೋದೀರ್ಣಂ ವಾಗ್ವಿನಿಃಸರಣಮುಪಲಕ್ಷ್ಯ ತದಿತಃ "ಛಂದೋದರ್ಶನಂ" ಮಯ್ಯೈವ ಸಂಗೃಹ್ಯ ಯಥಾ ಶ್ರುತಮೇವ ಸಮುಲ್ಲಿಖ್ಯ ಪ್ರಕಾಶ್ಯಂ ನೀತಮ್ । ಅಥ ಚ ಶಿಷ್ಯವಾತ್ಸಲ್ಯಾತ್ "ಬಾಲಾದಪಿ ಸುಭಾಷಿತಮ್" ಇತಿ ಅಭಿಯುಕ್ತಾನಾಂ ವಚನಾನುಸಾರೇಣ ತತ್ರ ಆರ್ಷದರ್ಶನಗೌರವಾನುದರ್ಶನೇನ ಚ ತಸ್ಮಿನ್ನೇವ ಸಮಯೇ ಇದಂ ವಾಸಿಷ್ಠಾನ್ವಯ ಭಾಷ್ಯಮಪಿ ಸ್ವಯಮಹವೇವ ವ್ಯರಚಿಷಮ್ "

ಅತ್ರಾಪಿ ವಿಶೇಷಃ ಸೋಽಯಂ ಕುಮಾರಃ ಸಂಪ್ರತಿ ಪಂಚವಿಂಶತಿವರ್ಷ ವಯಸ್ಕಃ ದೈವರಾತಃ ವಿಶೇಷತಃ ಸಂಸ್ಕೃತ ಭಾಷಾಯಾಮವ್ಯುತ್ಪನ್ನಮತಿರಪಿ ಬಾಲ್ಯಾದೇವ ನಿರಂತರಂ ತಪೋಯೋಗಾದಿ ಸಾಧನ ನಿರತಃ ಸನ್ ಅನನ್ಯಸಾಧಾರಣಂ ಯದಿದಂ ವೈದಿಕಂ "ಛಂದೋದರ್ಶನಂ" ಅಪಶ್ಯತ್, ತಸ್ಮಾತ್ ತದಿದಂ ದಿವ್ಯ ಆರ್ಷದರ್ಶನಮೇವೇತಿ ಪ್ರತಿಜ್ಞಾಯತೇ, ತದಿದಂ ಛಂದೋದರ್ಶನಂ ಪ್ರಸಿದ್ಧಾಭಿರ್ಋಗ್ಭಿಃ ಸಮಾನಮೇವಾಸ್ತಿ, ಛಂದತಃ, ಸ್ವರತಃ, ಶಬ್ದತಃ, ಅರ್ಥತಃ, ತತ್ತ್ವದರ್ಶನತಶ್ಚೇತಿ ಶಾಸ್ತ್ರದೃಶಾ ಸರ್ವಥಾ ಪ್ರತೀಯತೆ, ತದಿದಂ ಸರ್ವಮಪಿ ಅಸ್ಯ ಪ್ರತ್ಯಕ್ಷದರ್ಶನೇನ ಸ್ಪಷ್ಟೀಭವಿಷ್ಯತಿ....! ಏವಂ ದೈವರಾತೋಽಯಂ ತಪಸ್ವೀ ಯೋಗೀ ಚ ಸನ್ ಅಧ್ಯಾತ್ಮ ತತ್ತ್ವವೇತ್ತಾ, ವೇದಮಂತ್ರದಷ್ಟಾ ಚ ಭವತ್ ತೇನ ಯೋಗೇನ ತಪಾಸಾ ವಿದ್ಯಯಾ ಸದಾಚಾರೇಣ ಸದ್ವೃತ್ತೇನ ವಿನಯಾದಿನಾ ಚ ಪ್ರಾಚಾಂ ಮಹರ್ಷೀಣಾಂ ಅಲಂಕೃತಂ "ಬ್ರಹ್ಮರ್ಷಿಪದಂ" ಅರ್ಹತೀತಿ ಸೌಹಾರ್ದೇನ ಅಭಿಮನ್ಯೇ....

(ನನ್ನ ಶಿಷ್ಯವರ್ಗಕ್ಕೆ ಸೇರಿದವನು ಈ ದೈವರಾತನು ಹದಿನಾರು ವರ್ಷವಯಸ್ಸಿಗಿಂತಲೂ ಪೂರ್ವದಿಂದಲೇ, ಬಾಲ್ಯ ಕಾಲದಿಂದಲೇ ಯೋಗನಿಷ್ಠನಾದವನು. ನನ್ನ ಸಂಗಡ ಅರುಣಾಚಲಕ್ಕೆ ಭಗವಾನ್ ರಮಣ ಮಹರ್ಷಿಗಳ ದರ್ಶನಕ್ಕಾಗಿ ಬಂದವನು ಗುರುಸೇವೆಯನ್ನು ಮಾಡಬೇಕೆಂಬ ತೀವ್ರವಾದ ಹಂಬಲದಿಂದ ಶ್ರೀರೇಣುಕಾಂಬಾ ಕ್ಷೇತ್ರದಲ್ಲಿ ಸಮಾಧಿಸ್ಥನಾಗಿ ತಪೋಮಗ್ನನಾಗಿದ್ದ ದೈವರಾತನ ಮುಖದಿಂದ ಕೆಲವು ಶಬ್ದಗಳು ಪ್ರಾದುರ್ಭೂತವಾದವು. ಆಗ ಸಮಾಧಿಯಲ್ಲಿ ಯೋಗಾವೇಶದಿಂದ ದೈವರಾತನ ಮುಖದಿಂದ ನಿಃಸೃತಿಯಾದ ವಾಙ್ಮಯವನ್ನು ಉಪಲಕ್ಷಿಸಿ ಇದೋ ಈ "ಛಂದೋದರ್ಶನವು" ನನ್ನಿಂದ ಸಂಗ್ರಹಿಸಲ್ಪಟ್ಟು ಹೇಗೆ.... ಕೇಳಲ್ಪಟ್ಟಿತೋ ಹಾಗೆಯೇ ಪ್ರಕಟಿಸಲ್ಪಡುತ್ತದೆ. ಶಿಷ್ಯವಾತ್ಸಲ್ಯದಿಂದಲೂ "ಬಾಲಾದಪಿ ಸುಭಾಷಿತಮ್" ಎಂಬ ವಿವೇಕಿಗಳ ಮಾತಿಗನುಸಾರವಾಗಿಯೂ ಮತ್ತು ಋಷಿದರ್ಶನವನ್ನು ಗೌರವಿಸಬೇಕೆಂಬ ಬುದ್ಧಿಯಿಂದಲೂ ಆ

ಸಮಯದಲ್ಲಿಯೇ (ಮಂತ್ರದರ್ಶನವಾಗುತ್ತಿದ್ದ ಅವಧಿಯಲ್ಲಿಯೇ) ನಾನೇ ಸ್ವಯಂ ಈ ವಾಸಿಷ್ಠಾನ್ವಯ ಭಾಷ್ಯವನ್ನು ರಚಿಸಿರುತ್ತೇನೆ. ಇಲ್ಲಿಯೂ ವಿಶೇಷವೆಂದರೆ ಈಗಲಾದರೋ ಇಪ್ಪತ್ತೈದು ವರ್ಷ ಪ್ರಾಯದ ಇದೋ ಈ ದೈವರಾತನು ವಿಶೇಷವಾಗಿ ಸಂಸ್ಕೃತಭಾಷೆಯಲ್ಲಿ ವ್ಯುತ್ಪನ್ನನಲ್ಲದಿದ್ದರೂ ಬಾಲ್ಯದಿಂದಲೇ ನಿರಂತರವಾಗಿ ತಪಸ್ಸು-ಯೋಗಸಾಧನೆಗಳಲ್ಲಿ ನಿರತನಾಗಿ ಅನ್ಯರಿಗೆ ಸಾಧ್ಯವಿಲ್ಲದ ಯಾವ ಈ "ಛಂದೋದರ್ಶನ"ವನ್ನು ಸಾಕ್ಷಾತ್ಕರಿಸಿಕೊಂಡನೋ, ಅಂತಹ ಮಂತ್ರಗಳು ಪ್ರಸಿದ್ಧವಾದ ಋಙ್ಮಂತ್ರಗಳಿಗೆ ಸಮಾನವಾಗಿವೆ. ಛಂದಸ್ಸಿನಲ್ಲಿಯೂ ಸ್ವರದಿಂದಲೂ, ಶಬ್ದದಿಂದಲೂ ಅರ್ಥದಿಂದಲೂ, ತತ್ತ್ವದರ್ಶನದಲ್ಲಿಯೂ ಇವು ಪ್ರಸಿದ್ಧವಾದ ಪ್ರಾಚೀನ ಋಙ್ಮಂತ್ರಗಳಿಗೆ ಸಮಾನವಾಗಿಯೇ ಇವೆ. ಶಾಸ್ತ್ರದೃಷ್ಟಿಯಿಂದ ನೋಡಿದರೆ ಇದು ಗೋಚರಿಸುತ್ತದೆ. ಛಂದೋದರ್ಶನ ಮಂತ್ರಗಳನ್ನು ಪ್ರತ್ಯಕ್ಷವಾಗಿ ನೋಡಿದರೆ ಇದು ಸ್ಪಷ್ಟವಾಗುತ್ತದೆ.... ಹಾಗೆಯೇ ಈ ದೈವರಾತನು ತಪಸ್ವಿಯೂ, ಯೋಗಿಯೂ ಆಗಿದ್ದು ಅಧ್ಯಾತ್ಮತತ್ತ್ವವನ್ನು ತಿಳಿದವನೂ, ವೇದಮಂತ್ರದೃಷ್ಟಾರನೂ ಆಗಿದ್ದಾನೆ. ಇಂತಹ ಅವನಿಂದ ಯೋಗದಿಂದಲೂ, ತಪಸ್ಸಿನಿಂದಲೂ, ವಿದ್ಯೆಯಿಂದಲೂ, ಸದಾಚಾರದಿಂದಲೂ, ವಿನಯಾದಿ ಸತ್ತ್ವಭಾವದಿಂದಲೂ ಪ್ರಾಚೀನ ಮಹರ್ಷಿಗಳಿಂದ ಅಲಂಕರಿಸಲ್ಪಟ್ಟ "ಬ್ರಹ್ಮರ್ಷಿ ಪದ"ವನ್ನು ಅಲಂಕರಿಸುವದಕ್ಕೆ ಅರ್ಹನು ಎಂದು ಸೌಹಾರ್ದದಿಂದ ಅಭಿಪ್ರಾಯ ಪಡುತ್ತೇನೆ.)[೧೬]

ಬಹುಕಾಲದ ನಂತರ, "ಛಂದೋದರ್ಶನ" ಮಂತ್ರಾವಿಷ್ಕಾರವಾಗಿ ಐವತ್ತಕ್ಕೂ ಅಧಿಕ ವರ್ಷಗಳ ಅನಂತರ, ವಾಸಿಷ್ಠಾನ್ವಯ ಭಾಷ್ಯ, ಸಮಗ್ರ ಆಂಗ್ಲ ಅನುವಾದಗಳ ಸಹಿತ "ಛಂದೋದರ್ಶನ" ಎಂಬ ಶೀರ್ಷಿಕೆಯಲ್ಲಿ ದೈವರಾತ ಮಂತ್ರಗಳು ಪ್ರತಿಷ್ಠಿತವಾದ ಭಾರತೀಯ ವಿದ್ಯಾಭವನದಿಂದ ಪ್ರಕಟಗೊಂಡವು. ದೈವರಾತರು ಸಾಕ್ಷಾತ್ಕರಿಸಿಕೊಂಡ ಋಕ್ಕುಗಳ ಒಟ್ಟೂ ಸಂಖ್ಯೆ ನಾಲ್ಕುನೂರಾ ನಲವತ್ತೆಂಟು. ವಿದ್ವಾಂಸರೂ, ಜ್ಯೇಷ್ಠ ಪತ್ರಕರ್ತರೂ ಆಗಿದ್ದ ಪಾ. ವೆಂ. ಆಚಾರ್ಯರು ತಮ್ಮ ಒಂದು ಲೇಖನದಲ್ಲಿ ಹೀಗೆ ಉದ್ಗರಿಸಿರುವದು ಯಥಾರ್ಥ ಸತ್ಯವಾಗಿದೆ– "ದೈವೀ ಪ್ರಸಾದವು ವಿಚಿತ್ರವಾದದ್ದು, ಅದು ಶಿಷ್ಯನನ್ನು ಮಾತ್ರ ದೃಷ್ಟಾರನಾದ ಋಷಿಯಾಗಿ ಮಾಡಿ ಗುರುವನ್ನು ಭಾಷ್ಯಕಾರನಾಗಿ ಮಾಡುತ್ತದೆ."

---

೧೬. ಛಂದೋದರ್ಶನ – ಭಾಷ್ಯಭೂಮಿಕಾ; ಪುಟ ೮

ವಾಸಿಷ್ಠ ಗಣಪತಿ ಮುನಿಗಳು ಮಂತ್ರದರ್ಶನದ ಪ್ರಾರಂಭದ ದಿನಗಳಿಂದಲೇ ಮಂತ್ರಗಳ ಸಂಕಲನ ಮಾಡುತ್ತ ವಿಸ್ತೃತವಾದ ಭಾಷ್ಯರಚನೆಗೆ ತೊಡಗಿದರು. ಭಾಷ್ಯ ಭೂಮಿಕೆಯಲ್ಲಿ ತಿಳಿಸಿದಂತೆ ಶಾಲಿವಾಹನ ಶಕ ೧೮೩೯ ನೇ ಕಾರ್ತಿಕ ಪೂರ್ಣಿಮೆಯಿಂದ ಪ್ರಾರಂಭಿಸಿ ಮಾಘ ಪೂರ್ಣಿಮೆಯ ವರೆಗೆ ಭಾಷ್ಯ ರಚನೆಯನ್ನು ಮಾಡಿ ಸಮಾಪ್ತಿಗೊಳಿಸಿದರು.

ಭಾಷ್ಯರಚನೆಯನ್ನು ಪಡವೇಟ್ಟದಲ್ಲಿಯೇ ಮಾಡತೊಡಗಿದ್ದರಿಂದ ಅದರ ಸಮಾಪ್ತಿ ಪರ್ಯಂತ ಆ ಮೂರು ಜನರೂ ಪಡವೇಟ್ಟದಲ್ಲಿಯೇ ಇರುವದು ಅನಿವಾರ್ಯವಾಯಿತು. ಒಂದು ತಿಂಗಳಿನ ವಾಸಕ್ಕಾಗಿ ಮಾಡಿಕೊಂಡು ಬಂದಿದ್ದ ಸಿದ್ಧತೆ ಸಾಕಾಗದೇ ಪುನಃ ಹಾಲು, ಧಾನ್ಯ ಮುಂತಾದವುಗಳಿಗಾಗಿ ಹೊಸದಾಗಿ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಯಿತು. ಸಂಪ್ರತಿ ಹಾಲಿಗಾಗಿ ಸವತ್ಸವಾದ ಗೋವೊಂದನ್ನು ತಂದು ಸಾಕುವದಕ್ಕೆ ತೊಡಗಿದರು. ಈ ಎಲ್ಲವುಗಳಿಂದಾಗಿ ದೈವರಾತರ ದಿನಚರಿಯಲ್ಲಿ ಮಂತ್ರದರ್ಶನೋತ್ತರ ಕಾಲದಲ್ಲಿ ಸಾಕಷ್ಟು ಬದಲಾವಣೆಯಾಯಿತು. ಮಧ್ಯಾಹ್ನ ಅಡಿಗೆ ಮಾಡಿ ಭೋಜನಾನಂತರ ಆಕಳನ್ನು ಮೇಯಿಸಲಿಕ್ಕಾಗಿ ಸುತ್ತಲಿನ ಅರಣ್ಯಕ್ಕೆ ಹೋಗಿ, ಬರುವಾಗ ಹುಲ್ಲನ್ನು ತಂದು, ಪಾತ್ರೆಗಳನ್ನು ತೊಳೆದು ಮಧ್ಯಾಹ್ನದ ಕಾಫಿಯನ್ನು ಮಾಡಿ ಗುರು ದಂಪತಿಗಳಿಗೆ ಕೊಟ್ಟು ತಾವೂ ಕುಡಿಯವುದು ಹೀಗೆ ಅವರ ದಿನಚರಿಯಲ್ಲಿ ಅವರಿಗಿಷ್ಟವಾದ ಗೋಸೇವೆಯೂ ಸೇರ್ಪಡೆಯಾಯಿತು. ಒಂದು ದಿನ ಒಂದು ಆಕಳನ್ನು ಮೇಯಿಸಿಕೊಂಡು ತಿರುಗಿ ಬರುವಷ್ಟರಲ್ಲಿ ವಿಶಾಲಕ್ಷಮ್ಮನವರು ಪಾತ್ರೆಗಳನ್ನೆಲ್ಲಾ ತೊಳೆದಿಟ್ಟಿದ್ದರು. ಇದನ್ನು ಕಂಡು ದೈವರಾತರು ತಡಮಾಡದೇ ತಮ್ಮ ಕೃಷ್ಣಾಜಿನ, ಕಮಂಡಲು ಮುಂತಾದ ತಮ್ಮ ವಸ್ತುಗಳನ್ನು ತೆಗೆದುಕೊಂಡು ಪಡವೇಟ್ಟದ ವಾಸವನ್ನು ತ್ಯಜಿಸಿ ಹೊರಟೇ ಬಿಟ್ಟರು. ವಾಸಿಷ್ಠ ಮುನಿಗಳು ಸಮಾಚಾರವನ್ನು ತಿಳಿದು ಸ್ವಲ್ಪ ದೂರವನ್ನು ಆಗಲೇ ಉಪಕ್ರಮಿಸಿದ್ದ ದೈವರಾತರನ್ನು ಮನವೊಲಿಸಿ ತಿರುಗಿ ಕರೆತರುವದಕ್ಕೆ ಕಷ್ಟವೇ ಆಯಿತು. ದೈವರಾತರ ಆಗ್ರಹ ಒಂದೇ ಆಗಿತ್ತು. ಗುರುಪತ್ನಿಯವರಿಂದ ಯಾವ ಕೆಲಸವನ್ನೂ ಮಾಡಿಸದೇ ತಾವೇ ಎಲ್ಲವನ್ನೂ ಮಾಡಿ ಸರ್ವವಿಧದಿಂದಲೂ ಅವರನ್ನು ಸೇವಿಸಬೇಕು ಎಂಬ ದೃಢಭಕ್ತಿಯ ಬುದ್ಧಿ ದೈವರಾತರದ್ದು. ಇನ್ನು ಮುಂದೆ ತಾವು ಯಾವ ಗೃಹಕೃತ್ಯವನ್ನು ಮಾಡುವದಿಲ್ಲ ಎಂದು ವಿಶಾಲಾಕ್ಷಮ್ಮನವರೂ ಆಶ್ವಾಸನೆಯನ್ನು ಕೊಟ್ಟರು.

ಪಡುವೇಟ್ಟ ಕ್ಷೇತ್ರ ಇರುವ ಪ್ರಾಂತ ತುಂಬ ಸುಂದರವಾದದ್ದಾಗಿತ್ತು. ಸುತ್ತಲೂ ದಟ್ಟವಾದ ಅರಣ್ಯ ಮಧ್ಯದಲ್ಲಿ ಹರಿಯುವ ನದಿ, ನದಿಯ ತೀರಗಳಲ್ಲಿ

ಕೃಷಿಯೋಗ್ಯವಾದ ಹೊಲಗಳು, ರೇಣುಕಾಂಬಾ ಮಂದಿರವಲ್ಲದೇ ಆ ಮಂದಿರದ ಪಕ್ಕದಲ್ಲಿಯೇ ಪಾಳುಬಿದ್ದ ಅರ್ಧನಾರೀಶ್ವರ ಮಂದಿರ ಮತ್ತು ಸ್ವಲ್ಪ ದೂರದಲ್ಲಿ ಹರಿಯುತ್ತಿರುವ ನದಿಯ ಮತ್ತೊಂದು ತೀರದಲ್ಲಿ ಸೋಮನಾಥ ಮಂದಿರವೂ ಅಲ್ಲಿ ಇದ್ದವು. ವಾಸಿಷ್ಠ ಮುನಿಗಳೂ ದೈವರಾತರೂ ಆ ಮಂದಿರಗಳನ್ನು ಕಷ್ಟ ಪಟ್ಟು ನೋಡಿ ಆ ಮಂದಿರಗಳಿಗೊದಗಿದ ಸ್ಥಿತಿಯನ್ನು ಕಣ್ಣಾರೆ ಕಂಡು ಸಂತಾಪಪಟ್ಟರು.

ಪಡವೇಟ್ಟದಂತಹ ಕುಗ್ರಾಮಕ್ಕೂ ವಾಸಿಷ್ಠ ಗಣಪತಿ ಮುನಿಗಳಿದ್ದಾರೆ ಎಂದು ತಿಳಿದು ಆ ಕಾರಣದಿಂದ ಅಲ್ಲಿಗೆ ಹಲವರು ಬಂದು ಒಂದೆರಡು ದಿನ ಉಳಿದು ಮರಳುತ್ತಿದ್ದರು. ಅವರಲ್ಲಿ ಕೆಲವರು ಕೇವಲ ಲೌಕಿಕರಾದರೆ ಮತ್ತೆ ಕೆಲವರು ವಿಶಿಷ್ಟ ವೈರಾಗ್ಯ ಸಂಪನ್ನರು. ಅಂತಹವರಲ್ಲಿ ವೈರಾಗ್ಯಶಾಲಿಗಳಾದ, ವಾಸಿಷ್ಠ ಮುನಿಗಳ ಶಿಷ್ಯವರ್ಗದಲ್ಲಿ ಪ್ರಧಾನವ್ಯಕ್ತಿಗಳಾದ ಈಶ್ವರ ಸ್ವಾಮಿ ಎಂಬವರು ಪಡವೇಟ್ಟಕ್ಕೆ ಆಗಾಗ ಬಂದು ಸ್ವಲ್ಪ ಅವಧಿಯನ್ನು ಗುರುಗಳ ಜೊತೆಯಲ್ಲಿ ಕಳೆದು ಹೋಗುತ್ತಿದ್ದರು. ಅವರು ಬಂದಾಗಲೆಲ್ಲ ದೈವರಾತರಿಗೆ ಅಡಿಗೆಯ ಕೆಲಸಗಳಲ್ಲಿ ಸಹಾಯ ಮಾಡುತ್ತಿದ್ದರು. ಯಾವಾಗಲೂ ಸ್ವಲ್ಪ ವಿನೋದ ಪ್ರವೃತ್ತಿಯವರಾದ ಈಶ್ವರ ಸ್ವಾಮಿಗಳು ಒಂದೊಂದು ಸಲ ವಾಸಿಷ್ಠ ಗಣಪತಿ ಮುನಿಗಳನ್ನೂ ಬಿಡದೇ ತಮಾಶೆ ಮಾಡುತ್ತಿದ್ದರು. ಪಡವೇಟ್ಟಿದ ವಾಸದಲ್ಲಿದ್ದಾಗ ಒಂದು ದಿವಸ ಈಶ್ವರ ಸ್ವಾಮಿಗಳು ದೈವರಾತರಿಗೆ ಅಡಿಗೆ ಕಾರ್ಯದಲ್ಲಿ ಸಹಾಯ ಮಾಡುತ್ತ ಈ ಹೊತ್ತು ಒಂದು ತಮಾಶೆಯನ್ನು ತೋರಿಸುತ್ತೇನೆ ಎಂದು ಹೇಳಿ ವಾಸಿಷ್ಠ ಮುನಿಗಳ ಪಕ್ಕದಲ್ಲಿಯೇ ಕುಳಿತುಕೊಂಡು ಊಟ ಮಾಡುತ್ತಿದ್ದಾಗ ಆ ದಿವಸ ಮಾಡಿದ ಹುಳಿಯನ್ನು ಅನ್ನಕ್ಕೆ ಹಾಕಿಕೊಂಡು ನಂತರ ಒಂದು ತಟ್ಟೆ ನೀರನ್ನು ಸುರುವಿಕೊಂಡರು. ಪಕ್ಕದಲ್ಲಿಯೇ ಊಟ ಮಾಡುತ್ತಿದ್ದ ವಾಸಿಷ್ಠ ಮುನಿಗಳೂ ಒಂದು ತಟ್ಟೆ ನೀರನ್ನು ಹಾಕಿಕೊಂಡು ಊಟ ಮಾಡಿದರು. ಇದನ್ನು ನೋಡುತ್ತಿದ್ದ ವಿಶಾಲಾಕ್ಷಮ್ಮನವರು ನಗೆ ಬಂದರೂ ತಡೆದುಕೊಂಡರು. ವಾಸಿಷ್ಠ ಮುನಿಗಳು ಊಟಮಾಡುವಾಗ ರುಚಿಯನ್ನು ನೋಡದೇ ಊಟಮಾಡುತ್ತಿದ್ದರು. ಊಟದ ಬಟ್ಟಲಲ್ಲಿ ಏನೇನಿದೆ, ಏನೆಲ್ಲಾ ಬಡಿಸಿದ್ದಾರೆ ಎಂಬುದನ್ನು ಬೇರೆಯವರು ತೋರಿಸಿಕೊಡಬೇಕಾಗಿತ್ತು. ದೈವರಾತರು ತಮ್ಮ ಚರಿತೆಯ ಟಿಪ್ಪಣಿಗಳಲ್ಲಿ ಈ ಘಟನೆಯನ್ನು ಆತ್ಮೀಯತೆಯಿಂದ ಉಲ್ಲೇಖಿಸಿದ್ದಾರೆ.[೧೭]

೧೭. ಆತ್ಮಚರಿತ್ರೆಯ ಟಿಪ್ಪಣಿಗಳು; ಪುಟ ೧೦೨

ಮುಂದೆ ಮಾರ್ಗಶೀರ್ಷ ಮಾಸದಲ್ಲಿ ವಾಸಿಷ್ಠ ಮುನಿಗಳು ತಮ್ಮ ತಂದೆಯ ಸಾಂವತ್ಸರಿಕ ಶ್ರಾದ್ಧವನ್ನು ಪಡವೇಟ್ಟದಲ್ಲಿಯೇ ಮಾಡುವ ಪ್ರಮೇಯ ಬಂದಿತ್ತು. ಏಕೆಂದರೆ ಭಾಷ್ಯರಚನೆ ಪೂರ್ಣಗೊಂಡಿರಲಿಲ್ಲ. ಶ್ರಾದ್ಧ ಭೋಜನಕ್ಕೆ ನಿಮಂತ್ರಿತರಾಗಿ ಬಂದ ಬ್ರಾಹ್ಮಣರು ತೃಪ್ತರಾಗುವ ಹಾಗೆ ದೈವರಾತರು ಪಕ್ವಾನ್ನಗಳಿಂದ ಕೂಡಿದ ಭೂರಿ ಭೋಜನವನ್ನು ತಾವೇ ತಯಾರಿಸಿದ್ದಲ್ಲದೇ ಬಡಿಸುವದಕ್ಕಾಗಿ ತಾವೇ ಸ್ವಯಂ ನಿಂತು ಟೇಂಬೇ ಮಹಾರಾಜರು 'ಗಜತಾಯಿ' ಎಂದು ಕರೆದದ್ದನ್ನು ಸಾರ್ಥಕಗೊಳಿಸಿದರು.

ಭಾಷ್ಯರಚನೆ ಮಹಾಶಿವರಾತ್ರಿಗೆ ಪೂರ್ವದಲ್ಲಿ ಮುಗಿಯಿತು. ಶಿವರಾತ್ರಿಯ ಅನಂತರ ಪಡವೇಟ್ಟದಲ್ಲಿದ್ದಾಗಲೇ ವಾಸಿಷ್ಠ ಮುನಿಗಳ ಮಗನಾದ ಮಹಾದೇವನ ಲಗ್ನ ನಿಶ್ಚಯಿಸಲ್ಪಟ್ಟಿತು. ಪಿಂಗಲ ಸಂವತ್ಸರ ಮುಗಿದ ಮೇಲೆ ಬರುವ ಕಾಲಯುಕ್ತ ಸಂವತ್ಸರದ ಚೈತ್ರ ಶುದ್ಧ ಅಷ್ಟಮಿಯ ದಿನ ವಿವಾಹಮುಹೂರ್ತವನ್ನು ನಿಶ್ಚಯಿಸಿ ಅದನ್ನು ಚಂದವಾಶಿಲ್‌ಗೆ ಹೋಗಿ ಅಂಚೆಯ ಮೂಲಕ ತಿಳಿಸುವಂತೆ ದೈವರಾತರಿಗೆ ವಾಸಿಷ್ಠ ಮುನಿಗಳು ತಿಳಿಸಿದರು. ಅವರೆಲ್ಲರೂ ಫಾಲ್ಗುಣಮಾಸವನ್ನು ಪಡವೇಟ್ಟದಲ್ಲಿಯೇ ಕಳೆದರು. ಚೈತ್ರ ಮಾಸ ಪ್ರತಿಪದೆಯ ದಿನ ಅವರು ಪಡವೇಟ್ಟವನ್ನು ಬಿಟ್ಟು ಹೊರಟರು.

ಹೊರಡುವದಕ್ಕೆ ಒಂದೆರಡು ದಿವಸಗಳ ಪೂರ್ವದಲ್ಲಿ ಮೂವರೂ ಮಾತಾಡುತ್ತಾ ಕುಳಿತುಕೊಂಡಾಗ ವಾಸಿಷ್ಠ ಮುನಿಗಳು ದೈವರಾತರನ್ನುದ್ದೇಶಿಸಿ ತಮ್ಮ ಅಂತರಂಗದ ಮಾತುಗಳನ್ನು ನಿವೇದಿಸಿಕೊಂಡರು. ಏಕೆಂದರೆ ವಾಸಿಷ್ಠ ಮುನಿ ದಂಪತಿಗಳು ಆಂಧ್ರಪ್ರದೇಶದ ಪಾರ್ವರಪುರಕ್ಕೂ, ದೈವರಾತರು ಮರಳಿ ಗೋಕರ್ಣಕ್ಕೂ ಹೊರಟವರಾದ್ದರಿಂದ ಸಹಜವಾಗಿಯೇ ಅಗಲುವಿಕೆಯ ನೋವು ಗುರುಶಿಷ್ಯರಿಬ್ಬರನ್ನೂ ಬಾಧಿಸುತ್ತಿತ್ತು. ವಾಸಿಷ್ಠರು– "ನೀನು ನನ್ನ ಕಡೆಯಿಂದ ಯಾವ ವಿದ್ಯೆಯನ್ನು ಓದಲಿಲ್ಲ ಮತ್ತು ಹಣ ಮುಂತಾದ ಯಾವ ಪ್ರತಿಫಲವನ್ನು ಕೋರಲಿಲ್ಲ. ನಿನ್ನ ನಿರ್ವ್ಯಾಜ ಸೇವೆಯ ಫಲವಾದ ವಿದ್ಯೆ ಮತ್ತು ಜ್ಞಾನವನ್ನು ಪರಮಾತ್ಮನೇ ನಿನಗೆ ಕೊಡಲಿ. ನೀನು ಮಾಡಿದ ಸೇವೆಯ ಋಣವನ್ನು ತೀರಿಸಲು ನಾನು ಈ ಜನ್ಮದಲ್ಲಿ ಶಕ್ತನಲ್ಲ. ನೀನು ವಿವಾಹವಾದರೆ ನಿನ್ನ ಮಗನಾಗಿ ಹುಟ್ಟಿ ಬಂದು ನಿನ್ನ ಋಣವನ್ನು ತೀರಿಸುತ್ತೇನೆ" ಎಂದು ಕಣ್ಣೀರು ಸುರಿಸುತ್ತ ಹೇಳಿದರು. ವಿಶಾಲಾಕ್ಷಮ್ಮನವರೂ ಗದ್ಗದಿತರಾಗಿ ವಾಸಿಷ್ಠ ಮುನಿಗಳು ಹೇಳಿದ ಮಾತನ್ನೇ ಹೇಳಿ ತಮ್ಮ ಅಂತಃಕರಣದಲ್ಲಿ ದೈವರಾತರ ಮೇಲಿದ್ದ ಪ್ರೇಮವನ್ನು ವ್ಯಕ್ತಪಡಿಸಿದರು. ದೈವರಾತರು ಗುರುದಂಪತಿಗಳು ಹೇಳಿದ ಮಾತುಗಳನ್ನು ಕೇಳಿ ಅವರು

ತನ್ನ ಮೇಲಿಟ್ಟ ವಿಶ್ವಾಸ, ಪ್ರೀತಿ, ವಾತ್ಸಲ್ಯಗಳನ್ನು ಕಂಡು ಆ ಸಮಯದಲ್ಲಿ ಸದ್ಯಃ ಏನನ್ನೂ ಅಭಿವ್ಯಕ್ತಮಾಡಲಾಗದೇ ಸ್ತಬ್ಧರಾದರು. ಸ್ವಲ್ಪ ಸಮಯ ತಡೆದು ಹೀಗೆ ಹೇಳುತ್ತಿದ್ದರು– "ನನಗೆ ನಿಮ್ಮ ವಿದ್ಯೆಯು, ಜ್ಞಾನವು, ಧನವು ಏನೂ ಬೇಕಾಗಿಲ್ಲ, ನಾನು ಆ ಪ್ರತಿಫಲದ ಆಸೆಯಿಂದ ಸೇವೆಯನ್ನು ಮಾಡಲಿಲ್ಲ. ಸೇವೆಗಾಗಿಯೇ ಸೇವೆಯನ್ನು ಮಾಡಿದ್ದೇನೆ. ಕಾರಣವೆಂದರೆ ತಮ್ಮಂತಹ ಗುರುದಂಪತಿಗಳು, ರಮಣ ಮಹರ್ಷಿಗಳಂತಹ ಪರಮಗುರುಗಳು ನನಗೆ ಜನ್ಮ ಜನ್ಮಾಂತರದಲ್ಲೂ ದೊರಕಲೆಂದು ಆ ಪರಮಾತ್ಮನನ್ನು ಬೇಡಿಕೊಳ್ಳುತ್ತೇನೆ" ಎಂದು ದೈವರಾತರು ಹೇಳಿದರು. ಆ ಸನ್ನಿವೇಶವು ಚಿರಸ್ಮರಣೀಯವಾದದ್ದೆಂದು ದೈವರಾತರು ಒಂದು ಕಡೆಯಲ್ಲಿ ಹೇಳಿಕೊಂಡಿದ್ದಾರೆ.

ಇದಾದ ಒಂದೆರಡು ದಿನಗಳಲ್ಲಿಯೇ ಆ ಮೂವರೂ ಪಡವೇಟ್ಟದಿಂದ ಹೊರಟು ಚಂದವಾಶಿಲ್‌ಗೆ ಹೋಗಿ ಅಲ್ಲಿಂದ ಸಮೀಪದ ರೈಲು ನಿಲ್ದಾಣಕ್ಕೆ ಹೋದರು. ನಿಲ್ದಾಣಕ್ಕೆ ರೈಲು ಬಂದ ನಂತರ ಅದು ಹೊರಡುವವರೆಗೂ ಗುರುಶಿಷ್ಯರು ದುಃಖದಿಂದಲೇ ಕಳೆದರು. ಪಾರ್ವತೀಪುರಕ್ಕೆ ಹೊರಡುವ ರೈಲಿನಲ್ಲಿ ಗುರುದಂಪತಿಗಳು ಹೋದನಂತರ ಬಂದ ಇನ್ನೊಂದು ರೈಲಿನ ಮೂಲಕ ದೈವರಾತರು ತಿರುವಣ್ಣಾಮಲೈ ತಲುಪಿ ನಂತರ ಅಲ್ಲಿಂದ ರಮಣಾಶ್ರಮಕ್ಕೆ ಹೋದರು. ಸ್ಕಂದಾಶ್ರಮದಲ್ಲಿರುವ ರಮಣ ಮಹರ್ಷಿಗಳ ಸಂನಿಧಿಯನ್ನು ಸೇರಿ ಪಡವೇಟ್ಟದಲ್ಲಿ ನಡೆದ ಮಂತ್ರ ವೃತ್ತಾಂತ, ಭಾಷ್ಯರಚನೆ ಮುಂತಾದವುಗಳೆಲ್ಲವನ್ನೂ ಸಾದ್ಯಂತವಾಗಿ ನಿವೇದಿಸಿದರು.

ಎರಡು–ಮೂರು ದಿನಗಳನ್ನು ಸ್ಕಂದಾಶ್ರಮದಲ್ಲಿ ಮಹರ್ಷಿಗಳ ಸಂನಿಧಾನಲ್ಲಿ ಕಳೆದು ಅವರ ಅನುಜ್ಞೆಯನ್ನು ಪಡೆದು ಮಂಗಳೂರು ಮಾರ್ಗವಾಗಿ ಗೋಕರ್ಣವನ್ನು ಬಂದು ಸೇರಿದರು.

ವಾರಣಾಸಿಯ ಪಂಚಗಂಗಾ ಘಾಟಿನಲ್ಲಿ ಬೊಗಸೆಯಲ್ಲಿ ಜಲವನ್ನು ತುಂಬಿ ಅದ್ಯಾವದೋ ಅಗೋಚರವಾದ ಅಂತಃಸ್ಫೂರ್ತಿಯಿಂದ ತಾನು ಯಾವ ಗ್ರಂಥವನ್ನು ಹಿಡಿದುಕೊಂಡು ಇನ್ನಾರ ಬಳಿಯೂ ಓದಲು ಹೋಗುವದಿಲ್ಲ, ನನ್ನನ್ನು ಅನುಗ್ರಹಿಸುವದಾದರೆ ಆ ವೇದಮಾತೆಯು ನನ್ನನ್ನು ಮಂತ್ರದೃಷ್ಟಾರ ಋಷಿಯನ್ನಾಗಿ ಮಾಡಲಿ ಎಂದು ದೈವರಾತರು ಪ್ರಾರ್ಥನಾರೂಪ ಪ್ರತಿಜ್ಞೆಯನ್ನು ಮಾಡಿದ್ದರು. ಅದರಂತೆಯೇ ಭಾರ್ಗವ ರಾಮನ ನಿತ್ಯ ಸನ್ನಿಧಾನವಾದ ಮಹೇಂದ್ರ ಪರ್ವತದಲ್ಲಿ ಗೋಕರ್ಣೇಶ್ವರನ ಸಂನಿಧಿಯಲ್ಲಿ ಪಂಚದಶಾಕ್ಷರೀ ಮಂತ್ರದ ಉಪದೇಶ, ಷೋಡಶಾಕ್ಷರೀ

ಮಂತ್ರದಿಂದ ಸ್ವಯಂ ಗುರುಕರಕಮಲಗಳಿಂದಲೇ ಪೂರ್ಣಾಭಿಷೇಕವನ್ನು ಪಡೆದು ಮಂತ್ರದರ್ಶನದ ಬೀಜಾರೋಪಣವಾಗಿತ್ತು. ಅದೇ ಭಾರ್ಗವರಾಮನ ಮಾತೆಯಾದ ರೇಣುಕಾಂಬಾ ಕ್ಷೇತ್ರದಲ್ಲಿ ಮಂತ್ರದರ್ಶನದ ಪ್ರಸಾದವನ್ನು ಪಡೆದರು. ದೈವರಾತರು ಈ ವಿಧವಾಗಿ ದೈವೀ ಸ್ಫೂರ್ತಿಯಿಂದ ಮಂತ್ರದರ್ಶನದ ಯೋಗವನ್ನು ಹೊಂದಿದ ನಂತರ ತಮ್ಮ ಜನ್ಮಭೂಮಿಗೆ ದೈವರಾತರು ಮರಳಿ ಬಂದರು.

ಯಂ ಕಾಮಯೇ ತಂ ತಮುಗ್ರಂ ಕೃಣೋಮಿ ।
ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಂ ॥

(ನಾನು ಬಯಸಿದವನನ್ನು ಪ್ರಚಂಡನನ್ನಾಗಿ ಮಾಡಬಲ್ಲೆ ಅಂತಹವನನ್ನು ಬೇಕಾದರೆ ಬ್ರಹ್ಮನನ್ನಾಗಿಸಬಲ್ಲೆ, ಋಷಿಯನ್ನಾಗಿ ಮಾಡಬಲ್ಲೆ, ಮೇಧಾವಿಯನ್ನಾಗಿ ಮಾಡುತ್ತೇನೆ) ಎಂಬ ವೇದವಾಣಿಯು ಇಲ್ಲಿ ಸಾರ್ಥಕವಾಯಿತು. ಮಂತ್ರದರ್ಶನವಾಗಿ ಬಹಳ ಕಾಲದ ನಂತರ ಒಮ್ಮೆ ದೈವರಾತರು ಆ ಲೋಕೋತ್ತರವಾದ ಮಂತ್ರದರ್ಶನದ ಅನುಭವವನ್ನು ಹೀಗೆ ದಾಖಲಿಸಿದ್ದಾರೆ– "ಅದೊಂದು ಲೋಕೋತ್ತರ ಅನುಭೂತಿ. ಹಿಂದೆ ಅಥವಾ ಮುಂದೆ ಅಂಥದನ್ನು ನಾನು ಅನುಭವಿಸಲಿಲ್ಲ. ಆ ಸಮಯದಲ್ಲಿ ನನ್ನತನದ ಪ್ರಜ್ಞೆ ನನಗಿರುತ್ತಿತ್ತು. ಆದರೆ ಕಾಲದೇಶಗಳ ಪ್ರಜ್ಞೆ ಉಳಿದಿರಲಿಲ್ಲ. ಅದನ್ನು ವರ್ಣಿಸುವುದು ಕಷ್ಟ."[೧೮]

೧೮. ಕಸ್ತೂರಿ – ಕನ್ನಡ ಡೈಜೆಸ್ಟ; ಪುಟ ೭೬

೧೦. ಆಶ್ರಮ ಸ್ಥಾಪನೆಯ ಸಂಭ್ರಮ
(೧೯೧೭–೧೯೨೦)

ಅಮೀ ವೇದಿಂ ಪರಿತಃ ಕ್ಲೃಪ್ತಧಿಷ್ಣ್ಯಾಃ
ಸಮಿದ್ವಂತಃ ಪ್ರಾಂತಸಂಸ್ತೀರ್ಣದರ್ಭಾಃ ।
ಅಪಘ್ನಂತೋ ದುರಿತಂ ಹವ್ಯಗಂಧೈ
ರ್ವೈತಾನಾಸ್ತ್ವಾಂ ವಹ್ನಯಃ ಪಾವಯಂತಃ ॥

ಅಭಿಜ್ಞಾನ ಶಾಕುಂತಲಂ

೧. ಆಶ್ರಮ ಸ್ಥಾಪನೆ

ದೈವರಾತರು ಗೋಕರ್ಣಕ್ಕೆ ಬಂದು ತಮ್ಮ ಮನೆಯ ಉತ್ತರದಿಕ್ಕಿನಲ್ಲಿದ್ದ ವರದೇಶ್ವರ ಮಂದಿರದ ಮಂಟಪದಲ್ಲಿ ತಾತ್ಕಾಲಿಕವಾಗಿ ವಾಸಮಾಡತೊಡಗಿದರು. ಸಂತ ರಾಮದಾಸ ಸ್ವಾಮಿಯವರೊಂದಿಗೆ ಸರಿಸುಮಾರು ಎರಡು ವರ್ಷಗಳಿಗೂ ಅಧಿಕ ಕಾಲ ಉತ್ತರಭಾರತದಲ್ಲಿ ಸಂಚರಿಸಿ ಮರಳಿ ಬಂದದ್ದು ೧೯೦೭ನೇ ಇಸ್ವಿಯಲ್ಲಿ. ಆಗ ಗೋಕರ್ಣಕ್ಕೆ ಮರಳಿ ಬಂದಾಗ ದೈವರಾತರ ಹಿರಿಯರು ಅವರನ್ನು ಒಪ್ಪಿಸಿ ಎರಡು ವರ್ಷಗಳ ಹಿಂದೆ ನಿಂತುಹೋಗಿದ್ದ ವಿವಾಹವನ್ನು ನೆರವೇರಿಸಿದರು. ದೈವರಾತರ ಸೋದರಮಾವನ ಮಗಳಾದ ಅರುಂಧತಿಯೊಡನೆ ದೈವರಾತರ ವಿವಾಹ ಕೊನೆಗೂ ಏರ್ಪಟ್ಟಿತ್ತು. ಆ ವಿವಾಹಾನಂತರ ದೈವರಾತರು ಮನೆಯಲ್ಲಿದ್ದದ್ದು ಮಾತ್ರ ಸ್ವಲ್ಪ ಕಾಲ. ಪುನಃ ಅವರು ವಾಸಿಷ್ಠ ಗಣಪತಿ ಮುನಿಗಳು ಮತ್ತು ಟೇಂಬೇ ಮಹಾರಾಜರೊಂದಿಗೆ ಗೋಕರ್ಣದ ಉಮಾಹೇಶ್ವರ ಮಂದಿರ ತಪೋವನ ಹಾಗೂ ದಕ್ಷಿಣೋತ್ತರ ಭಾರತದ ವಿವಿಧ ತಪೋಭೂಮಿಗಳಲ್ಲಿ ಗುರುಶುಶ್ರೂಷಾತತ್ಪರರಾಗಿ ತಪವನ್ನಾಚರಿಸಿ ಮಂತ್ರದೃಷ್ಟಾರರಾಗಿ ಗೋಕರ್ಣಕ್ಕೆ ಮರಳಿ ಬಂದದ್ದು ಎಂಟು–ಒಂಬತ್ತು

ವರ್ಷಗಳ ನಂತರ. ಬರುವ ವೇಳೆಗೆ ಆರುಂಧತಿಯೂ ಬದುಕಿರಲಿಲ್ಲ. ದೈವರಾತರು ಸ್ವಲ್ಪವೂ ವಿಚಲಿತರಾಗದೇ ಸಿದ್ಧಪುರದಲ್ಲಿ ಪಂಚಗವ್ಯ ವ್ರತವನ್ನಾಚರಿಸುವಾಗ ಮಾಡಿದ ಮನಃಸಂಕಲ್ಪವೊಂದನ್ನು ಸಾಕಾರಗೊಳಿಸುವ ದಿಸೆಯಲ್ಲಿ ಉಪಕ್ರಮಿಸಲಾರಂಭಿಸಿದರು.

ತಾವು ತಮ್ಮ ಜೀವಿತಾವಧಿಯಲ್ಲಿ ವೈದಿಕ ಯುಗದ ಆಚಾರ, ಆದರ್ಶಗಳಿಂದ ಅನ್ವಿತವಾದ ಆಶ್ರಮವೊಂದನ್ನು ಸ್ಥಾಪಿಸಬೇಕೆಂಬುದು ಅವರ ಸಂಕಲ್ಪವಾಗಿತ್ತು. ವಾಸಿಷ್ಠ ಗಣಪತಿ ಮುನಿಗಳಲ್ಲಿ ತಮ್ಮ ಕಾಮನೆಯನ್ನು ಒಂದೆರಡು ಸಂದರ್ಭಗಳಲ್ಲಿ ವ್ಯಕ್ತಪಡಿಸಿ ಆ ಆಶ್ರಮಕ್ಕೆ ತಾವೇ ಕುಲಪತಿಗಳಾಗಿರಲು ಒಪ್ಪಿಕೊಳ್ಳಬೇಕೆಂದು ಪ್ರಾರ್ಥಿಸಿಕೊಂಡಿದ್ದರು. ಆದರೆ ದೈವರಾತರ ಆಮಂತ್ರಣವನ್ನು ವೈಯಕ್ತಿಕ ಕಾರಣದಿಂದ ನಿರಾಕರಿಸಿದ್ದರೂ ವಾಸಿಷ್ಠ ಮುನಿಗಳು ಆಶ್ರಮ ಸ್ಥಾಪನೆಯ ನಿನ್ನ ಕನಸು ಸಾಕಾರವಾಗಲಿ, ಯಶಸ್ಸೂ ಪ್ರಾಪ್ತವಾಗಲೆಂದು ಆಶೀರ್ವದಿಸಿದ್ದರು.[೧] ಅಲ್ಲಿ ಕೃಷಿಯಿರಬೇಕು, ಗೋಪಾಲನೆಯಿರಬೇಕು, ವೇದಾಧ್ಯಯನ ಅಧ್ಯಾಪನಗಳು ನಡೆಯುತ್ತಿರಬೇಕು, ಯಜನ-ಯಾಜನಗಳು ಅವಿರತವಾಗಿ ನಡೆಯುತ್ತ ಹೋಮಧೂಮದಿಂದ ಆಶ್ರಮ ಸದಾ ಆವೃತವಾಗಿರುಬೇಕು, ಆಚಾರ್ಯ – ಶಿಷ್ಯರು ಒಟ್ಟಿಗೆ ಸರ್ವವಿಧದಿಂದಲೂ ಸಹವಾಸ ಮಾಡುತ್ತಿರಬೇಕು. ಇವು ದೈವರಾತರ ಸಂಕಲ್ಪದ ಆಶ್ರಮವಾಗಿತ್ತು.

ಗೋಕರ್ಣಕ್ಕೆ ಮರಳಿ ಬಂದ ನಂತರ ಅಂತಹ ಆಶ್ರಮ ಸ್ಥಾಪನೆಯತ್ತ ಗಮನ ಹರಿಸಿದರು. ಎಲ್ಲಿ ಸ್ಥಾಪಿಸಬೇಕೆಂಬ ಜಿಜ್ಞಾಸೆ ದೈವರಾತರ ಮನದಲ್ಲಿ ಸಂಪ್ರತಿ ಬಂದಾಗ ಜನ್ಮಭೂಮಿಯಲ್ಲಿಯೇ ಸ್ಥಾಪಿಸಬೇಕೆಂಬ ಅಧ್ಯವಸಾಯಕ್ಕೆ ಬಂದು ಒಂದು ವೇಳೆ ಗೋಕರ್ಣ ಅಥವಾ ಸುತ್ತಮುತ್ತಲಿನ ಪ್ರಾಂತದಲ್ಲಿ ಸಾಧ್ಯವಾಗದಿದ್ದರೆ ಕರ್ನಾಟಕ ರಾಜ್ಯದಲ್ಲಿಯೇ ಸ್ಥಾಪಿಸಬೇಕೆಂಬ ನಿರ್ಣಯವನ್ನು ಮೊದಲು ತಾವು ತಲುಪಿದರು. ನದೀ ತೀರ, ಏಕಾಂತ ಪ್ರದೇಶ ಈ ಲಕ್ಷಣಗಳಿದ್ದರೆ ಉತ್ತಮ ಎಂದು ತೀರ್ಮಾನಿಸಿದರು. ತಮ್ಮ

ಈ ಅಧ್ಯಾಯವು ಪ್ರಧಾನವಾಗಿ ದೈವರಾತರ ಆತ್ಮಚರಿತ್ರೆಯ ಟಿಪ್ಪಣಿಗಳನ್ನು ಪ್ರಮಾಣವಾಗಿ ಅವಲಂಬಿಸಿದ್ದಾಗಿದೆ.

೧. ಆತ್ಮಚರಿತ್ರೆ ಟಿಪ್ಪಣಿಗಳು, ಪುಟ ೧೦೫

ಕುಲಪುರೋಹಿತರಾದ ದತ್ತಾತ್ರೇಯ ದೀಕ್ಷಿತರಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದರು. ಅವರಿಂದ ಉತ್ತೇಜನಪೂರ್ಣವಾದ ಪ್ರತಿಕ್ರಿಯೆಯನ್ನೂ, ಒಂದೆರಡು ಸ್ಥಾನಗಳ ಸೂಚನೆಯನ್ನೂ ಪಡೆದ ದೈವರಾತರು ಜೋಗ ಜಲಪಾತದ ಸನಿಹವಿರುವ ಆ ಪ್ರದೇಶಗಳಿಗೆ ಚೆನ್ನಾಗಿ ಪರಿಚಯವಿರುವ ಇಡಗುಂಜಿ ಗಜಾನನ ಸಭಾಹಿತರೆಂಬ ಹಿರಿಯ ವಿದ್ವಾಂಸರನ್ನು ಕರೆದುಕೊಂಡು ಹೋದರು. ದೈವರಾತರ ಪೂರ್ವಿಕರ ಒಂದು ಕವಲು ಇದಕ್ಕೂ ಮೊದಲೇ ಜೋಗದ ಪ್ರಾಂತದಲ್ಲಿ ಜೋಗದಿಂದ ಮೂರುಮೈಲಿ ದೂರದಲ್ಲಿರುವ ಯಜ್ಞಶಾಲೆ ಎಂದೇ ಆ ಕಾಲದಲ್ಲಿ ಗುರುತಿಸಲ್ಪಟ್ಟ ಸ್ಥಾನದಲ್ಲಿ ವಾಸಿಸುತ್ತಿತ್ತು. ಯಜ್ಞಶಾಲೆಯು ಶರಾವತಿ ನದಿಯ ತೀರದ ಮೇಲೇ ಇದೆ. ಅಲ್ಲಿ ಶ್ರೌತಯಾಗವನ್ನು ಕೂಡ ದೈವರಾತರ ಪೂರ್ವಿಕರು ಮಾಡಿದ್ದರು. ಯಜ್ಞವೇದಿ ಹಾಗೂ ಯಾಗಶಾಲೆಯ ನಿರ್ಮಾಣದ ಕುರುಹು ಇನ್ನೂ ಅಲ್ಲಿದೆ, ಇತ್ಯಾದಿ ವಿವರಗಳನ್ನು ದತ್ತಾತ್ರೇಯ ದೀಕ್ಷಿತರು ಹೇಳಿದ್ದರು. ಈ ಎಲ್ಲ ಹಿನ್ನೆಲೆಯೊಂದಿಗೆ ದೈವರಾತರು ಹೋಗಿ ಆ ಸ್ಥಳವನ್ನು ಸಂದರ್ಶಿಸಿದರು. ದತ್ತಾತ್ರೇಯ ದೀಕ್ಷಿತರು ತಿಳಿಸಿದಂತೆ ಆ ಪ್ರದೇಶ ಆಶ್ರಮಸ್ಥಾಪನೆಗೆ ಆದರ್ಶಪ್ರಾಯವಾದ ಸ್ಥಾನವೇನೋ ಆಗಿತ್ತು. ಆದರೆ ಆಶ್ರಮ ಸ್ಥಾಪನೆಗಾಗಿ ಸರಕಾರದಿಂದ ಆ ಭೂಮಿಯನ್ನು ಪಡೆಯುವದು ಸಾಧ್ಯವಾಗದಿದ್ದುದರಿಂದ ದೈವರಾತರು ಅಲ್ಲಿ ಆಶ್ರಮಸ್ಥಾಪನೆಯ ಆಸೆಯನ್ನು ಬಿಟ್ಟು ಗೋಕರ್ಣಕ್ಕೆ ಮರಳಿದರು.[೨] ಬರುವದಕ್ಕೆ ಮೊದಲು ಇನ್ನೂ ಒಂದೆರಡು ಸ್ಥಾನಗಳನ್ನು ಪರಿಶೀಲಿಸಿದ್ದೂ ಆಗಿತ್ತು. ಶರಾವತೀ ನದಿಯ ತೀರದಲ್ಲೇ ಬಾರಂಗಿ ಎಂಬ ಅತಿ ಎತ್ತರದ ಸ್ಥಾನಕ್ಕೆ ಹೋಗಿ ನೋಡಿಬಂದರು. ಅದೂ ಆಶ್ರಮಸ್ಥಾಪನೆಗೆ ಯೋಗ್ಯವಾಗಿತ್ತು. ರಮಣೀಯವಾದ ಆ ಸ್ಥಾನ, ಅದರ ಸಮೀಪ ಪರಿಸರದಲ್ಲಿಯೇ ಇರುವ ಒಂದು ಈಶ್ವರ ದೇವಸ್ಥಾನ, ಆಶ್ರಮಸ್ಥಾಪನೆಗೆ ಅತ್ಯಂತ ಸೂಕ್ತವಾದದ್ದೆಂದು ಪರಿಗಣಿಸಿದ ದೈವರಾತರು ಆ ಸ್ಥಾನವನ್ನು ಪಡೆಯುವಲ್ಲಿಯೂ ಬಹಳ ತೊಡಕುಗಳಿರುವದನ್ನು ಪರಿಗಣಿಸಿ ಸಂಗಡಿಗರೊಂದಿಗೆ ಗೋಕರ್ಣಕ್ಕೆ ಬಂದರು.

೨. ದೈವರಾತರಿಗೆ ಆಶ್ರಮಸ್ಥಾಪನೆಗೆ ಬೇಕಾದ ಸ್ಥಳವನ್ನು ಪಡೆಯುವದಕ್ಕೆ ಅಡಚಣೆ ಉಂಟುಮಾಡಿದ್ದು ಆ ಸ್ಥಳ ಮಹಾತ್ಮಾ ಗಾಂಧಿ ವಿದ್ಯುಚ್ಛಕ್ತಿ ಕೇಂದ್ರದ ನಿರ್ಮಾಣಕ್ಕಾಗಿ ಕಾರ್ಗಲ್ ಸಮೀಪ ನಿರ್ಮಾಣ ಮಾಡಲು ಯೋಜಿಸುತ್ತಿದ್ದ ಆಣೇಕಟ್ಟು, ದೈವರಾತರು ನೋಡಿದ ಪ್ರದೇಶ ಅದರಲ್ಲಿ ಮುಳುಗಡೆಯಾಗುತ್ತದೆಂದು ಅಧಿಕಾರಿಗಳು ತಿಳಿಸಿದ್ದರಿಂದ ದೈವರಾತರು ತಮ್ಮ ಪ್ರಯತ್ನವನ್ನು ಬಿಟ್ಟು ನಿವೃತ್ತರಾದರು. ಆತ್ಮಚರಿತ್ರೆ ಪುಟ ೧೦೬-೧೦೭

ದೈವರಾತರು ಹೀಗೆ ನಿರಾಸೆಯನ್ನು ಹೊಂದಿ ಗೋಕರ್ಣಕ್ಕೆ ಬಂದವರು ಒಂದೆರಡು ದಿನಗಳ ಮೇಲೆ ವಾಸಿಷ್ಠ ಗಣಪತಿ ಮುನಿಗಳೊಂದಿಗೆ ಕಳೆದ ಉಮಾಮಹೇಶ್ವರದ ತಪೋವನದ ಸ್ಮರಣೆ ಬಂದು ಆಶ್ರಮಸ್ಥಾಪನೆಯ ದೃಷ್ಟಿಕೋನದಿಂದ ಆ ಪ್ರದೇಶವನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಿದರು. ಆಶ್ರಮಸ್ಥಾಪನೆಗೆ ಬೇಕಾದ ವಿಶಾಲವಾದ ಸಮತಟ್ಟಾದ ಪ್ರದೇಶ ಅದಾಗಿರಲಿಲ್ಲ. ನೀರಿನ ಸೌಕರ್ಯವೂ, ಕೃಷಿಯನ್ನು ಮಾಡಲು ಮತ್ತು ಗೋರಕ್ಷಣೆಯನ್ನು ಮಾಡುವಷ್ಟು ಇರಲಿಲ್ಲ. ಇದನ್ನು ಮನಗಂಡು ದೈವರಾತರು ಉಮಾಮಹೇಶ್ವರ ತಪೋವನದಲ್ಲಿ ಆಶ್ರಮಸ್ಥಾಪನೆಯ ಪ್ರಯತ್ನವನ್ನು ಕೈಬಿಟ್ಟರು.

ಅಂತಿಮವಾಗಿ ಅಶೋಕೆಯ ಮಲ್ಲಿಕಾರ್ಜುನೇಶ್ವರ ದೇವಾಲಯದ ಸಮೀಪ ಇರುವ ಪ್ರದೇಶವು ಕೃಷಿ, ಗೋಪಾಲನೆ ಎಲ್ಲವುಗಳಿಗೂ ಹಿತವಾಗಿರುತ್ತದೆಂದು ತಿಳಿದು ಅಲ್ಲಿಯೇ ತಮ್ಮ ಸಂಕಲ್ಪಿತ ಆಶ್ರಮವನ್ನು ಸ್ಥಾಪನೆ ಮಾಡಬೇಕೆಂದು ದೈವರಾತರು ನಿರ್ಧರಿಸಿದರು. ಅಲ್ಲಿಯ ಜಲಾಶಯ, ತಪಸ್ಸಿಗೆ ಯೋಗ್ಯವಾದ ಪ್ರಶಾಂತ ಹಾಗೂ ಏಕಾಂತವಾದ ವನದಿಂದ ಆವೃತ್ತವಾದ ಪ್ರದೇಶವನ್ನು ಕಂಡು ದೈವರಾತರು ನಿಜವಾಗಿಯೂ ಮಾರುಹೋಗಿದ್ದರು. ದೈವರಾತರ ಸ್ವಯಂ ಲಿಖಿತ ಟಿಪ್ಪಣಿಗಳಲ್ಲಿ ಉಲ್ಲೇಖಿಸಲ್ಪಟ್ಟಂತೆ ಅಶೋಕೆಯ ಮಲ್ಲಿಕಾರ್ಜುನೇಶ್ವರ ಮಂದಿರದ ಪರಿಸರದಲ್ಲಿ ಒಂದು ಮಾಸ ಪರ್ಯಂತ ತಪಸ್ಸನ್ನಾಚರಿಸಿ ಶ್ರೀಶಾಲಿವಾಹನ ಶಕೆ ೧೮೪೧ನೇ ಸಿದ್ಧಾರ್ಥಿ ಸಂವತ್ಸರದ ಅಕ್ಷಯ ತೃತೀಯಾ ಶುಕ್ರವಾರದ ಶುಭಮುಹೂರ್ತದಲ್ಲಿ ದೈವರಾತರು ಆಶ್ರಮಸ್ಥಾಪನೆಯನ್ನು ಮಾಡಿದರು. (ಕ್ರಿ.ಶ. ೧೯೧೯ನೇ ಇಸ್ವಿ).[೩] ಆಶ್ರಮವು "ಗೋರಕ್ಷಾ ಬ್ರಹ್ಮಚರ್ಯಾಶ್ರಮ' ಎಂದು ನಾಮಕರಣಗೊಂಡಿತು. ಕೆಲವು ಕಾಲಾನಂತರ ಆಶ್ರಮವು ಗೋಕರ್ಣದ ಮಹಾಬಲೇಶ್ವರ ಮಂದಿರದ ಸನಿಹ ಸಮುದ್ರ ತೀರಕ್ಕೆ ಸ್ಥಳಾಂತರಗೊಂಡು ದೀರ್ಘಕಾಲದವರೆಗೆ ನಡೆಸಲ್ಪಟ್ಟಿತು. ೧೯೭೦–೭೧ರ ನಂತರವಷ್ಟೆ ಸಮುದ್ರಕೊರೆತದಂತಹ ಪ್ರಾಕೃತಿಕ ಕಾರಣಗಳಿಂದ ಅದು ಪುನಃ ಅಶೋಕೆಗೆ ಸ್ಥಳಾಂತರಿಸಲ್ಪಟ್ಟಿತಷ್ಟೆ! ಆಶ್ರಮ

೩. ಔಪಚಾರಿಕವಾಗಿ ಮೊಟ್ಟ ಮೊದಲು ಆಶ್ರಮ ಸ್ಥಾಪನೆಗೊಂಡ ಸ್ಥಾನ ಗೋಕರ್ಣದಿಂದ ತದಡಿ ಬಂದರಿನ ದಿಕ್ಕಿನಲ್ಲಿ ಬರುವ ಅಶೋಕೆಯ ಸಮೀಪವಿರುವ ಮಲ್ಲಿಕಾರ್ಜುನೇಶ್ವರ ಮಂದಿರದ ಪರಿಸರದಲ್ಲಿ ಎಂಬುದು ದೈವರಾತರ ಟಿಪ್ಪಣಿಗಳಿಂದ ವೇದ್ಯವಾಗುತ್ತದೆ. ಸ್ವಲ್ಪಕಾಲದ ನಂತರ ಅಧಿಕೃತವಾಗಿ ಆಶ್ರಮವಾಗಿ ವೃದ್ಧಿಹೊಂದಿದ್ದು ಸಮುದ್ರ ತೀರದಲ್ಲಿ ಎಂಬುದು ಮುಂದಿನ ಘಟನಾವಳಿಗಳಿಂದ ಸಿದ್ಧವಾಗುತ್ತದೆ.

ಸ್ಥಾಪಿಸಲ್ಪಟ್ಟ ಬಹುಕಾಲದ ನಂತರ ಅಂದರೆ ೧೯೫೪ನೇ ಇಸ್ವಿಯಲ್ಲಿ ಕಾನೂನಿನನ್ವಯ ಆಶ್ರಮವನ್ನು ನೊಂದಾಯಿಸಿಕೊಳ್ಳುವ ಅನಿವಾರ್ಯತೆಯುಂಟಾದಾಗ "ಶ್ರೀ ದೈವರಾತ ಋಷಿಕುಲ ಯೋಗಾಶ್ರಮ" ಎಂಬ ಹೆಸರಿನಲ್ಲಿ ನೊಂದಾಯಿಸಲ್ಪಟ್ಟಿತು.[೪]

ದೈವರಾತರನ್ನು ಕುಲಪತಿಗಳನ್ನಾಗಿ ಹೊಂದಿದ ಆಶ್ರಮವು ಸಮುದ್ರತೀರಕ್ಕೆ ಸ್ಥಳಾಂತರಿಸಲ್ಪಟ್ಟ ನಂತರ ಗೋಕರ್ಣ ಪ್ರಾಂತದಿಂದಲೂ ರಾಜ್ಯದ ಇನ್ನಿತರ ಪ್ರದೇಶಗಳಿಂದಲೂ ವಿದ್ಯಾರ್ಥಿಗಳನ್ನು ಆಕರ್ಷಿಸಿತು. ಆಶ್ರಮವು ಸ್ವಯಂ ಪರಿಪೂರ್ಣವಾಗುವಂತೆ ದೈವರಾತರು ಶ್ರಮವಹಿಸಿದರು. ವೇದಾಧ್ಯಯನದೊಂದಿಗೆ ತೋಟಗಾರಿಕೆ, ಗೋಪಾಲನೆಯೂ ಸ್ಥಾನ ಪಡೆದವು. ಶಿಕ್ಷಣದ ವಿಚಾರದಲ್ಲಿ ದೈವರಾತರಿಗೆ ಅವರದೇ ಆದ ವಿಚಾರಪ್ರಣಾಲಿಯೊಂದು ಪಕ್ವವಾಗತೊಡಗಿತ್ತು–"ಕೇವಲ ಪುಸ್ತಕೋಪಜೀವಿಯಾದ ಶಿಕ್ಷಣ ದುರಂತದಲ್ಲಿ ಪರ್ಯವಸಾನವಾಗಬಲ್ಲದು. ಶಿಕ್ಷಣದಲ್ಲಿ ಜೀವನಶಿಕ್ಷಣವೂ ಸೇರಬೇಕು. ಅರ್ಥಾತ್ ಅನ್ನೋತ್ಪಾದನೆ ಸ್ಥಾನ ಪಡೆಯಲೇ ಬೇಕು. ಸ್ವಹಸ್ತದಿಂದ ಅನ್ನೋತ್ಪಾದನೆ ಎಂಥವರಿಗೂ ಕಡ್ಡಾಯವಾಗಬೇಕು. ಬುದ್ಧನ ಕಾಲದಲ್ಲೊಬ್ಬ ರಾಜ ಸ್ವಜೀವನಕ್ಕಾಗಿ ಆಹಾರೋತ್ಪಾದನೆ ಮಾಡುವ ಕರ್ತವ್ಯವನ್ನು ಒತ್ತಿ ಹೇಳಲು ತಾನೇ ತನ್ನ ಭೂಮಿಯನ್ನು ನೇಗಿಲಿನಿಂದ ಉತ್ತು ಕೃಷಿಮಾಡಿ ಅದನ್ನೇ ಉಣ್ಣುತ್ತಿದ್ದ. ಕಿರೀಟಧಾರಿಯಾಗಿ ನೇಗಿಲು ಹೊಡೆಯುವ ಈ ರಾಜನ ಮಾದರಿ ಇತರರಿಗೆ ಉತ್ಸಾಹದಾಯಕವಾಗಿತ್ತು. ಇದರ ಬಗ್ಗೆ ಅವರೊಂದು (ದೈವರಾತರು) ವೇದ ಮಂತ್ರವನ್ನುಲ್ಲೇಖಿಸುತ್ತಾರೆ–"ಅಕ್ಷೈರ್ಮಾ ದೀವ್ಯಃ । ಕೃಷಿಮಿತ್ ಕೃಷಸ್ವ । ವಿತ್ತೇ ರಮಸ್ವ ಬಹು ಮನ್ಯಮಾನಃ ।"[೫] ದೈವರಾತರು ನಿರಂತರ ತಿರುಗಾಟದಲ್ಲಿರುವಾಗಲೂ ಆಶ್ರಮದ ಕುರಿತು ಅಸೀಮವಾದ ಶ್ರದ್ಧೆಯನ್ನಿಟ್ಟುಕೊಂಡು ಆಶ್ರಮವನ್ನು ಪೋಷಿಸಿದರು,

೪. ಹುಬ್ಬಳ್ಳಿಯ ಲೋಕಶಿಕ್ಷಣ ಟ್ರಸ್ಟನಿಂದ ಪ್ರಕಟಗೊಂಡ ದೈವರಾತರನ್ನು ಕುರಿತಾದ ವಿವರಗಳಿರುವ ಕಿರು ಪರಿಚಯ ಗ್ರಂಥದಲ್ಲಿ "ಗೋರಕ್ಷಾ ಬ್ರಹ್ಮಾಚಾರ್ಯಾಶ್ರಮವೆಂದಿವೆ.
ಬ್ರಹ್ಮರ್ಷಿ ದೈವರಾತ : ಜೀವನ ಮತ್ತು ಕೃತಿ(ಇಂಗ್ಲೀಷ), ಆರ್.ಆರ್.ದಿವಾಕರ, ೧೯೭೪, ಪುಟ ೮.
ದೈವರಾತರು ಬರೆದ ಪತ್ರವೊಂದರಲ್ಲಿ ಮುದ್ರಿತವಾದಂತೆ ಆಶ್ರಮದ ಹೆಸರು "ಶ್ರೀ ದೈವರಾತ ಋಷಿಕುಲ ಯೋಗಾಶ್ರಮ" ಎಂದಿದೆ. ಎರಡನೆಯ ಹೆಸರು ಆಶ್ರಮವನ್ನು ಸರ್ಕಾರದ ಕಾನೂನಿನ್ವಯ ನೊಂದಣಿ ಮಾಡುವಾಗ ೧೯೫೪ನೇ ಇಸ್ವಿಯಲ್ಲಿ ಇಟ್ಟ ಹೆಸರೆಂದು ಗೋಕರ್ಣದ ಜಿ. ಎಮ್. ವೇದೇಶ್ವರರು ನಡೆಸಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

೫. ಕಸ್ತೂರಿ, ಕನ್ನಡ ಡೈಜೆಸ್ಟ, ಪುಟ ೭೯–೮೦

ಪಾಲಿಸಿದರು. ಮತ್ತು ಎಲ್ಲ ವಿಧದಿಂದಲೂ ಶ್ರೀಮಂತಗೊಳಿಸಿದರು. ದೇಶದ ಉದ್ದಗಲಕ್ಕೂ ಜೀವಿತದುದ್ದಕ್ಕೂ ಒಂದಲ್ಲ ಒಂದು ಕಾರಣಕ್ಕೆ ಸಂಚರಿಸುತ್ತಲೇ ಇದ್ದಾಗಲೂ ಅಪರೂಪದ ಫಲ, ಪುಷ್ಪ ಮತ್ತು ಔಷಧೋಪಯುಕ್ತ ವನಸ್ಪತಿಗಳನ್ನು ಕಂಡಾಗಲೆಲ್ಲ ಅವನ್ನು ತಂದು ಆಶ್ರಮದಲ್ಲಿ ಬೆಳೆಸುವ ಏರ್ಪಾಡನ್ನು ಮಾಡುತ್ತಿದ್ದರು. ಇದರಿಂದಾಗಿ ಆಶ್ರಮವು ಸಸ್ಯಶಾಮಲೆಯಾಗಿ ವೃದ್ಧಿಗೊಂಡಿತು.

ಶಿಕ್ಷಣದ ವಿಚಾರವಾಗಿ ದೈವರಾತರ ವಿಚಾರ ಉದ್ಬೋಧಕವಾಗಿದೆ. ಮಾನವನ ವಿಕಾಸಕ್ಕಾಗಿ ಅವರು 'ಸಪ್ತಮರ್ಯಾದೆ'ಗಳಿಂದ ಕೂಡಿದ ಶಿಕ್ಷಣ ಪದ್ಧತಿಯನ್ನು ಬೋಧಿಸಿದರು. ಏಳು ವಿಧವಾದ ಶಿಸ್ತುಗಳಿಂದ ಮಾತ್ರ ಇಹ ಮತ್ತು ಪರಗಳನ್ನು ಗೆಲ್ಲುವ ವ್ಯಕ್ತಿತ್ವ ವಿಕಸನ ಸಾಧ್ಯ ಎಂಬುದು ಅವರ ನಿಶ್ಚಿತವಾದ ಧೋರಣೆಯಾಗಿತ್ತು.

೧. ಆಹಾರ : ಸಾತ್ತ್ವಿಕವಾದ ಆಹಾರ

೨. ವಿಹಾರ : ಶಾರೀರಕವಾದ ಶಿಸ್ತು, ಸಂಯಮ ಮತ್ತು ಯೌಗಿಕ ಕ್ರಿಯೆಗಳಿಂದ ಶರೀರ ಮನಸ್ಸುಗಳನ್ನು ದೃಢ ಮತ್ತು ಬಲಿಷ್ಠವಾಗಿ ಸದಾ ಆರೋಗ್ಯ, ಉತ್ಸಾಹಗಳಿಂದ ಕೂಡಿರುವಂತೆ ಮಾಡಿಕೊಳ್ಳುವದು. ದೈವರಾತರು ಕೃಷಿಯೇ ಮುಂತಾದ ಕಾಯಶ್ರಮವನ್ನು ಮನ್ನಿಸಿ ಶ್ರಮಕ್ಕೆ ಶಿಕ್ಷಣದಲ್ಲಿ ಅವಶ್ಯವಾಗಿ ಸ್ಥಾನಕಲ್ಪಿಸಿರುವದನ್ನೂ ಇಲ್ಲಿ ಸೇರಿಸಿಕೊಳ್ಳಬೇಕು.

೩. ಆಚಾರ : ವೇದೋಕ್ತ ಧರ್ಮದ ಆಚರಣೆ, ಸದಾಚಾರ ಸಂಪನ್ನತೆ, ಸಂಪ್ರದಾಯಗಳನ್ನು ಗೌರವಿಸಿ ಆಚರಿಸುವುದನ್ನೆಲ್ಲ ಇದು ಒಳಗೊಳ್ಳುತ್ತದೆ.

೪. ವಿಚಾರ : ಅಂತಃಕರಣದ ಶಿಸ್ತು.

೫. ಉಚ್ಚಾರ : ಮಾತಿನಲ್ಲಿಯ ಶಿಸ್ತು ಮತ್ತು ಸಂಯಮ. ಅಷ್ಟೇ ಅಲ್ಲದೇ ಸತ್ಯಸಂಧತ್ವ, ಮಿತಭಾಷಿತ್ವ ಮುಂತಾದ ಶಿಸ್ತುಗಳೂ ಇಲ್ಲಿ ಸೇರುತ್ತವೆ.

೬. ಸಾಕ್ಷಾತ್ಕಾರ : ಅಧ್ಯಾತ್ಮದ ಕುರಿತು ಅರಿವು, ಚಿಂತನೆ, ಮತ್ತು ಅದಕ್ಕಾಗಿ ಹಂಬಲಗಳು ಮತ್ತು ಮಾಡುವ ಪ್ರಯತ್ನಗಳು ಆರನೆಯ 'ಮರ್ಯಾದೆ'ಯಲ್ಲಿ ಸೇರುತ್ತವೆ.

೭. ಪ್ರಚಾರ : ಸಾಮಾಜಿಕವಾಗಿ ಮನುಷ್ಯ ಹೊಣೆಗಾರಿಕೆಯಿಂದ ಸರ್ವಜನಹಿತಕ್ಕಾಗಿ ದುಡಿಯುವ ಮತ್ತು ಜ್ಞಾನವನ್ನು ವಿತರಿಸುವ ಸಪ್ತಮ ಮರ್ಯಾದೆ ಇದಾಗಿದೆ. ಸಾಮಾನ್ಯವಾಗಿ ಶಾಲೆಗಳಲ್ಲಿ ಔಪಚಾರಿಕ ಶಿಕ್ಷಣವನ್ನು ಮಾತ್ರ ನೀಡಲಾಗುತ್ತದೆ. ಅನೌಪಚಾರಿಕವಾದ ಜೀವನ ಶಿಕ್ಷಣವನ್ನು ವ್ಯಕ್ತಿ ತನ್ನ ಕುಟುಂಬದಲ್ಲಿ ಮತ್ತು ಸಮಾಜ ಜೀವನದಲ್ಲಿ ಪಡೆದುಕೊಳ್ಳಬೇಕಾಗುತ್ತದೆ. ಆದರೆ ಆಶ್ರಮದಲ್ಲಿ ಒಂದೇ ತಾಣದಲ್ಲಿಯೇ ಇವೆರಡನ್ನೂ ವಿದ್ಯಾರ್ಥಿಯಾಗಿ ಅಲ್ಲಿಯೇ ವಾಸಮಾಡಿದ್ದುಕೊಂಡು ಪಡೆಯುವಂತಾಗಬೇಕು ಎಂಬುದು ದೈವರಾತರ ಆಶಯವಾಗಿತ್ತು. ಅದನ್ನು ಸಾಕಾರಗೊಳಿಸಲು ದೈವರಾತರು ಸೂಕ್ತವಾದ ವಾತಾವರಣವನ್ನು ಕಲ್ಪಿಸಿದರು. ಸ್ವಯಂ ತಾವು ವಿದ್ಯಾರ್ಥಿಗಳ ಮೇಲೆ ತಮ್ಮ ಸ್ವಜೀವನದ ಮಾದರಿಯಿಂದ ಪ್ರಭಾವ ಬೀಳಿಸಿದರು. ಆಶ್ರಮದಲ್ಲಿ ಇದ್ದಾಗಲೆಲ್ಲ ವಿದ್ಯಾರ್ಥಿಗಳಿಗೆ ವೇದಾಧ್ಯಾಪನ ಮಾಡುತ್ತಿದ್ದರು; ಆಶ್ರಮದಲ್ಲಿ ಸದಾ ಯಜ್ಞಗಳನ್ನು ವಿದ್ಯಾರ್ಥಿಗಳೊಂದಿಗೆ ನಡೆಸುತ್ತಿದ್ದರು. ಆಶ್ರಮದಲ್ಲಿ ಕೃಷಿಯೂ ಒಂದು ಭಾಗವಾಗಿತ್ತು. ದೈವರಾತರು ಛಾತ್ರವರ್ಗದೊಂದಿಗೆ ಆಶ್ರಮದ ಆವರಣದಲ್ಲಿ ಹೂ, ಹಣ್ಣು, ತರಕಾರಿ ಮತ್ತು ಔಷಧ ಸಸ್ಯಗಳನ್ನು ಬೆಳೆಸಿದರು. ಅಂತೇ ವಾಸಿಗಳೊಂದಿಗೆ ಗೆಜ್ಜೆಕಟ್ಟಿ ನರ್ತಿಸುತ್ತ ಭಜನೆಯನ್ನು ಮಾಡುತ್ತ ಭಕ್ತಿಯ ಉನ್ಮಾದವನ್ನು ಸೃಷ್ಟಿಸುತ್ತಿದ್ದರು. ದೀಪಾವಳಿಯಂದು ಮಹಾಬಲೇಶ್ವರ ದೇವರ ಉತ್ಸವ ಮೂರ್ತಿ ಪಾಲಕಿಯಲ್ಲಿ ಆಶ್ರಮಕ್ಕೆ ಬರುತ್ತಿತ್ತು. ಆಗ ದೈವರಾತರ ಉಪನ್ಯಾಸ ಮತ್ತು ನರ್ತನ ಪೂರ್ವಕ ಭಜನೆ ನಡೆಯುತ್ತಿದ್ದವು. ಲೌಕಿಕ ಸಂಸ್ಕೃತದ ರುದ್ರಾಧ್ಯಾಯವೇ ಭಜಿಸಲ್ಪಡುತ್ತಿತ್ತು.[೬]

ಆಶ್ರಮದ ಎದುರಿಗೆ ಅಶ್ವತ್ಥವೃಕ್ಷವನ್ನು ಬೆಳೆಸಲಾಗಿತ್ತು. ಅದರ ಸನಿಹ ಋಗ್ವೇದ ಸಂಹಿತಾಯಾಗವೊಂದನ್ನು ದೈವರಾತರು ನಡೆಸಿದರು. ಸ್ತ್ರೀಯರಿಗೆ ವೇದಾಧಿಕಾರವಿದೆ ಎಂದು ಬಲವಾಗಿ ಪ್ರತಿಪಾದಿಸುತ್ತಿದ್ದ ದೈವರಾತರು ತಮ್ಮ ಮಕ್ಕಳಿಗೆ ವೇದವನ್ನು ಕಲಿಸಿದರು. ದೈವರಾತರು ಮೇಧಾದೇವಿ ಎಂಬ ತಮ್ಮ ಮಗಳಿಗೆ ಋಗ್ವೇದ ಸಂಹಿತಾ ಪಾಠವನ್ನು ಪೂರ್ಣವಾಗಿ ಕಲಿಸಿದ್ದರು. ಭಾರತದ ಪ್ರಪ್ರಥಮ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರು

---

೬ ಕೃಷ್ಣಭಟ್ಟ ಮೈಯರ ಅವರೊಂದಿಗಿನ ಸಂದರ್ಶನದಲ್ಲಿ ವ್ಯಕ್ತವಾದ ವಿಚಾರ.

೧೯೫೯ನೇ ಇಸ್ವಿಯಲ್ಲಿ ಗೋಕರ್ಣಕ್ಕೆ ಬಂದಾಗ ದೈವರಾತರ ಆಶ್ರಮಕ್ಕೆ ಭೇಟಿಕೊಟ್ಟು ದೈವರಾತರ ಪ್ರಯತ್ನಗಳನ್ನು ಶ್ಲಾಘಿಸಿದರು.[೭]

ಸಮುದ್ರತೀರದಲ್ಲಿದ್ದ ದೈವರಾತರ ಆಶ್ರಮ ಹೀಗೆ ೧೯೧೯ನೇ ಇಸ್ವಿಯಿಂದ ೧೯೫೯ನೇ ಇಸ್ವಿಯ ವರೆಗೆ ಅಂದರೆ ಸರಿಸುಮಾರು ೪೦–೪೧ ವರ್ಷಗಳವರೆಗೆ ನಡೆಯಿತು. ೧೯೬೦–೬೧ ರಿಂದ ಆಶ್ರಮದ ಹಿನ್ನಡೆಗೆ ಸಮುದ್ರ ಕೊರೆತ ಪ್ರಾಕೃತಿಕ ಕಾರಣವಾದರೆ ಆಧುನಿಕ ಶಿಕ್ಷಣದ ಪ್ರಸಾರವೇ ಮುಂತಾದ ಇನ್ನುಳಿದ ಕಾರಣಗಳು ತಮ್ಮ ತಮ್ಮ ಕಾಣಿಕೆಗಳನ್ನು ನೀಡಿದ್ದವು. ದೈವರಾತರಿನ್ನೂ ಬದುಕಿದ್ದಾಗಲೇ ಅವರ ಕಲ್ಪನೆಯ ವೈದಿಕ ಜೀವನದ ಮೂರ್ತರೂಪವಾದ ಆಶ್ರಮವು ಹಿನ್ನಡೆಯನ್ನು ಕಂಡದ್ದು ದುರ್ದೈವವೇ ಆಗಿತ್ತು. ನಂತರ ಅಶೋಕೆಗೆ ಆಶ್ರಮದ ಚಟುವಟಿಕೆಗಳು ಸ್ಥಳಾಂತರಿಸಲ್ಪಟ್ಟರೂ ಮೊದಲಿನ ಮೆರುಗನ್ನು ಪಡೆಯುವಲ್ಲಿ ಯಶಸ್ಸು ದೊರಕಲಿಲ್ಲ. ದೈವರಾತರ ವಯಸ್ಸೂ ಇಳಿಮುಖವಾಗತೊಡಗಿತ್ತು. ದೈವರಾತರು ಮರಣಹೊಂದುವದಕ್ಕೆ ಹತ್ತು ವರ್ಷಕ್ಕೂ ಮೊದಲೇ ಆಶ್ರಮವು ತನ್ನೆಲ್ಲ ವೈಭವವನ್ನು ಕಳೆದುಕೊಂಡಿತು. ಆಶ್ರಮದ ಸ್ವಲ್ಪ ಭಾಗ ಈಗಲೂ ಇದ್ದು ದೈವರಾತರ ಮೊಮ್ಮಗ ಅಶ್ವಿನಿಕುಮಾರ ಅಲ್ಲಿ ವಾಸಮಾಡುತ್ತಿದ್ದಾರೆ ಎಂದು ಮೈಯರ ಕೃಷ್ಣಭಟ್ಟರೆಂಬ ಗೋಕರ್ಣದ ಹಿರಿಯರು ಹೇಳುತ್ತಾರೆ.

ಈ ಅವಧಿಯಲ್ಲಿಯೂ ದೈವರಾತರ ಸಂಚಾರ ಮಾತ್ರ ನಿರಂತರವಾಗಿ ನಡೆದೇ ಇತ್ತು. ವಿಶೇಷವೆಂದರೆ ಆಶ್ರಮದ ಸ್ಥಾಪನೆ ಮತ್ತು ಅದರ ಅವಸಾನದ ಅಂಚಿನ ನಡುವೆ ದೈವರಾತರು ವೇದವಾಙ್ಮಯವನ್ನು ಅಲಂಕರಿಸುವ ಹಲವು ಉದ್ಗಂಥಗಳನ್ನು ರಚಿಸಿದರು. (ಅವರ ಕೃತಿಗಳನ್ನು ಕುರಿತು ಈ ಗ್ರಂಥದಲ್ಲಿ ಮುಂದೆ ವಿವರಿಸಲಾಗಿದೆ.)

೭. ಕಸ್ತೂರಿ, ಕನ್ನಡ ಡೈಜೆಸ್ಟ್, ಪುಟ ೭೪

೧೧. ದೈವರಾತರ ಕೌಟುಂಬಿಕ ಜೀವನ

ಆತಿಥ್ಯಂ ಶಿವಪೂಜನಂ ಪ್ರತಿದಿನಂ
ಮಿಷ್ಟಾನ್ನ ಪಾನಂ ಗೃಹೇ
ಸಾಧೋಃ ಸಂಗಮುಪಾಸತೇ ಹಿ ಸತತಂ
ಧನ್ಯೋ ಗೃಹಸ್ಥಾಶ್ರಮಃ

–ಚಾಣಕ್ಯ ನೀತಿಸಾರ

ದೈವರಾತರ ಪೂರ್ವಜರ ವಿಚಾರವಾಗಿ ಹಿಂದೆಯೇ (ಪ್ರಕರಣ–ಎರಡು) ಪ್ರಸ್ತಾವಿಸಲಾಗಿದೆ. ದೈವರಾತರು ಮಂತ್ರದರ್ಶನದ ಭಾಗ್ಯವನ್ನು ಪಡೆದು ಮರಳಿ ಗೋಕರ್ಣಕ್ಕೆ ಬಂದು ಆಶ್ರಮಸ್ಥಾಪನೆಯನ್ನು ಮಾಡಿ ಅದರ ಸರ್ವತೋಮುಖವಾದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದ ಕಾಲದಲ್ಲಿ ಅವರು ಗೃಹಸ್ಥಾಶ್ರಮ ಸ್ವೀಕರಿಸಿ ವೈದಿಕ ಋಷಿದಂಪತಿಗಳಂತೆ ಜೀವನ ನಡೆಸಿದ ವೃತ್ತಾಂತ ಇಲ್ಲಿ ಪ್ರಸ್ತಾವಿಸಲಾಗಿದೆ.

ದೈವರಾತರು ಸಂತ ರಾಮದಾಸ ಸ್ವಾಮಿಗಳೊಂದಿಗೆ ಸಂಚರಿಸಿ ಮರಳಿ ಬಂದ ನಂತರ ಅವರ ಸಂಚಾರಕ್ಕೆ ಮೊದಲೇ ನಿಶ್ಚಿತವಾದ ವಿವಾಹ ಆದದ್ದು ಮತ್ತು ಮಂತ್ರದರ್ಶನದ ನಂತರ ಗೋಕರ್ಣಕ್ಕೆ ಮರಳುವಷ್ಟರಲ್ಲಿ ಪತ್ನಿಯಾದ ಆರುಂಧತಿಯು ಮರಣ ಹೊಂದಿದ ವಿಷಯವನ್ನು ಹಿಂದೆಯೇ ಪ್ರಸ್ತಾವಿಸಲಾಗಿದೆ. ಪಡವೇಟ್ಟದಿಂದ ಬಂದ ದೈವರಾತರು ಆಶ್ರಮವನ್ನು ಸ್ಥಾಪಿಸುವತ್ತ ತಮ್ಮ ಲಕ್ಷ್ಯವನ್ನೆಲ್ಲಾ ಕೇಂದ್ರೀಕರಿಸಿ ಆಶ್ರಮವನ್ನು ಸ್ಥಾಪಿಸಿ ಅದರ ಅಭಿವೃದ್ಧಿಯತ್ತ ಲಕ್ಷವಿಟ್ಟರು. ಆದರೆ ಆಶ್ರಮ ಪ್ರವರ್ಧಮಾನ ಸ್ಥಿತಿಯನ್ನಂತೂ ಒಮ್ಮೆಲೇ ತಲುಪಲಿಲ್ಲ. ವಿಧ್ಯುಕ್ತವಾಗಿ ಸ್ಥಾಪಿಸಲ್ಪಟ್ಟರೂ ಗೋಕರ್ಣದ ತುಸು ದೂರದ ಹೊರವಲಯ ಆಶ್ರಮದ ಸ್ಥಾನವಾದದ್ದರಿಂದ

ವಿದ್ಯಾರ್ಥಿಗಳನ್ನು ಶೀಘ್ರವಾಗಿ ಆಕರ್ಷಿಸುವಲ್ಲಿ ವಿಫಲವಾಗಿರಬೇಕು. ಅದರಿಂದ ದೈವರಾತರು ಕಾಲಕ್ರಮದಲ್ಲಿ ಸಮುದ್ರ ತೀರದ ಗೋಕರ್ಣದ ಮುಖ್ಯ ಮಂದಿರವಾದ ಮಹಾಬಲೇಶ್ವರ ಮಂದಿರದ ಸನಿಹದಲ್ಲಿ ಆಶ್ರಮವನ್ನು ಸ್ಥಳಾಂತರಿಸಿ ಅಭಿವೃದ್ಧಿ ಪಡಿಸಿದರು. ಈ ನಡುವೆ ಗೋಕರ್ಣದ ಪಶ್ಚಿಮಕ್ಕಿರುವ ಗೋಕರ್ಣಕ್ಕೆ ತಾಗಿಯೇ ಇರುವ ಭೀಮಕೊಂಡ ಎಂಬ ಸ್ಥಾನದಿಂದ ತಪವನ್ನಾಚರಿಸುತ್ತ ಕಾಲ ಕಳೆಯುತ್ತಿದ್ದಾಗಲೇ ಅವರಿಗೆ ಎರಡನೆಯ ವಿವಾಹಯೋಗ ಕೂಡಿ ಬಂದದ್ದು. ಭೀಮಕೊಂಡದಲ್ಲಿದ್ದಾಗಲೇ ಒಂದು ದಿನ ಮುಂಜಾನೆ ಗೋಕರ್ಣಗ ರಥಬೀದಿಯ ಜಂಬೇಮನೆಯ ಪರಮೇಶ್ವರ ಭಟ್ಟ ದಂಪತಿಗಳು ಭೀಮಕೊಂಡಕ್ಕೆ ಬಂದು ತಮ್ಮ ಹಿರಿಯ ಮಗಳಾದ ವರಮಹಾಲಕ್ಷ್ಮೀಯನ್ನು ವಿವಾಹ ಮಾಡಿಕೊಡಲು ಬಂದಿರುವದಾಗಿ ತಿಳಿಸಿದರು. ಅದಕ್ಕೆ ದೈವರಾತರು ಸಮ್ಮತಿಸಿದರು. ಆದರೆ ಶುದ್ಧ ವೈದಿಕ ವಿಧಿ-ವಿಧಾನಗಳಿಂದ ಮಾತ್ರ ಮದುವೆ ಮಾಡಿಕೊಡಬೇಕು ಎಂದು ದೈವರಾತರು ಹೇಳಿದರು. ಇದಕ್ಕೆ ವಧೂಪಕ್ಷದವರು ಸಮ್ಮತಿಸಿದರು. ತಕ್ಷಣವೇ ಗೋಕರ್ಣದಲ್ಲಿರುವ ಕುಲಪುರೋಹಿತರಾದ ದತ್ತಾತ್ರೇಯ ದೀಕ್ಷಿತರಿಗೂ ದೈವರಾತರ ಋಗ್ವೇದದ ಗುರುಗಳಾದ ಅಗ್ನಿಹೋತ್ರಿ ಕೃಷ್ಣಭಟ್ಟ ಮೈಯರರಿಗೂ, ದೈವರಾತರ ತಂದೆಯಾದ ವಿಘ್ನೇಶ್ವರ ಭಡತಿಯವರಿಗೂ ಮನೆಯವರಿಗೂ ಅವತ್ತಿನ ಶುಭಮುಹೂರ್ತದಲ್ಲಿಯೇ ಗಣೇಶನ ಲಗ್ನವಿದೆ ಎಂಬ ಸಮಾಚಾರವನ್ನು ತಿಳಿಸಲಾಯಿತು. ಈ ಸುದ್ದಿಯನ್ನು ತಿಳಿದ ತಕ್ಷಣದಲ್ಲಿಯೇ ಆಮಂತ್ರಿತರೆಲ್ಲ ಬಂದು ಸೇರಿದರು. ದೈವರಾತರು ದೀಕ್ಷಿತ ದತ್ತಾತ್ರೇಯ ಉಪಾಧ್ಯಾಯರಲ್ಲಿ ಗ್ರಾಮಧರ್ಮ, ಜನಪದ ಧರ್ಮ ಇತ್ಯಾದಿಗಳನ್ನು ಪೂರ್ಣವಾಗಿ ಬಿಟ್ಟು ಅಶ್ವಲಾಯನ ಗೃಹಸೂತ್ರದಲ್ಲಿ ಹೇಳಿದ ವಿಧಿಗಳನ್ವಯ ವಿವಾಹವನ್ನು ಸಂಪನ್ನಗೊಳಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡರು.

ಭೀಮಕೊಂಡದಲ್ಲಿರುವ ಅಶ್ವತ್ಥವೃಕ್ಷದ ಪರಿಸರವೇ ವಿವಾಹ ವೇದಿಕೆಯಾಗಿತ್ತು. ಅಶ್ವತ್ಥ ವೃಕ್ಷದ ಕಟ್ಟೆಯ ಮೇಲೆ ಪ್ರಾಚೀನಕಾಲದಿಂದಲೂ ಇದ್ದ ಜನಾರ್ದನ ದೇವರ ವಿಗ್ರಹವಿತ್ತು. ಕಾರ್ತಿಕ ಪೌರ್ಣಿಮೆಯ ದಿವಸ ಮಹಾಬಲೇಶ್ವರ ದೇವರ ಸವಾರಿ ಅಲ್ಲಿಗೆ ಬಂದು ಧಾತ್ರೀಹೋಮ ಮೊದಲಾದ ವಿಧಿಗಳು ಅಲ್ಲಿ ನಡೆಯುವದು ಸಂಪ್ರದಾಯವಾಗಿತ್ತು. ಧಾತ್ರೀಹೋಮ ನಡೆಯುವ ಸ್ಥಳದಲ್ಲಿಯೇ ದೈವರಾತರ ವಿವಾಹ ಹೋಮ ನಡೆಯಿತು. ನಾಲ್ಕು ದಿನ ಪರ್ಯಂತ ಶಾಸ್ತ್ರೋಕ್ತವಾದ ರೀತಿಯಲ್ಲಿಯೇ ವಿವಾಹವು ನಡೆಯಿತು. ವಿವಾಹದಲ್ಲಿ ವಧುವಿಗೆ ಶ್ರದ್ಧಾದೇವಿ ಎಂದು ದೈವರಾತರು

ನಾಮಕರಣ ಮಾಡಿದರು. ದಂಪತಿಗಳು ಅಗ್ನಿಯ ಸನಿಹದಲ್ಲಿ ದರ್ಭಾಸನದ ಮೇಲೆ ಮಲಗಿ ರಾತ್ರಿಯನ್ನು ಕಳೆಯುವದು, ಕೇವಲ ಹವಿರಾಶನ (ಹಾಲು ಅನ್ನ, ಹವಿಸ್ಸಿಗೆ ಯೋಗ್ಯವಾದ ಆಹಾರ ಮಾತ್ರ) ವನ್ನು ಸೇವಿಸುವದೇ ಮುಂತಾದ ನಿಷ್ಠುರವಾದ ನಿಯಮಗಳಿಂದ ವಿವಾಹವು ಅಕ್ಷರಶಃ ವಿಧ್ಯುಕ್ತವಾಗಿ ನಡೆಯಿತು. ವಿವಾಹದ ಪೂರ್ವದಲ್ಲಿ ಕನ್ಯೆಗೆ ಸದ್ಯೋವಧುತ್ವ ಸಿದ್ಧಿಗಾಗಿ ಉಪನಯನ, ಗಾಯತ್ರೀಮಂತ್ರೋಪದೇಶ ಮುಂತಾದ ಸ್ತ್ರೀಸಂಸ್ಕಾರಗಳನ್ನು ಯಥಾ ಶಾಸ್ತ್ರೀಯವಾಗಿ ಸಂಪನ್ನಗೊಳಿಸಲಾಗಿತ್ತು. ತಪಸ್ಸಿಗಾಗಿ ದೈವರಾತರು ನಿರ್ಮಿಸಿಕೊಂಡಿದ್ದ ಪರ್ಣಕುಟೀರದಲ್ಲಿಯೇ ಗೃಹಪ್ರವೇಶದ ಶಾಸ್ತ್ರವನ್ನು ಸಂಪನ್ನಗೊಳಿಸಿಕೊಂಡು ಅನಂತರ ದೈವರಾತ ದಂಪತಿಗಳು ಗೋಕರ್ಣದ ಪ್ರಧಾನ ಮಂದಿರಗಳಿಗೆ ಹೋಗಿ ದೇವರಿಗೆ ನಮಸ್ಕಾರ ಮಾಡಿ ದೈವರಾತರ ಮನೆಗೆ ಹೋಗಿ ದೇವರಿಗೂ ಹಿರಿಯರಿಗೂ ನಮಸ್ಕರಿಸಿದರು. ಈ ವಿವಾಹ ದೈವರಾತರ ೨೮ನೆಯ ವಯಸ್ಸಿನಲ್ಲಿ ಅಂದರೆ ೧೯೨೦ರಲ್ಲಿ ನಡೆಯಿತು. ದೈವರಾತ ದಂಪತಿಗಳು ನಂತರ ಆಶ್ರಮದಲ್ಲಿ ವಾಸಿಸುತ್ತ ಗೃಹಸ್ಥಧರ್ಮವನ್ನು ನಡೆಸುತ್ತಿದ್ದರು. ನಿತ್ಯವೂ ಅಗ್ನಿಯ ಉಪಾಸನೆ, ಅತಿಥಿ ಸತ್ಕಾರ, ವಿದ್ಯಾರ್ಥಿಗಳ ಪೋಷಣೆಯನ್ನು ಮಾಡುತ್ತಿದ್ದರು. ವಯಸ್ಸಿನ ಅಂತರ ದಂಪತಿಗಳಲ್ಲಿದ್ದರೂ ಶ್ರದ್ಧಾದೇವಿಯು ಸರ್ವವಿಧದಲ್ಲಿಯೂ ದೈವರಾತರಿಗೆ ಅನುರೂಪಳಾಗಿ ದೈವರಾತರ ವರ್ಷ ವರ್ಷಗಳ ಸಂಚಾರದಲ್ಲಿಯೂ ಆಶ್ರಮವನ್ನು ಸರ್ವವಿಧದಲ್ಲಿಯೂ ನೋಡಿಕೊಳ್ಳುತ್ತ ಯಾವ ವಿಧವಾದ ಲೋಪಕ್ಕೂ ಆಸ್ಪದ ಕೊಡದೇ ನಡೆಸಿಕೊಂಡು ಹೋದದ್ದು ನಿಜವಾಗಿ ಶ್ಲಾಘನೀಯವಾದದ್ದಾಗಿದೆ. ದೈವರಾತ ದಂಪತಿಗಳಿಗೆ ಕಾಲಕ್ರಮದಲ್ಲಿ ಸೋಮಶ್ರವ, ಸತ್ಯಶ್ರವ ಮತ್ತು ದೇವಶ್ರವ ಎಂಬ ಗಂಡುಮಕ್ಕಳೂ ಮೇಧಾದೇವಿ, ಶಚೀದೇವಿ, ಪ್ರಜ್ಞಾದೇವಿ ಮತ್ತು ಭಾರತಿ ಎಂಬ ಹೆಣ್ಣುಮಕ್ಕಳೂ ಹುಟ್ಟಿದರು. ಆಶ್ರಮನಿರ್ವಹಣೆ, ಕುಟುಂಬ ಪಾಲನೆಗಳ ಮಧ್ಯದಲ್ಲಿಯೂ ದೈವರಾತರ ಸಂಚಾರ, ತಪಸ್ಸು, ಗ್ರಂಥರಚನೆಗಳು ಮಾತ್ರ ನಿರಂತರವಾಗಿ ನಡೆದುಕೊಂಡೇ ಇದ್ದವು. ಮಕ್ಕಳ ಪಾಲನೆ, ಆಶ್ರಮನಿರ್ವಹಣೆಯ ಹೊಣೆ ಎಲ್ಲವೂ ಶ್ರದ್ಧಾದೇವಿಯಿಂದ ನಿರ್ವಹಿಸಲ್ಪಡುತ್ತಿತ್ತು. ದೈವರಾತರ ದೀರ್ಘ ಅನುಪಸ್ಥಿತಿಗಳ ನಡುವೆ ಮಕ್ಕಳು ಬೆಳೆದರು. ಇಂದು ಅವರೆಲ್ಲರೂ ವಿವಾಹಿತರಾಗಿ ಸಂತಾನ ಪಡೆದು ಗೋಕರ್ಣದಲ್ಲಿ ಮತ್ತು ಹೊರಗೆ ಸಂಪನ್ನವಾದ ಬದುಕನ್ನು ನಡೆಸುತ್ತಲಿದ್ದಾರೆ.

ಈ ಪ್ರಕರಣದ ಸಂಪೂರ್ಣವಾದ ವಿವರಗಳಿಗೆ ದೈವರಾತರ ಅಪ್ರಕಟಿತ ಆತ್ಮಚರಿತ್ರೆಯ ಟಿಪ್ಪಣಿಗಳು ಆಧಾರವಾಗಿದೆ.

೧೨. ವೇದ ಹಸಿರು–ವೇದ ಉಸಿರು

ಋಚಃ ಸಾಮಾನಿ ಯಜೂಗೂಂಷಿ ।
ಸಾ ಹಿ ಶ್ರೀರಮೃತಾಂ ಸತಾಂ ॥ –ಶ್ರುತಿ

೧. ಜಂಗಮ ವೇದ ದೈವರಾತರು

ದೈವರಾತರ ಜೀವನ ಚರಿತ್ರೆಯು ನಿಜವಾದ ಪ್ರಾರಂಭ ವೇದಾಧ್ಯಯನದಿಂದ ಆಯಿತು. ಉಪನಯನವೆಂಬುದು ಬ್ರಾಹ್ಮಣನಿಗೆ ಮತ್ತೊಂದು ಜನ್ಮವೇ ಆಗಿದೆಯಷ್ಟೆ! ಉಪನಯನಾನಂತರ ಪ್ರಾರಂಭವಾದ ದೈವರಾತರ ವೇದ. ವಿದ್ಯೆಯ ಅಧ್ಯಯನ ಜೀವನದುದ್ದಕ್ಕೂ ಒಂದಿಲ್ಲೊಂದು ವಿಧದಲ್ಲಿ ಮುಂದುವರಿದುಕೊಂಡೇ ಇತ್ತು. ದೈವರಾತರು ಅಕ್ಷರಶಃ ನಡೆದಾಡುವ ವೇದವೇ ಆದರು. ಚತುರ್ವೇದಗಳೂ ಅವರಿಗೆ ಮುಖೋದ್ಗತವಾಗಿತ್ತು. ಅಷ್ಟೇ ಅಲ್ಲ ಹೃದ್ಗತವೂ ಆಗಿತ್ತು. ಒಂದು ವೈದಿಕ ಶಬ್ದದ ಪ್ರಸ್ತಾಪವಾದರೆ ತತ್ಸಮಾನದ ಶಬ್ದಗಳು ಎಲ್ಲೆಲ್ಲಿ ಯಾವ ಯಾವ ಮಂತ್ರಗಳಲ್ಲಿ ಬಂದಿವೆ–ಯಾವ ದೇವತಾಕವಾದ ಮಂತ್ರಗಳಲ್ಲಿ ಬಂದಿವೆ, ಯಾವ ಅರ್ಥಗಳು ಪ್ರತಿಪಾದಿತವಾಗಿವೆ ಎಂಬುದನ್ನು ಸುಲಲಿತವಾಗಿ ಹೇಳುತ್ತ ಹೋಗುತ್ತಿದ್ದರು. ಇದು ಯಾವುದೇ ವೈದಿಕ ಮಂತ್ರಕ್ಕೂ ಅನ್ವಯವಾಗುತ್ತಿತ್ತು. ಯಾವುದಾದರೂ ಒಂದು ದೇವತಾಕವಾದ ಒಂದು ಮಂತ್ರದ ಪ್ರಸ್ತಾಪವಾದರೆ ತದ್ದೇವತಾಕವಾದ ಮಂತ್ರಗಳು ಯಾವ ಯಾವ ವೇದಗಳಲ್ಲಿ ಸಮಾನವಾಗಿ ಎಲ್ಲಿ ಎಲ್ಲಿ ಪ್ರತಿಪಾದಿತವಾಗಿವೆ ಎನ್ನುವದನ್ನು ದೈವರಾತರು ಹೇಳುತ್ತ ಹೋಗುತ್ತಿದ್ದರೆಂದು ತಿಳಿದು ಬರುತ್ತದೆ. ಅವರ ಮಂತ್ರ ಪಠನದ ರೀತಿಯಂತೂ ಅತೀವ ಸುಂದರ, ಸ್ಪಷ್ಟ, ಅಸ್ಖಲಿತವಾಗಿರುತ್ತಿತ್ತು. ಅದರ ಇನ್ನೊಂದು ವೈಶಿಷ್ಟ್ಯವೆಂದರೆ ದೈವರಾತರು ಮಂತ್ರೋಚ್ಚಾರದ ಕ್ರಮದಿಂದಲೇ ತನ್ಮಂತ್ರಗಳ ಅರ್ಥವು ಶ್ರೋತೃಗಳಿಗೆ

ವಿಶದವಾಗುವ ಅದ್ಭುತ ಮಂತ್ರೋಚ್ಚಾರ ದೈವರಾತರದಾಗಿತ್ತು. ಋಗ್ವೇದವನ್ನು ಬಾಲ್ಯದಲ್ಲಿ ಗೋಕರ್ಣದಲ್ಲಿಯೇ ಕ್ರಮಾಂತವಾಗಿ ಅಧ್ಯಯನ ಮಾಡಿದ ದೈವರಾತರು ಉತ್ತರ ಭಾರತದ ಸಂಚಾರ, ತಪಸ್ಸುಗಳ ನಡುವೆ ಯಜುರ್ವೇದಾಧ್ಯಯನವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ್ದರು. ಶ್ರೀರಮಣಾಶ್ರಮದ ವಾಸ್ತವ್ಯದ ನಡುವೆ ಶಿವಕಾಂಚಿಯಲ್ಲಿ ಸ್ವಲ್ಪಕಾಲದಲ್ಲಿಯೇ ಸಾಮವೇದದ ಅಧ್ಯಯನವನ್ನೂ ಮಾಡಿಕೊಂಡಿದ್ದರು. ಗೋಕರ್ಣದ ಬೀದಿಯಲ್ಲಿ ಓಡಾಡುವಾಗ ಯಾರದೇ ಮನೆಯಿಂದ ಮಂತ್ರೋಚ್ಚಾರದಲ್ಲಿ ವ್ಯತ್ಯಯ ಕೇಳಿಬಂದರೂ ತತ್‌ಕ್ಷಣದಲ್ಲಿ ಹೋಗಿ ಅದನ್ನು ಸರಿಪಡಿಸುವ ಅವರ ವೇದದ ಸ್ವರ–ಉಚ್ಚಾರಗಳ ಮೇಲಿನ ಪ್ರಭುತ್ವ ಅನ್ಯಾದೃಶವಾಗಿತ್ತು. ಇನ್ನು ವೇದಾರ್ಥದ ವಿಚಾರದಲ್ಲಿಯೂ ಅವರದೇ ಆದ ಒಂದು ಧೋರಣೆ ಇತ್ತು. "ಮಂತ್ರಕ್ಕೆ ಯಾವ ಭಾಷ್ಯವೂ ಬೇಡ; ಮಂತ್ರವೇ ತನ್ನ ಅರ್ಥವನ್ನು ತಿಳಿಸಿಕೊಡುತ್ತದೆ. ಮಂತ್ರಕ್ಕೆ ಮಂತ್ರವೇ ಭಾಷ್ಯ" ಎಂದು ದೈವರಾತರು ಹೇಳುತ್ತಿದ್ದರು. ಮಂತ್ರಕ್ಕೆ ಮಂತ್ರವೇ ಅರ್ಥವನ್ನು ತಿಳಿಸಿಕೊಡುತ್ತದೆ–ಆದರೆ ಅದನ್ನು ಪಡೆಯುವದಕ್ಕೆ ವಿಶಿಷ್ಟವಾದ ಅಂತರಂಗದ ಭೂಮಿಕೆ ಸಂಪನ್ನವಾಗಬೇಕು–ಇದು ತಪಸ್ಸಿನಿಂದ ಮಾತ್ರ ಸಾಧ್ಯ ಎಂಬುದು ದೈವರಾತರ ಚರಿತ್ರೆಯಿಂದ ವೇದ್ಯವಾಗುತ್ತದೆ. ಆದ್ದರಿಂದಲೇ ದೈವರಾತರು ವೇದಾರ್ಥಕಲ್ಪಲತಿಕಾ, ವಾಕ್‌ಸುಧಾ ಮುಂತಾದ ವೇದಾರ್ಥಮೀಮಾಂಸೆಯ ಗ್ರಂಥಗಳನ್ನು ಬರೆದಿದ್ದಾರೆ. ಕೇವಲ ವೇದಗಳು ಮಾತ್ರವಲ್ಲ, ವೇದಾಂಗಗಳಾದ ಕಲ್ಪ, ವ್ಯಾಕರಣಾದಿಗಳಲ್ಲಿಯೂ ಅವರು ಪಾರಂಗತರಾಗಿದ್ದರು. ಯಜ್ಞಪ್ರಕ್ರಿಯೆಯಲ್ಲಿ ಅವರು ನಿಷ್ಣಾತರಾಗಿದ್ದರು. ಶಾಸ್ತ್ರ ಮತ್ತು ಯಜ್ಞಗಳ ಸಂಪ್ರದಾಯವನ್ನು ತಮ್ಮದೇ ಆದ ವಿಚಿಕಿತ್ಸಕ ಧೋರಣೆಯಿಂದ ವಿಶ್ಲೇಷಿಸಿ ಅದೇ ರೀತಿಯಲ್ಲಿ ಯಾಗಗಳನ್ನು ಅನುಷ್ಠಾನ ಮಾಡಿದ ಉದಾಹರಣೆಯೂ ಇದೆ. ಅವರು ಸಂಹಿತಾಯಾಗವೊಂದನ್ನು ತಮ್ಮ ಆಶ್ರಮದಲ್ಲಿ ನಡೆಸಿದರು. ಅವರು ಅನುಷ್ಠಾನ ಮಾಡಿದ ವಿಧಾನ ಗೋಕರ್ಣದ ವಿದ್ವಾಂಸರ ಟೀಕೆಗೆ ಒಳಗಾಯಿತು. ಅಷ್ಟೇ ಅಲ್ಲದೆ ಅವರು ಸಂಹಿತಾಯಾಗವನ್ನು ದೈವರಾತರು ಸರಿಯಾದ ವಿಧಾನದಿಂದ ಪುನಃ ಅನುಷ್ಠಾನ ಮಾಡಬೇಕೆಂದು ಸಂಸ್ಕೃತ ವಿದ್ಯಾಪೀಠದ ಅಂದಿನ ಪ್ರಾಚಾರ್ಯರ ಮೂಲಕ ಹೇಳಿಸಿದರು. ಋಗ್ವೇದದ ಸಂಹಿತಾಯಾಗದ ಸಂಪ್ರದಾಯದಂತೆ ಅಷ್ಟಕದಲ್ಲಿ ವಿಲಂಬ ಮಾಡುವ ಕ್ರಮವಿದೆ. ಆದರೆ ದೈವರಾತರು ಮಂಡಲಗಳಲ್ಲಿ ವಿಲಂಬ ಮಾಡುತ್ತ ಐದು ದಿನಗಳಲ್ಲಿ ಸಂಹಿತಾಯಾಗವನ್ನು ಪೂರ್ಣಗೊಳಿಸಿದರು. ಆಕಳ ಹಾಲನ್ನು ಹವಿಸ್ಸಾಗಿ ದೈವರಾತರು ಸ್ವೀಕರಿಸಿದ್ದರು. ದೈವರಾತರ ಅಭಿಪ್ರಾಯದಂತೆ

ಸಂಹಿತಾಯಾಗದಲ್ಲಿ ಯಾವುದೇ ದ್ರವ್ಯವು ವಿಹಿತವಾಗಿಲ್ಲ; ಆದರೆ ತುಪ್ಪ ಮತ್ತು ಎಳ್ಳುಗಳನ್ನು ಹವಿಸ್ಸನ್ನಾಗಿಸಿಕೊಂಡ ಸಂಪ್ರದಾಯವಿದೆಯಷ್ಟೇ; ಅನಾದೇಶ್ಯೇ ಅಜ್ಯಂ ಹವಿಃ ಎಂಬುದಿದ್ದರೂ ಹಾಲು ತುಪ್ಪದ ಪ್ರತಿನಿಧಿಯಾಗಲು ಏನೂ ತೊಂದರೆಯಿಲ್ಲ. ವರ್ಷಂಪ್ರತಿ ಅನುಷ್ಠಾನ ಮಾಡುವ ಉಪಾಕರ್ಮದಲ್ಲಿ ಮಂಡಲಾದಿ ಮತ್ತು ಮಂಡಲಾಂತ್ಯದ ಮಂತ್ರಗಳಿಂದ ಆಹುತಿಕೊಡುವ ವಿಧಿ ಋಗ್ವೇದಿಗಳಲ್ಲಿದೆ. ಆದ್ದರಿಂದ ಮಂಡಲಾಂತ್ಯದಲ್ಲಿಯೇ ವಿಲಂಬ ಮಾಡಬೇಕು; ಅಷ್ಟಕದ ಕ್ರಮ ಅಧ್ಯಯನ ಸೌಕರ್ಯಕ್ಕೆ ಮಾಡಿಕೊಂಡದ್ದು ಎಂದು ದೈವರಾತರು ಸಶಾಸ್ತ್ರೀಯವಾಗಿ ಸತರ್ಕಬದ್ಧವಾಗಿ ಸಮರ್ಥಿಸಿಕೊಂಡರು.

ಕೃಷ್ಣಯಜುರ್ವೇದದ ಸಂಹಿತಾಯಾಗದ ಕ್ರಮ ಬಹಳ ಮೊದಲಿನಿಂದ ಇರಲಿಲ್ಲ. ಮಂತ್ರ ಬ್ರಾಹ್ಮಣಗಳೆರಡೂ ಕೃಷ್ಣಯಜುರ್ವೇದದಲ್ಲಿ ಮಿಶ್ರವಾಗಿಯೇ ಇವೆ. ಆದ್ದರಿಂದ ಕೃಷ್ಣಯಜುರ್ವೇದಕ್ಕೆ ಸ್ವಾಹಾಕಾರ ಕ್ರಮ ಇರಲಿಲ್ಲ. ಸಂಹಿತಾ ಭಾಗವನ್ನು ಬ್ರಾಹ್ಮಣಭಾಗದಿಂದ ಬೇರ್ಪಡಿಸಿ ಕೃಷ್ಣಯಜುರ್ವೇದದ ಮಂತ್ರಗಳಿಗೆ ಸ್ವಾಹಾಕಾರವನ್ನು ಕಲ್ಪಿಸುವಲ್ಲಿ ದೈವರಾತರ ಕೊಡುಗೆ ಅಪೂರ್ವವಾದದ್ದು. ದೈವರಾತರ ನೇತೃತ್ವದಲ್ಲಿ ಗೋಕರ್ಣದ ವಿದ್ವಾಂಸರು ಈ ಕೆಲಸವನ್ನು ಮಾಡಿದರು. ಈ ಪ್ರಕಾರ ಕೃಷ್ಣಯಜುರ್ವೇದದ ಸಂಹಿತಾಯಾಗದ ಕ್ರಮ ರೂಢಿಗೆ ಬಂದದ್ದು ಈಗ ಇತಿಹಾಸ.

ವೇದವಾಙ್ಮಯದ ಸಮಗ್ರ ಅಧ್ಯಯನ, ಅಧ್ಯಾಪನ, ತದುದಿತವಾದ ಕರ್ಮಗಳ ಸ್ವಾನುಷ್ಠಾನ ಮತ್ತು ಮಂತ್ರಗಳ ವ್ಯಾಖ್ಯಾನ ಇವೆಲ್ಲವುಗಳ ಮೇಲೆ ಕಲಶವಿಟ್ಟಂತೆ ದೈವರಾತರು ನೂತನ ಮಂತ್ರ ದೃಷ್ಟಾರರಾಗಿರುವದು ವಿಶೇಷವಾಗಿದೆ. ಅಷ್ಟೇ ಅಲ್ಲ; ಲೋಕದಲ್ಲಿ ಮಂತ್ರದೃಷ್ಟಾರರಿದ್ದಾರೆ-ಆದರೆ ಅಂತಹ ಋಷಿಗಳು ಯಾರೂ ಮಂತ್ರಭಾಷ್ಯಕಾರರಲ್ಲ. ಸಾಯಣರಂತಹ ಮಂತ್ರಭಾಷ್ಯಕಾರರು ಮಂತ್ರದೃಷ್ಟಾರರಲ್ಲ, ಆದರೆ ಬ್ರಹ್ಮರ್ಷಿ ದೈವರಾತರು ಮಂತ್ರದೃಷ್ಟಾರರೂ ಆಗಿದ್ದಾರೆ. ಮಂತ್ರ ಭಾಷ್ಯಕಾರರೂ ಆಗಿರುವುದು ಅತೀವ ವಿಶೇಷವಾಗಿದೆ. ಇನ್ನೂ ವಿಶೇಷವೆಂದರೆ ದೈವರಾತರು ಪ್ರಾಚೀನ ವೇದಮಂತ್ರಗಳಿಗೆ ಮಾತ್ರ ವ್ಯಾಖ್ಯಾನವನ್ನು ಬರೆದವರಲ್ಲ, ತಾವೇ ತಮ್ಮ ತಪಸ್ಸಮಾಧಿಯ ಉತ್ತುಂಗ ಸ್ಥಿತಿಯಲ್ಲಿ ಕಂಡ ಮಂತ್ರಗಳಿಗೂ ವ್ಯಾಖ್ಯಾನ ಮಾಡಿದ್ದು ಅಪೂರ್ವವಾದದ್ದಾಗಿದೆ. ಮೊದಲೇ ಮಾಡಿಕೊಂಡ ಸಿದ್ಧಾಂತಗಳಿಗೆ ಸರಿಯಾಗಿ ವೇದ-ಮಂತ್ರಗಳಿಗೆ ಅರ್ಥವನ್ನು ಎಳೆದು ಹಚ್ಚುವ ಉದ್ಯೋಗ ದೈವರಾತರಿಗೆ ಸರಿಯೆನಿಸುವುದಿಲ್ಲ. "ನಾವು ಋಷಿಗಳ ಮಾತುಗಳಿಗೆ ಅವರು ಭಾವಿಸಿದ ಅರ್ಥವನ್ನು ಹೇಳಬೇಕಲ್ಲದೆ ನಮ್ಮ ಸಿದ್ಧಾಂತಕ್ಕೆ ಸರಿಯಾಗಿ ಅದನ್ನು ತಿರುಗಿಸಬಾರದು" ಎಂದು ಹೇಳುತ್ತಿದ್ದರು. ಪೂರ್ವಿಕರ ಭಾಷ್ಯವನ್ನು ಕರತಲಾಮಲಕವಾಗಿ ಮಾಡಿಕೊಳ್ಳದೆ ವೇದಗಳಿಗೆ ಅರ್ಥ ಹೇಳಹೋಗುವದು ದಾರ್ಷ್ಟ್ಯವಲ್ಲವೇ ಎಂದೊಮ್ಮೆ ಕಾಶಿಯಲ್ಲಿ ಪಂಡಿತ ಮದನಮೋಹನ ಮಾಲವೀಯರು ಅವರಿಗೆ ಕೇಳಿದರು. "ಮಂತ್ರಗಳ ಅರ್ಥ ಮಾಡಲು ಭಾಷ್ಯಗಳಲ್ಲ; ಆಯಾ ಋಷಿಯ ಹೃದಯಜ್ಞಾನ ಆಗಬೇಕು. ಅದು ಸಾಧನೆಯಿಂದ ಮಾತ್ರ ಪ್ರಾಪ್ತವಾಗುವಂತಹದು. ಯಾವ ಋಷಿ ಎಲ್ಲೆಲ್ಲಿ ಏನೇನು ಹೇಳಿದ್ದಾನೆಂಬ ಬಗ್ಗೆ ಸದಾ ಮನೋಜಾಗೃತಿ ಬೇಕು" ಎಂದು ದೈವರಾತರು ಉತ್ತರಿಸಿದರು. ಆ ಸಾಧನೆ ದೈವರಾತರಿಗಿದೆ. ಒಂದು ಕ್ಲಿಷ್ಟ ಪದದ ಅರ್ಥವನ್ನು ಯಾರೂ ಗಮನಿಸಿರದ ಇನ್ನೊಂದು ಋಷಿವಾಕ್ಯದ ಜ್ಞಾಪಕದಿಂದ ಅವರು ಬೆಳಗಿಸಬಲ್ಲರು -ಇದು ದೈವರಾತರ ವೇದಮಂತ್ರಗಳ ಜಿಜ್ಞಾಸೆಯ ವಿಚಾರದಲ್ಲಿ ಕಂಡ ದರ್ಶನ.

ವೈದಿಕ ರಹಸ್ಯಗಳನ್ನು ಅನಾವರಣಗೊಳಿಸುವ, ವಿವರಿಸುವ ದುರ್ಗಾ, ಪಶುಪತಿ, ವಿಶ್ವರಥಗಳೇ ಮುಂತಾದ ಚಿತ್ರ, ನಕ್ಷೆ ಮತ್ತು ಯಂತ್ರಗಳನ್ನು ದೈವರಾತರು ಚಿತ್ರಿಸಿದ್ದಾರೆ. ನೇಪಾಲದಲ್ಲಿದ್ದಾಗ ಒಮ್ಮೆ ರಚಿಸಿದ ವಿಶ್ವರಥ ಎಂಬ, ಋಗ್ವೇದ ಮಂತ್ರವೊಂದನ್ನು ಆಧರಿಸಿದೆ ಎಂದು ಹೇಳಲಾಗುವ ಚಿತ್ರಪಟ ಸರಿಸುಮಾರು ನೂರಕ್ಕೂ ಹೆಚ್ಚು ಚೌರಸ್ ಅಡಿಗಳ ವಿಸ್ತಾರವಿರುವ ಬೃಹತ್ ಗಾತ್ರದ ಚಿತ್ರಪಟ. ಹೆಸರೇ ಸೂಚಿಸುವಂತೆ ಸ್ಥಾವರ ಜಂಗಮಾತ್ಮಕವಾದ ಸಮಸ್ತ ಪ್ರಪಂಚವೇ ಬೃಹತ್ ಗಾತ್ರದ ರಥದೊಂದಿಗೆ ವಿವಿಧ ವರ್ಣಗಳ ಸಾಮರಸ್ಯದ ಸಂಯೋಜನೆಯೊಂದಿಗೆ ಚಿತ್ರಿತವಾಗಿದೆ. ಅದನ್ನು ಸಮಗ್ರವಾಗಿ ವಿವರಿಸಲು ಪ್ರಾಯಃ ದೈವರಾತರು ಮಾತ್ರ ಸಮರ್ಥರಾಗಿರಬೇಕು.

ದೈವರಾತರ ಈ ಅಸಾಧಾರಣ ವೈದಿಕ ವಿದ್ವತ್ತಿನ ಪ್ರಭಾವ ವರ್ಷ ಕಳೆದಂತೆ ದೇಶಾದ್ಯಂತ ಹರಡಿದ್ದು ಸಹಜವೇ ಆಗಿತ್ತು. ಅದರಿಂದ ದೇಶದ ನಾನಾಭಾಗಗಳಿಂದ ವೇದ ಸಮ್ಮೇಲನಗಳಿಗೆ ಮತ್ತು ಸಂಸ್ಕೃತ ಸಮ್ಮೇಲನಗಳಿಗೆ ಆಮಂತ್ರಣಗಳು ಬರತೊಡಗಿದವು. ೧೯೩೯ನೆಯ ಇಸ್ವಿಯಲ್ಲಿ ದೈವರಾತರು ಜಗನ್ನಾಥಪುರಿಯಲ್ಲಿ ನಡೆದ ಆರನೆಯ ವಿಶ್ವಸಂಸ್ಕೃತ ಸಮ್ಮೇಲನದಲ್ಲಿ ನೀಡಿದ ವೇದ ಸಂದೇಶ ಅಲ್ಲಿ ನೆರೆದಿದ್ದ ವಿದ್ವಾಂಸರಲ್ಲಿ ವೇದದ ಬಗೆಗೆ ಸಂಚಲನವನ್ನೇ ಉಂಟುಮಾಡಿತು.

೧೯೬೩ನೆಯ ಇಸ್ವಿಯ ನವಂಬರದಲ್ಲಿ ಕಾಶಿಯ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಒಂದು ವೇದಸತ್ರ ನಡೆಯಿತು. ಅದರಲ್ಲಿ ದೈವರಾತರು

ವಿಶೇಷ ಆಮಂತ್ರಿತರಾಗಿ ಭಾಗವಹಿಸಿದರು. ಅಲ್ಲಿ ದೈವರಾತರು ವೇದವಿಚಾರವನ್ನು ಪ್ರಗಲ್ಭವಾಗಿ ಮಂಡಿಸಿದರು. ಅದರಿಂದ ಪ್ರಭಾವಿತರಾದ ಆ ವಿಶ್ವವಿದ್ಯಾಲಯದ ಭಾರತೀಯ ಶಾಸ್ತ್ರದ ಪ್ರಾಧ್ಯಾಪಕರೂ, ವೈದಿಕ ಅಭ್ಯಾಸಗಳ ನಿರ್ದೇಶಕರೂ ಆಗಿದ್ದ ಡಾ. ವಾಸುದೇವಶರಣ ಅಗರವಾಲರು ಇಂಥ ವೈದಿಕ ವಿದ್ವಾಂಸರು ಇಂದು ಕೂಡ ನಮ್ಮ ನಡುವೆ ಇರುವದು ಅಪ್ರತಿಮವಾಗಿದೆ ಎಂದು ಪ್ರಶಂಸಿಸಿದರು.

೧೯೬೪ನೆಯ ಇಸ್ವಿಯ ಜನವರಿಯಲ್ಲಿ ತಿರುಪತಿಯಲ್ಲಿ ನಡೆದ ವೇದ ಸಮ್ಮೇಲನದಲ್ಲಿ ದೈವರಾತರು ಭಾಗವಹಿಸಿದ್ದರು. ಅದೇ ವರ್ಷ ನವಂಬರ ತಿಂಗಳಿನಲ್ಲಿ ದಿಲ್ಲಿಯಲ್ಲಿ ನಡೆದ ವೇದ ಸಮ್ಮೇಲನ ದೈವರಾತರಿಗೆ ಅಧ್ಯಕ್ಷ ಪದವಿಯನ್ನು ಕೊಟ್ಟು ಅವರನ್ನು ಗೌರವಿಸಿತು. ಅಂದಿನ ಕೇಂದ್ರ ಸರ್ಕಾರದ ಅರ್ಥಮಂತ್ರಿಗಳಾಗಿದ್ದ ಟಿ.ಟಿ.ಕೃಷ್ಣಮಾಚಾರಿಯವರು ಉದ್ಘಾಟಿಸಿದ ಈ ಸಮ್ಮೇಲನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಲಾಲಬಹಾದ್ದೂರ ಶಾಸ್ತ್ರೀಯವರು ಅಲಂಕರಿಸಿದ್ದರು.

ಮದ್ರಾಸದಲ್ಲಿ ನಡೆದ ವೈದಿಕ ಸಮ್ಮೇಲನ ಮತ್ತು ೧೯೬೬ನೇ ಇಸ್ವಿಯಲ್ಲಿ ಕುಂಭಕೋಣಂನಲ್ಲಿ ನಡೆದ ವೇದಿಕ ಸಮ್ಮೇಲನಗಳಲ್ಲಿ ದೈವರಾತರು ಭಾಗವಹಿಸಿ ವೇದಸೂರ್ಯನ ಜ್ಞಾನಪ್ರಕಾಶವನ್ನು ವೈದಿಕ ಪ್ರಪಂಚದಲ್ಲಿ ಬೆಳಗಿದರು. ಬ್ರಹ್ಮರ್ಷಿ ದೈವರಾತರ ಕೀರ್ತಿ ದೇಶದ ಉದ್ದಗಲಗಳಲ್ಲಿ ಆಗಲೇ ಬೆಳಗಿಸಿತ್ತು. ಇದರ ಪರಿಣಾಮವೇ ಸಂಸ್ಕೃತ ಸಮ್ಮೇಲನಗಳಲ್ಲಿಯೂ ಅವರು ಭಾಗವಹಿಸುವಂತೆ ಅಭ್ಯರ್ಥನಾ ಪತ್ರಗಳು ಬರತೊಡಗಿದವು. ಈಶಾನ್ಯ ಭಾರತದ ಗೌಹಾತಿಯಲ್ಲಿ ನಡೆದ ಓರಿಯಂಟಲ್ ಕಾನ್ಫೆರನ್ಸನಲ್ಲೂ ದೈವರಾತರು ಭಾಗವಹಿಸಿದ್ದು ಇದಕ್ಕೆ ಸಾಕ್ಷಿಯಾಗಿದೆ.

ದೇಶದ ಯಾವುದೇ ಮೂಲೆಯಲ್ಲಿ ಸಂಸ್ಕೃತ ಭಾಷಾಸಂಬಂಧೀ ಕಲಾಪಗಳು ನಡೆದರೆ ಅಲ್ಲಿ ದೈವರಾತರ ಉಪಸ್ಥಿತಿ ಇರಲೇಬೇಕು ಎನ್ನುವಷ್ಟಕ್ಕೆ ದೈವರಾತರ ವ್ಯಕ್ತಿತ್ವ ಪ್ರಸಿದ್ಧವಾಗಿತ್ತು. ಅದರಿಂದಾಗಿ ವಿಶೇಷ ಆಮಂತ್ರಿತರಾಗಿ ದೈವರಾತರು ೧೯೭೦ರ ಮಾರ್ಚ ತಿಂಗಳಿನಲ್ಲಿ ದಿಲ್ಲಿಯಲ್ಲಿ ನಡೆದ ಶ್ರೀ ಲಾಲಬಹಾದ್ದೂರ ಶಾಸ್ತ್ರಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ತೃತೀಯ ದೀಕ್ಷಾಂತ ಸಮಾರೋಹದಲ್ಲಿ ಭಾಗವಹಿಸಿದ್ದರು. ಆ ಸಮಾರಂಭದಲ್ಲಿ ಮಾನ ಪತ್ರವೊಂದನ್ನು ಸಮರ್ಪಿಸಿ ಅವರನ್ನು ಸತ್ಕರಿಸಲಾಯಿತು. ಅದರಂತೆಯೇ ೧೯೭೨ರಲ್ಲಿ ವಾರಣಾಸಿಯಲ್ಲಿ ನಡೆದ ಸಂಸ್ಕೃತ ಕವಿ ಸಮ್ಮೇಲನದಲ್ಲಿಯೂ ಮಾನಪತ್ರದೊಂದಿಗೆ ದೈವರಾತರನ್ನು ಸಮ್ಮಾನಿಸಿದರು.

೧೯೬೪ನೇ ಇಸ್ವಿಯಲ್ಲಿ ದಿಲ್ಲಿಯಲ್ಲಿ ನಡೆದ ವೇದ ಪರಿಷತ್ತಿನಲ್ಲಿ ದೈವರಾತರಿಗೆ 'ವಿದ್ಯಾ-ವಾಚಸ್ಪತಿ' ಎಂಬ ಬಿರುದಿನೊಂದಿಗೆ ಮಾನಪತ್ರದ ಅರ್ಪಣೆಯನ್ನು ಶ್ರೀ ಲಾಲ ಬಹಾದ್ದೂರ ಶಾಸ್ತ್ರಿಯವರು ಮಾಡಿದರೆ ೧೯೬೬ನೇ ಇಸ್ವಿಯಲ್ಲಿ ಮುಂಬೈಯಲ್ಲಿ ಇರುವ ಭಾರತೀಯ ವಿದ್ಯಾಭವನವು ಅವರನ್ನು 'ವೇದ-ವಾಚಸ್ಪತಿ' ಎಂಬ ಬಿರುದಿನೊಂದಿಗೆ ಸನ್ಮಾನಿಸಿತು. ಹೀಗೆ ಬಿರುದುಗಳೂ ಅವರನ್ನು ಹುಡುಕಿಕೊಂಡು ಬಂದವು.

ದೈವರಾತರ ಜೀವನ ವೇದಮಯವಾಗಿತ್ತು. ಪ್ರಾಚೀನ ವೇದಗಳ ಅಧ್ಯಯನ-ಅಧ್ಯಾಪನ, ವೇದೋದಿತವಾದ ಕರ್ಮಾನುಷ್ಠಾನಗಳು, ವೇದಮಂತ್ರೋಪಾಸನೆ, ತಪಸ್ಸುಗಳು ದೈವರಾತರ ಜೀವನದ ಅವಿಭಾಜ್ಯ ಅಂಗಗಳಾಗಿದ್ದವು. ವೇದೋಚ್ಚಾರಕ್ಕೆ ಬೇಕಾದ ಮೊಳಗುವ ಧ್ವನಿ ಅಪ್ರತಿಮವಾಗಿತ್ತು. ಸಂದರ್ಭ ಯಾವುದೇ ಇರಲಿ, ದೈವರಾತರು ಅದನ್ನು ವೇದಮಂತ್ರದಿಂದಲೇ ಅಲಂಕರಿಸಿ ವಾತಾವರಣವನ್ನೇ ಅಲೌಕಿಕವನ್ನಾಗಿ ಮಾಡುತ್ತಿದ್ದರು. ಒಮ್ಮೆ ಕುಮಟಾ ತಾಲೂಕಿನ ಮಾರೂರಿನಲ್ಲಿ ದೈವರಾತರು ರಾಷ್ಟ್ರೀಯ ಹಬ್ಬವೊಂದರಲ್ಲಿ ಧ್ವಜಾರೋಹಣದ ಸಂದರ್ಭದಲ್ಲಿ "ಪೃಥಿವೀ ಶಾಂತಾ, ದ್ಯೌಃ ಶಾಂತಾ.." ಎಂಬ ಯಜುರ್ವೇದಮಂತ್ರವನ್ನು ಹೇಳಿ ನೆರೆದವರಲ್ಲಿ ವಿದ್ಯುತ್ಸಂಚಾರವನ್ನುಂಟು ಮಾಡಿದ್ದರು. ಗಾಯತ್ರೀ ಮಂತ್ರ ಮತ್ತು ದೈವರಾತರಂತೂ ಬೇರೆ ಬೇರೆ ಇರಲೇ ಇಲ್ಲವೆಂಬಷ್ಟು ಸದಾ ಸರ್ವದಾ ಗಾಯತ್ರೀ ಮಂತ್ರೋಪಾಸಕರಾಗಿದ್ದರು. ಪ್ರಾಚೀನ ವೇದೋಪಾಸಕರಾಗಿ ಅರ್ವಾಚೀನ ಅಥವಾ ನೂತನ ಮಂತ್ರಗಳ ಅದ್ವಿತೀಯ ದೃಷ್ಟಾರರಾಗಿ, ಪ್ರಾಚೀನ ಮತ್ತು ನೂತನ ಮಂತ್ರಗಳೆರಡಕ್ಕೂ ಪ್ರಗಲ್ಭ ಭಾಷ್ಯಕಾರರೂ ವ್ಯಾಖ್ಯಾನಕಾರರೂ ಆದ ದೈವರಾತರು ಅಕ್ಷರಶಃ ನಡೆದಾಡುವ ವೇದವೇ ಆಗಿದ್ದರು. ಆಮರಣ ಪರ್ಯಂತ ಅವರಲ್ಲಿ ಸಮಗ್ರ ವೇದವಾಙ್ಮಯ ಹಸಿರಾಗಿತ್ತು. ವೇದ ಅವರ ಉಸಿರೇ ಆಗಿತ್ತು.

೨. ಮಹಾಪುರುಷರ ಸಂಗಮ

ಹಲವು ಜನ್ಮಗಳಲ್ಲಿ ಸಂಚಯಿಸಿದ ಪುಣ್ಯದ ಮಹಾಪೂರದಿಂದಲೇ ಆದದ್ದಿರಬೇಕು ದೈವರಾತರ ಜನ್ಮ. ಅದರಿಂದಾಗಿ ದೈವರಾತರು ಬಾಲ್ಯದಿಂದಲೂ ಸತ್ಪುರುಷರನ್ನು, ಸಂತರನ್ನು, ವಿಭೂತಿಪುರುಷರನ್ನು ಮತ್ತು ಮಹಾತ್ಮರನ್ನು ಸಂಶ್ರಯಿಸಿದರು. ತಾವೂ ವಿಭೂತಿಪುರುಷರೇ ಆದರು. ದೈವರಾತರ ಆಚಾರ್ಯ ಪರಂಪರೆಯೇ ಇದಕ್ಕೆ ಪರಮ ಪ್ರಮಾಣವಾಗಿದೆ.

ಸಂತ ರಾಮದಾಸರು ಭಕ್ತಿ ಪಂಥಕ್ಕೆ ಸೇರಿದವರಾಗಿದ್ದು ತನ್ಮೂಲಕ ಸಮಾಧಿ ಸಿದ್ಧಿಯನ್ನು ಸಾಧಿಸಿಕೊಂಡ ಪರಮಯೋಗಿಗಳೇ ಆಗಿದ್ದರು. ಕಾವ್ಯಕಂಠ ಗಣಪತಿ ಮುನಿಗಳ ವ್ಯಕ್ತಿತ್ವ ಪರಮ ಪಾವನವಾದದ್ದಾಗಿತ್ತು. ಶ್ರೀ ರಮಣ ಮಹರ್ಷಿಗಳು ಅರುಣಾಚಲದ ಸಿದ್ಧರೂ ಆತ್ಮಜ್ಞಾನಿಗಳೂ ಆದವರು. ಇನ್ನು ಟೇಂಬೇ ಮಹಾರಾಜರೆಂದೇ ಪ್ರಖ್ಯಾತರಾದ ವಾಸುದೇವಾನಂದ ಸರಸ್ವತೀ ಸ್ವಾಮಿಗಳು ದೇಶದಲ್ಲೆಲ್ಲ ಪ್ರಸಿದ್ಧರಾದ ಯೋಗಿಗಳು, ತಪಸ್ವಿಗಳು. ದೈವರಾತರಿಗೆ ಬಾಲ್ಯದಲ್ಲಿ ಸಮರ್ಥವಾಗಿ ಮಾರ್ಗದರ್ಶನ ಮಾಡಿ ಬೆಳಗಿಸಿದ ದೈವರಾತರ ಸ್ವತಃ ತಂದೆ ತಾಯಿಗಳಾದರೋ ವಿದ್ಯೆ, ಭಕ್ತಿ, ಅಸ್ತಿಕ್ಯ, ವಿನಯಗಳಂತಹ ಸುಂದರವಾದ ಗುಣಗಣದಿಂದ ಕೂಡಿದವರಾಗಿದ್ದರು. ದೈವರಾತರು ಇಂತಹ ದಿವ್ಯ ಆಚಾರ್ಯ ಪರಂಪರೆಯನ್ನೆ ಹೊಂದಿ ಲೋಕೋತ್ತರವಾದ ದಿವ್ಯಾನುಭವಗಳನ್ನು ಹೊಂದಿದರು. ಇದಕ್ಕೆ ಹೊರತಾಗಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಖಂಡದಲ್ಲಿ ದೈವರಾತರು ತಮ್ಮ ಮಂತ್ರದರ್ಶನೋತ್ತರ ಜೀವಿತಾವಧಿಯಲ್ಲಿ ಹಲವು ಗಣ್ಯ ರಾಷ್ಟ್ರನಾಯಕರ ಮೇಲೆ ತಮ್ಮ ಪ್ರಭಾವವನ್ನು ಬೀರಿದರು. ದೇಶದ ಹೊರಗೂ ಅವರ ಪ್ರಭಾವ ಇತ್ತು. ಅವರು ಆಶ್ರಮ ಸ್ಥಾಪನೆ ಮಾಡಿದ ಮೇಲೆ ಸಕಲವಿಧದಲ್ಲಿಯೂ ಆಶ್ರಮವನ್ನು ನಿರ್ವಹಿಸಲು ಏರ್ಪಾಡನ್ನು ಮಾಡಿ ವರ್ಷಾನುಗಟ್ಟಲೆ ಅವರು ದೇಶದ ಒಳಗೂ ಹೊರಗೂ ಪ್ರವಾಸ ಮಾಡುತ್ತಲೇ ಇರುತ್ತಿದ್ದರು. ಒಂದೇ ಸ್ಥಾನದಲ್ಲಿ ನಿಲ್ಲುವ ಜಾಯಮಾನ ಅವರದಲ್ಲವಾಗಿತ್ತು. ವಾರಣಾಸಿ, ದಿಲ್ಲಿ, ಮುಂತಾದ ಊರುಗಳಲ್ಲದೇ ನೇಪಾಲಕ್ಕೆ ಹೋಗಿ ದೀರ್ಘಕಾಲ ವಾಸಮಾಡಿಕೊಂಡಿರುತ್ತಿದ್ದರು. ನೇಪಾಲದ ಆ ಕಾಲದ ಸಮಗ್ರ ರಾಜವಂಶದ ಮತ್ತು ಪರಿವಾರದ ನಿಕಟ ಸಂಪರ್ಕ ದೈವರಾತರಿಗಿತ್ತು. ದೈವರಾತರ ಸಂಪರ್ಕದಿಂದಾಗಿಯೇ ಪ್ರಸಿದ್ಧ ಪಶುಪತಿನಾಥ ದೇವಾಲಯದ ದಕ್ಷಿಣ ದ್ವಾರದ ಅರ್ಚಕರಾಗಿ ಗೋಕರ್ಣದವರು ನಿಯುಕ್ತಿಗೊಳ್ಳುವಂತಾಯಿತು. ನೇಪಾಲದ ವಾಸದಲ್ಲಿಯೇ 'ವಿಶ್ವರಥ' ದಂತಹ ಬೃಹತ್ ಚಿತ್ರಪಟವನ್ನು ದೈವರಾತರು ನಿರ್ಮಿಸಿದ್ದು, ನೇಪಾಲದಲ್ಲಿದ್ದ ಮಹಾತ್ಮರಾದ ಶಿವಪುರಿ ಸ್ವಾಮಿಗಳ ಸಂಪರ್ಕ ಸಾನ್ನಿಧ್ಯವನ್ನು ದೈವರಾತರು ಅನಾಯಾಸವಾಗಿ ಹೊಂದುವಂತಾದದ್ದು ನೇಪಾಲವಾಸದ ವಿಶೇಷ.

ದೈವರಾತರಿಗೆ ಪಂಡಿತ ಮದನ ಮೋಹನ ಮಾಲವೀಯ ಅವರ ಪರಿಚಯವಾದದ್ದು ವಾರಣಾಸಿಯಲ್ಲಿ, ಅದೂ ಆಕಸ್ಮಿಕವಾಗಿ. ದೈವರಾತರು ನೇಪಾಲದಿಂದ ಮರಳಿ ಗೋಕರ್ಣಕ್ಕೆ ಬರುವಾಗ ಒಮ್ಮೆ ವಾರಣಾಸಿಯಲ್ಲಿ

ರಾಜರ್ಷಿ ಮಹಾರಾಜ ಜಡ್ಡಾ ಸಮೀರ ಎಂಬ ಸಂತರ ಅತಿಥಿಗಳಾಗಿ ಕೆಲಕಾಲ ಅವರ ಮನೆಯಲ್ಲಿ ತಂಗಿದ್ದರು. ಆ ಸಂದರ್ಭದಲ್ಲಿಯೇ ಪಂಡಿತ ಮದನ ಮೋಹನ ಮಾಲವೀಯರ ಸಂಪರ್ಕ ದೈವರಾತರಿಗೆ ಉಂಟಾಯಿತು. ಮೊದಲನೆಯ ಭೇಟಿಯೇ ಮಾಲವೀಯರ ಮೇಲೆ ದೈವರಾತರ ಗಾಢ ಪ್ರಭಾವವನ್ನುಂಟುಮಾಡಿತು. ಮುಂದೆ ದೈವರಾತರು ಬನಾರಸ್ ಹಿಂದು ವಿಶ್ವವಿದ್ಯಾನಿಲಯದ ನಿಕಟ ಸಂಪರ್ಕ ಹೊಂದುವದಕ್ಕೆ ಮತ್ತು ವಾರಣಾಸಿ ಮತ್ತು ಹಿಂದು ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಲ್ಪಟ್ಟ ಹಲವು ಸಂಸ್ಕೃತ ಸಂಬಂಧೀ ಚಟುವಟಿಕೆಗಳಲ್ಲಿ ಪಾಲ್ಗೊಂಡು ಸಮರ್ಥವಾಗಿ ಮಾರ್ಗದರ್ಶನ ಮಾಡುವದಕ್ಕೆ ಇದು ನಾಂದಿಯಾಯಿತು. ೧೯೩೫ನೇ ಇಸ್ವಿಯಲ್ಲಿ ಮಾಲವೀಯರ ಸಹಾಯದಿಂದ ದೈವರಾತರು ಹಿಂದು ವಿಶ್ವವಿದ್ಯಾನಿಲಯದಲ್ಲಿ ಎರಡು ತಿಂಗಳಕಾಲ ವಾಸಮಾಡಿದ್ದುಕೊಂಡು ಗ್ರಂಥ ರಚನೆ ಮಾಡುವದಕ್ಕೂ ನಿಮಿತ್ತವಾಯಿತು. ಈ ಎಲ್ಲ ಹಿನ್ನೆಲೆಗಳೇ ಹಿಂದು ವಿಶ್ವವಿದ್ಯಾನಿಲಯದಿಂದ ದೈವರಾತರ ಮೂರು ಗ್ರಂಥಗಳು ಪ್ರಕಟವಾಗಿ ಲೋಕಾರ್ಪಿತವಾಗುವದಕ್ಕೂ ಕಾರಣವಾದವು. ದೈವರಾತರು ದಿವಂಗತರಾಗುವದಕ್ಕೆ ಸ್ವಲ್ಪ ವರ್ಷ ಮೊದಲು ಅಂದರೆ ೧೯೭೧ನೇ ಇಸ್ವಿಯಲ್ಲಿ ವಾರಣಾಸಿಯಲ್ಲಿ ನಡೆದ ಸಂಸ್ಕೃತ ಕವಿ ಸಮ್ಮೇಲನದಲ್ಲಿ ಭಾಗವಹಿಸಿದಾಗ ಅವರಿಗೆ ಮಾನಪತ್ರ ಅರ್ಪಣೆಯೊಂದಿಗೆ ನಾಗರಿಕ ಸನ್ಮಾನವನ್ನು ನೀಡಲಾಯಿತು ಎಂಬುದನ್ನಿಲ್ಲಿ ಸ್ಮರಿಸಬಹುದಾಗಿದೆ.

ಬಿಹಾರದಲ್ಲಿ ದೈವರಾತರು ಪ್ರವಚನ ಕಾರ್ಯಕ್ರಮಗಳಿಗಾಗಿ ಪ್ರವಾಸ ಮಾಡುತ್ತಿದ್ದಾಗ ಅಂತಹ ಒಂದು ಪ್ರವಚನ ಗೋಷ್ಠಿಯಲ್ಲಿ ಅವರಿಗೆ ಡಾ. ರಾಜೇಂದ್ರ ಪ್ರಸಾದರ ಭೇಟಿಯಾಯಿತು. ಆಗಿನ್ನೂ ದೇಶಕ್ಕೆ ಸ್ವಾತಂತ್ರ್ಯ ಬಂದಿರಲಿಲ್ಲ. ರಾಜೇಂದ್ರ ಪ್ರಸಾದರು ಬಿಹಾರದ ಅಗ್ರ ಸ್ವಾತಂತ್ರ್ಯ ನೇತಾರರಲ್ಲಿ ಒಬ್ಬರಾಗಿದ್ದರು. ಮುಝಫ್ಫರಪುರದಲ್ಲಿ ನಡೆದ ಒಂದು ಸಮಾವೇಶದಲ್ಲಿ ನಡೆದ ಮೊದಲ ಸಮಾಗಮದಲ್ಲಿಯೇ ರಾಜೇಂದ್ರ ಪ್ರಸಾದರು ದೈವರಾತರ ಪ್ರಭಾವಕ್ಕೆ ಒಳಗಾದರು. ಕ್ರಮವಾಗಿ ಆ ಪರಿಚಯ ಆತ್ಮೀಯವಾಗಿ ಪರಿಣಮಿಸಿತು. ರಾಜೇಂದ್ರ ಪ್ರಸಾದರು ದೈವರಾತರಿಗೆ ಮುಂಬೈಯಲ್ಲಿ ಮಹಾತ್ಮಾ ಗಾಂಧೀಜಿಯವರ ಭೇಟಿ ಮಾಡಿಸಿದರು. ಆಗ ಜಮುನಾಲಾಲ ಬಜಾಜ ಸಹ ಅವರ ಜೊತೆಗಿದ್ದರು. ಮಹಾತ್ಮಾ ಗಾಂಧೀಜಿಯವರು ದೈವರಾತರ ಪೂರ್ವೋತ್ತರಗಳನ್ನು ರಾಜೇಂದ್ರ ಪ್ರಸಾದರಿಂದ ತಿಳಿದುಕೊಂಡು ದೈವರಾತರು ಶ್ರೀರಮಣ ಮಹರ್ಷಿಗಳ ನಿಕಟ ಸಂಬಂಧ ಹೊಂದಿರುವ ಮಹರ್ಷಿಗಳ ಶಿಷ್ಯರಲ್ಲೊಬ್ಬರು ಎಂಬ ವಿಷಯ ಅರಿತ ಮೇಲೆ ತಾವು ಹೋರಾಡುತ್ತಿರುವ

ಸ್ವಾತಂತ್ರ್ಯ ಸಂಗ್ರಾಮಕ್ಕೆ ಆಶೀರ್ವಾದವನ್ನು ಕೋರಿ ತಮ್ಮ ಪರವಾಗಿ ಮಹರ್ಷಿಗಳನ್ನು ಪ್ರಾರ್ಥಿಸುವಂತೆ ದೈವರಾತರನ್ನು ಕೇಳಿಕೊಂಡರು. ದೈವರಾತರು ಸದ್ಯವೇ ಮಹಾತ್ಮಾ ಗಾಂಧೀಜಿಯವರ ಕೋರಿಕೆಯನ್ನು ನೆರವೇರಿಸಿ ಕೊಡುವದಕ್ಕೆ ರಾಜೇಂದ್ರ ಪ್ರಸಾದರನ್ನು ಮುಂದಿಟ್ಟುಕೊಂಡು ಶ್ರೀ ರಮಣಾಶ್ರಮಕ್ಕೆ ತೆರಳಿದ್ದರು. ದೈವರಾತರ ಮತ್ತು ರಾಜೇಂದ್ರ ಪ್ರಸಾದರ ಸ್ನೇಹಸಂಬಂಧ ಚಿರಕಾಲದ ವರೆಗೂ ಉಳಿಯಿತು. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ರಾಜೇಂದ್ರ ಪ್ರಸಾದರು ರಾಷ್ಟ್ರದ ಪ್ರಪ್ರಥಮ ರಾಷ್ಟ್ರಪತಿಗಳಾದರು. ರಾಷ್ಟ್ರಪತಿ ಭವನದಲ್ಲಿ ದೈವರಾತರಿಗೆ ಮುಕ್ತವಾದ ಪ್ರವೇಶವಿತ್ತು. ದಿಲ್ಲಿಯಲ್ಲಿ ನಡೆದ ವೇದಸತ್ರದಲ್ಲಿ ಪಾಲ್ಗೊಳ್ಳುವದಕ್ಕೆ ಬಂದಿದ್ದ ಗೋಕರ್ಣದ ವೇದ ವಿದ್ವಾಂಸರಿಗೆಲ್ಲ ದೈವರಾತರು ರಾಷ್ಟ್ರಪತಿ ಭವನವನ್ನು ಮುಕ್ತವಾಗಿ ಪ್ರವೇಶಿಸಿ ಸಂದರ್ಶಿಸಲು ಅನುವುಮಾಡಿಕೊಟ್ಟ ಸಂಗತಿಯನ್ನು ಗೋಕರ್ಣದ ವಿದ್ವಾಂಸರು ಇಂದಿಗೂ ಸ್ಮರಿಸುತ್ತಾರೆ. ೧೯೫೯ನೇ ಇಸ್ವಿಯಲ್ಲಿ ಡಾ. ರಾಜೇಂದ್ರ ಪ್ರಸಾದರು ಗೋಕರ್ಣದ ಸಂಸ್ಕೃತ ವಿದ್ಯಾಪೀಠದ (ಮೇಧಾ ದಕ್ಷಿಣಾ ಮೂರ್ತಿ ಸಂಸ್ಕೃತ ಮಹಾವಿದ್ಯಾಲಯ ಇಂದಿನ ಆ ಸಂಸ್ಥೆಯ ಹೆಸರು) ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಗೋಕರ್ಣಕ್ಕೆ ಬಂದಾಗ ದೈವರಾತರ ಆಶ್ರಮಕ್ಕೆ ಭೇಟಿ ಕೊಟ್ಟರು. ಆಶ್ರಮದ ಪರಿಸರ, ಅಲ್ಲಿನ ಚಟುವಟಿಕೆಗಳನ್ನು ಮೆಚ್ಚಿ ದೈವರಾತರನ್ನು ಅಭಿನಂದಿಸಿದರು. ಡಾ. ರಾಜೇಂದ್ರ ಪ್ರಸಾದರು ತಮ್ಮ ಆತ್ಮಚರಿತ್ರೆಯಲ್ಲಿ ದೈವರಾತರ ವ್ಯಕ್ತಿತ್ವವನ್ನು ಆತ್ಮೀಯವಾಗಿ ಚಿತ್ರಿಸಿದ್ದಾರೆ. ಮಹಾರಾಷ್ಟ್ರ ರಾಜ್ಯದ ನಾಸಿಕದ ಪ್ರವಾಸದ ವೇಳೆಯಲ್ಲಿ ರಾಷ್ಟ್ರಪತಿಗಳ ಜೊತೆಯಲ್ಲಿ ಅವರ ಬಿನ್ನಹದ ಮೇರೆಗೆ ದೈವರಾತರು ಸೇರಿಕೊಂಡರು. ನಾಸಿಕ ಮತ್ತು ಅದರ ಸುತ್ತಮುತ್ತ ಇರುವ ಪ್ರೇಕ್ಷಣೀಯ ಸ್ಥಾನಗಳನ್ನು ಅವರು ಒಟ್ಟಿಗೆ ನೋಡಿದರು. ತ್ರ್ಯಂಬಕೇಶ್ವರ ಕ್ಷೇತ್ರವನ್ನೂ, ಅಲ್ಲಿರುವ ಗುಹಾಂತರ್ಗತ ಕಲೆ, ಶಿಲ್ಪಕಲೆಗಳನ್ನು ಒಟ್ಟಿಗೆ ನೋಡಿದರು. ತಮ್ಮ ಆತ್ಮಚರಿತ್ರೆಯ ಸಾಲುಗಳಲ್ಲಿ ದೈವರಾತರ ಅಸಾಧಾರಣ ಮೇಧಾಶಕ್ತಿಯನ್ನೂ, ವೇದವಿಷಯಕವಾದ ಪಾಂಡಿತ್ಯವನ್ನು ಪ್ರಸಾದರು ಪೂಜ್ಯಭಾವದಿಂದ ದಾಖಲಿಸಿದ್ದಾರೆ. ದೈವರಾತರು ಜಗನ್ನಾಥಪುರಿಯ ವಿಶ್ವಸಂಸ್ಕೃತ ಸಮ್ಮೇಲನದಲ್ಲಿ ನೀಡಿದ ವೇದ ಸಂದೇಶದ ಕೊನೆಯಲ್ಲಿ ರಾಜೇಂದ್ರ ಪ್ರಸಾದರನ್ನು ತಮ್ಮ ಅಸ್ಖಲಿತವಾದ ಗೀರ್ವಾಣವಾಣಿಯಲ್ಲಿ ಚಮತ್ಕಾರ ಪೂರ್ವಕವಾಗಿ ಹೀಗೆ ಪ್ರಶಂಸಿಸಿರುವದು ಅಪೂರ್ವವಾಗಿದೆ–"..... ಸಂಪ್ರತಿ ಪ್ರಸ್ತುತೇಽಸ್ಮಿನ್ ಕಲಿಕಾಲೇ ಸಂಸ್ಕೃತಭಾರತೀ ತತ್ತ್ವಸ್ಯ ಪ್ರಕಾಶನೇನ ವಿಶ್ವಕಲ್ಯಾಣಾರ್ಥಂ ಪ್ರಸ್ತುತೋಽಯಂ "ಸಂಸ್ಕೃತ ವಿಶ್ವ ಪರಿಷತ್ಸಮಾರಂಭಃ" ಸ್ವಕೀಯಂ ಇದಂ ಪರಮಂ ಧ್ಯೇಯಂ

ಅಚಿರಾದೇವ ಸಾಧಯಿತುಂ ಪ್ರಭವತು ನಿಖಿಲಜಗದಧ್ಯಕ್ಷಸ್ಯ ಪರಮೈಶ್ವರ್ಯ ಪರಿಪೂರ್ಣಸ್ಯ ಶ್ರೀಭಗವತೋ **ರಾಜೇಂದ್ರಸ್ಯ ಪ್ರಸಾದಾದಿತಿ** ಸರ್ವಚ್ಛಂದಸಾಂ ವರ್ಷಕಂ ಛಂದೋಮುಖೇನೈವ ಆವಿರ್ಭೂತಂ ತಂ ರಾಜೇಂದ್ರಮೇವ ಛಂದೋಮುಖೇನ ಸಮಭ್ಯರ್ಥಯೇ "ಸ ಘಾ ರಾಜೇಂದ್ರ ಆದಭನ್ನಃ" ಇತಿ. ತಥೈವ ಪುನಃ ಶ್ರೀಭಾರತಾಧ್ಯಕ್ಷಸ್ಯ ಸಂಸ್ಕೃತ ವಿಶ್ವಪರಿಷದಧ್ಯಕ್ಷಸ್ಯ 'ಶ್ರೀರಾಜೇಂದ್ರ ಪ್ರಸಾದಸ್ಯ' ಸಮಾಶ್ರಯೇಣ ಸಂಯೋಜನೇನ ಚ ಸಂಸ್ಕೃತವಿದ್ಯಾಭ್ಯುದಯ ಧ್ಯೇಯಂ ಸಿಧ್ಯತು...".

ದೈವರಾತರ ಸಮಕಾಲದಲ್ಲಿ ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ಸತ್ಯನಾರಾಯಣ ಸಿಂಹ, ಲಾಲಬಹಾದ್ದೂರಶಾಸ್ತ್ರಿ, ಬನಾರಸ್ ಹಿಂದು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಶ್ರೀಮಾಲಿ, ಮಹಾರಾಷ್ಟ್ರ ರಾಜ್ಯದ ರಾಜ್ಯಪಾಲರಾಗಿದ್ದ ಶ್ರೀಪ್ರಕಾಶ ಮುಂತಾದ ಮಹನೀಯರ ಸಂಪರ್ಕ ದೈವರಾತರಿಗಿತ್ತು. ಬಿಹಾರದ ರಾಜ್ಯಪಾಲರಾಗಿದ್ದ ಕರ್ನಾಟಕದವರೇ ಆದ ಆರ್. ಆರ್. ದಿವಾಕರರು ದೈವರಾತರಿಂದ ಪ್ರಭಾವಿತರಾಗಿ ಹತ್ತು ಹಲವು ವಿಧದಲ್ಲಿ ದೈವರಾತರನ್ನು ಆತ್ಮೀಯವಾಗಿ ಸೇವಿಸಿದರು. ದಿವಾಕರರ ಬೆಂಗಳೂರಿನ ಮಲ್ಲೇಶ್ವರದಲ್ಲಿನ ಮನೆ ದೈವರಾತರಿಗೆ ಸ್ವಗೃಹಕ್ಕಿಂತ ಬೇರೆಯಾಗಿರಲಿಲ್ಲ. ಬೆಂಗಳೂರಿನಲ್ಲಿ ಪ್ರವಚನವೇ ಮುಂತಾದ ಕಾರ್ಯಕ್ರಮಗಳಿರಲಿ ಅಥವಾ ಇಲ್ಲದೇ ಇರಲಿ ಆಗಾಗ ಹೋಗಿ ದೀರ್ಘಕಾಲ ದಿವಾಕರರ ಮನೆಯಲ್ಲಿ ದೈವರಾತರು ವಾಸ್ತವ್ಯ ಮಾಡುತ್ತಿದ್ದರು. ದಿವಾಕರರ ಕುಟುಂಬದ ಎಲ್ಲ ಸದಸ್ಯರಿಗೂ ದೈವರಾತರು ಆತ್ಮೀಯರೂ ಮಾರ್ಗದರ್ಶಕರೂ ಹಿತೈಷಿಗಳೂ ಆಗಿದ್ದರು. ಮನೆಯಲ್ಲಿ ಮದುವೆ, ಮುಂಜಿ ಮುಂತಾದ ಸಮಾರಂಭಗಳಲ್ಲಂತೂ ದೈವರಾತರ ಉಪಸ್ಥಿತಿ ಇರಲೇಬೇಕಾಗಿತ್ತು. ಛಂದೋದರ್ಶನದ ಇಂಗ್ಲೀಷ ಭಾಷಾಂತರವನ್ನು ದೇವುಡು ಅವರು ಮಾಡುವಾಗಂತೂ ದೈವರಾತರು ವರ್ಷಾನುಗಟ್ಟಲೇ ದಿವಾಕರರ ಮನೆಯಲ್ಲಿಯೇ ವಾಸ್ತವ್ಯ ಮಾಡಿಕೊಂಡಿರುವ ಅನಿವಾರ್ಯತೆ ಉಂಟಾಯಿತು. ಈ ದೀರ್ಘಕಾಲದ ವಾಸ್ತವ್ಯದಿಂದಾಗಿ ದಿವಾಕರರ ಕುಟುಂಬದ ಎಲ್ಲ ಸದಸ್ಯರೂ ಮಕ್ಕಳೂ ದೈವರಾತರಿಗೆ ಆತ್ಮೀಯರಾದರು. ದಿವಾಕರರ ಸೊಸೆಯಾದ ಶಾಂತಾ ದಿವಾಕರ ಅವರಿಗೆ ದೈವರಾತರು ಅಡುಗೆ ಮಾಡುವದನ್ನು ದಕ್ಷಿಣೋತ್ತರ ಭಾರತದ ಹಲವು ರುಚಿಕಟ್ಟಾದ ಖಾದ್ಯಗಳನ್ನು ಮಾಡುವ ವಿಧಾನವನ್ನು ಕಲಿಸಿಕೊಟ್ಟರು. ದೈವರಾತರು ತಮ್ಮ ಸ್ವಂತ ಹೆಣ್ಣುಮಕ್ಕಳಿಗೆ ವೇದಾಭ್ಯಾಸವನ್ನು ಹೇಳಿಕೊಟ್ಟಿದ್ದರು. ಸ್ತ್ರೀಯರಿಗೆ ಉಪನಯನ

ಮಾಡಬೇಕು ಎಂಬ ಪ್ರತಿಪಾದನೆ ಅವರದಾಗಿತ್ತು. ಶಾಂತಾ ದಿವಾಕರರಿಗೆ ಗಾಯತ್ರೀ ಮಂತ್ರವನ್ನು ಉಪದೇಶಿಸಿದ ದೈವರಾತರು ಸಮಯ ದೊರಕಿದಾಗ ಉಪನಿಷತ್ತು, ಭಗವದ್ಗೀತೆಯನ್ನು ಬೋಧಿಸುತ್ತಿದ್ದರು. ದೈವರಾತರ ಪ್ರಭಾವಕ್ಕೆ ಪೂರ್ಣವಾಗಿ ಒಳಗಾದ ಶಾಂತಾ ದಿವಾಕರ ದಂಪತಿಗಳು ತಮ್ಮ ಮಗಳು ದೀಪ್ತಿಗೆ ಉಪನಯನ ಸಂಸ್ಕಾರವನ್ನು ದೈವರಾತರ ಮಾರ್ಗದರ್ಶನದಲ್ಲಿ ಮಾಡಿದ್ದು ವಿಶೇಷ ಸಂಗತಿಯಾಗಿದೆ. ಇದು ನಡೆದದ್ದು ೧೯೭೨ನೇ ಇಸ್ವಿಯಲ್ಲಿ. ದೈವರಾತರೇ ಕುಲ ಪುರೋಹಿತರ ಸ್ಥಾನದಲ್ಲಿ ನಿಂತು ಈ ಉಪನಯನವನ್ನು ಮಾಡಿಸಿದರು.

ಇನ್ನು ಆರ್. ಆರ್. ದಿವಾಕರರಂತೂ ಸರ್ವವಿಧದಲ್ಲಿಯೂ ದೈವರಾತರಿಗೆ ಸಹಾಯವನ್ನು ಮಾಡಿದರು. ಒಂದು ವೇಳೆ ದಿವಾಕರರ ಸಹಾಯವಿಲ್ಲದೇ ಹೋಗಿದ್ದರೆ 'ಛಂದೋದರ್ಶನ' ಮಹಾಗ್ರಂಥ ಪ್ರಕಟಗೊಳ್ಳುತ್ತಲೇ ಇರಲಿಲ್ಲವೇನೊ! ವಿಸ್ತೃತವಾದ ವಾಸಿಷ್ಠಾನ್ವಯ ಭಾಷ್ಯ, ಮೂಲ ಮತ್ತು ಭಾಷ್ಯಗಳ ಆಂಗ್ಲಾನುವಾದದೊಂದಿಗೆ ಈ ನೂತನ ಋಗ್ವೇದ ಭಾರತೀಯ ವಿದ್ಯಾಭವನದಂತಹ ಪ್ರತಿಷ್ಠಿತ ಪ್ರಕಾಶನದಿಂದ ಪ್ರಕಟಗೊಳ್ಳುವಲ್ಲಿ ದಿವಾಕರರ ಸಾಹಸವಿದೆ. ಇಂಗ್ಲೀಷಿಗೆ ಅನುವಾದಕರನ್ನು ಅನ್ವೇಷಿಸುವದರಿಂದ ಹಿಡಿದು ಪ್ರಕಾಶನಕ್ಕೆ ಬೇಕಾದ ಆರ್ಥಿಕ ಸಂಪನ್ಮೂಲದ ಕ್ರೋಢೀಕರಣ ಮಾಡುವ ವರೆಗೆ ದಿವಾಕರರು ಶ್ರಮವಹಿಸಿದರು. ಉದ್ಯಮಿ ಅರವಿಂದ ಮಫತ್‌ಲಾಲ ಆರ್ಥಿಕ ನೆರವನ್ನು ನೀಡಿದರು. ದಿವಾಕರರು ತಾವೇ ಸ್ವಯಂ ಭವನ್ಸ ಜರ್ನಲ ಮುಂತಾದವುಗಳಲ್ಲಿ ದೈವರಾತರನ್ನು ಕುರಿತು ಅಗ್ರಲೇಖನಗಳನ್ನು ಬರೆದರು. ಲೌಕಿಕವಾಗಿ ತಾವು ಎಷ್ಟೇ ದೊಡ್ಡ ಸ್ಥಾನಮಾನಗಳನ್ನು ಹೊಂದಿದ್ದರೂ ದಿವಾಕರರು ಮಾತ್ರ ದೈವರಾತರನ್ನು ಗೌರವಾದರ ಭಕ್ತಿಗಳಿಂದ ಕಂಡರು. ದಿವಾಕರರ ಸಹಯೋಗ ಉಂಟಾದದ್ದು ದೈವರಾತರ ಸುದೈವವೇ ಸರಿ.

ದೈವರಾತರು ತಮ್ಮ ೧೮ನೆಯ ವಯಸ್ಸಿಗೆ ಮೊದಲೇ, ಅಂದರೆ ರಾಮದಾಸ ಸ್ವಾಮಿಗಳನ್ನು ಅನುಸರಿಸಿ ಸಂಚಾರ ಮಾಡುತ್ತಿದ್ದಾಗಲೇ ಒಮ್ಮೆ ಶಿರಡಿಯ ಸಾಯಿಬಾಬಾರ ಸಂದರ್ಶನವನ್ನೂ ಮಾಡಿದರು. ಶಿರಡಿ ಸಾಯಿ ಬಾಬಾರ ದರ್ಶನ ಮತ್ತು ಅವರ ಅಪಾರ ಕರುಣೆಯ ಪ್ರಭಾವ ದೈವರಾತರ ಮೇಲೆ ಕೊನೆತನಕ ಅಚ್ಚಳಿಯದೆ ಉಳಿಯಿತು. ದೈವರಾತರು ತಮ್ಮ ಅಪರ ವಯಸ್ಸಿನಲ್ಲಿ ಸತ್ಯಸಾಯಿಬಾಬಾರ ಸಂದರ್ಶನ ಮಾಡಿದ್ದು ಒಂದು

ಯೋಗಾಯೋಗ. ಕನ್ನಡದ ಪ್ರಸಿದ್ಧ ಸಾಹಿತಿಗಳಾದ ಡಾ. ವಿ. ಕೆ. ಗೋಕಾಕರ ಸಂಚಾಲಕತ್ವದಲ್ಲಿ ಪುಟ್ಟುಪರ್ತಿಯಲ್ಲಿ ನಡೆಯುತ್ತಿದ್ದ ಭಾರತೀಯ ಸಂಸ್ಕೃತಿಯನ್ನು ಕುರಿತ ೧೯೭೩ನೆಯ ಇಸ್ವಿ ಬೇಸಿಗೆ ರಜೆ–ಕಾರ್ಯಾಗಾರದಲ್ಲಿ ದೈವರಾತರು ಭಾಗವಹಿಸಿ ಕನ್ನಡದಲ್ಲಿ ಮೂರು ಪ್ರವಚನಗಳನ್ನು ನೀಡಿದರು. "ವೇದದಲ್ಲಿ ಕಂಡು ಬರುವ ಮಂತ್ರದೃಷ್ಟಾರರಾದ ಸ್ತ್ರೀಯರು" ಎಂಬುದು ದೈವರಾತರ ವಿಷಯವಾಗಿತ್ತು.

ಸನ್ ೧೯೭೧ನೆಯ ವರ್ಷದಲ್ಲಿ ದೈವರಾತರು ಮಹರ್ಷಿ ಮಹೇಶ ಯೋಗಿಗಳ ಆಮಂತ್ರಣದ ಮೇರೆಗೆ ಸ್ಪೇನ್ ದೇಶಕ್ಕೆ ಹೋಗಿ ಹಲವಾರು ತಿಂಗಳುಗಳ ಕಾಲ ಮಹೇಶ ಯೋಗಿಗಳ ಅತಿಥಿಗಳಾಗಿದ್ದರು. ಮಹೇಶ ಯೋಗಿಗಳ ಪಾಶ್ಚಾತ್ಯ ಶಿಷ್ಯರಿಗೆ ವೇದಪಠನದ ಅದ್ಭುತ ಮಾದರಿಯನ್ನು ದೈವರಾತರು ತೋರಿಸಿಕೊಟ್ಟರು. ಪ್ರವಚನಗಳನ್ನು ನೀಡಿದರು. ಮಹೇಶ ಯೋಗಿಗಳು ದೈವರಾತರ ವೇದೋಪನಿಷತ್ತುಗಳು ಮತ್ತು ಭಗದ್ಗೀತೆಯ ಜ್ಞಾನವನ್ನು ಬಯಸಿ ಪಡೆದುಕೊಂಡರು. ಹೀಗೆ ದೈವರಾತರು ದೇಶ ವಿದೇಶಗಳನ್ನು ಸಂಚರಿಸಿ ಎಲ್ಲೆಡೆ ತಮ್ಮ ಪ್ರಭಾವವನ್ನು ಉಂಟು ಮಾಡಿದರು. ಮತ್ತು ವಿವಿಧ ಕ್ಷೇತ್ರಗಳ ಮಹಾಪುರುಷರ–ಸಹವಾಸ, ಸಹಯೋಗ ದೈವರಾತರಿಗೆ ಲಭಿಸಿತು.

೧೩. ಜೀವನ ಚರಿತ್ರೆಯ ಉಪಸಂಹಾರ

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥

I. ಪುನರವಲೋಕನ

ಈ ಜೀವನ ಚರಿತ್ರೆಯ ಉಪಸಂಹಾರದ ಪೂರ್ವದಲ್ಲಿ ಚರಿತ್ರೆಯ ಸಮಗ್ರತೆಯನ್ನು ಸಂಪನ್ನಗೊಳಿಸಲೋಸುಗ ದೈವರಾತರ ವ್ಯಕ್ತಿತ್ವದ ವಿವಿಧ ಆಯಾಮಗಳನ್ನು ಸಂಕ್ಷಿಪ್ತವಾಗಿ ಪ್ರಸ್ತುತ ಪಡಿಸಲಾಗಿದೆ.

೧. ಶರೀರಮಾದ್ಯಂ ಧರ್ಮಸಾಧನಂ

ದೈವರಾತರು ತಮ್ಮ ಜೀವಿತದ ಕೊನೆಯ ಕ್ಷಣದ ವರೆಗೂ ದೃಢವಾದ ಆರೋಗ್ಯದಿಂದ ಕೂಡಿದ್ದು. ಅದರಿಂದಾಗಿ ಕರ್ತೃತ್ವ ಶಕ್ತಿಸಂಪನ್ನರಾಗಿದ್ದರು. ಅವರದು ಎತ್ತರದ ಭವ್ಯ ನಿಲುವು; ಎತ್ತರದ ಪ್ರಮಾಣಕ್ಕೆ ಹೆಚ್ಚಲ್ಲದ ಸ್ಥೂಲತ್ವ, ವ್ಯಕ್ತಿತ್ವಕ್ಕೆ ಒಪ್ಪುವ ಶುಭ್ರ ಪಂಚೆ, ಉತ್ತರೀಯಗಳು. ಉದ್ದವಾಗಿ ಬಿಟ್ಟ ಗಡ್ಡ, ಹಣೆಯ ಮೇಲೆ ಅಡ್ಡವಾಗಿ ಹಚ್ಚಿದ ಭಸ್ಮದ ಮೂರು ರೇಖೆಗಳು, ಭ್ರೂಮಧ್ಯದಲ್ಲಿ ಕುಂಕುಮದ ಅಲಂಕಾರ. ಇವೆಲ್ಲವುಗಳಲ್ಲಿ ಅವರ ಸರಳತೆ ಪ್ರತಿಫಲಿಸುತ್ತಿತ್ತು. ಜನ್ಮಜಾತವಾಗಿ ಬಂದ ಆರೋಗ್ಯಕ್ಕೆ ಯೋಗ ಪ್ರಕ್ರಿಯೆಗಳ ಸಾಂಗತ್ಯ – ಅದರಿಂದಾಗಿ ಕಠಿಣ ಕಠಿಣತರವಾದ ತಪಸ್ಸನ್ನು ಮಾಡುವದಕ್ಕೆ ದೈವರಾತರಿಗೆ ಸಾಧ್ಯವಾಯಿತು. ಹಲವು ಕಷ್ಟ ನಷ್ಟಗಳ ನಡುವೆಯೂ ತಮ್ಮ ಧ್ಯೇಯವನ್ನು ಸಾಧಿಸುವದಕ್ಕೆ ಅವರು ಶಕ್ತರಾದದ್ದು ಆರೋಗ್ಯಪೂರ್ಣವಾದ ಶರೀರದಿಂದ ಮಾತ್ರ. ಅದು ಅವರ ಪ್ರಯತ್ನದಿಂದಲೂ ಭಾಗ್ಯದಿಂದಲೂ ಲಭಿಸಿದ ಸಾಧನವಾಗಿತ್ತು.

೨. ರೋಗ ಪರಿಹಾರಕ ವೈದ್ಯ-ದೈವರಾತರು

ತಾರುಣ್ಯದ ಹೊಸ್ತಿಲಲ್ಲಿ ಪದಾರ್ಪಣೆ ಮಾಡುವದಕ್ಕೆ ಮೊದಲಿನಿಂದಲೇ ಭಕ್ತಿ, ಯೋಗಗಳ ಬೆಂಬತ್ತಿ ಸಂಚರಿಸತೊಡಗಿದ ದೈವರಾತರು ತಮ್ಮ ಶರೀರ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ವಿದ್ಯೆಯನ್ನು ಪ್ರಾಪ್ತಿ ಮಾಡಿಕೊಂಡಿದ್ದಲ್ಲದೇ ಬೇರೆ ಬೇರೆ ದೇಶ, ಕಾಲಗಳಲ್ಲಿ ಆಯುರ್ವೇದವನ್ನು ಅಭ್ಯಾಸಮಾಡಿಕೊಂಡು ಅಸ್ವಸ್ಥರಾದ ಜನರಿಗೆ ಸರಿಯಾದ ವನಸ್ಪತಿ ಔಷಧವನ್ನು ಕೊಟ್ಟು ಸಹಾಯ ಮಾಡುತ್ತಿದ್ದರು. ನೇಪಾಲದ ರಾಜಪುರೋಹಿತರ ಪುತ್ರನಿಗೆ ತಮ್ಮ ವನಸ್ಪತಿಯ ಔಷಧೋಪಚಾರದಿಂದ ಗುಣಪಡಿಸಿ ಸಮಸ್ತ ರಾಜಪರಿವಾರದ ಆದರಕ್ಕೆ ಪಾತ್ರವಾದದ್ದನ್ನು ಹಿಂದೆಯೇ ಪ್ರಸ್ತಾವಿಸಲಾಗಿದೆ. ವಿಶೇಷವೆಂದರೆ ಅವರು ಯುನಾನಿ ಪದ್ಧತಿಯನ್ನು ತಿಳಿದುಕೊಂಡದ್ದು.

೩. ತಪೋನುಷ್ಠಾನ ನಿರತ ದೈವರಾತರು

ಬಾಲ್ಯದಲ್ಲಿ ವೇದಾಧ್ಯಯನರೂಪವಾದ ತಪಸ್ಸಿನಿಂದ ಆರಂಭವಾದ ತಪೋನಿತ್ಯತ್ವ ದೈವರಾತರ ಜೀವನದುದ್ದಕ್ಕೂ ಮುಂದುವರಿಯಿತು. ತಮ್ಮ ಆಚಾರ್ಯರೊಂದಿಗೆ ಮಾಡಿದ ತಪಸ್ಸಾಧನೆ, ಹೊಂದಿದ ಸಿದ್ಧಿಗಳಲ್ಲದೆ ಮಂತ್ರ ದರ್ಶನೋತ್ತರ ಕಾಲದಲ್ಲಿಯೂ ಅನುಷ್ಠಾನನಿತ್ಯತ್ವ ದೈವರಾತರ ಜೀವನದ ಒಂದು ಹೆಗ್ಗುರುತೇ ಆಗಿದೆ. ಮಂತ್ರದರ್ಶನವಾದ ನಂತರ ದೈವರಾತರು ಆಶ್ರಮಸ್ಥಾಪನೆ ಮಾಡಿ ಅಲ್ಲಿ ಯಜ್ಞ ಯಾಗಾದಿಗಳ ನಿತ್ಯ ಅನುಷ್ಠಾನ ಮಾಡುತ್ತಿದ್ದರು. ನೇಪಾಲದಲ್ಲಿ ವಾಸ್ತವ್ಯಮಾಡುತ್ತಿದ್ದಾಗ ಅಲ್ಲಿಯೂ ದೀರ್ಘ ಕಾಲ ತಪಸ್ಸಿನಲ್ಲಿ ನಿರತರಾಗಿರುತ್ತಿದ್ದರು. ೧೯೨೪ರನೇ ಇಸ್ವಿಯ ಮಾರ್ಚ ತಿಂಗಳಿನಲ್ಲಿ ದೈವರಾತರು ಗಾಣಗಾಪುರದಲ್ಲಿ ತೀವ್ರ ತಪಸ್ಸನ್ನು ಆಚರಿಸುತ್ತ ದತ್ತಾತ್ರೇಯನ ಉಪಾಸನೆಯನ್ನು ಮಾಡಿದರು. ಆಹಾರವನ್ನು ತ್ಯಜಿಸಿ ಕೇವಲ ನೀರನ್ನು ಮಾತ್ರ ಸೇವಿಸುತ್ತ ಅವರು ತಪಸ್ಸನ್ನು ಮಾಡುತ್ತಿದ್ದರು. ದೈವರಾತರು ಗಾಣಗಾಪುರದಲ್ಲಿ ತಪಸ್ಸನ್ನಾಚರಿಸುತ್ತಿದ್ದಾಗ ವಾಸಿಷ್ಠ ಗಣಪತಿ ಮುನಿಗಳು ದೈವರಾತರ ಗೋಕರ್ಣದ ಆಶ್ರಮಕ್ಕೆ ಬಂದರು. ದೈವರಾತರು ದೂರದ ಗಾಣಗಾಪುರದಲ್ಲಿ ಉಪವಾಸದಿಂದ ಇದ್ದುಕೊಂಡು ತಪವನ್ನಾಚರಿಸುವದನ್ನು ತಿಳಿದು ಶಿಷ್ಯ ವಾತ್ಸಲ್ಯದಿಂದ ಕೂಡಿದ ಪತ್ರಗಳನ್ನು ಬರೆದು ಉಪವಾಸವನ್ನು ನಿಲ್ಲಿಸಿ ಯುಕ್ತವಾದ ಆಹಾರವನ್ನು ಸೇವಿಸುತ್ತ ತಪವನ್ನಾಚರಿಸುವದಕ್ಕೆ ಪತ್ರಗಳ ಮೂಲಕ ದೈವರಾತರ ಮನವೊಲಿಸುವದಕ್ಕೆ ಪ್ರಯತ್ನಿಸಿ ಅದರಲ್ಲಿ ಯಶಸ್ವಿಯಾದರು. ಗಾಣಗಾಪುರದಲ್ಲಿ ದೈವರಾತರು ಹದಿನೈದು ತಿಂಗಳ

ಪರ್ಯಂತ ತಪವನ್ನಾಚರಿಸುತ್ತಿದ್ದರು. ಹೀಗೆ ದೈವರಾತರ ವ್ಯಕ್ತಿತ್ವ ವೇದಮಯವಾಗಿದ್ದಂತೆಯೇ ತಪೋಮಯವೂ ಆಗಿತ್ತು.

೪. ದೈವರಾತರ ಬಹುಭಾಷಾ ಪರಿಣತಿ

ದೈವರಾತರು ಸಂಸ್ಕೃತದಲ್ಲಿ ನಿರರ್ಗಲವಾಗ್ಮಿಗಳೂ, ಗ್ರಂಥ ರಚನಾಕಾರರೂ ಆಗಿದ್ದರು. ಕನ್ನಡವಂತೂ ಅವರ ಮಾತೃಭಾಷೆಯೇ ಆಗಿತ್ತು. ಇವುಗಳಲ್ಲದೇ ದೈವರಾತರು ಹಿಂದಿ, ಮರಾಠಿ, ತಮಿಳು ಹಾಗೂ ತೆಲಗು ಭಾಷೆಗಳಲ್ಲಿಯೂ ಪ್ರವಚನ ಮಾಡಬಲ್ಲ ಸಾಮರ್ಥ್ಯವನ್ನು ಹೊಂದಿದ್ದರು. ಅವರಿಗೆ ನೇಪಾಲಿ, ಕೊಂಕಣಿ ಭಾಷೆಗಳ ಪರಿಚಯವಿತ್ತು. ಗುಜರಾತೀ ಭಾಷೆಯ ಅಲ್ಪ-ಸ್ವಲ್ಪ ಜ್ಞಾನವಿತ್ತು. ದೈವರಾತರ ಒಂದೇ ಒಂದು ಕೊರತೆ ಎಂದರೆ ಇಂಗ್ಲೀಷಿನ ಜ್ಞಾನ ಇಲ್ಲದೇ ಇರುವದಾಗಿತ್ತು. ಏಕೆಂದರೆ ಸ್ವಾತಂತ್ರ್ಯ ಬಂದ ನಂತರ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾಲಯಗಳಲ್ಲಿ ಎಲ್ಲ ಶೈಕ್ಷಣಿಕ ಚಟುವಟಿಕೆಗಳೂ ಇಂಗ್ಲೀಷ ಮಾಧ್ಯಮದಲ್ಲಿಯೇ ನಡೆಯ ತೊಡಗಿದ್ದರಿಂದ ದೈವರಾತರಿಗೆ ವಿಶ್ವವಿದ್ಯಾಲಯಗಳಲ್ಲಿ ತಮ್ಮ ವಿಚಾರಗಳನ್ನು ಮಂಡಿಸುವದಕ್ಕಾಗಲೀ, ಸಂವಾದ-ಸಂವಹನಗಳನ್ನು ನಡೆಸುವದಕ್ಕಾಗಲೀ ಸಾಧ್ಯವಾಗಲಿಲ್ಲ.

೫. ದೈವರಾತರ ಪರಿಶ್ರಮ ಮತ್ತು ಹೋರಾಟದ ದಾರಿ

ದೈವರಾತರದು ಹೋರಾಟದ ಬದುಕು. ತಮಗೆ ಸಾಧಿಸಬೇಕೆಂಬುದನ್ನು ಸಾಧಿಸದೇ ಬಿಡುತ್ತಿರಲಿಲ್ಲ. ಎಲ್ಲ ಮಿತಿಗಳ ನಡುವೆಯೂ ದೈವರಾತರು ಮಹತ್ತಾದದ್ದನ್ನೇ ಸಾಧಿಸಿದರು. ಆಶ್ರಮವನ್ನೇನೋ ಸ್ಥಾಪಿಸಿಕೊಂಡರು; ಆದರೆ ಅದರ ನಿರ್ವಹಣೆ ಸುಲಭವಾಗಿರಲಿಲ್ಲ. ತಮ್ಮ ಕುಟುಂಬವರ್ಗ, ವಿದ್ಯಾರ್ಥಿಗಳು ಮತ್ತು ಬಂದು ಹೋಗುವ ಜನರು ಒಂದು ಕಡೆಯಾದರೆ ೨೫ ರಿಂದ ೩೦ ಸಂಖ್ಯೆಯಲ್ಲಿದ್ದ ಹಸುಗಳಿಂದ ಕೂಡಿದ ಗೋಪರಿಪಾಲನೆ ಇನ್ನೊಂದೆಡೆ- ಇದರಿಂದ ಆಶ್ರಮ ನಿರ್ವಹಣೆಗಾಗಿ ಸಂಪನ್ಮೂಲವನ್ನು ಸಂಗ್ರಹಿಸುವದು ದೈವರಾತರಿಗೆ ಒಂದು ದೊಡ್ಡ ಸವಾಲಾಗಿತ್ತು. ಅದಕ್ಕಾಗಿ ಸಂಚಾರ ಅನಿವಾರ್ಯವಾಗಿತ್ತು. ಇಷ್ಟಾಗಿ ದೈವರಾತರು ಬಾಯಿಬಿಟ್ಟು ತಮ್ಮ ಕಷ್ಟವನ್ನು ಹೇಳಿ ಯಾರನ್ನೂ ಏನನ್ನೂ ಕೇಳುವ ಸ್ವಭಾವದವರಾಗಿರಲಿಲ್ಲ. ಇವರ ಎಲ್ಲ ಉಪಕ್ರಮಗಳನ್ನು ತಿಳಿದುಕೊಂಡ ನೇಪಾಲದ ರಾಜಮನೆತನದಿಂದ ಸ್ವಲ್ಪ ಮಟ್ಟಿನ ನೆರವು ಸಿಗುತ್ತಿತ್ತು. ಹುಬ್ಬಳ್ಳಿಯ ಗುಜರಾತೀ ವರ್ತಕರ ಮೇಲೆ ದೈವರಾತರ ಪ್ರಭಾವವಿದ್ದುದರಿಂದ ವಸ್ತುಗಳ ರೂಪದಲ್ಲಿ ಸ್ವಲ್ಪ ಸಹಾಯ ದೊರಕುತ್ತಿತ್ತು.

ಈ ಎಲ್ಲ ಪರಿಶ್ರಮಗಳ ನಡುವೆ ದೈವರಾತರು ೧೯೨೬ನೆಯ ಇಸ್ವಿಯ ಸುಮಾರಿಗೆ ಮುಂಬೈಯಿಂದ ಮುದ್ರಣಯಂತ್ರವನ್ನು ತಂದು ನಂದಿನಿ ಮುದ್ರಣಾಲಯ ಎಂಬ ಹೆಸರಿನಲ್ಲಿ ಶಿರಸಿಯಲ್ಲಿ ಮುದ್ರಣಾಲಯವನ್ನು ಸ್ಥಾಪಿಸಿದರು. ಆ ಮದ್ರಣಾಲಯದಿಂದ ವಾಸಿಷ್ಠ ಗಣಪತಿ ಮುನಿಗಳ ಗ್ರಂಥಗಳನ್ನು ಪ್ರಕಟಿಸುವದಕ್ಕೆ ತೊಡಗಿದರು. ದೈವರಾತರ ಕೆಲವು ಪ್ರವಚನಗಳನ್ನು ಅಲ್ಲಿ ಮುದ್ರಿಸಲಾಯಿತು. ಸುದೈವವೆಂದರೆ ತಮ್ಮ ಆಚಾರ್ಯರ ಗ್ರಂಥಗಳನ್ನು ಮುದ್ರಿಸುವ ವೇಳೆಗೆ ದೇಶದ ಉದ್ದಗಲಗಳಲ್ಲಿಯೂ ದೈವರಾತರಿಗೆ ಸಾಕಷ್ಟು ಪ್ರಸಿದ್ಧಿ ದೊರಕಿದ್ದು ಮತ್ತು ಅತ್ಯುನ್ನತ ಪದವಿಗಳನ್ನಲಂಕರಿಸಿದ ಮಹಾಪುರುಷರ ಸಂಪರ್ಕ ಸಿದ್ಧಿಸಿದ್ದು. ಇದರಿಂದಾಗಿ ದೈವರಾತರ ಸ್ವಂತ ಕೃತಿಗಳು ರಾಷ್ಟ್ರದ ಪ್ರತಿಷ್ಠಿತ ಪ್ರಕಾಶನ ಸಂಸ್ಥಾನಗಳಿಂದ ಪ್ರಕಟಗೊಳ್ಳುವಂತಾಯಿತು.

೬. ಶ್ರದ್ಧಾದೇವಿ-ಅನುರೂಪಳಾದ ಪತ್ನೀ

ವರಮಹಾಕ್ಷ್ಮೀಯು ಶ್ರದ್ಧಾದೇವಿಯಾಗಿ ದೈವರಾತರ ಪಾಣಿಗ್ರಹಣ ಮಾಡಿದ್ದು ದೈವರಾತರು ತಪವನ್ನಾಚರಿಸುತ್ತಿದ್ದ ಭೀಮಕೊಂಡದಲ್ಲಿ. ನಂತರ ಪದಾರ್ಪಣೆ ಮಾಡಿದ್ದು ಆಶ್ರಮಕ್ಕೆ. ಅಂದಿನಿಂದಲೇ ಆಶ್ರಮದ ಭಾರ ಅವಳ ಮೇಲೆ ಬಂದಿತ್ತು. ದೈವರಾತರ ದೀರ್ಘ ಅನುಪಸ್ಥಿತಿಗಳಲ್ಲಿ ಆಶ್ರಮದ ನಿರ್ವಹಣೆಯನ್ನು ನೋಡಿಕೊಳ್ಳಬೇಕಾಗುತ್ತಿತ್ತು. ವಿದ್ಯಾರ್ಥಿಗಳು, ತನ್ನ ಸ್ವಂತ ಮಕ್ಕಳು, ಆಶ್ರಮದ ಗಿಡಮರಗಳು, ಹಸು-ಕರುಗಳ ಪಾಲನೆ ಪೋಷಣೆಯಲ್ಲದೆ ಅಗ್ನಿಯ ಪರಿಚರ್ಯೆ ಇವೆಲ್ಲವುಗಳನ್ನು ಸಮರ್ಥವಾಗಿ ಜಾಣತನದಿಂದ ನಿರ್ವಹಿಸಿದ್ದು ಶ್ಲಾಘನೀಯ. ಅತೀವ ಸಂಪನ್ಮೂಲದ ಕೊರತೆಯ ದಿನಗಳಲ್ಲಿ, ಕೆಲವು ಸಂದರ್ಭಗಳಲ್ಲಿ ದೈವರಾತರು ಎಲ್ಲಿದ್ದಾರೆ, ಯಾವಾಗ ಬರುತ್ತಾರೆ ಎಂಬ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲದಿದ್ದಾಗ ಸಾಧ್ವಿಯಾದ ಶ್ರದ್ಧಾದೇವಿ ಸಮಗ್ರ ಆಶ್ರಮವನ್ನು ಹೇಗೆ ನಡೆಸಿದ್ದಿರಬೇಕು ಎಂಬುದನ್ನು ಊಹಿಸಿದರೆ ಸಾಕು, ಆತಂಕ ಗಾಬರಿಗಳುಂಟಾಗುತ್ತವೆ ಎಂದಷ್ಟೇ ಹೇಳಬಹುದು. ಆದುದರಿಂದ ಶ್ರದ್ಧಾದೇವಿಯ ಪ್ರಸ್ತಾಪಮಾಡದಿದ್ದರೆ ದೈವರಾತರ ಚರಿತ್ರೆ ಅಪೂರ್ಣವೇ ಆಗಿಬಿಡುತ್ತದೆ. ದೈವರಾತರು ಕುಟುಂಬವತ್ಸಲರಾಗಿದ್ದರು. ದೈವರಾತರು ಶ್ರದ್ಧಾದೇವಿಯನ್ನು ಕುರಿತು ತಮ್ಮ ಅತ್ಯಂತ ನಿಕಟವರ್ತಿಗಳಲ್ಲಿ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತ ಅವಳ ನಿಷ್ಠೆ, ತ್ಯಾಗಗಳನ್ನು ಪ್ರಶಂಸಿಸುತ್ತಿದ್ದರು. ಆದರೆ ತಮ್ಮ ಧ್ಯೇಯಗಳಾದ ತಪಸ್ಸು, ಬರವಣಿಗೆಗಳಿಗೆ ಕುಟುಂಬವಾತ್ಸಲ್ಯ ಪ್ರತಿಬಂಧಕವಾಗುವದಕ್ಕೆ ಬಿಡದೆ ಸಂಚರಿಸುತ್ತಲೇ ಇದ್ದರು.

೭. ಗುರುಶುಶ್ರೂಷಾ ನಿರಾಡಂಬರಗಳೆಂಬ ದಿವ್ಯಮಂತ್ರಗಳು

ಗುರುಶುಶ್ರೂಷಯಾ ವಿದ್ಯಾ ಎಂಬ ಮಾತಿನ ಮೂರ್ತರೂಪವೇ ದೈವರಾತರು. ದೈವರಾತರು ಪಡೆದ ಸಿದ್ಧಿಗಳೆಲ್ಲವೂ ಗುರು ಅನುಗ್ರಹದಿಂದಲೇ ಪ್ರಾಪ್ತವಾದವುಗಳು. ಮೊದಲು ದೊರಕಿದವರು ಭಕ್ತಿ ಪಂಥದ ಸಂತರು. ಅನಂತರ ಕ್ರಮವಾಗಿ ವಾಸಿಷ್ಠ ಗಣಪತಿ ಮುನಿಗಳು, ಟೇಂಬೇ ಮಹಾರಾಜರು ಮತ್ತು ರಮಣ ಮಹರ್ಷಿಗಳು. ಈ ಎಲ್ಲ ಆಚಾರ್ಯರನ್ನು ದೈವರಾತರು ಸೇವಿಸಿದ ರೀತಿ ಅನ್ಯಾದೃಶವಾಗಿತ್ತು. ದೈವರಾತರ ನಿರ್ವ್ಯಾಜ ಭಕ್ತಿಯಿಂದ ಕೂಡಿದ ಸೇವೆಗೆ ಮೆಚ್ಚಿದ ಎಲ್ಲ ಆಚಾರ್ಯರೂ ತಮ್ಮಲ್ಲಿರುವ ದಿವ್ಯ ವಿದ್ಯೆಗಳನ್ನೆಲ್ಲಾ ಧಾರೆಯೆರೆದರು. ಅದೇ ಕಾಲಕ್ಕೆ ದೈವರಾತರ ಕೈಂಕರ್ಯದಲ್ಲಿ ಅಹಂಭಾವ, ಆಡಂಬರಗಳೂ ಇರಲಿಲ್ಲ. ಮುಂದೆ ದೈವರಾತರು ಸಿದ್ಧಿ-ಪ್ರಸಿದ್ಧಿಗಳನ್ನು ಹೊಂದಿದ ಮೇಲೂ ಅವರದು ಸರಳ ಸಾತ್ವಿಕ ವ್ಯಕ್ತಿತ್ವವೇ ಆಗಿತ್ತು. ಅವರಿದ್ದಲ್ಲಿ ಆಡಂಬರವಿರುತ್ತಿರಲಿಲ್ಲ. ಯಾರು ಬೇಕಾದರೂ ಅವರನ್ನು ಸಮೀಪಿಸಬಹುದಾಗಿತ್ತು, ಅವರೊಡನೆ ಸಂವಾದ-ಸಂವಹನ ನಡೆಸಬಹುದಾಗಿತ್ತು. ಇದು ಅವರನ್ನು ಬಲ್ಲವರೆಲ್ಲರೂ ವ್ಯಕ್ತಪಡಿಸಿದ ವಿಚಾರವಾಗಿದೆ.

೮. "ಬ್ರಾಹ್ಮಣಃ ಪಾಂಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್"

ದೈವರಾತರನ್ನು ಕುರಿತು ಸಾದ್ಯಂತವಾಗಿ ಅಭ್ಯಸಿಸಿ ಅವರ ಚರ್ಯೆಯನ್ನು ಪರಾಂಬರಿಸಿದಾಗ ಅವರನ್ನು ನೋಡದಿದ್ದರೂ ಅಂತಃಕರಣದಲ್ಲಿ ತನ್ನಿಂದ ತಾನೇ ಗೋಚರವಾಗುವ ಗುಣ ಎಂದರೆ ಅವರ ಬಾಲಭಾವ. ಅಲ್ಲಿ ತಮ್ಮ ಜ್ಞಾನ, ಧಾರ್ಮಿಕತೆ, ತಪಸ್ಸು ಅಧ್ಯಯನ ಮುಂತಾದವುಗಳ ಕುರಿತು ದರ್ಪಗರ್ವಗಳು ಇಲ್ಲ, ಅಲ್ಲಿ ಯಾರನ್ನು ಯಾವುದನ್ನು ಕುರಿತು ರಾಗವಾಗಲೀ, ದ್ವೇಷವಾಗಲೀ ಇಲ್ಲ, ಅಲ್ಲಿ ಬಾಲ್ಯಕಾಲೀನವಾದ ನಿರ್ಮಲಾಂತಃಕರಣವಿದೆ. ಮಂತ್ರದೃಷ್ಟಾರರಾದ ದೈವರಾತರ ತಪಸ್ಸಿದ್ಧಿಯ ಹೆಗ್ಗುರುತು ಇದಾಗಿದೆ. ಬೇರೆ ಬೇರೆಯ ಸಂದರ್ಭಗಳಲ್ಲಿ ಅವರಿಗೆ ಎದುರಾದ ವ್ಯಕ್ತಿಗಳು ಉಪಕಾರಮಾಡಿದರೂ, ಮೋಸಮಾಡಿದರೂ ದೈವರಾತರ ಪ್ರತಿಕ್ರಿಯೆ ಸಮಾನವೇ ಆಗಿತ್ತು. ದೈವರಾತರು ತಮ್ಮ ತಪಸ್ಸಿದ್ಧಿಯಿಂದ ಪ್ರಾಪ್ತಮಾಡಿಕೊಂಡ ಗುಣರತ್ನ ಇದಾಗಿತ್ತು.

೯. "ಪುರಾ ಅಪಿ ನವಃ"

ವೇದಕಾಲೀನವಾದ ಜೀವನಕ್ರಮವನ್ನು ಪುನರುತ್ಥಾನಗೊಳಿಸಿ, ಲೌಕಿಕ ಜೀವನ ಋಜುವಾಗಿರಬೇಕು ಅದು ಮುಕ್ತಿಗೆ ಸಾಧನವಾಗಬೇಕು ಎಂದು ಹಂಬಲಿಸಿ ಆಶ್ರಮಸ್ಥಾಪನೆಯನ್ನು ಮಾಡಿದ ದೈವರಾತರ ದೃಷ್ಟಿಕೋನ ಪೂರ್ಣವಾಗಿ ಸಂಪ್ರದಾಯ ಶರಣವಾದದ್ದಾಗಿರಲಿಲ್ಲ. ಸಂಪ್ರದಾಯಗಳಲ್ಲಿ ಮೂಲಭೂತವಾಗಿ ಕೆಲವು ಅಜ್ಞಾನ ಮೌಢ್ಯಗಳು ಸೇರಿಕೊಂಡಿರಬಹುದು ಎಂದು ವೇದ ವಾಙ್ಮಯದ ಮೂಲ ಆಶಯಗಳು ಏನು, ಎತ್ತ ಎಂದು ಚಿಂತನೆಯನ್ನು ನಡೆಸಿದವರು ದೈವರಾತರು. ವೇದವನ್ನೇ ಆಶ್ರಯಿಸಿ ಸ್ತ್ರೀಯರಿಗೂ ಉಪನಯನ ಸಂಸ್ಕಾರವನ್ನು ಮಾಡಬೇಕು ಎಂಬ ನಿರ್ಣಯಕ್ಕೆ ಬಂದು ತಮ್ಮ ಮಿತಿಯಲ್ಲಿ ಆಚರಣೆಗೂ ತಂದವರು ದೈವರಾತರು.

ಶಿಕ್ಷಣದ ಕುರಿತಾಗಿಯೂ ತಮ್ಮದೇ ಆದ ಧೋರಣೆಯನ್ನು ಹೊಂದಿದವರು ದೈವರಾತರು. ವಿವರವಾದ ಅವರ ಶಿಕ್ಷಣದ ಕುರಿತಾದ ಗ್ರಂಥ ಇಂದು ಉಪಲಬ್ಧವಿಲ್ಲದೇ ಹೋದದ್ದು ದುರ್ದೈವವಾಗಿದೆ.

ಆತ್ಮೋನ್ನತಿಯ ಸಾಧನದ ವಿಚಾರದಲ್ಲಿ ದೈವರಾತರದು ಸ್ಪಷ್ಟವಾದ ನಿಲುವು. ಬ್ರಾಹ್ಮಣನಿಗೆ ಸಮಾನವಾಗಿ ಬ್ರಾಹ್ಮಣೇತರರಿಗೂ ಈ ವಿಚಾರದಲ್ಲಿ ಎಲ್ಲಾ ವಿಧದಲ್ಲೂ ಹಕ್ಕಿದೆ ಎಂಬುದು ದೈವರಾತರ ವಿಚಾರವಾಗಿತ್ತು.

ವೇದವಾಙ್ಮಯ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳಲ್ಲಿಯೂ ದೈವರಾತರಿಗೆ ತಮ್ಮದೇ ಆದ ವಿಚಾರಪ್ರಣಾಲಿಯಿತ್ತು. ಮಂತ್ರಗಳಿಗೆ ಅರ್ಥವನ್ನು ನಿರ್ದಿಷ್ಟಪಡಿಸುವದೇ ಮೊದಲಾದ ವಿಚಾರಗಳಲ್ಲಿ ತಮ್ಮ ಈ ನಿಲುವನ್ನು ದೈವರಾತರು ಸ್ವ-ಗ್ರಂಥಗಳಲ್ಲಿ ಸಮರ್ಥವಾಗಿ ಪ್ರತಿಪಾದಿಸಿದ್ದಾರೆ. ಈ ಎಲ್ಲ ವಿಚಾರಗಳ ಹಿಂದೆ ದೈವರಾತರ ಅಧ್ಯಯನ, ಚಿಂತನೆ ಮತ್ತು ತಪಸ್ಸುಗಳಿದ್ದವೆಂಬುದನ್ನು ಮರೆಯುವಂತಿಲ್ಲ.

II. ಪ್ರಸ್ಥಾನ

ಬ್ರಹ್ಮರ್ಷಿ ದೈವರಾತರು ದಿವಂಗತರಾಗುವದಕ್ಕೆ ಒಂದು ವರ್ಷ ಮೊದಲು ಹುಬ್ಬಳ್ಳಿ ಧಾರವಾಡಗಳ ಮಧ್ಯದಲ್ಲಿ ನಡೆದ ರಸ್ತೆ-ಅಪಘಾತದಿಂದಾಗಿ ಗಾಯಗೊಂಡರು. ಅವರ ಕಾಲುಗಳಿಗೆ ಏಟು ಬಿದ್ದು ಹಾಸಿಗೆಯನ್ನು ಹಿಡಿಯುವಂತಾಯಿತು. ಅದರಿಂದ ಅವರು ಗುಣಮುಖರಾಗುತ್ತಿದ್ದರೂ ಅಪಘಾತದಲ್ಲಿ ಎದೆಗೆ ಆದ ಪೆಟ್ಟಿನಿಂದಾಗಿ ಅವರು ಚೇತರಿಸಿಕೊಳ್ಳಲಾಗಲಿಲ್ಲ.

೧೯೭೪ನೇ ಇಸ್ವಿಯಲ್ಲಿ ಈ ಅಪಘಾತ ಸಂಭವಿಸಿತು. ೧೯೭೫ನೇ ಅಗಷ್ಟ ೧೩ನೇ ದಿನಾಂಕದಂದು ದೈವರಾತರು ಇಹಲೋಕವನ್ನು ತ್ಯಜಿಸಿ ಅನಂತದಲ್ಲಿ ಒಂದಾದರು.

III. ಭರತವಾಕ್ಯ

ದೈವರಾತರು ಇದ್ದಾಗಲೇ ಅವರ ಆಶ್ರಮ ಪ್ರಾಕೃತಿಕ ಕಾರಣದಿಂದಲೂ ಇನ್ನಿತರ ಕಾರಣಗಳಿಂದಲೂ ಅವಸಾನವನ್ನು ಹೊಂದಿತ್ತು. ಅವರ ಕೃತಿಗಳಲ್ಲಿ ಕೆಲವು ಕೃತಿಗಳು ಪ್ರಕಟಗೊಂಡವಾದರೂ ಎಲ್ಲ ಕೃತಿಗಳು ಬೆಳಕನ್ನು ಕಾಣಲಿಲ್ಲ. ದುರ್ದೈವವೆಂದರೆ ಪ್ರಕಟವಾಗದೇ ಉಳಿದಿರುವ ಕೃತಿಗಳಲ್ಲಿ ಹೆಚ್ಚಿನ ಕೃತಿಗಳ ಹಸ್ತಪ್ರತಿಗಳೂ ಉಪಲಬ್ಧವಿಲ್ಲದಿರುವದು. ತಮ್ಮ ಆತ್ಮಚರಿತ್ರೆಯನ್ನು ಸಂಸ್ಕೃತದಲ್ಲಿ ಬರೆದಿದ್ದರೆಂದು ಹೇಳಲಾದರೂ ಅದೂ ನಷ್ಟವಾಗಿ ಹೋದದ್ದು ಇಂದು ಉಪಲಬ್ದವಿಲ್ಲದಂತಾಗಿದ್ದು ದೊಡ್ಡ ಕೊರತೆಯಾಗಿದೆ. ತಮ್ಮ ದಿನಚರಿಯನ್ನು ನಿಯತವಾಗಿ ಬರೆದಿಡುತ್ತಿದ್ದರು ಎಂದು ಕೇಳಿ ಬರುತ್ತದೆಯಾದರೂ ಅದು ಇಂದು ಉಪಲಬ್ಧವಿದ್ದರೆ ಅವರ ಚರಿತ್ರೆಯ ರಚನೆಗೆ ಪೂರ್ಣ ನ್ಯಾಯವನ್ನು ಒದಗಿಸಬಹುದಾಗಿತ್ತು.

ಈ ಎಲ್ಲ ಕೊರತೆಗಳ ನಡುವೆಯೂ ದೈವರಾತರ ಚರಿತ್ರೆ ನಿಶ್ಚಿತವಾಗಿಯೂ ವೇದಪುರುಷನನ್ನು ನಂಬುವವರಿಗೆ ಬೆಳಕನ್ನು ತೋರಿಸಬಲ್ಲದಾಗಿದೆ. ಅವರ ಭೌತಿಕ ಶರೀರ ಮರೆಯಾದರೂ ಅವರಿನ್ನೂ ತಮ್ಮ ಕೃತಿಗಳ ಮೂಲಕ ಚಿರಂಜೀವಿಯಾಗಿದ್ದಾರೆ.

೧೪. ದೈವರಾತರ ಆಚಾರ್ಯ ಪರಂಪರೆ

"ಆಚಾರ್ಯವಾನ್ ಪುರುಷೋ ವೇದ"
"ಪ್ರಾಪ್ಯ ವರಾನ್ ನಿಬೋಧತ" —ಶ್ರುತಿ

ದೈವರಾತರು ಶ್ರೇಷ್ಠರಾದ ಆಚಾರ್ಯರನ್ನು ಹೊಂದಿ ಶ್ರೇಷ್ಠವಾದದ್ದನ್ನೇ ಪಡೆದರು. ಅವರ ಆಚಾರ್ಯ ಪರಂಪರೆ ವಾಸ್ತವವಾಗಿ ಪ್ರಾರಂಭವಾಗುವದು ಅವರ ತಂದೆ ತಾಯಿಯರಿಂದಲೇ. ತಾಯಿಯು ಬಾಲ್ಯದಲ್ಲಿ ಭಕ್ತಿ, ಆಸ್ತಿಕ್ಯದ ಬೀಜಾರೋಪಣೆ ಮಾಡಿದರೆ ತಂದೆಯಾದ ವಿಘ್ನೇಶ್ವರ ಭಟ್ಟ ಭಡತಿಯವರು ದೈವರಾತರಿಗೆ ಉಪನಯನ ಸಂಸ್ಕಾರವನ್ನು ಮಾಡಿ ಗಾಯತ್ರೀ ಮಂತ್ರೋಪದೇಶ ನೀಡಿ ಋಗ್ವೇದವನ್ನು ಸ್ವಲ್ಪ ಅವಧಿಯವರೆಗೆ ಪಾಠ ಮಾಡಿದವರು. ಮುಂದೆ ದೈವರಾತರು ಮೈಯರ ಕೃಷ್ಣ ಭಟ್ಟರಿಂದ ಋಗ್ವೇದ ಅಧ್ಯಯನವನ್ನು ಮಾಡಿದರು. ಅಲ್ಲಿಂದ ಮುಂದೆ ದೊರಕಿದವರು ಸಂತ ರಾಮದಾಸ ಮಹಾರಾಜರು, ವಾಸಿಷ್ಠ ಗಣಪತಿ ಮುನಿಗಳು, ಟೇಂಬೇ ಮಹಾರಾಜರು ಮತ್ತು ರಮಣ ಮಹರ್ಷಿಗಳು. ಈ ನಡುವೆ ಬಲವಂತರಾವ್ ಭಾಗವತರೆಂಬವರಿಂದ ದೈವರಾತರು ಪಡೆದ ಯೋಗಾಭ್ಯಾಸವೂ ಉಲ್ಲೇಖಾರ್ಹವಾಗಿದೆ. ದೈವರಾತರ ಈ ಎಲ್ಲ ಆಚಾರ್ಯರ ಇತಿವೃತ್ತಗಳು ಇಂತಿವೆ.

೧. ಸಂತ ರಾಮದಾಸ ಮಹಾರಾಜರು

ಸಂತ ರಾಮದಾಸ ಮಹಾರಾಜರು ಇಂದಿನ ಮಧ್ಯ ಪ್ರದೇಶ ರಾಜ್ಯದ ಇಂದೂರ ಪ್ರಾಂತಕ್ಕೆ ಸೇರಿದವರಾಗಿದ್ದರು. ಆಗ ಇಂದೂರು ಒಂದು ಸ್ವತಂತ್ರ ಸಂಸ್ಥಾನವಾಗಿತ್ತು. ಆ ಪ್ರಾಂತದ ಒಂದು ಹಳ್ಳಿ ಬಡೌಡ ಸಂತ ರಾಮದಾಸರ ಹುಟ್ಟೂರು. ಅವರ ತಂದೆ ಕೃಷ್ಣರಾವ್ ಖೇರ. ಖೇರ ಮನೆತನ ಎಷ್ಟೋ ತಲೆಮಾರುಗಳಿಂದ ಆಸ್ತಿ, ಸಂಪತ್ತು ಮತ್ತು ಐಶ್ವರ್ಯಗಳನ್ನು ಹೊಂದಿದ

ಮನೆತನವಾಗಿತ್ತು. ಇಂದೂರಿನ ರಾಜಪ್ರಭುತ್ವವು ಖೇರ ಮನೆತನವನ್ನು ಐದು ಜಿಲ್ಲೆಗಳಿಗೆ ದಂಡಾಧಿಕಾರಿಯೆಂದು ನಿಯುಕ್ತಿಗೊಳಿಸಿತ್ತು. ತಮ್ಮ ತಂದೆಯಿಂದ "ಸರ್-ಸುಬಾ" ಎಂಬ ಮುದ್ರೆಯೊಂದಿಗೆ ಕೂಡಿದ ದಂಡಾಧಿಕಾರವನ್ನು ಪಡೆದ ರಾಮದಾಸರು ಅದರ ನಿರ್ವಹಣೆಗೆ ಉಜ್ಜಯಿನಿಯಲ್ಲಿ ವಾಸಮಾಡಿಕೊಂಡಿದ್ದರು. ಕೆಲವು ವರ್ಷಗಳ ವರೆಗೆ ರಾಮದಾಸರು ಸಂಪತ್ತು, ಅಧಿಕಾರಗಳನ್ನು ಅನುಭವಿಸಿದರು. ಅವರಿಗೆ ವಿವಾಹವಾಗಿ ಒಬ್ಬ ಮಗಳೂ ಹುಟ್ಟಿದಳು. ಲೌಕಿಕವಾಗಿ ಯಾವುದೆಲ್ಲ ಬೇಕು ಎಂದು ಸಾಮಾನ್ಯವಾಗಿ ಬಯಸಲಾಗುತ್ತದೆಯೋ ಅದೆಲ್ಲವೂ ಅವರಿಗೆ ದೊರಕಿದ್ದವು. ಪೂರ್ವಜನ್ಮದ ವಾಸನೆಯೋ ಎಂಬಂತೆ ಅನಂತರ ಅವರಲ್ಲಿ ವಿರಕ್ತಿ ಭಾವ ಮೂಡಿತು. ಅವರು ಸಮರ್ಥರಾಮದಾಸರ ಭಕ್ತಿ ಪಂಥಕ್ಕೆ ಸೇರಿ ಸಂಪತ್ತು, ಅಧಿಕಾರಗಳನ್ನು ತ್ಯಾಗ ಮಾಡಿ ಭಜನೆ, ನರ್ತನ, ಧ್ಯಾನ ಮೊದಲಾದವುಗಳಲ್ಲಿ ತೊಡಗಿಕೊಂಡರು. ಕೌಟುಂಬಿಕವಾದ ಹೊಣೆಯನ್ನು ಕೊನೆಯತನಕ ಕರ್ತವ್ಯಭಾವದಿಂದ ನಿರ್ವಹಿಸಿದರು. ಧ್ಯಾನದ ಮುಂದಿನ ಸೋಪಾನಗಳನ್ನೇರುತ್ತ ಸಮಾಧಿ ಅವಸ್ಥೆಯನ್ನು ತಲುಪಿದರು. ದೈವರಾತರು ಸಂತ ಮಹಾರಾಜರಲ್ಲಿ ಶ್ರದ್ಧೆ, ಭಕ್ತಿಗಳ ಸ್ವರೂಪವನ್ನು ಕಲಿತುಕೊಂಡು ಭಕ್ತಿಯೋಗದ ದೀಕ್ಷೆಯನ್ನು ಪಡೆದರು. ಸಂತರನ್ನು ತ್ರಿಕರಣಪೂರ್ವಕವಾಗಿ ಸೇವಿಸಿದರು. ಒಮ್ಮೆ ಅವರನ್ನು ಅನುಸರಿಸಿ ಹೊರಟ ದೈವರಾತರು ತಿರುಗಿ ನೋಡದೇ ಸಂತರು ಸಮಾಧಿಯ ಮೂಲಕ ತನುತ್ಯಾಗ ಮಾಡಿದ ಮೇಲೆಯೇ ಮರಳಿ ಗೋಕರ್ಣಕ್ಕೆ ಬಂದರು.

೨. ಬಲವಂತರಾವ್ ಭಾಗವತರು

ಬಲವಂತರಾವ್ ಭಾಗವತರು ಎಂಬ ನೈಷ್ಠಿಕ ಬ್ರಹ್ಮಚಾರಿಗಳ ಸಂಪರ್ಕ-ಸಹವಾಸ ದೈವರಾತರಿಗೆ ಗೋಕರ್ಣದಲ್ಲಿಯೇ ದೊರೆಯಿತು. ಭಾಗವತರು ಸಂತ ರಾಮದಾಸ ಮಹಾರಾಜರ ಇಂದೂರು ಪ್ರಾಂತಕ್ಕೆ ಸೇರಿದವರಾಗಿದ್ದರಲ್ಲದೆ ರಾಮದಾಸರ ಸೋದರಮಾವನ ಪುತ್ರನೂ ಆಗಿದ್ದರು. ದೈವರಾತರು ರಾಮದಾಸ ಮಹಾರಾಜರೊಡನೆ ಉತ್ತರ ಭಾರತವನ್ನು ಸಂಚರಿಸಿ ಮರಳಿ ಗೋಕರ್ಣಕ್ಕೆ ಬಂದಾಗ ಭಾಗವತರು ಗೋಕರ್ಣದಲ್ಲಿದ್ದರು. ಆಗ ಅವರು ಗೋಕರ್ಣದ ಅಹಲ್ಯಾಬಾಯಿ ಛತ್ರದ ಸಮಗ್ರವಾದ ಉಸ್ತುವಾರಿಯನ್ನು ನೋಡಿಕೊಂಡಿರುವ ವ್ಯವಸ್ಥಾಪಕರಾಗಿದ್ದುಕೊಂಡು ಅಲ್ಲಿಯೇ ವಾಸವಾಗಿದ್ದರು. ಅವರು ತುಂಬ ಸರಳವಾದ ಮತ್ತು ಸಾತ್ತ್ವಿಕ ಜೀವನವನ್ನು ನಡೆಸುತ್ತ ಪ್ರತಿ ನಿತ್ಯವೂ ತಪ್ಪದೇ ನಿತ್ಯಕರ್ಮಗಳನ್ನು ಮಾಡುತ್ತ ಪ್ರಾಣಾಯಾಮಾದಿ

ಯೋಗಕ್ರಿಯೆಗಳನ್ನು ಅಳವಡಿಸಿಕೊಂಡು ಆಸಕ್ತರಿಗೆ ಯೋಗಕ್ರಿಯೆಗಳನ್ನು ಹೇಳಿಕೊಡುತ್ತಲಿದ್ದರು. ಉಳಿದ ವೇಳೆಯಲ್ಲಿ ಧ್ಯಾನವನ್ನು ಮಾಡುತ್ತಿದ್ದ ಅವರ ವ್ಯಕ್ತಿತ್ವ ಸಂತ ರಾಮದಾಸರ ಮರಣಾನಂತರ ಗೋಕರ್ಣಕ್ಕೆ ಮರಳಿದ್ದ ದೈವರಾತರ ಗಮನ ಸೆಳೆಯಿತು. ಬಲವಂತ ರಾಯರನ್ನು ಆಶ್ರಯಿಸಿ ದೈವರಾತರು ಯೋಗಾಭ್ಯಾಸವನ್ನು ಕಲಿಯುವದಕ್ಕೆ ಪ್ರಾರಂಭಿಸಿದರು. ಹಠಯೋಗದ ಪ್ರಾರಂಭದ ಹಂತದ ಕ್ರಿಯೆಗಳನ್ನು ದೈವರಾತರು ಅವರಿಂದಲೇ ಕಲಿತುಕೊಂಡರು.

ಕೆಲಕಾಲಾನಂತರ ಬಲವಂತರಾಯರು ಗೋಕರ್ಣದಿಂದ ಉತ್ತರಭಾರತದ ಕಡೆಗೆ ತೆರಳಿ ಬ್ರಹ್ಮಾನಂದ ಮಹಾರಾಜ ಎಂಬ ಗುರುಗಳನ್ನು ಆಶ್ರಯಿಸಿ ಸಂನ್ಯಾಸಾಶ್ರಮ ಸ್ವೀಕರಿಸಿದರು. ಅವರ ಸಂನ್ಯಾಸಾಶ್ರಮದ ಹೆಸರು ಪ್ರದ್ಯುಮ್ನಾನಂದ ಎಂದಾಗಿತ್ತು. ದೈವರಾತರು ಮುಂದೆ ಟೇಂಬೇ ಮಹಾರಾಜರನ್ನು ಅನುಸರಿಸಿ ಗರುಡೇಶ್ವರಕ್ಕೆ ಹೋದಾಗ ಅಲ್ಲಿ ಬ್ರಹ್ಮಾನಂದ ಮಹಾರಾಜರೊಂದಿಗೆ ಪ್ರದ್ಯುಮ್ನಾನಂದರೂ ಇದ್ದರೆಂದು ಏಳನೆಯ ಅಧ್ಯಾಯದಲ್ಲಿ ಪ್ರಸ್ತಾವಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

೩. ಶ್ರೀವಾಸುದೇವಾನಂದ ಸರಸ್ವತೀ ಸ್ವಾಮಿಗಳು

(ಟೇಂಬೇ ಮಹಾರಾಜರು) (೧೮೫೪-೧೯೧೪)

ಮಹಾಯೋಗಿಗಳೂ, ತಪಸ್ವಿಗಳೂ, ಆದ ಶ್ರೀ ವಾಸುದೇವಾನಂದ ಸರಸ್ವತಿ ಸ್ವಾಮಿಗಳು ಟೇಂಬೇ ಮಹಾರಾಜರೆಂದೇ ಪ್ರಸಿದ್ಧರಾಗಿದ್ದರು. ಟೇಂಬೇ ಎಂಬುದು ಅವರು ಹುಟ್ಟಿದ ಮನೆತನದ ಹೆಸರು. ಸಾಕ್ಷಾತ್ ದತ್ತಾತ್ರೇಯನ ಅವತಾರವೇ ಆಗಿದ್ದ ಟೇಂಬೇ ಮಹಾರಾಜರು ಶ್ರೀ ಶಂಕರಾಚಾರ್ಯರ ಅದ್ವೈತ ತತ್ತ್ವದ ಅನುಸಂಧಾನವನ್ನು ಮಾಡಿ ನಿರ್ಗುಣೋಪಾಸಕರಾಗಿ ಆತ್ಮತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡವರು ಎಂದು ಅವರನ್ನು ಪ್ರತ್ಯಕ್ಷವಾಗಿ ನೋಡಿದ ಸಾಧು ಸಂತರು ಹೇಳಿದ್ದಾರೆ.

ಟೇಂಬೇ ಮಹಾರಾಜರು ಮೂಲತಃ ಮಹಾರಾಷ್ಟ್ರ ರಾಜ್ಯದವರು. ಆ ರಾಜ್ಯದ ಕೊಂಕಣ ಪ್ರದೇಶದ ಸಾವಂತವಾಡಿಯ ಪವಿತ್ರ ನಿರ್ಮಲಾ ನದಿಯ ದಂಡೆಯ ಮೇಲಿರುವ ಮಾಣಗಾಂವ ಎಂಬ ಹಳ್ಳಿಯಲ್ಲಿ ಅವರು ಶ್ರೀ. ಶಾ. ಶಕೆ ೧೭೭೬ ಆನಂದನಾಮ ಸಂವತ್ಸರದ ವೈಶಾಖ ಕೃಷ್ಣ ಪಂಚಮಿಯ ದಿನ ಸೂರ್ಯೋದಯಕ್ಕೆ ಜನ್ಮವೆತ್ತಿದರು. (ಸನ್ ೧೮೫೪) ಅವರ ತಂದೆ ಅತ್ರಿ ಗೋತ್ರದ ಕರ್ಹಾಡ ಬ್ರಾಹ್ಮಣರು ಮತ್ತು ವಿರಕ್ತ

ಸ್ವಭಾವದವರಾಗಿದ್ದರು. ಆಗಾಗ ಗಾಣಗಾಪುರಕ್ಕೆ ಬಂದು ಶ್ರೀ ದತ್ತಾತ್ರೇಯನ ಉಪಾಸನೆ ಮಾಡುವವರಾದ ಅವರು ಒಮ್ಮೆ ಹನ್ನೆರಡು ವರ್ಷಗಳ ವರೆಗೆ ಗಾಣಗಾಪುರದಲ್ಲಿಯೇ ಇದ್ದುಬಿಟ್ಟಿದ್ದರು. ಸ್ವಪ್ನದಲ್ಲಿ ಶ್ರೀ ದತ್ತ ಭಗವಂತನೇ ಕಾಣಿಸಿಕೊಂಡು "ನಾನೇ ನಿಮ್ಮ ಮನೆಗೆ ಬರುತ್ತೇನೆ, ಇನ್ನು ನೀನು ಸ್ವಗ್ರಾಮಕ್ಕೆ ತೆರಳು" ಎಂದು ತಿಳಿಸಿದ ಮೇಲೆ ಗಣೇಶ ಭಟ್ಟರು ಮಾಣಗಾಂವಕ್ಕೆ ಮರಳಿದರು. ಆ ನಂತರವೇ ಟೇಂಬೇ ಮಹಾರಾಜರು ಗಣೇಶಭಟ್ಟ–ರಮಾಬಾಯಿ ದಂಪತಿಗಳಿಗೆ ಪುತ್ರನಾಗಿ ಹುಟ್ಟಿದ್ದು. ಮಗನಿಗೆ ವಾಸುದೇವ ಎಂದು ಹೆಸರಿಡಲಾಯಿತು. ಗಣೇಶ ಭಟ್ಟರಿಗೆ ಸಂಸಾರದ ವಿಷಯದಲ್ಲಿ ಮೊದಲಿನಿಂದಲೂ ಅನಾಸಕ್ತಿ ಇತ್ತು. ಇದರಿಂದಾಗಿ ಗಣೇಶ ಭಟ್ಟರ ತಂದೆಯಾದ ವೇದಸಂಪನ್ನರೂ ಯಾಜ್ಞಿಕರೂ ಆಗಿದ್ದ ಹರಿಭಟ್ಟರೇ ಕುಟುಂಬವನ್ನು ನಿರ್ವಹಿಸುತ್ತಿದ್ದರು. ವಾಸುದೇವ ಸ್ವಲ್ಪ ದೊಡ್ಡವನಾಗುತ್ತಿದ್ದಂತೆಯೇ ಹರಿಭಟ್ಟರೇ ಬಾಲಕನಿಗೆ ಸಂಸ್ಕೃತಾಭ್ಯಾಸವನ್ನು ಮಾಡಿಸಿದರು. ಎಂಟು ವರ್ಷವಾದಾಗ ವಾಸುದೇವನಿಗೆ ಉಪನಯನವಾಯಿತು. ಅನಂತರ ಹರಿಭಟ್ಟರೇ ವೇದವನ್ನು ಹೇಳಿಕೊಡುವುದಕ್ಕೆ ಪ್ರಾರಂಭ ಮಾಡಿದರು. ಹರಿಭಟ್ಟರು ಈ ಅವಧಿಯಲ್ಲಿ ಮರಣ ಹೊಂದಿದ್ದರಿಂದ ಆ ಹಳ್ಳಿಯ ವಿಷ್ಣುಭಟ್ಟರಲ್ಲಿ ವಾಸುದೇವನು ವೇದಾಭ್ಯಾಸವನ್ನು ಮುಂದುವರಿಸಿದನು.

ಇಪ್ಪತ್ತೊಂದನೆಯ ವಯಸ್ಸಿನಲ್ಲಿ ವಾಸುದೇವನಿಗೆ ಅನ್ನಪೂರ್ಣ ಎಂಬವಳೊಂದಿಗೆ ವಿವಾಹವಾಯಿತು. ಗೃಹಸ್ಥಾಶ್ರಮದಲ್ಲಿದ್ದರೂ ತಮ್ಮ ಸಾಧನೆಯಲ್ಲಿ ಯಾವ ಆಲಸ್ಯವನ್ನೂ ಮಾಡದೇ ಸಗುಣೋಪಾಸನೆಯನ್ನು ಮುಂದುವರಿಸಿದ್ದ ವಾಸುದೇವರು ಸ್ಮಾರ್ತಾಗ್ನಿಯ ಉಪಾಸನೆಯನ್ನು ಪ್ರಾರಂಭಿಸಿದರು. ಸಂಸ್ಕೃತದಲ್ಲಿ ಬರೆದ 'ದ್ವಿ ಸಾಹಸ್ರಿ' ಗ್ರಂಥ ಮತ್ತು ಅದರ ಕೊನೆಯಲ್ಲಿ ಬರೆದ ಎರಡು ಮಹತ್ತ್ವದ ಅಧ್ಯಾಯಗಳಾದ 'ಯೋಗರಹಸ್ಯ' ಮತ್ತು 'ಬೋಧರಸಹಸ್ಯ' ಗಳು ಈ ಅವಧಿಯಲ್ಲಿಯೇ ಅವರಿಂದ ರಚಿತವಾದವು. ಇದೇ ವೇಳೆಗೆ ವಾಸುದೇವರು ಒಂದು ಗಾಯತ್ರೀ ಪುರಶ್ಚರಣವನ್ನು ಮಾಡಿದರು. ಯೋಗಾಭ್ಯಾಸವಿಲ್ಲದೇ ಸಾಧನೆ ಪೂರ್ಣವಾಗಲಾರದೆಂದು ತಿಳಿದು ಊರ ಸನಿಹದಲ್ಲಿರುವ ಗುಡ್ಡದ ಮೇಲಿರುವ ಗುಹೆಯಲ್ಲಿ ಬಹಳ ದಿನ ಯೋಗಾಭ್ಯಾಸವನ್ನು ಮಾಡಿದರು.

ಕೆಲಕಾಲಾನಂತರ ಶ್ರೀ ದತ್ತಕ್ಷೇತ್ರವಾದ ನರಸೋಬಾವಾಡಿಗೆ ಹೋಗಿ ಶ್ರೀ ದತ್ತ ಭಗವಂತನ ಉಪಾಸನೆಯನ್ನು ಮಾಡಿದರು. ವಾಸುದೇವರಿಗೆ ದತ್ತಮಹಾರಾಜನು "ನಿಮ್ಮೂರಿಗೆ ಬಂದು ಏಳು ವರ್ಷಗಳ ಪರ್ಯಂತ

ಇರುತ್ತೇನೆ" ಎಂದು ದೃಷ್ಟಾಂತಿಕವಾಗಿ ಹೇಳಿದ ಮೇಲೆ ಅವರು ಸ್ವಗ್ರಾಮಕ್ಕೆ ಬಂದು ಚಿಕ್ಕ ಮಂದಿರವನ್ನು ಕಟ್ಟಿ ದತ್ತಮೂರ್ತಿಯನ್ನು ಪ್ರತಿಷ್ಠಾಪಿಸಿ ಏಳು ವರ್ಷಗಳ ವರೆಗೆ ಸಕಲ ವೈಭವದೊಂದಿಗೆ ಹಾಗೂ ವಿಶೇಷವಾದ ಉತ್ಸವಗಳೊಂದಿಗೆ ಶ್ರೀ ದತ್ತದೇವರ ಉಪಾಸನೆಯನ್ನು ಮಾಡಿದರು. ನರಸೋಬಾವಾಡಿಯಿಂದ ಮರಳಿ ಬಂದ ಮೇಲೆ ಶ್ರೀ ದತ್ತನ ಮೂರ್ತಿಯನ್ನು ಪ್ರತಿಷ್ಠಾಪಿಸುವದಕ್ಕೆ ಮೊದಲು ಕಠಿಣ ಹಾಗೂ ನಿಷ್ಠುರ ನಿಯಮಗಳಿಂದ ಕೂಡಿದ ಚಾಂದ್ರಾಯಣ ವ್ರತವನ್ನು ಆಚರಿಸಿಕೊಂಡಿದ್ದರು.

ಸಗುಣೋಪಾಸನೆಯಲ್ಲಿ ಸಿದ್ಧಿಯನ್ನು ಪಡೆದ ನಂತರ ನಿರ್ಗುಣೋಪಾಸನೆಗಾಗಿ ಉಪನಿಷತ್ತು ಮತ್ತು ಭಾಷ್ಯಗಳ ಶ್ರವಣ–ಮನನಾದಿಗಳನ್ನು ವಾಸುದೇವರು ಮಾಡತೊಡಗಿದರು. ದತ್ತಮೂರ್ತಿಯ ಸಂನಿಧಾನದಲ್ಲಿ ಭಗವಂತನ ನಿರ್ಗುಣ ನಿರಾಕಾರ ತತ್ತ್ವದ ಅನುಸಂಧಾನ ಮಾಡಿದ ವಾಸುದೇವರಿಗೆ ತತ್ತ್ವಜ್ಞಾನದ ಸಿದ್ಧಿಯುಂಟಾಯಿತು.

ಅದರ ನಂತರವೇ ಅವರು ಮಾಣಗಾಂವವನ್ನು ಬಿಟ್ಟು ಪತ್ನೀಸಮೇತರಾಗಿ ತೀರ್ಥಾಟನೆಗೆ ಹೊರಟರು. ಉಟ್ಟ ಬಟ್ಟೆಯಲ್ಲಿ ಹೊರಟ ಅವರು ತಿರುಗಿ ಆ ಹಳ್ಳಿಗೆಂದೂ ಬರಲಿಲ್ಲ. ಹಾಗೆ ಹೊರಟವರು ನರಸೋಬಾವಾಡಿ, ಕೊಲ್ಹಾಪುರ, ಪಂಢರಪುರ ಮೊದಲಾದ ಕ್ಷೇತ್ರಗಳನ್ನು ಸಂದರ್ಶಿಸಿ ಗೋದಾವರೀ ತೀರದ ಗಂಗಾಖೇಡ ಎಂಬ ಹಳ್ಳಿಯನ್ನು ಸೇರಿದರು. ಗಂಗಾಖೇಡವು ಅವರನ್ನಾಕರ್ಷಿಸಿತು. ಅಲ್ಲಿಯೇ ಕೆಲವು ಕಾಲ ತಂಗಿ ಧಾರ್ಮಿಕ ಆಚರಣೆಗಳಲ್ಲಿ ತೊಡಗಿಕೊಂಡರು; ತಪವನ್ನು ಆಚರಿಸುತ್ತಿದ್ದರು.

ಗಂಗಾಖೇಡದ ಅವರ ವಾಸ್ತವ್ಯದಲ್ಲಿಯೇ ಅವರಿಗೆ ಪತ್ನೀವಿಯೋಗವುಂಟಾಯಿತು. ಹಿಂದೆಂದೂ ನೋಡಿರದ ವಿಚಿತ್ರವಾದ ಖಾಯಿಲೆಯಿಂದ ನರಳುತ್ತ ಇರುವ ಪತ್ನಿಯು ಸಾಯುತ್ತಾಳೆ ಎಂದು ನಿಶ್ಚಿತವಾದ ಕೂಡಲೇ ಅವಳ ಕೊನೆಯ ಇಚ್ಛೆಯಂತೆ ಹಲವು ವಿಧದಲ್ಲಿ ದಾನಗಳನ್ನು ವಿಧಿವತ್ತಾಗಿ ಮಾಡಿದರು. ಅವಳ ಸಾವಿನ ನಂತರದ ಹನ್ನೆರಡು ದಿವಸಗಳು ಕಳೆದ ಕೂಡಲೇ ವಾಸುದೇವರು ಲೌಕಿಕ ಜೀವನಕ್ಕೆ ವಿದಾಯ ಹೇಳಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ವಾಸುದೇವಾನಂದ ಸರಸ್ವತಿ ಸ್ವಾಮಿಗಳೆಂಬ ಅಭಿಧಾನದಿಂದ ಉತ್ತರ ದಿಕ್ಕಿನ ಕಡೆಗೆ ಪ್ರಯಾಣ ಬೆಳೆಸಿದರು. ಹೀಗೆ ಆರಂಭವಾದ ಅವರ ಪ್ರಯಾಣ ನಂತರದ ಅವರ ಜೀವನದಲ್ಲಿ

ನಿರಂತರವಾಗಿ ಮುಂದುವರಿಯಿತು. ಪಾದಚಾರಿಗಳಾಗಿಯೇ ಅವರು ಹಲವು ಬಾರಿ ಆಸೇತು ಹಿಮಾಚಲವನ್ನು ಸುತ್ತಿದ್ದಾರೆ. ಆಸ್ತಿಕರನ್ನು ಅವರವರ ಪಾತ್ರತೆಗೆ ತಕ್ಕಂತೆ ತಮ್ಮಲ್ಲಿರುವ ವಿದ್ಯೆಗಳ ಉಪದೇಶದಿಂದ ಉದ್ಧರಿಸಿದ್ದಾರೆ.

ಶ್ರೀ ಶಂಕರ ಭಗವತ್ಪಾದರ ಅದ್ವೈತ ಸಿದ್ಧಾಂತವನ್ನು ಟೇಂಬೇ ಮಹಾರಾಜರು ಒಪ್ಪಿಕೊಂಡವರಾದ್ದರಿಂದ ಅವರ ಗ್ರಂಥಗಳಲ್ಲಿ ಅದ್ವೈತ ಸಿದ್ಧಾಂತವೇ ಪ್ರತಿಪಾದನೆ ಮಾಡಲ್ಪಟ್ಟಿದ್ದು ಸಹಜವೇ ಆಗಿದೆ. ಸಂಸ್ಕೃತ ಮತ್ತು ಮರಾಠಿಯಲ್ಲಿ ನಲ್ವತ್ತು ಗ್ರಂಥಗಳನ್ನು ಅವರು ರಚಿಸಿದ್ದಾರೆ.

ನರ್ಮದಾ ನದಿಯ ತೀರದ ಮೇಲೆ ಬಡೋದೆಯಿಂದ ಸುಮಾರು ಎಪ್ಪತ್ತು ಮೈಲು ದೂರವಿರುವ ಗರುಡೇಶ್ವರ ಕ್ಷೇತ್ರದಲ್ಲಿ ಶ್ರೀವಾಸುದೇವಾನಂದ ಸರಸ್ವತಿ ಸ್ವಾಮಿಗಳು ಸನ್ ೧೯೧೪ರಲ್ಲಿ (ಶಾ. ಶಕೆ ೧೮೩೬ನೇ ಆಷಾಢ ಶುದ್ಧ ಪ್ರತಿಪದೆ) ಇಹಲೋಕ ವ್ಯಾಪಾರವನ್ನು ಮುಗಿಸಿ ಮುಕ್ತರಾದರು.

೪. ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿಗಳು

ಕಾವ್ಯಕಂಠ ಗಣಪತಿ ಮುನಿಗಳು ಜನ್ಮ ತಳೆದದ್ದು ಆಂಧ್ರಪ್ರದೇಶದ ಇಂದಿನ ವಿಶಾಖಪಟ್ಟಣ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಬೊಬ್ಬಿಲಿ ಪ್ರಾಂತದ ಕಲವರಾಯಿ ಗ್ರಾಮದಲ್ಲಿ. ನರಸಿಂಹಶಾಸ್ತ್ರಿ ಮತ್ತು ನರಸಮಂಬಾ ಇವರ ತಂದೆತಾಯಿಗಳು. ದಂಪತಿಗಳು ಆಸ್ತಿಕ್ಯ ಬುದ್ಧಿ ಸಂಪನ್ನರು. ಇಬ್ಬರೂ ದೇವತೋಪಾಸಕರು. ನರಸಿಂಹ ಶಾಸ್ತ್ರಿಗಳು ಆಯುರ್ವೇದ, ಜ್ಯೋತಿಷ ಮತ್ತು ತಂತ್ರಶಾಸ್ತ್ರ ವಿದ್ಯಾಸಂಪನ್ನರಾಗಿದ್ದರು. ಶಾಸ್ತ್ರಿಗಳು ಋಗ್ವೇದಿಗಳು ಮತ್ತು ಅವರದು ಕೌಂಡಣ್ಯ ಗೋತ್ರ. ತಾಯಿ ನರಸಮಂಬಾ ಸೂರ್ಯೋಪಾಸಕಳಾಗಿದ್ದರೆ ತಂದೆ ಗಣಪತಿ ಉಪಾಸಕರು. ಒಮ್ಮೆ ಆಂಧ್ರಪ್ರದೇಶದ ಅರಸವಲ್ಲಿ ಎಂಬ ಸೂರ್ಯಕ್ಷೇತ್ರದಲ್ಲಿ ನರಸಮಂಬಾಳು ಪತಿ ಉಪದೇಶಿಸಿದ ಸೂರ್ಯ ಅಷ್ಟಾಕ್ಷರೀ ಮಂತ್ರದ ಮೂಲಕ ಸೂರ್ಯನನ್ನು ಉಪಾಸನೆ ಮಾಡುತ್ತ ಕೆಲವು ದಿನಗಳನ್ನು ಕಳೆಯುತ್ತಿದ್ದಳು. ಒಂದು ದಿನ, ಅಂದು ರಥಸಪ್ತಮಿಯ ದಿನ, ಅವಳಿಗೆ ಕನಸಿನಲ್ಲಿ ಸೂರ್ಯ ಮಂಡಲದಿಂದ ಒಂದು ದೇದೀಪ್ಯಮಾನವಾದ ಬೆಳಕಿನ ಪುಂಜ ಅವಳ ಮಡಿಲನ್ನು ಬಂದು ಸೇರಿದ ಹಾಗೆ ಕಂಡಿತು. ಅದೇ ಅವಧಿಯ ಸುಮಾರಿಗೆ ನರಸಿಂಹ ಶಾಸ್ತ್ರಿಗಳು ವಾರಾಣಸಿಯಲ್ಲಿ ತಮ್ಮ ಇಷ್ಟದೇವತೆಯಾದ ಗಣಪತಿಯನ್ನು ಆರಾಧಿಸಿದ್ದರು. ಅದರ ನಂತರವೇ ಆ ದಂಪತಿಗಳಿಗೆ ಎರಡನೆಯ ಪುತ್ರ ಹುಟ್ಟಿದ. ಬಾಲಕನಿಗೆ ಗಣಪತಿಯೆಂದು ನಾಮಕರಣ ಮಾಡಲ್ಪಟ್ಟಿತು. ಬಹುಧಾನ್ಯ ಸಂವತ್ಸರದ

ಕಾರ್ತಿಕ ಮಾಸ ಕೃಷ್ಣ ಅಷ್ಟಮಿಯಂದು (೧೮-೧೧-೧೮೭೮) ಬಾಲಕನ ಜನನವಾಯಿತು. ಬಾಲ್ಯದ ಆರು ವರ್ಷಗಳ ವರೆಗೆ ಬಾಲಕನಿಗೆ ಬಾಲಗ್ರಹ ಪೀಡೆಯಿಂದಾಗಿ ತೀವ್ರ ಪಿತ್ತವಿಕಾರ, ಅಪಸ್ಮಾರ ಮುಂತಾದ ತೀವ್ರ ಕಾಯಿಲೆಗಳು ಕಾಡಿದವು. ಗಣಪತಿಯು ಮೂಕನೂ ಆಗಿ ತಂದೆ ತಾಯಿಗಳಿಗೆ ಆರಂಭದಲ್ಲಿ ಆತಂಕ, ಗಾಬರಿಗಳನ್ನುಂಟು ಮಾಡಿದ. ಈ ಸ್ಥಿತಿಯಲ್ಲಿಯೇ ಪಾಲಕರು ಬಾಲಕನಿಗೆ ಉಪನಯನವನ್ನು ಮಾಡಿದರು. ಗಾಯತ್ರೀ ಮಂತ್ರೋಪದೇಶ ಮಾಡಿದರು. ಇದಾಗಿ ಕೆಲವಾರು ತಿಂಗಳುಗಳಲ್ಲಿ ಅವನ ಎಲ್ಲ ವಿಕಲತೆಗಳೂ ಸಾವಕಾಶವಾಗಿ ಮಾಯವಾದವು.

ಬಾಲಕನಿಗೆ ವೇದ-ಶಾಸ್ತ್ರಗಳ ಅಭ್ಯಾಸ ಪ್ರಾರಂಭವಾಯಿತು. ವಯಸ್ಸಿಗೆ ಮೀರಿದ ವೇಗದಲ್ಲಿ ಬಾಲಕನ ಅಭ್ಯಾಸ ನಡೆಯಿತು. ಗಣಪತಿಯ ಅಸಾಮಾನ್ಯವಾದ ಪ್ರತಿಭೆ ಅಭಿವ್ಯಕ್ತವಾಗುವದಕ್ಕೆ ಪ್ರಾರಂಭವಾಯಿತು. ಅಷ್ಟು ಸಣ್ಣ ವಯಸ್ಸಿನಲ್ಲಿಯೇ ಅವನು ಅಸಾಧಾರಣ ವಾಗ್ಮಿಯಾಗತೊಡಗಿದ್ದ. ಮತ್ತು ವಿಶೇಷವೆಂದರೆ ಸಾಲಂಕೃತ ಕನ್ಯೆಯಂತೆ ಸಹಜ ಪ್ರತಿಭಾ ಸಮನ್ವಿತವಾದ ಛಂದೋಮಯ ವಾಣಿ ಬಾಲಕನಿಗೆ ಸಿದ್ಧಿಸಿತ್ತು. ಅವನ ನಾಲಿಗೆಯಲ್ಲಿ ಆಶುಕವಿತ್ವ ರಾರಾಜಿಸತೊಡಗಿತು. ಏಳೆಂಟು ವರ್ಷಕ್ಕೆಲ್ಲ ಬಾಲಕ ಭಾರತೀಯ ತತ್ತ್ವಶಾಸ್ತ್ರಕ್ಕೆ ಸೇರಿದ ನ್ಯಾಯ ಮೀಮಾಂಸಾದಿ ಶಾಸ್ತ್ರಗಳನ್ನು ಅಭ್ಯಾಸ ಮಾಡತೊಡಗಿದ. ಹತ್ತನೆಯ ವರ್ಷಕ್ಕೆ ಪಂಚಾಂಗ ಗಣನೆ ಮಾಡಿದ ಗಣಪತಿಯು ಹನ್ನೆರಡನೆಯ ವಯಸ್ಸಿಗೆ ಕಾಳಿದಾಸನ ಮೇಘದೂತವನ್ನು ಅನುಸರಿಸಿ ಭೃಂಗಸಂದೇಶ ಎಂಬ ಖಂಡಕಾವ್ಯವನ್ನು ಸಂಸ್ಕೃತದಲ್ಲಿ ರಚಿಸಿದ್ದ.

ಗಣಪತಿ ಮುನಿಗಳಿಗೆ ಹದಿನಾರನೆಯ ವಯಸ್ಸಿನಲ್ಲಿ ವಿಶಾಲಾಕ್ಷಿಯೊಂದಿಗೆ ವಿವಾಹವೇರ್ಪಟ್ಟಿತು. ಈ ಎಲ್ಲವುಗಳ ನಡುವೆ ಗಣಪತಿಮುನಿಗಳ ಅಂತಃಕರಣ ತಪಸ್ಸಿನ ಕಡೆಗೆ ಪರಿವರ್ತಿತವಾಗುತ್ತಲೇ ಬಂದಿತ್ತು. ಉಪನಯನಾನಂತರ ಕ್ರಮವಾಗಿ ಶಾಸ್ತ್ರಾಧ್ಯಯನ ಮೊದಲಾದವು ನಡೆದಂತೆ ತಂದೆಯಿಂದಲೇ ಉಪದಿಷ್ಟವಾಗಿದ್ದ ಶ್ರೀವಿದ್ಯಾ ಉಪಾಸನೆಯೇ ಮೊದಲಾದವುಗಳಿಂದಲೂ, ಸ್ತೋತ್ರಪಾಠ ಪೂಜಾದಿಗಳಿಂದ ಬಾಲ್ಯದಲ್ಲಿ ಬಿತ್ತಲ್ಪಟ್ಟಿದ್ದ ಶ್ರದ್ಧಾ ಬೀಜ ವರ್ಷ ಕಳೆದಂತೆ ಮೊಳಕೆಯೊಡೆದು ಬಲಿತು ಬೆಳೆದು ನಿಂತಿತ್ತು. ಇದರಿಂದಾಗಿ ಗಣಪತಿ ಮುನಿಗಳು ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ ತಂದೆಯ ಅನುಮತಿಯನ್ನು ಪಡೆದು ತೀರ್ಥಾಟನೆಗೆ ಹೊರಟರು. ಭುವನೇಶ್ವರ ಮುಂತಾದ ಊರುಗಳಲ್ಲಿ ತಪವನ್ನಾಚರಿಸುತ್ತ ಅವರು ಕಾಶಿ ಕ್ಷೇತ್ರವನ್ನು ತಲುಪಿ ಒಂದೆರಡು ವರ್ಷಗಳನ್ನೇ ತಪಸ್ಸಿನಲ್ಲಿಯೂ ಕಾಶಿಯ

ಶಿವಕುಮಾರ ಪಂಡಿತರೇ ಮುಂತಾದ ವಿದ್ವದ್ವರೇಣ್ಯರ ಸಹವಾಸದಲ್ಲಿಯೂ ಕಳೆದರು. ಅದೇ ವೇಳೆಗೆ ಬಂಗಾಲಪ್ರಾಂತದ ನವದ್ವೀಪದಲ್ಲಿ ಪಂಡಿತ ಪರಿಷತ್ ನಡೆಯಲಿದ್ದು ಅಲ್ಲಿ ಪಾಂಡಿತ್ಯ, ಕವಿತ್ವ ಪರೀಕ್ಷೆಗಳು ನಡೆಯಲಿವೆ ಎಂಬ ವಾರ್ತೆ ಕೇಳಿಬಂತು. ಆತ್ಮೀಯರ ಒತ್ತಾಸೆಯ ಮೇರೆಗೆ ಗಣಪತಿ ಮುನಿಗಳು ನವದ್ವೀಪಕ್ಕೆ ಹೋಗಿ ಪರೀಕ್ಷೆಯಲ್ಲಿ ಭಾಗವಹಿಸಿ ಅಂಬಿಕಾದತ್ತ ಎಂಬ ಆಶು ಕವಿಗಳಿಂದ ಪರೀಕ್ಷಿಸಲ್ಪಟ್ಟರು. ಸಮಸ್ಯಾಪರಾರ್ತಿಯೇ ಮುಂತಾದ ಎಲ್ಲ ವಿಧದ ಪರೀಕ್ಷೆಗಳಲ್ಲಿ ಅವರು ಉತ್ತೀರ್ಣರೂ ಆದರು. ಆಗ ಅವರಿಗೆ ಇಪ್ಪತ್ತೊಂದು ವರ್ಷ ವಯಸ್ಸು. ಪಂಡಿತ ಪರಿಷತ್ತು ಗಣಪತಿ ಮುನಿಗಳ ಪಾಂಡಿತ್ಯ ಮತ್ತು ವಿಶೇಷವಾಗಿ ಕವಿತ್ವವನ್ನು ಪ್ರಶಂಸಿಸಿ ಅವರನ್ನು 'ಕಾವ್ಯಕಂಠ' ಎಂಬ ಬಿರುದನ್ನಿತ್ತು ಸನ್ಮಾನಿಸಿತು.

ಅನಂತರ ಗಣಪತಿಮುನಿಗಳು ಉತ್ತರಭಾರತವನ್ನು ಸಂಚರಿಸಿ ದಕ್ಷಿಣಭಾರತದ ಕಡೆಗೆ ಹೋಗಿ ಕಾಂಚಿ ಮತ್ತು ಅರುಣಾಚಲಗಳನ್ನು ಸಂದರ್ಶಿಸಿ ತಪವನ್ನಾಚರಿಸಿ ಮದ್ರಾಸ ಪ್ರಾಂತದಲ್ಲಿ ಅಷ್ಟಾವಧಾನವನ್ನು ನಡೆಸುತ್ತ ಅದರಲ್ಲಿ ಅಪೂರ್ವಯಶಸ್ಸನ್ನು ಸಂಪಾದಿಸಿ ಪ್ರಥಿತರಾದರು. ಅರುಣಾಚಲದಲ್ಲಿದ್ದಾಗ 'ಬ್ರಾಹ್ಮಣ ಸ್ವಾಮಿ' (ರಮಣ ಮಹರ್ಷಿ) ಗಳನ್ನು ಒಂದೆರಡು ಬಾರಿ ನೋಡಿದ್ದರು. ಈಗ ಪುನಃ ಅರುಣಾಚಲಕ್ಕೆ ಬಂದು ಅಲ್ಲಿ ನಡೆಯುತ್ತಿರುವ ಕೃತ್ರಿಕೋತ್ಸವಗಳ ಪರ್ವದಲ್ಲಿ ಅವರು ರಮಣ ಮಹರ್ಷಿಗಳನ್ನು ಸಂದರ್ಶಿಸಿ ಗುರುವಾಗಿ ಸ್ವೀಕರಿಸಿದ್ದು. ಅಂದು ಸೋಮವಾರ ಕಾರ್ತಿಕ ಶುಕ್ಲ ಚತುರ್ದಶಿ (೧೮–೧೧–೧೯೦೭). ಗಣಪತಿ ಮುನಿಗಳು ಅರಣಗಿರಿಯಲ್ಲಿರುವ ಸಂತರನ್ನು ಕಂಡು ತಾವು ಎಷ್ಟೇ ಪ್ರಯತ್ನ ಮಾಡಿದರೂ ತಪಸ್ಸಿನ ಸ್ವರೂಪವನ್ನೇ ಸ್ಪರ್ಶಿಸಲಾಗದ ತಮ್ಮ ಅನುಭವವನ್ನು ತೋಡಿಕೊಂಡರು. "ನಾನು ನಾನು ಎಂಬುದು ಎಲ್ಲಿಂದ ಉದಯವಾಗುತ್ತದೆಯೋ ಅದನ್ನು ವಿಚಾರಿಸಿದಂತೆ ಮನಸ್ಸು ಅದು ಉದಯವಾಗುವ ಸ್ಥಾನದಲ್ಲಿಯೇ ಲೀನವಾಗುತ್ತದೆ; ಅದೇ ತಪವು. ಜಪಿಸುವ ಮಂತ್ರದ ಧ್ವನಿ ಎಲ್ಲಿಂದ ಉದಯವಾಗುತ್ತದೆ ಎಂದು ಅನ್ವೇಷಿಸಿ ಅದರ ಮೂಲವನ್ನು ಸೇರಬೇಕು ಅದು ತಪಸ್ಸು" ಎಂದು ಆ ಸಂತರು ಹೇಳಿದರು. ಆ ಸಂತರ ಅನುಯಾಯಿಯಿಂದ ಸಂತರ ಪೂರ್ವಾಶ್ರಮದ ಹೆಸರು ವೆಂಕಟರಮಣ ಎಂದು ತಿಳಿದು ಅವರನ್ನು ರಮಣ ಮಹರ್ಷಿಗಳೆಂದು ಕರೆದು ಪ್ರಚುರಪಡಿಸಿದರು. ಹೀಗೆ ರಮಣ ಮಹರ್ಷಿಗಳನ್ನು ಲೋಕಕ್ಕೆ ಪರಿಚಯ ಮಾಡಿದ ಸುಕೃತವು ಗಣಪತಿ ಮುನಿಗಳಿಂದಾಯಿತು.

ಆ ಜಗನ್ಮಾತೆಯ ಅನುಗ್ರಹದಿಂದಲೇ ಗುರುಪ್ರಾಪ್ತಿಯಾಯಿತೆಂದು ಕೃತಜ್ಞತೆಯಿಂದ 'ಉಮಾಸಹಸ್ರ' ಎನ್ನುವ ಅದ್ವಿತೀಯ ಸ್ತೋತ್ರವನ್ನು ಇಪ್ಪತ್ತು ದಿನಗಳಲ್ಲಿ ಗಣಪತಿ ಮುನಿಗಳು ರಚಿಸಿದರು.

ಇದಾದ ಮೇಲೆ ಗಣಪತಿ ಮುನಿಗಳು ಕಾಂಚಿ, ಕನ್ಯಾಕುಮಾರಿಕ್ಷೇತ್ರಗಳಲ್ಲಿ ತಪವನ್ನಾಚರಿಸಿ ಕರ್ಣಾಟಕ ಪ್ರಾಂತದ ಕಡೆಗೆ ಬಂದು ಗೋಕರ್ಣದಲ್ಲಿ ನೆಲೆಸಿದ್ದು. ಅಲ್ಲಿಯೇ ಗಣೇಶ ಎಂಬ ಯುವಕ ಶಿಷ್ಯನಾಗಿ ದೈವರಾತ ಎಂದು ಗಣಪತಿ ಮುನಿಗಳಿಂದ ಕರೆಯಲ್ಪಟ್ಟಿದ್ದ. ಮುಂದೆ ಗುರು ಶಿಷ್ಯರಿಬ್ಬರೂ ಬೇರೆ ಕ್ಷೇತ್ರಗಳಲ್ಲಿಯೂ ತಪೋನಿರತರಾದದ್ದು, ದೈವರಾತರಿಗೆ ಮಂತ್ರದರ್ಶನವಾದದ್ದು ಎಲ್ಲವೂ ನಡೆಯಿತು.

ಮಂತ್ರದರ್ಶನವಾದ ಮೇಲೆ ಸರಿಸುಮಾರು ಹತ್ತು ವರ್ಷಗಳ ನಂತರ ಗಣಪತಿಮುನಿಗಳು ದೈವರಾತರ ಅಭೀಷ್ಟದಂತೆ ದೈವರಾತರ ಆಶ್ರಮಕ್ಕೆ ಬಂದು ಗೋಕರ್ಣದಲ್ಲಿ ವಾಸ್ತವ್ಯಮಾಡಿದರು. ಅವರಿಗೆ ಪ್ರಕೃತಿಗೆ ಅನುಕೂಲ ಎಂದು ಘಟ್ಟದ ಮೇಲೆ ಶಿರಸಿ ತಾಲೂಕಿನ ದೈವರಾತರ ಸಹೋದರ ಸೀತಾರಾಮ ಭಡತಿಯವರ ಕುಳವೆ ಗ್ರಾಮದ ಮನೆಯಲ್ಲಿ ಬಂದು ಇರತೊಡಗಿದರು. ನಂತರ ಪುಂಡರೀಕರಾಯ ಪಂಡಿತರ ಆತ್ಮೀಯ ಆಮಂತ್ರಣದ ಮೇರೆಗೆ ಅವರ ನಿವಾಸದಲ್ಲಿ ತಮ್ಮ ಶಿಷ್ಯರೊಡನೆ ಗಣಪತಿ ಮುನಿಗಳು ಇರತೊಡಗಿದರು. ಶಿರಸಿಯಲ್ಲಿ ಮತ್ತು ಅದರ ಸುತ್ತಮುತ್ತ ಗಣಪತಿ ಮುನಿಗಳು ಖ್ಯಾತಿಯನ್ನು ಪಡೆದರು. ಈ ವಾಸ್ತವ್ಯಗಳ ವೇಳೆ ಹಲವು ಪವಾಡಸದೃಶ ಘಟನೆಗಳು ನಡೆದವು. ಗಣಪತಿ ಮುನಿಗಳು ತಮ್ಮ ಜೀವಿತದ ಕೊನೆಯ ಎರಡು ವರ್ಷಗಳನ್ನು ಖರಗಪುರದ ನಿಂಪುರಾ ಎಂಬ ಗ್ರಾಮದಲ್ಲಿ ತೀವ್ರ ತಪಶ್ಚರ್ಯೆಯಿಂದ ಕಳೆದರು.

ನಾಲ್ಕೈದು ವರ್ಷಗಳನ್ನು ಆನಂದಾಶ್ರಮದಲ್ಲಿ ಕಳೆದು ಕೊನೆಗೆ ಪುನಃ ತಮ್ಮ ಜನ್ಮಭೂಮಿಗೆ ಮರಳಿದರು. ಅವರು ಧಾತ್ರ ಸಂವತ್ಸರದ ಶ್ರಾವಣ ಶುಕ್ಲ ಸಪ್ತಮಿ ಶನಿವಾರ ತಮ್ಮ ಭೌತಿಕ ಶರೀರವನ್ನು ಬಿಟ್ಟರು (೨೫–೭–೧೯೩೬). ಗಣಪತಿ ಮುನಿಗಳು ರಮಣ ಮಹರ್ಷಿಗಳನ್ನು ಲೋಕಕ್ಕೆ ಪರಿಚಯಿಸಿ ಮಹದುಪಕಾರ ಮಾಡಿದ ಸಿದ್ಧಪುರುಷರು, ಕೊನೆಯ ತನಕ ತಾವೆಲ್ಲಿಯೇ ಇದ್ದರೂ ತಮ್ಮ ಗುರುಗಳಾದ ರಮಣರೊಂದಿಗೆ ನಿರಂತರ ಸಂಪರ್ಕವನ್ನು ಇಟ್ಟುಕೊಂಡಿದ್ದರು. ತಮ್ಮ ಸ್ವ–ಶಿಷ್ಯರೂ ರಮಣರ

ಸಂನಿಧಾನದಲ್ಲಿ ತಮಗೆ ಅಭಿವಾದನ ಮಾಡಬಾರದೆಂದು ರಮಣರೇ ಎಲ್ಲರ ಗುರುಗಳೆಂದೂ ನಂಬಿ ಅದರಂತೆಯೇ ನಡೆದುಕೊಂಡವರು ಆಗಿದ್ದರು. ಅವರ ಶಿಷ್ಯವತ್ಸಲ ಗುಣ ಅನುಪಮವಾಗಿತ್ತು. ದೈವರಾತರ ಮೇಲಿನ ಅವರ ಪ್ರೀತಿ, ಅಭಿಮಾನಗಳು ಮತ್ತು ಅಕ್ಕರೆ ದೈವರಾತರ ಸುಕೃತದಿಂದ ಪ್ರಾಪ್ತವಾಗಿತ್ತೆನ್ನಬೇಕು. ಅವರು ಶಿರಸಿಯ ವಾಸದಲ್ಲಿದ್ದಾಗ ಶ್ರೀಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನಕ್ಕೆ ತೆರಳಿ ಅಂದಿನ ಪೀಠಾಧೀಶರಾದ ಶ್ರೀ ಶ್ರೀ ಸರ್ವಜ್ಞೇಂದ್ರ ಸರಸ್ವತೀ ಸ್ವಾಮಿಗಳನ್ನು ದರ್ಶನ ಮಾಡಿದ್ದರು. "ಈ ಸಂಸ್ಥಾನ ಇನ್ನು ಶೀಘ್ರವಾಗಿ ಅಭ್ಯುದಯವನ್ನು ಹೊಂದುತ್ತದೆ" ಎಂದು ಹೊರಡುವಾಗ ಯಾದೃಚ್ಛಕವಾಗಿ ಅವರ ಬಾಯಿಂದ ಬಂದ ಮಾತು ಮುಂದೆ ಸತ್ಯವಾಯಿತೆಂದು ವಾಸಿಷ್ಠ ವೈಭವದಲ್ಲಿ ದಾಖಲಿಸಲಾಗಿದೆ. ಇದು ಅವರ ತಪಸ್ಸಿದ್ಧಿಯ ಒಂದು ಸಂಕೇತವಾಗಿದೆ. ಅವರನ್ನು ನೋಡಿದ ವೃದ್ಧರು ಈಗಲೂ ಅವರ ದಿವ್ಯ ವ್ಯಕ್ತಿತ್ವವನ್ನು ಸ್ಮರಿಸುತ್ತಾರೆ.

ವಾಸಿಷ್ಠ ಗಣಪತಿ ಮುನಿಗಳಿಂದ ರಚಿತವಾದ ಗ್ರಂಥಗಳ ಸಂಖ್ಯೆ ೩೦ಕ್ಕೂ ಅಧಿಕ, ಛಂದೋದರ್ಶನದ ಮೇಲಿನ ಅನ್ವಯ ಭಾಷ್ಯವೂ ಅವರ ಉತ್ಕೃಷ್ಟ ಕೊಡುಗೆಯಾಗಿದೆ. ವೇದೋಪನಿಷತ್ತುಗಳು, ಇತಿಹಾಸ ಪುರಾಣಗಳನ್ನು ಆಧರಿಸಿ ಬರೆದ ಅವರ ಗ್ರಂಥಗಳು ಆ ಪ್ರಾಚೀನ ಗ್ರಂಥಗಳ ಪ್ರಾಮಾಣಿಕ ಜಿಜ್ಞಾಸುಗಳಿಗೆ ಒಂದು ಹೊಸ ಅರ್ಥವಿಸ್ತಾರವಾದ ಬಾಗಿಲನ್ನೇ ತೆರೆಯುತ್ತವೆ. ಉಮಾ ಸಹಸ್ರದಂತಹ ಅವರ ಸ್ತೋತ್ರ ಕಾವ್ಯಗಳು ಶ್ರದ್ಧಾಳುಗಳಿಗೂ ಸಹೃದಯರಿಗೂ ಆಹ್ಲಾದವನ್ನುಂಟು ಮಾಡುವ ಕೃತಿಗಳು. ಆಯುರ್ವೇದ ಮತ್ತು ಜ್ಯೋತಿಷ್ಯ ಶಾಸ್ತ್ರದ ಮೇಲೂ ಅವರು ಗ್ರಂಥವನ್ನು ರಚಿಸಿದ್ದಾರೆ. ಅವರ ಶಿಷ್ಯರ ಮತ್ತು ಈ ಸನಾತನ ಪರಂಪರೆಯ ಮೇಲೆ ಅಭಿಮಾನ ಇಟ್ಟವರ ಪ್ರಯತ್ನದಿಂದ ಅವರ ಗ್ರಂಥಗಳು ಪ್ರಕಟಗೊಂಡಿರುವದು ಸಾರ್ಥಕವಾಗಿದೆ.

೫. ಶ್ರೀ ರಮಣ ಮಹರ್ಷಿಗಳು

ವೇದಭೂಮಿಯಾದ ಭಾರತದಲ್ಲಿ ಆತ್ಮಜ್ಞಾನಿಗಳ ಅವಿಚ್ಛಿನ್ನ ಪರಂಪರೆ ಮುಂದುವರಿದುಕೊಂಡು ಬರುತ್ತಿರುವದು ವಿಶೇಷವಾಗಿದೆ. ಸನಾತನ ಧರ್ಮವು ಕಾಲಕಾಲಕ್ಕೆ ತಾನೇ ವ್ಯಕ್ತರೂಪವನ್ನು ಧಾರಣೆ ಮಾಡಿ ಅಧ್ಯಾತ್ಮದ ಬೆಳಕನ್ನು ಪಸರಿಸುತ್ತಿದೆಯೋ ಎನ್ನುವಂತೆ ಮುಮುಕ್ಷುಗಳು, ಆತ್ಮಜ್ಞಾನಿಗಳು ಈ

ಭೂಮಿಯಲ್ಲಿ ಜನ್ಮಧಾರಣೆ ಮಾಡುತ್ತಲೇ ಇದ್ದಾರೆ. ಅಂತಹ ಶ್ರೇಷ್ಠ ಪರಂಪರೆಗೆ ಸೇರಿದವರು ಶ್ರೀ ರಮಣ ಮಹರ್ಷಿಗಳು, ರಮಣ ತಪೋಭೂಮಿಯಾದ ಅರುಣಾಚಲವು ಅವರು ಭೌತಿಕ ಶರೀರವನ್ನು ತ್ಯಾಗಮಾಡಿದ ಐವತ್ತು – ಅರವತ್ತು ವರ್ಷಗಳ ನಂತರವೂ ಅಧ್ಯಾತ್ಮ ಪಿಪಾಸುಗಳನ್ನು, ಮುಮುಕ್ಷುಗಳನ್ನು ಆಕರ್ಷಿಸುತ್ತಿದೆ. ಅರುಣಾಚಲದ ಆಶ್ರಮದಲ್ಲಿ ಇನ್ನೂ ಶ್ರೀರಮಣ ಮಹರ್ಷಿಗಳ ಜಾಗ್ರತ ಸಂನಿಧಾನ ಇದೆ ಎಂಬುದು ಆಸ್ತಿಕರ ಗಾಢವಾದ ನಂಬುಗೆ.

ತಮಿಳುನಾಡು ಪ್ರಾಂತದ ತಿರುಚ್ಚುಳಿ ಎಂಬ ಚಿಕ್ಕ ಹಳ್ಳಿಯಲ್ಲಿ ೧೮೭೯ನೇ ಇಸ್ವಿ ಡಿಸೆಂಬರ ೩೦ರಂದು ರಮಣಮಹರ್ಷಿಗಳ ಜನನವಾಯಿತು. ತಂದೆ ಸುಂದರಂ ಅಯ್ಯರ, ತಾಯಿ ಅಲಗಮ್ಮಾಳ. ತಂದೆ ಕರಣಿಕ ವೃತ್ತಿಯಿಂದ ಆರಂಭಿಸಿ ಆ ಕಾಲದಲ್ಲಿ ಆ ಕುಗ್ರಾಮದಲ್ಲಿ ಪ್ರಮಾಣ ಪತ್ರವಿಲ್ಲದೆ ವಕೀಲಿ ವೃತ್ತಿಯನ್ನು ನಡೆಸುವಷ್ಟು ಪ್ರಾವೀಣ್ಯವನ್ನು ಪಡೆದು ಆರ್ಥಿಕವಾಗಿ ಸಾಮಾಜಿಕವಾಗಿ ಗಣನೀಯವಾದ ಸ್ಥಾನಮಾನಗಳನ್ನು ಪಡೆದವರಾಗಿದ್ದರು. ಸುಂದರಂ ಅಯ್ಯರ ದಂಪತಿಗಳಿಗೆ ರಮಣರನ್ನೂ ಸೇರಿ ನಾಲ್ಕು ಮಕ್ಕಳಿದ್ದರು. ರಮಣರ ನಾಮಕರಣದ ಹೆಸರು ವೆಂಕಟರಾಮನ್ ಎಂಬುದಾಗಿತ್ತು. ಅಣ್ಣ ನಾಗಸ್ವಾಮಿ, ತಮ್ಮ ನಾಗಸುಂದರಂ, ಮತ್ತು ಒಬ್ಬಳು ಸಹೋದರಿ ಅಲಮೇಲು. ಎಲ್ಲ ವಿಧದಲ್ಲೂ ಸುಂದರಂ ಅಯ್ಯರರ ಮನೆ ಸಂತುಷ್ಟಿಯಿಂದ ಕೂಡಿದ್ದಾಗಿತ್ತು.

ವೆಂಕಟರಾಮನ್ ಹನ್ನೊಂದನೆಯ ವಯಸ್ಸಿನಲ್ಲಿ ಸಮೀಪದಲ್ಲಿದ್ದ ದಿಂಡಿಗಲ್ಲಿನ ಶಾಲೆಗೆ ಹೋಗಲಾರಂಭಿಸಿದ್ದ. ಆದರೆ ಹನ್ನೆರಡನೆಯ ವಯಸ್ಸಿನಲ್ಲಿದ್ದಾಗ ಸಂತೋಷದಿಂದ ಕೂಡಿದ್ದ ಆ ಮನೆತನಕ್ಕೆ ಸಿಡಿಲಿನಂತೆ ದುರ್ದೈವ ಬಂದೆರಗಿತು. ಮನೆಯನ್ನು ಸಂಪನ್ನವಾಗಿ ನಡೆಸುತ್ತಿದ್ದ ಯಜಮಾನ ಸುಂದರಂ ಅಯ್ಯರ ನಿಧನ ಹೊಂದಿದರು. ಇದರಿಂದಾಗಿ ಮನೆ ಚಲ್ಲಾಪಿಲ್ಲಿಯಾಗುವಂತಾಯಿತು. ಮಧುರೈಯಲ್ಲಿರುವ ತಂದೆಯ ಸಹೋದರನ ಮನೆಯನ್ನು ವೆಂಕಟರಾಮನ್ ಮತ್ತು ಇತರ ಮಕ್ಕಳು ಆಶ್ರಯಿಸಬೇಕಾಯಿತು.

ವೆಂಕಟರಾಮನ್‌ರ ಮುಂದಿನ ವಿದ್ಯಾಭ್ಯಾಸ ಮಧುರೈಯಲ್ಲಿ ನಡೆಯಿತು. ವಿದ್ಯಾರ್ಥಿದೆಸೆಯಲ್ಲಿ ಹೇಳಿಕೊಳ್ಳುವಂತಹ ಬುದ್ಧಿವಂತಿಕೆಯೇನೂ ಅವರದಾಗಿರಲಿಲ್ಲ. ಆದರೆ ಅವರು ಅಸಾಧಾರಣ ಸ್ಮರಣಶಕ್ತಿಯಿಂದಾಗಿ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಿದ್ದರು. ವರ್ಗಗಳಲ್ಲಿ ಒಂದು ಸಲ ಕೇಳಿದರೆ ಸಾಕಾಗುತ್ತಿತ್ತು, ಮತ್ತೆ ತಿರುಗಿ ಓದುವ ಪ್ರಮೇಯವಿರುತ್ತಿರಲಿಲ್ಲ. ಆ ಕಾಲದಲ್ಲಿ

ಅವರು ಹೆಚ್ಚಾಗಿ ನಿದ್ರೆಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದರು. ಸುದೃಢವಾದ ಆರೋಗ್ಯ, ಬಲಿಷ್ಠವಾದ ಶರೀರದಿಂದ ಕೂಡಿದ್ದ ವೆಂಕಟರಾಮನ್ ಮಧುರೈಯಲ್ಲಿನ ಸುಬ್ಬಯ್ಯರ ಎಂಬ ತಮ್ಮ ಚಿಕ್ಕಪ್ಪನ ಆ ಮನೆಯ ವಸತಿಯಲ್ಲಿಯೇ ಆತ್ಮಜಾಗ್ರತಿಯನ್ನು ತಮ್ಮ ಹದಿನಾರನೆಯ ವರ್ಷಕ್ಕೆ ಮೊದಲೇ ಪಡೆದುಕೊಂಡರು ಎಂದು ಅವರ ಜೀವನಚರಿತ್ರೆಗಳಲ್ಲಿ ವಿವರಿಸಲಾಗಿದೆ.

ಅರುಣಾಚಲದ ಹೆಸರನ್ನು ಮೊದಲನೆಯ ಸಲ ಕೇಳಿದಾಗಲೇ ವೆಂಕಟರಾಮನ್‌ರಿಗೆ ಮುಂದೆ ಅನತಿ ಕಾಲದಲ್ಲಿ ಉಂಟಾಗಿರುವ ಆತ್ಮಜ್ಞಾನದ 'ಮಹಾಜಾಗ್ರತಿ' ಯ ಪೂರ್ವಸೂಚನೆಯನ್ನು ಆ ಪವಿತ್ರ ಸ್ಥಾನ ಉಂಟುಮಾಡಿತು. ಇದು ನಡೆದದ್ದು ೧೮೯೫ನೇ ಇಸ್ವಿಯಲ್ಲಿ ಎಂದು ಅವರ ಚರಿತ್ರೆಗಳಲ್ಲಿ ದಾಖಲಿಸಲಾಗಿದೆ.

ತಮಿಳುನಾಡಿನಲ್ಲಿ ಆಗಿಹೋದ ಅರವತ್ಮೂರು ಶಿವಭಕ್ತರ ಕಥೆಗಳು ವೆಂಕಟರಾಮನ್‌ರ ಮೇಲೆ ಅಗಾಧ ಪ್ರಭಾವವನ್ನು ಬೀರಿತು. ಅವರ ಅಂತರಂಗದಲ್ಲಿ ಅನನ್ಯವಾದ ಅಧ್ಯಾತ್ಮದ ಪ್ರಜ್ಞಾ ಪ್ರವಾಹ ಪ್ರಾದುರ್ಭೂತವಾಗ ತೊಡಗಿದ್ದು ಆಗಲೇ. ಮೀನಾಕ್ಷಿದೇವಾಲಯಕ್ಕೆ ಹೋದಾಗಲೆಲ್ಲ ಈ ಪ್ರಜ್ಞಾ ಪ್ರವಾಹ ಜಾಗ್ರತವಾಗುತ್ತಿದ್ದುದನ್ನು ಶ್ರೀರಮಣ ಮಹರ್ಷಿಗಳೇ ನಂತರದ ಕಾಲದಲ್ಲಿ ಹೀಗೆ ವಿವರಿಸಿದ್ದು ಕಂಡುಬರುತ್ತದೆ–"ಮೊದಮೊದಲು ಯಾವುದೋ ಒಂದು ಬಗೆಯ ಜ್ವರವು ಬಂದಿರಬಹುದೆಂದು ನಾನು ಭಾವಿಸುತ್ತಿದ್ದೆ. ಹಾಗಿದ್ದರೆ, ಅದು ಸುಖದಾಯಕ ಜ್ವರವೇ ಇದ್ದುದರಿಂದ ಹಾಗೆಯೇ ಇರಲೆಂದು ನಿಶ್ಚಯಿಸಿದೆ"

ವೆಂಕಟರಾಮನ್‌ರ ಅಲೌಕಿಕ ಅನುಭವ ಸ್ಥಿರವಾಗಿ ಅವರು ಮಧುರೈಯನ್ನು ಬಿಟ್ಟು ತಿರುವಣ್ಣಾಮಲೈಗೆ ಹೋಗುವಂತಾಗಲು ಒಂದು ಘಟನೆ ನೆಪವಾಯಿತೆನ್ನಬೇಕು. ಒಂದು ದಿನ ವೆಂಕಟರಾಮನ್ ಒಬ್ಬರೇ ಕುಳಿತುಕೊಂಡಿದ್ದಾಗ ಸಾವಿನ ಭೀತಿ ಅವರನ್ನು ತೀವ್ರವಾಗಿ ತಟ್ಟಿತು. ಸಾವು ಬಂದರೆ ದೇಹ ಹೇಗಾಗುತ್ತದೆ ಎಂಬುದನ್ನು ಕಲ್ಪಿಸಿಕೊಂಡು ಉಸಿರು ಬಿಗಿ ಹಿಡಿದು ಮಲಗಿ ನೋಡಿಕೊಳ್ಳುತ್ತ ಏನೀ ಸಾವು? ಎಂದು ಮರಣದ ಕುರಿತಾಗಿ ಕಠೋರವಾದ ರೀತಿಯಲ್ಲಿ ಚಿಂತನೆ ನಡೆಸಿದರು. ಮರಣದ ನಂತರ ಈ ಶರೀರವನ್ನು ಸುಡುತ್ತಾರೆ. ಆಗ 'ನಾನೂ' ಸುಟ್ಟುಹೋಗುತ್ತೇನೆಯೇ? ಎಂಬಿತ್ಯಾದಿ ವಿಚಾರಗಳ ಜಿಜ್ಞಾಸೆಯಲ್ಲಿ ತೊಡಗಿಕೊಂಡರು. ಶರೀರ, ಬುದ್ಧಿ

ಮೊದಲಾದವುಗಳು ತಾನಲ್ಲ–ಮರಣ 'ನನ್ನನ್ನು' ಸ್ಪರ್ಶಿಸಲಾರದು–ಅರ್ಥಾತ್ ಆತ್ಮವು ದೇಹವನ್ನು ದಾಟಿನಿಂತದ್ದು–ಅದನ್ನು ಮರಣವು ಸ್ಪರ್ಶಿಸಲಾರದು. ಮರಣಾತೀತನಾದ ಆತ್ಮವೇ ನಾನು ಎಂಬ ಪ್ರಜ್ಞೆಯು ವೆಂಕಟರಾಮನ್‌ರಲ್ಲಿ ಸ್ಥಿರವಾಗಿ ಪ್ರಾದುರ್ಭೂತವಾಯಿತು. ಇದಾದ ನಂತರ ವೆಂಕಟರಾಮನ್‌ರು ಮಧುರೈಯಲ್ಲಿ ಕೆಲವು ಕಾಲ ಕಳೆದರಾದರೂ, ವಿದ್ಯಾಭ್ಯಾಸ ಮುಂದುವರಿಯಿತಾದರೂ ಅವರ ಎಲ್ಲ ಚಟುವಟಿಕೆಗಳಲ್ಲಿ ಆಮೂಲಾಗ್ರ ಬದಲಾವಣೆಯುಂಟಾಯಿತು. ಏನನ್ನೆ ಮಾಡುತ್ತಿದ್ದರೂ ಆತ್ಮನಿಷ್ಠೆಯ ಭಾವವೇ ಸ್ಥಾಯಿಯಾಗಿ ನಿಲ್ಲುತ್ತಿತ್ತು. ಮನೆಯಲ್ಲಾಗಲೀ, ಶಾಲೆಯಲ್ಲಾಗಲೀ, ಊಟಮಾಡುತ್ತಿರುವಾಗ, ಅಭ್ಯಾಸದಲ್ಲಿ ನಿರತನಾದಾಗ, ಓರಗೆಯ ಹುಡುಗರ ಒಡನಾಟವಾಗಲಿ – ಎಲ್ಲ ವೇಳೆಗಳಲ್ಲಿ, ಎಲ್ಲ ಕ್ರಿಯೆಗಳಲ್ಲಿ ಆತ್ಮನಿಷ್ಠೆಯಲ್ಲಿಯೇ ಅಂತಃಕರಣ ನಿಲ್ಲುತ್ತಿತ್ತು. ಮೀನಾಕ್ಷಿ ಮಂದಿರಕ್ಕೆ ಹೋಗುವದು; ಅಲ್ಲಿಯ ಶಿವ, ಮೀನಾಕ್ಷಿ, ನಟರಾಜ ಮತ್ತು ಅರವತ್ಮೂರು ಶಿವಭಕ್ತರ ವಿಗ್ರಹಗಳ ಎದುರಿಗೆ ಕಣ್ಣೀರು ಸುರಿಸುತ್ತ ನಿಲ್ಲುವದು, ಕೆಲವು ಸಲ ಪ್ರಾರ್ಥಿಸುವದು ಮಾತ್ರ ಹೆಚ್ಚಾಯಿತು.

ಅಧ್ಯಾತ್ಮದ ಸೆಳೆತ ಹೆಚ್ಚಾದಂತೆ ವಿದ್ಯಾಭ್ಯಾಸವೇ ಮುಂತಾದ ಎಲ್ಲ ಲೌಕಿಕ ವಿಷಯಗಳಲ್ಲಿಯೂ ಅನಾಸಕ್ತಿ ಸಹಜವಾಗಿಯೇ ತಲೆದೋರಿತು. ಅದರಿಂದ ಸಣ್ಣ ಪುಟ್ಟ ಶಿಕ್ಷೆಯನ್ನು ಅನುಭವಿಸುವಂತಾಯಿತು. ಅವರು ಆಗ ವಿದ್ಯಾಭ್ಯಾಸ ನಡೆಸುತ್ತಿದ್ದ ಅಮೇರಿಕನ್ ಮಿಶನ್ ಹೈಸ್ಕೂಲಿನಲ್ಲಿ ಇಂಗ್ಲೀಷ ವ್ಯಾಕರಣ ಸರಿಯಾಗಿ ಅಭ್ಯಾಸವಾಗಲಿಲ್ಲ ಎಂಬ ಕಾರಣಕ್ಕೆ ಮೂರು ಸಲ ಅದೇ ವಿಷಯವನ್ನು ಬರೆದುಕೊಂಡು ಬರುವಂತೆ ವಿಧಿಸಿದ್ದು ಒಂದು ಉದಾಹರಣೆ. ಅವರಲ್ಲಿ ಆತ್ಮಜ್ಞಾನದ ಗಾಢವಾದ ಪ್ರಜ್ಞಾಪ್ರವಾಹದ ಜಾಗ್ರತಿ ಆದ ನಂತರ ಎರಡು ತಿಂಗಳನ್ನು ಹೀಗೆ ಕಳೆದು ಒಂದು ಅವಕಾಶಕ್ಕಾಗಿ ಕಾಯುತ್ತಿದ್ದರೋ ಎನ್ನುವಂತೆ ಸಹೋದರರ ಕಾಲೇಜಿನ ಫೀ ಹಣವನ್ನು ಕಟ್ಟಿ ಬರುವದಕ್ಕೆಂದು ಕೊಟ್ಟ ಹಣದಲ್ಲಿ ಮೂರು ರೂಪಾಯಿಗಳನ್ನು ಮಾತ್ರ ತೆಗೆದುಕೊಂಡು ಅರುಣಾಚಲಕ್ಕೆ ಹೊರಟೇ ಬಿಟ್ಟರು. ಅದು ೧೮೯೬ನೇ ಅಗಸ್ಟ ತಿಂಗಳ ೨೯ನೇ ದಿನಾಂಕ. ಪ್ರಯಾಣದಲ್ಲಿ ತುಸು ಕಷ್ಟ ನಷ್ಟವನ್ನೂ ಅನುಭವಿಸಿದರು. ಎಲ್ಲಕ್ಕೂ ಕಾಲವೇ ಕಾರಣವೋ ಎಂಬಂತೆ ಕೊನೆಗೆ ಸಪ್ಟಂಬರ ಒಂದನೆಯ ದಿನಾಂಕದಂದು ಅರಣಾಚಲವನ್ನು (ತಿರುವಣ್ಣಾಮಲೈ) ಸೇರಿದರು.

ಸರಿಸುಮಾರು ಎರಡು ವರ್ಷಗಳಿಗೂ ಅಧಿಕಕಾಲ ತಿರುವಣ್ಣಾಮಲೈನ ವಿವಿಧ ಸ್ಥಾನಗಳಲ್ಲಿ ವೆಂಕಟರಾಮನ್‌ರು ಸಹಜ ಸಮಾಧಿ ಸ್ಥಿತಿಯಲ್ಲಿ ಮೈಮೇಲೆ ಎಚ್ಚರವಿಲ್ಲದೆ ತಪವನ್ನಾಚರಿಸುತ್ತಿದ್ದರು. ಶೇಷಾದ್ರಿ ಸ್ವಾಮಿಗಳು, ಪಳನಿ ಸ್ವಾಮಿಗಳು ಮುಂತಾದ ಅದೆಷ್ಟೋ ಸಾಧು–ಸಜ್ಜನರು ಅವರಿಗೆ ತಾವಾಗಿಯೇ ಮುಂದೆ ಬಂದು ಸಹಾಯ ಮಾಡಿದರು. ಮಹರ್ಷಿಗಳ ಪೂರ್ವಾಪರಗಳನ್ನೊಂದೂ ಅರಿಯದ ಭಕ್ತರು ಆಗ ಅವರನ್ನು ಬ್ರಾಹ್ಮಣ ಸ್ವಾಮಿಗಳೆಂದೇ ಕರೆಯುತ್ತಿದ್ದರು. ತಿರುವಣ್ಣಾಮಲೈನ ಓಣಿಓಣಿಗಳಲ್ಲಿ ತಿರುಗಿ ಭಿಕ್ಷಾಟನೆ ಮಾಡುತ್ತ ತಪಸ್ಸನ್ನು ಮಾಡುತ್ತಿದ್ದರು. ಮೊಟ್ಟ ಮೊದಲಿಗೆ ಅವರ ತಪಸ್ಸು ಪ್ರಾರಂಭವಾದದ್ದು ಅರುಣಾಚಲೇಶ್ವರ ದೇವಸ್ಥಾನದಲ್ಲಿಯೇ. ಕಾರಣಾಂತರದಿಂದ ಅವರ ರಕ್ಷಣೆಯ ಹೊಣೆಯನ್ನು ಸ್ವ–ಇಚ್ಛೆಯಿಂದಲೇ ಹೊತ್ತಿದ್ದ ಶೇಷಾದ್ರಿ ಸ್ವಾಮಿಗಳಂಥವರು ಅವರನ್ನು ಬೇರೆ ಬೇರೆ ಕಡೆಗಳಲ್ಲಿ ಇಟ್ಟು ಅವರು ತಪವನ್ನಾಚರಿಸುವದಕ್ಕೆ ಅನುವು ಮಾಡಿಕೊಟ್ಟರು. ಸುಬ್ರಹ್ಮಣ್ಯ ದೇವಸ್ಥಾನ, ಮಾವಿನತೋಟ, ಗುರುಮೂರ್ತಂ ಹೀಗೆ ವಿವಿಧ ಸ್ಥಾನಗಳಲ್ಲಿ ಅವರ ತಪಸ್ಸು ಅವ್ಯಾಹತವಾಗಿ ಮುಂದುವರಿಯಿತು. ಪಳನಿ ಸ್ವಾಮಿಗಳು ತರುವ ಪುಸ್ತಕಗಳನ್ನು ಓದಿ ಅವರಿಗೆ ಆ ಪುಸ್ತಕಗಳಲ್ಲಿ ನಿರೂಪಿಸಲ್ಪಟ್ಟ ತತ್ತ್ವಗಳನ್ನು ಹೇಳುತ್ತ ಹೇಳುತ್ತ ವಿದ್ವಾಂಸರೂ ಆದರು; ಸಂಸ್ಕೃತ, ತೆಲುಗು ಮತ್ತು ಮಲೆಯಾಳಂ, ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದರು. ಯದ್ಯಪಿ, ಅವರಿಗೆ ಅದ್ಯಾವುದೂ ಬೇಕಾಗಿರಲಿಲ್ಲವಾದರೂ ಇತರರಿಗಾಗಿ ಬೇರೆ ಬೇರೆ ಭಾಷೆಯಲ್ಲಿರುವ ಪುಸ್ತಕಗಳನ್ನು ಓದಿ ಅದರಲ್ಲಿರುವ ಅಧ್ಯಾತ್ಮ ತತ್ತ್ವಗಳನ್ನು ತಾವು ಈಗಾಗಲೇ ಅನುಭವದಿಂದ ಕಂಡುಕೊಂಡ ಆತ್ಮಜ್ಞಾನದ ಬೆಳಕಿನಲ್ಲಿ ಸರಳವಾಗಿ ವಿವರಿಸುತ್ತಿದ್ದರು.

ತಿರುವಣ್ಣಾಮಲೈಗೆ ಬಂದ ಸರಿಸುಮಾರು ಎರಡು ವರ್ಷಗಳ ನಂತರ ಮಹರ್ಷಿಗಳು ಬೆಟ್ಟದ ಮೇಲೆ ವಾಸಿಸತೊಡಗಿದ್ದು. ಅರುಣಾಚಲದ ವಿರೂಪಾಕ್ಷ ಗುಹೆಯಲ್ಲಿ ಅವರ ಗಿರಿಯ ಮೇಲಿನ ವಾಸ ಪ್ರಾರಂಭವಾಯಿತು. ಬೇಸಿಗೆಯಲ್ಲಿ ಮಾತ್ರ ವಿರೂಪಾಕ್ಷ ಗುಹೆ ಅತೀವ ಸೆಕೆಯಿಂದ ಕೂಡಿರುತ್ತಿತ್ತು. ಇದರಿಂದಾಗಿ ಬೆಟ್ಟದ ಬುಡದಲ್ಲಿ ಮುಲೈಪಾಲ್ ತೀರ್ಥವೆಂಬ ಕೆರೆಯ ಸಮೀಪದ ಒಂದು ಗುಹೆಯಲ್ಲಿ ವಾಸಮಾಡುತ್ತಿದ್ದರು. ೧೯೨೨ನೇ ಇಸ್ವಿಯಲ್ಲಿ ಗಿರಿಯ ಬುಡಕ್ಕೆ ಬಂದು ವಾಸಮಾಡುವವರೆಗೂ ಅವರು ಬೆಟ್ಟದ ಮೇಲಿನ ಒಂದಿಲ್ಲೊಂದು ಗುಹೆಯಲ್ಲಿ ವಾಸಮಾಡುತ್ತಿದ್ದರು. ವಿರೂಪಾಕ್ಷ ಗುಹೆಯನ್ನು ಬಿಟ್ಟು ಅದಕ್ಕೂ

ವಿಶಾಲವಾದ ಸ್ಕಂದಾಶ್ರಮದಲ್ಲಿಯೂ ಅವರು ವಾಸಿಸಿದರು. ಅವರ ತಾಯಿಯು ಹಲವು ಸಾಂಸಾರಿಕ ಕಷ್ಟನಷ್ಟಗಳಿಗೆ ಗುರಿಯಾಗಿ ಮಹರ್ಷಿಗಳ ಆಶ್ರಮದಲ್ಲಿಯೇ ಬಂದಿರತೊಡಗಿದಳು. ಅಣ್ಣ ಮರಣಹೊಂದಿದ್ದನು. ತಮ್ಮನೂ ಸಂನ್ಯಾಸದೀಕ್ಷೆಯನ್ನು ಪಡೆದು ಸ್ಕಂದಾಶ್ರಮವನ್ನು ಸೇರಿದನು. ೧೯೨೨ನೇ ಇಸ್ವಿಯಲ್ಲಿ ಗಿರಿಯಿಂದ ಇಳಿದು ತಮ್ಮ ತಾಯಿಯ ಸಮಾಧಿ ಸ್ಥಾನದಲ್ಲಿ ಬಂದು ಇರತೊಡಗಿದರು.

ರಮಣ ಮಹರ್ಷಿಗಳ ಜ್ಯೇಷ್ಠ ಶಿಷ್ಯರಲ್ಲಿ ಶಿವಪ್ರಕಾಶಂ ಪಿಳ್ಳೆ, ನಟೇಶ ಮೊದಲಿಯಾರ, ವಾಸಿಷ್ಠ ಗಣಪತಿ ಮುನಿಗಳು ಮತ್ತು ಎಚ್. ಎಫ್. ಹಂಫ್ರೀಸ್ ಎಂಬ ವಿದೇಶಿ ಶಿಷ್ಯ ಮುಂತಾದವರು ಸೇರಿದ್ದಾರೆ.

ರಮಣ ಮಹರ್ಷಿಗಳು ದೊಡ್ಡ ತತ್ತ್ವ–ಸಿದ್ಧಾಂತಗಳ ಪ್ರತಿಪಾದಕರೇನೂ ಆಗಿರಲಿಲ್ಲ. ಆದರೆ ತಮ್ಮ ಆತ್ಮಜ್ಞಾನದ ಪ್ರಖರವಾದ ಬೆಳಕಿನಲ್ಲಿ ಅವರು ವೇದೋಪನಿಷತ್ತುಗಳಲ್ಲಿ ಪ್ರತಿಪಾದ್ಯವಾದ ತತ್ತ್ವ ದರ್ಶನವನ್ನು ಸರಳವಾಗಿ ವಿವರಿಸಬಲ್ಲವರಾಗಿದ್ದರು. ಶ್ರೀ ಶಂಕರಾಚಾರ್ಯರ ಅದ್ವೈತ ಸಿದ್ಧಾಂತದ ಸಾರವೇ ಅವರ ಬರಹಗಳಲ್ಲಿ ಮತ್ತು ಶಿಷ್ಯರೊಂದಿಗಿನ ಸಂವಾದಗಳಲ್ಲಿ ಪ್ರಚಾರವಾಗಿದೆ. ಶ್ರೀ ಭಗವಾನರು ಒಮ್ಮೆ ತಮ್ಮ ಭಕ್ತರೊಬ್ಬರಿಗೆ ಈ ರೀತಿಯಾಗಿ ಹೇಳಿದ್ದರು– "ಶಂಕರಾಚಾರ್ಯರ ಮಾಯಾವಾದಕ್ಕಾಗಿ ಅವರು ಹೇಳಿದ ಅರ್ಥವನ್ನು ತಿಳಿದುಕೊಳ್ಳದೇ ಅವರನ್ನು ಟೀಕಿಸಲಾಗುತ್ತದೆ. ಅವರು ಮೂರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು: ಅದೇನೆಂದರೆ ಬ್ರಹ್ಮ ಸತ್ಯವಾದುದು, ಜಗತ್ತು ಅಸತ್ಯವಾದುದು ಹಾಗೂ ಬ್ರಹ್ಮವೇ ಜಗತ್ತು. ಎರಡನೆಯ ಹೇಳಿಕೆಯನ್ನು ಹೇಳಿ ಅವರು ಅಷ್ಟಕ್ಕೇ ನಿಲ್ಲಲಿಲ್ಲ–ಅವರ ಮೂರನೆಯ ಹೇಳಿಕೆ ಮೊದಲಿನ ಎರಡು ಹೇಳಿಕೆಗಳನ್ನು ವಿವರಿಸುತ್ತದೆ. ಅದರ ನಿಜಾರ್ಥವೆಂದರೆ ವಿಶ್ವವನ್ನು ಪರಬ್ರಹ್ಮದಿಂದ ಹೊರತುಪಡಿಸಿ ಅವಲೋಕಿಸಿದಾಗ ಆ ದೃಶ್ಯವು ಸುಳ್ಳು ಹಾಗೂ ಭ್ರಾಂತಿಕಾರಕವಾಗಿರುತ್ತದೆ. ಇದರ ತಾತ್ಪರ್ಯವೇನೆಂದರೆ ದೃಶ್ಯಗಳನ್ನು ಆತ್ಮನೆಂದು ಅನುಭವಿಸಿದಾಗ ಅವು ಸತ್ಯವಾಗಿರುತ್ತವೆ ಮತ್ತು ಆತ್ಮನಿಂದ ಬೇರೆಯಾಗಿ ಕಂಡಾಗ ಭ್ರಾಂತಿಕಾರಕವಾಗಿರುತ್ತವೆ."

ಶ್ರೀ ರಮಣ ಮಹರ್ಷಿಗಳು ಬಹಳಷ್ಟು ಗ್ರಂಥಗಳನ್ನೇನೂ ರಚಿಸಲಿಲ್ಲ. ವಿರೂಪಾಕ್ಷ ಗುಹೆ–ವಾಸದ ಮೊದಲ ವರ್ಷಗಳಲ್ಲಿ ಮೌನವ್ರತದಿಂದ ಇದ್ದಾಗ ಶಿಷ್ಯರೊಬ್ಬರಿಗಾಗಿ ಬರೆದ ಬೋಧನೆಗಳನ್ನು ಅನಂತರದ ಕಾಲದಲ್ಲಿ ಪರಿಷ್ಕರಿಸಿ

ಆತ್ಮವಿಚಾರ ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. ಶಿವಪ್ರಕಾಶಂ ಪಿಳ್ಳೆ ಎಂಬ ಇನ್ನೊಬ್ಬ ಶಿಷ್ಯರಿಗೆ ಕೊಟ್ಟ ಉತ್ತರಗಳನ್ನು 'ನಾನು ಯಾರು' ಎಂಬ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ. ರಮಣಾಶ್ರಮದಿಂದ ಪ್ರಕಟವಾದ ಇನ್ನಿತರ ಗ್ರಂಥಗಳೆಲ್ಲ ಬೇರೆ ಬೇರೆಯ ಸಂದರ್ಭದಲ್ಲಿ ಬೇರೆ ಬೇರೆ ಜಿಜ್ಞಾಸುಗಳಿಗೆ ಕೊಟ್ಟ ಉತ್ತರಗಳ ದಾಖಲೆಗಳಾಗಿವೆ.

ಪದ್ಯರೂಪದಲ್ಲಿ ಅವರ ಕೃತಿಗಳೆಂದರೆ ಶ್ರೀ ಅರುಣಾಚಲನಿಗಾಗಿ ಐದು ಸ್ತೋತ್ರಗಳು, ಉಳ್ಳದು ನಾರ್ಪದು ಮತ್ತು ತಮಿಳಿನಿಂದ ಸಂಸ್ಕೃತಕ್ಕೆ ಭಾಷಾಂತರಿಸಲ್ಪಟ್ಟ ಕೃತಿಯೊಂದು.

ಅವರು ಬರೆದ ಕಟ್ಟಕಡೆಯ ಬರಹವೆಂದರೆ ಶಂಕರಾಚಾರ್ಯರ ಆತ್ಮಬೋಧದ ತಮಿಳು ಭಾಷಾಂತರ. ಮಹರ್ಷಿಗಳ ಕೃತಿಗಳಲ್ಲಿ ಭಗವದ್ಗೀತಾಂತರ್ಗತವಾದ ನಲವತ್ತೆರಡು ಶ್ಲೋಕಗಳ ಸಂಗ್ರಹವೂ ಒಂದಿದೆ.

೧೯೪೮ನೇ ಇಸ್ವಿಯಿಂದಲೇ ಮಹರ್ಷಿಗಳ ಆರೋಗ್ಯ ಸ್ಥಿರವಾಗಿರಲಿಲ್ಲ. ಮುಂದೆ ೧೯೫೦ ಏಪ್ರಿಲ್ ೧೪ನೆಯ ದಿನಾಂಕದಂದು ಶ್ರೀ ರಮಣ ಮಹರ್ಷಿಗಳು ಭೌತಿಕ ಶರೀರವನ್ನು ತ್ಯಾಗ ಮಾಡಿದರು. ದೈವರಾತರು ರಮಣಮಹರ್ಷಿಗಳ ದಿವ್ಯ ಸಾಂನಿಧ್ಯದಲ್ಲಿ ಕೆಲವು ಕಾಲ ಕಳೆಯುವ ಭಾಗ್ಯವನ್ನು ಪಡೆದದ್ದು ಸಾರ್ಥಕವೇ ಆಗಿತ್ತು.

ಭಾಗ – ೨

೧೫. ದೈವರಾತರ ಕೃತಿಗಳು

ವಾಚಂ ದೇವೀಮ್ಮೃತವತೀಮನು ಬ್ರವೀಮಿ ಮನಸಾ ।
ಯಾ ದೇವಿ ಬ್ರಹ್ಮಣಸ್ಪತೇರೇಕಪದೀ ಯಾ ಬೃಹತೀ ॥

"ನಾನತ್ವಹೀನಳೂ ಅದರಿಂದ ಅದ್ವೈತಳಾದ, ಅವ್ಯಕ್ತಳೂ
ಅದರಿಂದ ಅಖಂಡಸ್ವರೂಪಿಣಿಯಾದ, ಅನಂತಳೂ ಆದ
ಬ್ರಹ್ಮಣಸ್ಪತಿಯ ದಿವ್ಯ ವಾಣಿಯನ್ನು ಕುರಿತು ನಾನು ಸ್ತುತಿಸುತ್ತೇನೆ"
–ಛಂದೋದರ್ಶನ–ಸರಸ್ವತೀಸೂಕ್ತ

೧. ಕೃತಿಗಳ ಅವಲೋಕನಕ್ಕೆ ಮೊದಲು

ಬ್ರಹ್ಮರ್ಷಿ ದೈವರಾತರು ತಮ್ಮ ಅವಿರತವಾದ ತಪಶ್ಚರ್ಯೆ, ನಿರಂತರವಾದ ಪ್ರವಾಸ, ಆಶ್ರಮದಲ್ಲಿ ಸತತ ಅಧ್ಯಯನ–ಅಧ್ಯಾಪನಗಳು ಇವೆಲ್ಲವುಗಳ ನಡುವೆಯೂ ಗ್ರಂಥಗಳನ್ನು ಬರೆದಿದ್ದಾರೆ. ಅವರ ಗ್ರಂಥಗಳು ಸಂಖ್ಯೆಯ ದೃಷ್ಟಿಯಿಂದಲೂ ತೀರಾ ಕಡಿಮೆ ಇಲ್ಲ; ಆದರೆ ಸಂಖ್ಯೆಗಳಿಗಿಂತಲೂ ಆ ಕೃತಿಗಳು ಗುಣ ಹಾಗೂ ಮೌಲ್ಯಗಳ ದೃಷ್ಟಿಯಿಂದ ಸಂಸ್ಕೃತ ಸಾಹಿತ್ಯಕ್ಕೆ ವಿಶೇಷವಾಗಿ ವೇದವಾಙ್ಮಯಕ್ಕೆ ಮಹತ್ತ್ವದ್ದಾದ ಕೊಡುಗೆಯಾಗಿವೆ. 'ಛಂದೋದರ್ಶನ' ದೈವರಾತರಿಗೆ ದರ್ಶನವಾದ ನೂತನ ಋಙ್ಮಂತ್ರಗಳ ಸಂಗ್ರಹವಾದರೆ ಅವರ ಉಳಿದ ಗ್ರಂಥಗಳು ಪ್ರಾಚೀನ ವೇದ ವಾಙ್ಮಯ ಮತ್ತು ತಾವೇ ದರ್ಶಿಸಿದ ನೂತನ ಮಂತ್ರಗಳ ಅರ್ಥವಿವೇಚನೆಗಳಿಗೇ ಹೆಚ್ಚಾಗಿ ಮೀಸಲಾಗಿವೆ. "ವೇದಾರ್ಥಕಲ್ಪಲತಿಕಾ', 'ವಾಕ್‌ಸುಧಾ', 'ವೇದ

ವೇದಿಕಾ', 'ಇಂದ್ರಯಜ್ಞ', ಮೊದಲಾದವುಗಳು ಮತ್ತು 'ಛಂದೋದರ್ಶನ' ಇವೆಲ್ಲ ಗ್ರಂಥಗಳೂ ದೈವರಾತರು ಬದುಕಿದ್ದಾಗಲೇ ದೇಶದ ವಿವಿಧ ಪ್ರತಿಷ್ಠಿತ ಪ್ರಕಾಶನ ಸಂಸ್ಥಾನಗಳಿಂದ ಪ್ರಕಟಗೊಂಡಿವೆ. ಅವುಗಳಲ್ಲಿ 'ಸಾಕ್ಷಾತ್ಕಾರಯೋಗ–ಸುಧಾ' ಎಂಬ ಶೀರ್ಷಿಕೆಯ ಗ್ರಂಥ ಮಾತ್ರ ಪ್ರಕಟಗೊಳ್ಳದಿರುವ ಗ್ರಂಥವಾಗಿದೆ. ದೈವರಾತರಿಗಾದ ಮಂತ್ರಗಳ ದರ್ಶನ ತಪಶ್ಚರ್ಯೆಯ ಫಲ; ಅವರ ಗ್ರಂಥಗಳು ಅವರ ಅಧ್ಯಯನರೂಪವಾದ ತಪಸ್ಸಿನ ಫಲವೇ ಆಗಿದೆ. ನಿರಂತರ ವ್ಯಾಸಂಗ, ಚಿಂತನೆಗಳಿಂದಾಗಿ ವೇದವಾಙ್ಮಯದ ಕುರಿತಾದ ಒಂದು ಸಮಗ್ರ ದೃಷ್ಟಿಕೋನ, ಧೋರಣೆ ದೈವರಾತರಲ್ಲಿ ಉದಯಿಸಿತ್ತೆಂಬುದು ಅವರ ಗ್ರಂಥಗಳ ಅವಲೋಕನದಿಂದ ವೇದ್ಯವಾಗುತ್ತದೆ. ವೇದಗಳ ಹಾಗೂ ವೇದಭಾಷ್ಯಗಳ ವಿಚಾರದಲ್ಲಿ ಸಾಂಪ್ರದಾಯಿಕವಾದ ಅಭಿಪ್ರಾಯಗಳು ಮತ್ತು ಪ್ರಾಚೀನ ಭಾಷ್ಯಕಾರರ ನಿಲುವುಗಳಿಂದ ಭಿನ್ನವಾದ ಸ್ವತಂತ್ರವಾದ ಸಿದ್ಧಾಂತ ಹಾಗೂ ಮಂತ್ರಗಳ ಅರ್ಥವಿವೇಚನೆಗಳನ್ನು ತಮ್ಮ ಗ್ರಂಥಗಳಲ್ಲಿ ದೈವರಾತರು ಧೈರ್ಯದಿಂದ ಪ್ರತಿಪಾದಿಸಿದ್ದಾರೆ. ಸಂಪ್ರತಿ, ಈ ಗ್ರಂಥದ ವ್ಯಾಪ್ತಿಗೆ ಉಚಿತವಾದ ರೀತಿಯಲ್ಲಿ ದೈವರಾತೀಯ ಗ್ರಂಥಗಳ ಸ್ಥೂಲವಾದ ಪರಿಚಯವನ್ನು ಸಂಗ್ರಹವಾಗಿ ಪ್ರತಿಪಾದಿಸುವ ಪ್ರಯತ್ನ ಮಾಡಲಾಗಿದೆ.

೨. ಛಂದೋದರ್ಶನ

ಪ್ರಕಟನಾ ವರ್ಷ : ೧೯೬೮
ಪ್ರಕಾಶಕರು : ಭಾರತೀಯ ವಿದ್ಯಾಭವನ, ಮುಂಬಯಿ

I. ಛಂದೋದರ್ಶನದ ಸಂರಚನೆ ಮತ್ತು ದೇವತೆಗಳು

ದೈವರಾತರಿಗಾದ ಮಂತ್ರದರ್ಶನ ವೃತ್ತಾಂತವನ್ನು ಹಿಂದೆಯೇ ಪ್ರಸ್ತಾವಿಸಲಾಗಿದೆ. ಮಂತ್ರಗಳನ್ನು ಸಂಗ್ರಹಿಸಿ ಅವುಗಳನ್ನು ದೇವತಾನುಸಾರವಾಗಿ ವಿಂಗಡಿಸಿ ಸಂಸ್ಕೃತದ ವಾಸಿಷ್ಠಾನ್ವಯ ಭಾಷ್ಯದೊಂದಿಗೆ ಸಮಲಂಕರಿಸಿ ಆಶೀರ್ವದಿಸಿದವರು ದೈವರಾತರ ಗುರುಗಳಾದ ವಾಸಿಷ್ಠ ಗಣಪತಿ ಮುನಿಗಳು. ಮಂತ್ರಗಳಿಗೆ ಇಂಗ್ಲೀಷ ಅನುವಾದವನ್ನು ರಚಿಸಿಕೊಟ್ಟವರು ದೇವುಡು ನರಸಿಂಹ ಶಾಸ್ತ್ರಿಗಳು ಮತ್ತು ಎಸ್. ಆರ್. ಮಳಗಿಯವರು. ಮಂತ್ರದರ್ಶನವಾಗಿ ಐವತ್ತು ವರ್ಷಗಳ ನಂತರ ಆರ್. ಆರ್. ದಿವಾಕರರ ಪ್ರಯತ್ನ ಪರಿಶ್ರಮಗಳಿಂದಾಗಿ ಭಾರತೀಯ ವಿದ್ಯಾಭವನ, ಮುಂಬೈಯಿಂದ ಪ್ರಕಟಗೊಂಡಿತು.

ದೈವರಾತರಿಗೆ ದರ್ಶನವಾದ ಒಟ್ಟೂ ಮಂತ್ರಗಳ ಸಂಖ್ಯೆ ನಾಲ್ಕನೂರಾ ನಲವತ್ತೆಂಟು. ಗಣಪತಿ ಮುನಿಗಳು ಮಂತ್ರಗಳನ್ನು ವಿಂಗಡಿಸಿ ಸೂಕ್ತಗಳಲ್ಲಿ ಸಂಕಲಿಸುವಾಗ ದೇವತೆಗಳನ್ನು ಆಧಾರವಾಗಿಟ್ಟುಕೊಂಡು ಸಂಕಲನ ಮಾಡಿದರು. ಒಂದೊಂದು ದೇವತೆಗಳಿಗೆ ಸೇರಿದ ಸೂಕ್ತಗಳನ್ನು ಒಂದೊಂದು ಪ್ರತ್ಯೇಕ ಅನುವಾಕದಲ್ಲಿ ಯೋಜಿಸಿದರು.

ವೈದಿಕ ಛಂದಸ್ಸುಗಳಾದ ಅನುಷ್ಟುಭ್, ತ್ರಿಷ್ಟುಭ್, ಗಾಯತ್ರೀ ಮತ್ತು ಜಗತೀ ಛಂದಸ್ಸುಗಳಲ್ಲಿ ಛಂದೋದರ್ಶನದ ಮಂತ್ರಗಳು ನಿಬದ್ಧವಾಗಿದ್ದು ಜಗತೀ ಛಂದಸ್ಸಿನಲ್ಲಿ ಅತಿ ಹೆಚ್ಚು ಋಕ್ಕುಗಳು ಪ್ರಾದುರ್ಭೂತವಾಗಿದೆ.

ಛಂದೋದರ್ಶನದಲ್ಲಿ ಒಟ್ಟೂ ಎಂಟು ಅನುವಾಕಗಳಿದ್ದು ಮೊದಲನೆಯ ಮತ್ತು ಕೊನೆಯ ಅನುವಾಕಗಳಲ್ಲಿ ಒಂದಕ್ಕಿಂತ ಹೆಚ್ಚು ದೇವತಾಕವಾದ ಸೂಕ್ತಗಳಿರುವದರಿಂದ ಛಂದೋದರ್ಶನದ ಮಂತ್ರಗಳಲ್ಲಿ ಸ್ತುತಿಸಲ್ಪಟ್ಟ ದೇವತೆಗಳ ಸಂಖ್ಯೆ ಕೇವಲ ಎಂಟಲ್ಲ. ಮೊದಲನೆಯ ಅನುವಾಕದಲ್ಲಿ ಸವಿತೃ, ಅಗ್ನಿ, ಮರುತ್ವಾನಿಂದ್ರ, ಇಂದ್ರವದ್ ವಾಯು ಮತ್ತು ಮರುತ್ಪಿತೃ–ರುದ್ರ ಸೂಕ್ತಗಳಿವೆ. ಎರಡನೆಯ ಅನುವಾಕದ ಸೂಕ್ತಗಳಲ್ಲಿ ಸರಸ್ವತೀಯೂ, ಮೂರನೆಯ ಅನುವಾಕದಲ್ಲಿ ಬ್ರಹ್ಮಣಸ್ಪತಿಯೂ, ನಾಲ್ಕನೆಯ ಅನುವಾಕದಲ್ಲಿ ಇಂದ್ರ ದೇವತೆಯೂ, ಐದನೆಯ ಅನುವಾಕದಲ್ಲಿ ಆತ್ಮನೂ ಆರನೆಯ ಅನುವಾಕದ ಸೂಕ್ತಗಳಲ್ಲಿ ಪುರುಷನೂ ಸ್ತುತಿಸಲ್ಪಟ್ಟಿದ್ದಾರೆ. ಏಳನೆಯ ಅನುವಾಕದಲ್ಲಿ ಒಟ್ಟೂ ನಾಲ್ಕು ಸೂಕ್ತಗಳಿದ್ದು ಅವೆಲ್ಲವೂ ಆಪಃಸೂಕ್ತಗಳಾಗಿವೆ. ಎಂಟನೆಯ ಹಾಗೂ ಕೊನೆಯ ಅನುವಾಕದ ವೈಶ್ವ ದೈವ್ಯಾನುವಾಕದಲ್ಲಿ ಎರಡು ಗೋ–ಸೂಕ್ತಗಳು. ಒಂದು ವಿಶ್ವೇದೇವ ಸೂಕ್ತ ಒಂದು ಅಗ್ನೀಷೋಮೀಯ ಸೂಕ್ತ ಒಂದು ಅದಿತಿ ಸೂಕ್ತ ಕೊನೆಯದಾಗಿ ಭಾವ–ವೃತ್ತ ಸೂಕ್ತಗಳಿವೆ. ಈ ಎಲ್ಲ ಅನುವಾಕಗಳಲ್ಲಿ ಎರಡನೆಯ ಅನುವಾಕವಾದ ಸರಸ್ವತೀ–ಅನುವಾಕವೇ ಹನ್ನೆರಡು ಸರಸ್ವತೀ ಸೂಕ್ತಗಳಿಂದ ಕೂಡಿದ್ದು ಛಂದೋದರ್ಶನದ ಅತಿದೊಡ್ಡ ಅನುವಾಕವಾಗಿದೆ.

II. ಛಂದೋದರ್ಶನದ ಅಂತರಂಗ ಸುಂದರ, ಬಲು ಸುಂದರ

ಛಂದೋದರ್ಶನದ ಸೂಕ್ತಗಳು ದೈವರಾತರ ತಪಸ್ಸಿದ್ಧಿಯಿಂದ ಅರಳಿದ ಸುಂದರವಾದ ಮಂತ್ರ–ಪುಷ್ಪಗಳಿಂದ ಕೂಡಿದ್ದಾಗಿವೆ. ವೈದಿಕ ಭಾಷೆ, ಛಂದಸ್ಸುಗಳಲ್ಲಿ ವ್ಯಕ್ತವಾದ ದಿವ್ಯ ಕಾವ್ಯ ಛಂದೋದರ್ಶನ. ಋಗ್ವೇದ ಸಂಹಿತೆಯಲ್ಲಿ ಇರುವ ಕಾವ್ಯಮಯವಾದ ಉಷಸೂಕ್ತಗಳಂತೆ ಇರುವ ಸರಸ್ವತೀ

ಸೂಕ್ತಗಳು ದೇವೀ ಸರಸ್ವತಿಯನ್ನು ವರ್ಣಿಸುತ್ತ ಛಂದೋದರ್ಶನದ ಹೃದಯವಾಗಿ ಕಂಗೊಳಿಸುತ್ತವೆ. ನಾಸದೀಯ ಸೂಕ್ತ, ಅಕ್ಷಸೂಕ್ತದಂತೆ ಭಾವ–ವೃತ್ತ ಸೂಕ್ತವಿದೆ. ಅಪರೂಪವಾದ, ಅರ್ಥವೈಭವದಿಂದ ಕೂಡಿದ ಗೋ–ಸೂಕ್ತಗಳಿವೆ. ಆಪಃ ಸೂಕ್ತಗಳಲ್ಲಿ ನದಿಗಳನ್ನು ವರ್ಣಿಸುವ ಮತ್ತು ಪ್ರಾರ್ಥಿಸುವ ಋಷಿಯ ದಿವ್ಯ ವಾಣಿ ಇದೆ.

ಛಂದೋದರ್ಶನ ಇವೆಲ್ಲವುಗಳಿಗೂ ಮೊದಲು ಸುಂದರವಾದ, ಮತ್ತು ಸಾಧಕನ ಅಂತಃಕರಣಕ್ಕೆ ಹಿತವಾಗಿ ಸ್ಪರ್ಶಿಸುತ್ತ ಭಕ್ತಿ, ಶ್ರದ್ಧೆಗಳನ್ನು ಪ್ರೇರೇಪಿಸುವ ವೈದಿಕ ಪ್ರಾರ್ಥನೆಗಳಿಂದ ಕೂಡಿದೆ. ಗ್ರಂಥದಲ್ಲಿಯ ಎಲ್ಲ ಅನುವಾಕಗಳಲ್ಲಿಯೂ ಋಷಿ ಅಗ್ನೀಂದ್ರಾದಿ ದೇವತೆಗಳನ್ನು ಪ್ರಾರ್ಥಿಸುವ ರೀತಿ ಅನನ್ಯವಾಗಿದೆ.

ಹೇ ! ಸವಿತೃ, ವಿಶ್ವವನ್ನೆಲ್ಲಾ ಬೆಳಗುತ್ತಿರುವ ನಿನ್ನ ದಿವ್ಯವಾದ ತುರೀಯ ಪದವನ್ನು ಸಾಕ್ಷಾತ್ಕರಿಸಿಕೊಳ್ಳುತ್ತೇನೆ– ಅನುಗ್ರಹಿಸು ; ವಿಶ್ವದ ಚಕ್ಷುಸ್ಸೇ ಆದ ನಿನಗಿದೋ ನಮಸ್ಕಾರ, ವಿಶ್ವದ ಬೆಳಕಾದ ಹೇ ಸವಿತೃ, ನಿನಗೆ ನಮಸ್ಕರಿಸುತ್ತೇನೆ ಎಂದು ಋಷಿ ಪ್ರಾರ್ಥಿಸುತ್ತಾನೆ

(ಛಂದೋದರ್ಶನ – I - 1 - 3 , I - 2 -2)

ಅಗ್ನಿದೇವತಾಕವಾದ ಮಂತ್ರದಲ್ಲಿ ಋಷಿಯ ಪ್ರಾರ್ಥನೆ ಹೀಗಿದೆ–" ಹೇ ಅಗ್ನೆ ! ನೀನೇ ಅಂತರಾತ್ಮನಾದ್ದರಿಂದ ಜ್ಞಾನೇಂದ್ರಿಯಗಳಲ್ಲಿ ಚಕ್ಷುಸ್ಸು ನಿನ್ನ ವಿಭೂತಿಯಾಗಿದೆ. ಅದರಂತೆ ಕರ್ಮೇಂದ್ರಿಯಗಳಲ್ಲಿ ವಾಕ್ಕು ನಿನ್ನ ವಿಭೂತಿಯಾಗಿದೆ. ಅಂತಹ ವಾಕ್ಕನ್ನು ಪ್ರೇರೇಪಿಸು"

(ಛಂಛಂದೋದರ್ಶನ – I- 3 -1)

ಛಂದೋದರ್ಶನದ ಹೃದಯವೇ ಆದ ಸರಸ್ವತೀ ಮಂಡಲದ ಕೊನೆಯ ಸರಸ್ವತೀ ಸೂಕ್ತ ಪ್ರಾರ್ಥನಾ ಮಂತ್ರಗಳಿಂದ ಕೂಡಿದೆ. ಈ ಸೂಕ್ತದಲ್ಲಿ ಒಟ್ಟೂ ಹನ್ನೆರಡು ಮಂತ್ರಗಳಿದ್ದು ಆ ಎಲ್ಲ ಮಂತ್ರಗಳಲ್ಲಿಯೂ ಋಷಿ ಪರಿಪರಿಯಾಗಿ ಮಾಡಿದ ಪ್ರಾರ್ಥನೆಗಳಿವೆ;–"ಹೇ ಭಗವತಿ ಸರಸ್ವತಿ ! ಪರಮಾತ್ಮನೊಂದಿಗೆ ಅದ್ವೈತರೂಪದಿಂದಿರುವ ನೀನು ಮುಕ್ತಿಯ ದಿವ್ಯಸಾನಂದ ಸುಖವನ್ನು ಅರಿತವಳು. ಹೇ ಮಾತೆಯೇ ! ನನಗೂ ಆತ್ಮನೊಂದಿಗೆ ಒಂದಾಗುವ ದಿವ್ಯ ಸುಖವನ್ನು ಕರುಣಿಸು. ನೀನು ಆಸ್ವಾದಿಸುವ ದಿವ್ಯರಸವನ್ನು ನನಗೂ ಉಣಿಸು. ನಿನ್ನನ್ನು ಪ್ರಾರ್ಥಿಸುತ್ತಿರುವ ನಿನ್ನ ತನಯನಂತಿರುವ ನನಗೆ ಪರಮಾತ್ಮನ ದಿವ್ಯವಿಭೂತಿಗಳಾದ ಪ್ರಜ್ಞಾನ ಶಕ್ತಿ, ವಾಕ್–ಶಕ್ತಿಗಳನ್ನು ಕರುಣಿಸು. ಗಾಯತ್ರಿಯೇ ಮೊದಲಾದ ಮಂತ್ರಗಾಯನದಿಂದ ನನ್ನನ್ನು

ಪ್ರೇಮಭಾವದಿಂದ ಲಾಲಿಸು ಮತ್ತು ರಕ್ಷಿಸು. ಹೇ ಮಾತೆಯೇ ! ನನಗೆ ಸ್ವರಸವನ್ನು (ಸ್ತನ್ಯಪಾನ) ಪಾನಮಾಡಿಸು. ಹಾಗೆ ಪಾನಮಾಡುವಾಗ ನಾನೂ ಗಾಯತ್ರಿಯೇ ಮೊದಲಾದ ಮಂತ್ರಗಳನ್ನು ಪಠಿಸುವಂತೆ ಮತ್ತು ಗಾಯತ್ರಿಯೇ ಮೊದಲಾದ ಛಂದೋಯುಕ್ತವಾದ ಸಾಮಗಳನ್ನು ಹಾಡುವಂತೆ ಅನುಗ್ರಹಿಸು. ಬ್ರಹ್ಮಸ್ವರೂಪಿಣಿಯಾಗಿರುವ ನೀನು ಬ್ರಹ್ಮಾನಂದದಿಂದಲೇ ಪರಿಪೂರ್ಣವಾಗಿರುವೆ. ಆ ಆನಂದವನ್ನು ನನಗೂ ಉಂಟುಮಾಡು.

ಹೇ ಭಗವತಿ ನನ್ನಾತ್ಮವನ್ನು ಪ್ರೇರೇಪಿಸು ಮತ್ತು ಹೇ ದೇವಿ ! ನನ್ನನ್ನು ತನ್ಮೂಲಕ ಆತ್ಮಜ್ಞಾನಿಯನ್ನಾಗಿ ಮಾಡು.

ಹೇ ಭಗವತಿ ! ನೀನು ಜ್ಞಾನಸ್ವರೂಪಿಣಿಯಾಗಿರುವೆ. ನನ್ನನ್ನು ನಿನ್ನ ಸುತನನ್ನಾಗಿ ಭಾವಿಸು. ನನಗೂ ಜ್ಞಾನ ಮತ್ತು ತಪಸ್ಸುಗಳನ್ನು ಪ್ರದಾನ ಮಾಡು. ಆ ಮೂಲಕ ನನ್ನನ್ನು ಬ್ರಹ್ಮಜ್ಞಾನಿಯನ್ನಾಗಿ ಮಾಡು. ಇವೆಲ್ಲವುಗಳಿಗೆ ಮೂಲವಾದ ಶ್ರದ್ಧೆಯನ್ನು ನನ್ನಲ್ಲಿ ಉಂಟುಮಾಡು. ಗಾಯತ್ರಿಯೇ ಮುಂತಾದ ಛಂದೋಮಯವಾದ ಮಂತ್ರಗಳ ದೃಷ್ಟಾರನನ್ನಾಗಿ ಮಾಡು; ಅಷ್ಟೇ ಅಲ್ಲದೇ ಅಂತರಾತ್ಮದಲ್ಲಿ ದರ್ಶಿತವಾದ, ಶ್ರವಣಮಾಡಿದ ಮಂತ್ರಗಳನ್ನೂ ಸ್ವಯಂ ಉಚ್ಚರಿಸುವದಕ್ಕೆ ಸಮರ್ಥನಾದ ಋಷಿಯನ್ನಾಗಿ ನನ್ನನ್ನು ಮಾಡು" ಎಂದು ಮಾಡಿದ ಋಷಿಯ ಪ್ರಾರ್ಥನೆ ಸೂಕ್ತದುದ್ದಕ್ಕೂ ಪ್ರವಹಿಸಿರುವದು ಅನನ್ಯವೇ ಆಗಿದೆ. (ಛಂದೋದರ್ಶನ – II - 12)

III. ಹೇ ಇಂದ್ರ ! ಋಣಮೋಕ್ಷಕರೋ ಭವ

ಛಂದೋದರ್ಶನದ ಇಂದ್ರಾನುವಾಕದ ನಾಲ್ಕನೆಯ ಸೂಕ್ತವು ಅತಿವಿಶಿಷ್ಟವಾದ ಪ್ರಾರ್ಥನೆಯಿಂದ ಕೂಡಿದೆ. ಋಷಿ ಇಲ್ಲಿ ಇಂದ್ರನನ್ನು ಸಕಲ ವಿಧವಾದ ಋಣಗಳಿಂದ ಮುಕ್ತಗೊಳಿಸಿ ಸುಖ–ಶಾಂತಿಗಳನ್ನು ಪ್ರದಾನ ಮಾಡುವ ದೇವತೆಯನ್ನಾಗಿ ಅನುಸಂಧಾನ ಮಾಡುತ್ತ ಪ್ರಾರ್ಥಿಸಿದ್ದಾನೆ. "ಋಣಾನಿ ತ್ರೀಣ್ಯಪಾಕೃತ್ಯ ಮನೋ ಮೋಕ್ಷೇ ನಿವೇಶಯೇತ್" ಎಂಬ ಮನೂಕ್ತಿಯಂತೆ ಋಣತ್ರಯವನ್ನು ಅಪಾಕರಿಸಿದ ಹೊರತು ನಿಃಶ್ರೇಯಸ್ಸಿನ ಪಥ ಸುಗಮವಾಗಲಾರದು ಎಂಬುದು ವೈದಿಕ ಸಂಪ್ರದಾಯವಷ್ಟೇ ! ಋಷಿಯು ಇಲ್ಲಿ ಇಂದ್ರನನ್ನು ಸಕಲವಿಧವಾದ ಋಣವನ್ನು ಪರಿಹರಿಸು–ಸುಖ, ಶಾಂತಿಯನ್ನು ಪ್ರದಾನಮಾಡು ಎಂದು ಪ್ರಾರ್ಥಿಸಿದ್ದಾನೆ. ಸರ್ವೇಶ್ವರನೂ ಸರ್ವಾಂತರ್ಯಾಮಿಯೂ ಆದ ಇಂದ್ರನು ಚೇತನ, ಪ್ರಾಣನ ಜೀವನ ಮತ್ತು ಜೀವಿಗಳಿಗೆಲ್ಲಾ ಪ್ರಜ್ಞಾನಾದಿಗಳನ್ನು ಪ್ರದಾನ ಮಾಡುವ ಕಾರಣ ಇಂದ್ರನಿಗೆ ಸಲ್ಲಿಸುವ ಋಣವೇ ಉಳಿದೆಲ್ಲರಿಗಿಂತ ಅಧಿಕವಾಗಿದೆ.

ದೇವತೆಗಳಿಗೂ, ಋಷಿಗಳಿಗೂ ಮತ್ತು ಪಿತೃಗಳಿಗೆ ಸಲ್ಲಿಸಬೇಕಾದ ಎಲ್ಲ ಋಣಗಳಿಂದಲೂ ಪಾರುಮಾಡೆಂದು ಋಷಿ ಇಲ್ಲಿ ಪ್ರಾರ್ಥಿಸಿದ್ದಾನೆ. ಆದರೆ ಋಷಿಯ ಪ್ರಾರ್ಥನೆ ಇಲ್ಲಿಗೆ ಮುಗಿಯುವುದಿಲ್ಲ. ತನಗೆ ಜನ್ಮ ಕೊಟ್ಟ ತಂದೆ–ತಾಯಿ, ವಿದ್ಯಾಪ್ರದಾನ ಮಾಡಿದ ಆಚಾರ್ಯರುಗಳಿಗೆ ಮಾನವ ಋಣಿಯಾಗಿರುವ ಸಂಗತಿ ಮೊದಲೇ ಪ್ರಸ್ತಾವಿಸಲಾದ ಋಷಿ, ಪಿತೃ ಋಣಗಳಲ್ಲಿ ಸಮಾವೇಶವಾಗುತ್ತವೆಯಾದರೂ ಋಷಿಯ ಮಂತ್ರ–ದರ್ಶನದಲ್ಲಿ ಪ್ರತ್ಯೇಕವಾಗಿ ಪ್ರಸ್ತಾವಿಸಲ್ಪಟ್ಟು ಆ ಋಣಗಳಿಂದಲೂ ಪಾರು ಮಾಡಬೇಕೆಂದು ಹಂಬಲಿಸಿ ಇಂದ್ರನನ್ನು ಪ್ರಾರ್ಥಿಸಿದ್ದಾನೆ. ಮುಂದುವರಿದು ಹಾಲು ಮತ್ತು ತಜ್ಜನ್ಯವಾದ ಇತರ ಕ್ಷೀರೋತ್ಪನ್ನಗಳನ್ನು ಸೇವಿಸಿ ಪೋಷಣೆಯನ್ನು, ಶುದ್ಧಿಯನ್ನೂ ಪಡೆದದ್ದಕ್ಕಾಗಿ ಗೋವುಗಳಿಗೂ, ಜ್ಞಾನಕ್ಕಾಗಿ ವೇದಗಳಿಗೂ, ತನ್ನನ್ನು ಧಾರಣೆ ಮಾಡಿದ ಪೃಥ್ವಿ ಮತ್ತು ಅದರ ಒಡೆಯನಾದ ಅಗ್ನಿಗೂ ಅಂತರಿಕ್ಷ ಮತ್ತು ಅದರ ಒಡೆಯನಾದ ವಾಯುವಿಗೂ ಮತ್ತು ದ್ಯುಲೋಕ ಮತ್ತು ಅದರ ಒಡೆಯನಾದ ಆದಿತ್ಯನಿಗೂ ತಾನು ಋಣಿಯಾಗಿದ್ದೇನೆ. ಈ ಎಲ್ಲ ಋಣಗಳನ್ನು ಪರಿಹಾರ ಮಾಡಿ ಸುಖ ಮತ್ತು ಕಲ್ಯಾಣ ಪರಂಪರೆಯನ್ನು ಕರುಣಿಸೆಂದು ಋಷಿ ಮಾಡಿದ ಪ್ರಾರ್ಥನೆ ಅಕ್ಷರಶಃ ಅನ್ಯಾದೃಶವಾಗಿದೆ.

ಇಂದ್ರನಲ್ಲಿ ಋಣ ಪರಿಹಾರಕ್ಕಾಗಿ ಪ್ರಾರ್ಥಿಸಿದರೆ ಅಬ್ ದೈವತ್ಯಾನುವಾಕದ ನದೀ ದೇವತೆಗಳಲ್ಲಿ ಸಕಲ ದುರಿತಗಳನ್ನು ಪರಿಹರಿಸಿ ತಾಯಿಯಂತೆ ರಕ್ಷಿಸಬೇಕೆಂದು ಋಷಿ ಪ್ರಾರ್ಥಿಸಿರುವದು ಕಂಡು ಬರುತ್ತದೆ. ಹೇ ಗಂಗೆ, ಸರಸ್ವತಿ, ಯಮುನೆಯರೆ! ಸಕಲ ಕರ್ಮೇಂದ್ರಿಯಗಳಿಂದಲೂ, ಜ್ಞಾನೇಂದ್ರಿಯಗಳಿಂದಲೂ ಮಾಡಿದ ಸಮಸ್ತ ಜ್ಞಾತಾಜ್ಞಾತ ದುರಿತಗಳೆಲ್ಲವನ್ನೂ ಉಪಶಮನ ಮಾಡಿ ಸುಖ–ಶಾಂತಿಗಳನ್ನು ಅನುಗ್ರಹಿಸಿರಿ ಎಂಬ ಋಷಿಯ ಪ್ರಾರ್ಥನೆ ಎರಡನೆಯ ಆಪಃ ಸೂಕ್ತದುದ್ದಕ್ಕೂ ವ್ಯಕ್ತವಾಗಿದೆ. ಹೀಗೆ ಛಂದೋದರ್ಶನದ ಮಂತ್ರಗಳು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಮಾಡಿದ ಋಷಿಯ ದಿವ್ಯ ವೈದಿಕ ಪ್ರಾರ್ಥನೆಗಳಿಂದ ಕೂಡಿದ್ದಾಗಿದೆ. ಛಂದೋದರ್ಶನದ ಗೋ–ಸೂಕ್ತಗಳಲ್ಲಿಯೂ ಋಷಿಯ ಪ್ರಾರ್ಥನೆ ಅನುಪಮವೇ ಆಗಿದೆ.

IV. ಸರಸ್ವತೀ ಸೂಕ್ತಗಳು

ಮೊದಲೇ ಪ್ರಸ್ತಾವಿಸಿದಂತೆ ಸರಸ್ವತೀ ಸೂಕ್ತಗಳು ಛಂದೋದರ್ಶನದ ಹೃದಯಭಾಗ. ವಿಸ್ತಾರ ಹಾಗೂ ಗಾಢವಾಗಿ ನಿರೂಪಿಸಿರುವ ದೇವತಾ ತತ್ತ್ವ ಈ ಎರಡು ದೃಷ್ಟಿಯಲ್ಲೂ ಸರಸ್ವತೀ ಅನುವಾಕದ ಮಂತ್ರಗಳು ಅನುಪಮವಾಗಿವೆ. ಅಲೌಕಿಕವಾದ ಕಾವ್ಯ ಸೌಂದರ್ಯವೂ ಈ ಮಂತ್ರಗಳಲ್ಲಿ

ಪ್ರಕಾಶಿಸುತ್ತ ಈ ಮಂತ್ರಗಳು ಛಂದೋದರ್ಶನವನ್ನು ಛಂದೋದರ್ಶನವನ್ನಾಗಿಸಿವೆ. ಈ ಸೂಕ್ತಗಳಲ್ಲಿ ಅಭಿವ್ಯಕ್ತವಾದ ಸರಸ್ವತೀ ದೇವತಾಕವಾದ ಋಷಿಯ ತತ್ತ್ವದರ್ಶನ ಅನುಮಪವಾದದ್ದು. ಇಲ್ಲಿನ ಮತ್ತೊಂದು ವಿಶೇಷವೆಂದರೆ ಪ್ರತಿಯೊಂದು ಸೂಕ್ತದ ಎಲ್ಲಾ ಮಂತ್ರಗಳ ಚತುರ್ಥಪಾದಗಳು ಸಮಾನ ಪದಗಳಿಂದ ಕೂಡಿರುವದು. ಅವುಗಳ ಮೂಲಕವಾಗಿ ಸರಸ್ವತೀ ಸೂಕ್ತಗಳಲ್ಲಿ ಪ್ರಾದುರ್ಭೂತವಾದ ಋಷಿಯ ತತ್ತ್ವ ದರ್ಶನವನ್ನು ಹೀಗೆ ಸಂಗ್ರಹಿಸಬಹುದಾಗಿದೆ–

೧. **ವಾಗ್ ವಿದಾ ಪ್ರತಿಮಾ ಬ್ರಹ್ಮಣಃ ಪರಾ**

ಹೇ ವಾಕ್ ! ನೀನು ನಿಜವಾಗಿಯೂ ಅವ್ಯಕ್ತವಾದ ಭಗವತ್ ತತ್ತ್ವದ ವ್ಯಕ್ತವಾದ ರೂಪವೇ ಆಗಿರುವೆ.

೨. **ತಾವತೀ ವಾಕ್ ಪ್ರಪೂರ್ಣಾ ಯಾವಾನ್ ಪುರುಷಃ ।**

ಹೇ ಭಗವತೀ ವಾಕ್! ನೀನು ಪರಮಾತ್ಮನಷ್ಟೇ ಸತ್ಯಳೂ ಪರಿಪೂರ್ಣಳೂ ಆಗಿದ್ದೀಯಾ.

೩. **ವಾಗ್ ವಿದಾ ಮಾತಾ ವಿಶ್ವಸ್ಯ ಬ್ರಹ್ಮಣೋ ಯೋನಿಃ**

ಹೇ ಸರಸ್ವತಿ ! ಪರಬ್ರಹ್ಮ ತತ್ತ್ವಕ್ಕೆ ನೀನು ಪ್ರಮಾಣಭೂತಳೂ ಮತ್ತು ಚರಾಚರಾತ್ಮಕವಾದ ಈ ಪ್ರಪಂಚಕ್ಕೆ ಕಾರಣೀಭೂತಳೂ ಆಗಿದ್ದೀಯಾ.

೪. **ವಾಗ್ ವಿದಾ ಪ್ರತಿಮಾಽಂತರ್ಬ್ರಹ್ಮಣಃ ಪೂರ್ವಾ**

ಹೇ ಸರಸ್ವತಿ ! ಪ್ರಜ್ಞಾ ಶಕ್ತಿಯ ರೂಪದಲ್ಲಿರುವ ನೀನು ಆ ಪರಾ ವಸ್ತುವಿನ ಮೂಲ ಸ್ವರೂಪಳೇ ಆಗಿದ್ದೀಯ.

೫. **ವಾಗ್ ವಿದಾ ವರಂ ಬ್ರಹ್ಮ ಸಂವಿದಾ ಯೋನಿಃ ।**

ಹೇ ದೇವಿ ! ನೀನು ನಿನ್ನ ಪರಿಪೂರ್ಣವಾದ ಜ್ಞಾನ ಸ್ವರೂಪದಿಂದಾಗಿ ಬ್ರಹ್ಮವೇ ಆಗಿದ್ದೀಯಾ ಮತ್ತು ಸರ್ವ ವಿಧವಾದ ಜ್ಞಾನಕ್ಕೂ ಆಕರಳಾಗಿದ್ದೀಯ.

೬. **ವಾಗ್ ವಿದಾ ಪ್ರತಿಮಾನಂ ವಿಶ್ವಸ್ಯಾಧಿ ಬೀಜಮ್ ।**

ಹೇ ವಾಗ್ದೇವಿಯೇ ! ಈ ಸಮಸ್ತ ಪ್ರಪಂಚಕ್ಕೆ ಪ್ರಮಾಣಳೂ ಮತ್ತು ಕಾರಣಳೂ ಆಗಿದ್ದೀಯ.

೭. **ವಾಗ್ ವಿದಾ ಮಾತಾ ವಿಶ್ವಸ್ಯಾತ್ಮನಃ ಪರಾ।**
ಹೇ ಸರಸ್ವತಿ ! ನೀನು ಪ್ರಪಂಚದ ಪ್ರಸವಿತಾರಳೂ, ವಾಕ್ಕನ್ನು ಪ್ರೇರೇಪಿಸುವವಳೂ ಮತ್ತು ಆತ್ಮನ ಪ್ರಮಾತೃತ್ವದಿಂದಲೂ ನೀನು ಪರಾ ಮಾತಾ ಆಗಿದ್ದೀಯ.

ಋಗ್ವೇದದಲ್ಲಿ ಸರಸ್ವತಿಯು ನದಿಯಂತೆಯೂ, ಯಜ್ಞಾಧಿಷ್ಠಾತೃದೇವತೆಯಂತೆಯೂ ಸ್ತುತಿಸಲ್ಪಟ್ಟರೆ ಛಂದೋದರ್ಶನದಲ್ಲಿ ವಿಶೇಷವಾಗಿ ಪರಬ್ರಹ್ಮ ಸ್ವರೂಪಿಣಿಯಾಗಿ ಸರಸ್ವತಿಯು ಸ್ತುತಿಸಲ್ಪಟ್ಟಿದ್ದಾಳೆ. ಸರಸ್ವತ್ಯನುವಾಕದ ಮಂತ್ರಗಳು ಎರಡೂ ತೀರದವರೆಗೂ ಹಬ್ಬಿಕೊಂಡು ತುಂಬಿ ಪ್ರವಹಿಸುವ ಮಹಾನದಿಯೊಂದರಂತೆ ಶಾಂತವೂ ಗಂಭೀರವೂ ಆಗಿ ಸಾಧಕನ ಅಂತರಂಗದ ಪೂರ್ಣ ಪಾತ್ರಗಳನ್ನು ವ್ಯಾಪಿಸಿ ದಿವ್ಯ ನಾದದ ಅನುರಣನವನ್ನುಂಟು ಮಾಡುತ್ತ ಪಾಪಗಳನ್ನು ಹೋಗಲಾಡಿಸುತ್ತ ಅಲೌಕಿಕವಾದ ಅನುಭವವನ್ನು ಪ್ರದಾನ ಮಾಡುವವುಗಳಾಗಿವೆ. ಮೊದಲೇ ಹೇಳಿದಂತೆ ಸರಸ್ವತೀ ಸೂಕ್ತಗಳು ಛಂದೋದರ್ಶನವನ್ನು ಛಂದೋದರ್ಶನವನ್ನಾಗಿಸಿವೆ.

V. ಛಂದೋದರ್ಶನಕ್ಕೆ ವಾಸಿಷ್ಠಾನ್ವಯ ಭಾಷ್ಯದ ಆಭರಣ

ದೈವರಾತರ ಆಚಾರ್ಯಪಾದರಾದ ವಾಸಿಷ್ಠ ಗಣಪತಿ ಮುನಿಗಳ ಉಪಸ್ಥಿತಿ ಮಂತ್ರದರ್ಶನವಾದಾಗ ಇಲ್ಲದಿದ್ದರೆ ನೂತನ ಮಂತ್ರಗಳು ಲೋಕದ ಬೆಳಕನ್ನು ನೋಡುತ್ತಿರಲಿಲ್ಲ. ಮಂತ್ರಗಳ ಆವಿರ್ಭಾವ ಆಗುತ್ತಿದ್ದಂತೆಯೇ ಅವುಗಳನ್ನು ಸಂಗ್ರಹಿಸಿ, ಸಂಕಲನ ಮಾಡಿದರಲ್ಲದೇ 'ಅನ್ವಯ ಭಾಷ್ಯ'ವೆಂಬ ಹೆಸರಿನಲ್ಲಿ ಸಂಸ್ಕೃತದಲ್ಲಿ ಸರಳವಾದ, ಸುಂದರವಾದ ವಿವರಣೆಯನ್ನು ಬರೆದು ಛಂದೋದರ್ಶನದ ಮಂತ್ರಗಳಲ್ಲಿ ಅಡಕವಾಗಿರುವ ದೇವತಾತತ್ತ್ವವನ್ನು ಪ್ರಾಚೀನ ವೇದೋಪನಿಷತ್ತುಗಳ ಮಂತ್ರಗಳ ದೃಷ್ಟಾಂತದೊಂದಿಗೆ ವಿಶದಗೊಳಿಸಿದರು.

ಅನ್ವಯ ಭಾಷ್ಯವು ಪ್ರಾರಂಭವಾಗುವದು ಅನ್ವಯ ಭಾಷ್ಯ-ಭೂಮಿಕಾ ಎಂಬ ಪೀಠಿಕಾಭಾಗದಿಂದ. ಮಂತ್ರದರ್ಶನದ ಸಮಗ್ರವಾದ ವೃತ್ತಾಂತವನ್ನು ಸಾದ್ಯಂತವಾಗಿ ಇದರಲ್ಲಿ ಗಣಪತಿ ಮುನಿಗಳು ದಾಖಲಿಸಿದ್ದಾರೆ. ದೈವರಾತರ ಸಂಕ್ಷಿಪ್ತ ಪರಿಚಯವನ್ನು ಅವರ ತಪೋಭೂಮಿಕೆಯನ್ನು ಸ್ವಯಂ ದೈವರಾತರ ಆಚಾರ್ಯರಾದ ಗಣಪತಿ ಮುನಿಗಳು ಆತ್ಮೀಯವಾದ ರೀತಿಯಲ್ಲಿ ಮಾಡಿಕೊಟ್ಟಿರುವದು ಭಾಷ್ಯ-ಭೂಮಿಕೆಯ ಇನ್ನೊಂದು ವಿಶೇಷ.

ದೈವರಾತರ ಮಂತ್ರಾವಿಷ್ಕಾರ ಛಂದೋದರ್ಶನ ಭೂಮಿತೂಕದ್ದಾದರೆ ವಾಸಿಷ್ಠ ಗಣಪತಿ ಮುನಿಗಳ ಅನ್ವಯ ಭಾಷ್ಯ ಪ್ರತಿ ಪದಾರ್ಥ ವಿವರಣೆಗಳಿಂದ ಕೂಡಿದ್ದಾದರೂ ಅದಕ್ಕೆ ಅದರದ್ದೇ ಆದ ಭಾಷಾ ಸೌಷ್ಠವ, ವಿಷಯದ ಸರಳ ನಿರೂಪಣೆ, ವೇದೋಪನಿಷತ್ತುಗಳ ಹೇರಳವಾದ ವಾಕ್ಯೋದ್ಧರಣೆಗಳಿಂದಾಗಿ ಅಸಾಧಾರಣ ಮೌಲಿಕ ಗ್ರಂಥವಾಗಿ ನಿಲ್ಲುತ್ತದೆ. 'ಅನ್ವಯ ಭಾಷ್ಯದ' ಹಿನ್ನೆಲೆಯಲ್ಲಿ ಮುನಿಗಳ ವಿದ್ವತ್ತು ಮತ್ತು ತಪಸ್ಸುಗಳಿದ್ದು ಅವು ಭಾಷ್ಯದಲ್ಲಿ ಸಂಪೂರ್ಣವಾಗಿ ಪ್ರತಿಫಲನವಾಗುತ್ತ ದೈವರಾತರ ನೂತನ ಮಂತ್ರಗಳನ್ನು ಪ್ರಕಾಶಮಾನವಾಗಿ ಬೆಳಗಿಸುತ್ತವೆ. ಅನ್ವಯ ಭಾಷ್ಯ ಛಂದೋದರ್ಶನವು ಮಂತ್ರಗಳಿಗೆ ಚೆಲುವಿನಾಭರಣವಾಗಿ ಅದರ ಅಲೌಕಿಕ ಸೌಂದರ್ಯವನ್ನು ಇನ್ನಷ್ಟು ಹೆಚ್ಚಿಸಿದೆ.

ದೈವರಾತರನ್ನು ಬ್ರಹ್ಮರ್ಷಿ ದೈವರಾತರನ್ನಾಗಿಸಿದ ಛಂದೋದರ್ಶನವು ದೈವರಾತರ ಕೃತಿಗಳಲ್ಲಿ ಅಗ್ರವಾದದ್ದೆನ್ನುವದು ಸಹಜವೇ ಆಗಿದೆಯಷ್ಟೆ.

೩. ವಾಕ್-ಸುಧಾ

ಪ್ರಕಟಣೆಯ ವರ್ಷ - ೧೯೭೨
ಪ್ರಕಾಶಕರು- ಮದನಗೋಪಾಲ ಚಾರಿಟಿ ಟ್ರಸ್ಟ್, ಕೊಲಕತ್ತಾ

ವಾಕ್-ಸುಧಾ ದೈವರಾತರ ಇನ್ನೊಂದು ಮಹತ್ತ್ವದ ಕೃತಿ. ಈ ಗ್ರಂಥದಲ್ಲಿ ದೈವರಾತರು ದಿವ್ಯವಾದ ವಾಕ್ ತತ್ತ್ವವನ್ನು ವೈದಿಕ ಮಂತ್ರಗಳ ಜ್ಞಾನದ ಬೆಳಕಿನಲ್ಲಿ ನಿರೂಪಿಸಿದ್ದಾರೆ. ನಿರೂಪಣೆ ವಾಕ್-ತತ್ತ್ವಕ್ಕೆ ಸಂಬಂಧಿಸಿದ ಸಮಗ್ರ ವಿಷಯಗಳ ಸವಿಸ್ತಾರವಾದ ಚರ್ಚೆಯೊಂದಿಗೆ ಮೂಡಿಬಂದಿದೆ. ವೇದಗಳಲ್ಲಿರುವ ಕ್ಲಿಷ್ಟ ಪದಗಳ ಕೋಶವಾದ 'ನಿಘಂಟು' ವಿನಲ್ಲಿರುವ 'ವಾಕ್' ಪದದ ಐವತ್ತೇಳು ಸಮಾನಾರ್ಥಕ ಪರ್ಯಾಯ ಶಬ್ದಗಳನ್ನು ಆಯಾ ಪರ್ಯಾಯ ಶಬ್ದಗಳ ಪ್ರಸ್ತಾಪವಿರುವ ಋಗ್ವೇಗಾದಿ ಮಂತ್ರಗಳ ಉದಾಹರಣೆಯೊಂದಿಗೆ ವಾಕ್-ತತ್ತ್ವದ ವ್ಯಾಪಕತೆಯನ್ನು ಈ ಗ್ರಂಥ ನಿರೂಪಿಸುತ್ತದೆ.

ಗ್ರಂಥವು ಒಟ್ಟೂ ೩೨ 'ಕಲಾ' (digit) ಗಳಲ್ಲಿ ವಿಭಾಗಿಸಲ್ಪಟ್ಟಿದೆ. (ಗ್ರಂಥದ ಶೀರ್ಷಿಕೆಯನ್ನು "ವಾಕ್-ಚಂದ್ರ-ಸುಧಾ" ಎಂದು ಮಧ್ಯಮಪದಲೋಪಿ ಸಮಾಸವೆಂದು ಗ್ರಹಿಸಿದರೆ ಆಗ ವಾಕ್ ಎನ್ನುವ ಚಂದ್ರಸುಧೆಯ ಪ್ರಥಮಾ ಕಲಾ, ದ್ವಿತೀಯಾ ಕಲಾ ಇತ್ಯಾದಿಯಾಗಿ ಶಿರ್ಷಿಕೆ, ಉಪಶೀರ್ಷಿಕೆಗಳಿಗೆ ಸಾರ್ಥಕ್ಯ ಪ್ರಾಪ್ತವಾಗುತ್ತದೆ)

ಗ್ರಂಥದ ಒಂದನೆಯ 'ಕಲೆ' ಯಿಂದ ೨೩ನೆಯ 'ಕಲೆ'ಯ ವರೆಗೆ ವಾಕ್-ತತ್ತ್ವದ ನಿರೂಪಣೆಯನ್ನು ವಿಸ್ತಾರವಾಗಿ ಮಾಡಿದ ಗ್ರಂಥಕರ್ತರು ೨೪ನೆಯ 'ಕಲೆ' ಯಿಂದ ಗ್ರಂಥ ಸಮಾಪ್ತಿ ಪರ್ಯಂತ ನಿಘಂಟುವಿನಲ್ಲಿರುವ ವಾಕ್ಕಿನ ೫೭ ಪರ್ಯಾಯ ಶಬ್ದಗಳ ವಿವೇಚನೆಯನ್ನು ವಿಸ್ತಾರವಾಗಿ ಮಾಡಿರುವದು ಕಂಡು ಬರುತ್ತದೆ.

ದೀರ್ಘವಾದ ಭಾರತೀಯ ತತ್ತ್ವಮೀಮಾಂಸೆಯ ಪರಂಪರೆಯಲ್ಲಿ ವಾಕ್-ತತ್ತ್ವದ ವಿಚಾರ ಪ್ರಣಾಲಿಯು ಪ್ರಮುಖವಾದ ಸ್ಥಾನವನ್ನು ಹೊಂದಿರುವದು ಸರ್ವವೇದ್ಯವಾದ ಸಂಗತಿ. ವೇದೋಪನಿಷತ್ತುಗಳು, ಪುರಾಣಗಳು, ತಂತ್ರಶಾಸ್ತ್ರಗಳು ಮತ್ತು ಇನ್ನಿತರ ಜ್ಞಾನಶಾಖೆಗಳಲ್ಲಿ ಹರಡಿಕೊಂಡಿರುವ ವಾಕ್-ತತ್ತ್ವದ ನಿರೂಪಣೆ ಸುಲಭವಾದ ಕೆಲಸವಲ್ಲ. ಬ್ರಹ್ಮರ್ಷಿ ದೈವರಾತರಂತಹ ಋಷಿಗಳು ತಮ್ಮ ಅಗಾಧವಾದ ತಪಸ್ಸು ಮತ್ತು ವೇದವಾಙ್ಮಯದ ಜ್ಞಾನಗಳಿಂದ ಮಾತ್ರ ವಾಕ್-ತತ್ತ್ವದಂತಹ ಸೂಕ್ಷ್ಮಾತಿ ಸೂಕ್ಷ್ಮ ವಿಷಯಗಳನ್ನು ಸಮಗ್ರವಾಗಿ ನಿರೂಪಿಸಬಲ್ಲವರಾಗುತ್ತಾರೆಂಬುದು ಗ್ರಂಥದ ಅಧ್ಯಯನದಿಂದ ವಿಶದವಾಗುತ್ತದೆ. ಗ್ರಂಥದುದ್ದಕ್ಕೂ ವಾಕ್ಕಿನ ಸೂಕ್ಷ್ಮಾತಿಸೂಕ್ಷ್ಮ ಪದರಗಳನ್ನು ಬಗೆದು ಅದರ ಸರ್ವವ್ಯಾಪಕತ್ವವೇ ಮೊದಲಾದ ಗುಣಗಳನ್ನು ವೈದಿಕ, ಪೌರಾಣಿಕ ಹಾಗೂ ಇನ್ನಿತರ ಶಾಸ್ತ್ರಗಳ ನೆಲೆಯಲ್ಲಿ ಅನಾವರಣಗೊಳಿಸುವ ಗ್ರಂಥಕರ್ತರು ತತ್ತ್ವಪಿಪಾಸುಗಳಿಗೆ ವಾಕ್-ಸುಧೆಯನ್ನೇ ನೀಡಿದ್ದಾರೆ. ವಿಸ್ತಾರವಾದ ಗ್ರಂಥದಲ್ಲಿ ಪ್ರಸ್ತಾಪಿಸಲಾದ ವಿಷಯಗಳನ್ನು ಸಂಕ್ಷೇಪವಾಗಿ ಸಂಗ್ರಹಿಸುವ ಪ್ರಯತ್ನ ಮಾಡಲಾಗಿದೆ.

ಉದಾತ್ತ, ಅನುದಾತ್ತ ಮತ್ತು ಸ್ವರಿತ ಸ್ವರಗಳೂ ದಿವ್ಯವಾದ ವಾಕ್ಕೇ ಆಗಿದೆ; ಆ ಎಲ್ಲ ಸ್ವರಗಳಿಂದ ಯುಕ್ತವಾದ ಸಮಗ್ರವಾದ ವೈದಿಕ ವಾಙ್ಮಯವೂ ದಿವ್ಯವಾಣಿಯೇ ಆಗಿದೆ. ಹೀಗೆ ವೈದಿಕ ಮಂತ್ರಗಳ ಒಳಗೂ ಹೊರಗನ್ನೆಲ್ಲ ತುಂಬಿ ನಿಂತಿರುವ ವಾಕ್-ತತ್ತ್ವ ಅಂತರಾತ್ಮದಲ್ಲಿ ತಾದಾತ್ಮ್ಯವನ್ನು ಹೊಂದಿದೆ. ಆದುದರಿಂದ ವೈದಿಕ ಮಂತ್ರಗಳು ಅಮೃತರಸೋಪಮವಾದ ದಿವ್ಯಾನುಭೂತಿಯನ್ನುಂಟು ಮಾಡುತ್ತ ಆತ್ಮಜ್ಞಾನದ ಬಾಗಿಲನ್ನು ತೆರೆಯಬಲ್ಲವುಗಳಾಗಿವೆ. ಈ ವಿಷಯವು ಗ್ರಂಥದಲ್ಲಿ ವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆ.

ಪ್ರಣವಾಕ್ಷರವೆಂದು ಪ್ರಸಿದ್ಧವಾದ ಓಂಕಾರದ ನಾದ-ಸಂಸ್ಥೆಗಳನ್ನು ಮತ್ತು ಪ್ರಣವೋಪಾಸನೆಯ ಮಹತ್ತ್ವ ಕ್ರಮ ಹಾಗೂ ಪ್ರಣವೋಪಾಸನೆಯ ಫಲಗಳನ್ನು ಗ್ರಂಥದಲ್ಲಿ ಸವಿಸ್ತಾರವಾಗಿ ನಿರೂಪಿಸಲಾಗಿದೆ. ಅದರಂತೆಯೇ 'ಈಮ್' ಮತ್ತು 'ಶ್ರೀಃ' ಎಂಬ ಪ್ರಣವಾಕ್ಷರಗಳ ಮಹತ್ತ್ವವನ್ನೂ, ಕೆಲವು ಬೀಜಮಂತ್ರಗಳಿಗೆ ಇರುವ ದೇವತಾ ವಿಶೇಷಗಳ ತಾದಾತ್ಮಿಕತೆಯನ್ನು ಗ್ರಂಥಕರ್ತರು ವೇದ ಮಂತ್ರಗಳ ಬೆಳಕಿನಲ್ಲಿ ವಿವರಿಸಿರುವದು ಗ್ರಂಥದ ಇನ್ನೊಂದು ವಿಶೇಷವಾಗಿದೆ.

ಸಪ್ತ ವ್ಯಾಹೃತಿಗಳು, ಗಾಯತ್ರೀ ಛಂದಸ್ಸು, ಪ್ರಸಿದ್ಧವಾದ ಗಾಯತ್ರೀ ಮಂತ್ರ ಮತ್ತು ಗಾಯತ್ರೀ ಮಂತ್ರೋಪಾಸನೆಗಳು ಗ್ರಂಥದಲ್ಲಿ ವಿಸ್ತಾರವಾಗಿ ನಿರೂಪಿಸಲ್ಪಟ್ಟಿವೆ. ಋಗ್ವೇದ ಮಂತ್ರಗಳ ನೆಲೆಯಲ್ಲಿ ವಾಕ್-ತತ್ತ್ವವನ್ನು ಇಂದ್ರ, ಅಗ್ನಿ, ರುದ್ರಾದಿ ದೇವತೆಗಳೊಂದಿಗೆ ಸಮೀಕರಿಸಿ ತತ್ತ್ವವನ್ನು ನಿರೂಪಿಸುವ ಗ್ರಂಥಕರ್ತರ ರೀತಿ ಅನನ್ಯಸಾಧಾರಣವಾದದ್ದು, ಅದರಂತೆಯೇ ವಾಕ್-ತತ್ತ್ವವು ಕೇವಲ ಅಧಿದೈವಿಕ ತತ್ತ್ವವಲ್ಲ; ಅದು ಅಧ್ಯಾತ್ಮ ತತ್ತ್ವವೂ ಆಗಿದೆ; ವಾಕ್-ತತ್ತ್ವವು ಸಾಕ್ಷಾತ್ ಪರಬ್ರಹ್ಮವೇ ಆಗಿದೆ ಎಂದು ಗ್ರಂಥಕರ್ತರು ನಿರೂಪಿಸಿರುವ ಗ್ರಂಥದ ಭಾಗವು ಸುಂದರವಾಗಿ ಅನ್ಯಾದೃಶವಾಗಿದೆ. ಅಷ್ಟೇ ಅಲ್ಲ, ಇದಕ್ಕೆ ಉಪನಿಷತ್ತಿನ ಅಲೌಕಿಕವಾದ ಸೌಂದರ್ಯವನ್ನು ಪ್ರದಾನ ಮಾಡಿದೆ. ಇದಕ್ಕೆ ಕಾರಣ ಗ್ರಂಥಕರ್ತರ ಪಾಂಡಿತ್ಯ ಅದಕ್ಕೂ ಹೆಚ್ಚಾಗಿ ಪರಮಾರ್ಥದ ವಿಷಯದಲ್ಲಿನ ಸ್ವಾನುಭಾವವೇ ಆಗಿದೆ. ವಾಕ್ಕನ್ನು 'ಸ್ಮಾರಣಿ' ಎಂದು ಕರೆದಿರುವ ಋಷಿ ದೈವರಾತರು ವಾಕ್-ತತ್ತ್ವವೇ ಮನುಷ್ಯ ಮತ್ತು ಪ್ರಾಣಿಗಳಲ್ಲಿ ಅಂತರಾತ್ಮದ ಇರುವಿನ ಸ್ಮರಣೆಯನ್ನುಂಟುಮಾಡುತ್ತದೆ ಎಂದು ಹೇಳುತ್ತಾರಲ್ಲದೇ ಆತ್ಮ ಸಾಕ್ಷಾತ್ಕಾರಕ್ಕೂ ಸಾಧನವಾಗುತ್ತದೆ ಎಂದು ನಿರೂಪಿಸಿರುವದು ಕಂಡು ಬರುತ್ತದೆ.

ಪೌರಾಣಿಕ ಮತ್ತು ತಂತ್ರಶಾಸ್ತ್ರಗಳ ನೆಲೆಯಲ್ಲಿ ವಾಕ್-ತತ್ತ್ವದ ಸಗುಣ ರೂಪವನ್ನು ವಿವರಿಸುವದು ಗ್ರಂಥದ ಇನ್ನೊಂದು ವೈಶಿಷ್ಟ್ಯವಾಗಿದೆ.

ವೇದವೇ ಉಸಿರಾಗಿದ್ದ ದೈವರಾತರು ತಮ್ಮ ವಿಚಿಕಿತ್ಸಕ ಬುದ್ಧಿ, ಸುಪ್ರಸನ್ನವಾದ ತರ್ಕ ಮತ್ತು ತಪಸ್ಸುಗಳ ಮೂಲಕ ಸಂಕೀರ್ಣವಾದ ಮತ್ತು ಕೇವಲ ಸಂಕೇತ (Symbol) ಗಳಿಂದ ಕೂಡಿರುವ ವೇದಮಂತ್ರಗಳ ನಿಗೂಢತೆಯನ್ನು ಭೇದಿಸಬಲ್ಲವರಾಗಿದ್ದರು. ಪ್ರಸ್ತುತ ಗ್ರಂಥದುದ್ದಕ್ಕೂ ಅವರು ನೂತನ ವೇದಭಾಷ್ಯಕಾರರಾಗಿ ಕಂಗೊಳಿಸುತ್ತಾರೆ. ಸಾಯಣಾಚಾರ್ಯರೇ ಮುಂತಾದ ಪ್ರಾಚೀನ ವೇದಭಾಷ್ಯಕಾರರಿಗೆ ತೀರ ಭಿನ್ನವಾದ ಅರ್ಥಗಳನ್ನು

ವೈದಿಕ ಶಬ್ದಗಳಿಗೆ ಅವರು ನೀಡಿರುವದು ಕಂಡು ಬರುತ್ತದೆ. ಭಾರತೀಯ ಪರಂಪರೆಯ ಮೇಲೆ, ವೈದಿಕ ವಾಙ್ಮಯದ ಮೇಲೆ ಪಾಶ್ಚಾತ್ಯ ವಿದ್ವಾಂಸರು ಮಾಡಿರುವ ಅಪವಾದಗಳಿಗೆ ಈ ಮೂಲಕ ಉತ್ತರಿಸಿ ಅಪವಾದಗಳನ್ನು ತೊಡೆದು ಹಾಕುವ ಉಪಕಾರವನ್ನು ಮಾಡಿದ್ದಾರೆ. ಉದಾಹರಣೆಗೆ, ವೇದ ಕಾಲದಲ್ಲಿ ಲಿಪಿಯ ಬಳಕೆ ಇರಲಿಲ್ಲ; ಲೇಖನ ಕಲೆ ಭಾರತೀಯರಿಗೆ ಪರಿಚಯವಾದದ್ದು ವೈದಿಕ ಯುಗ ಮುಗಿದು ಎಷ್ಟೋ ಕಾಲದ ಮೇಲೆ ಎಂಬುದು ಕೆಲವು ಪಾಶ್ಚಾತ್ಯ ವಿದ್ವಾಂಸರ ಮತವಾಗಿದೆ. ದೈವರಾತರು ಋಗ್ವೇದ ಮಂತ್ರವೊಂದರಲ್ಲಿ ಪ್ರಯುಕ್ತವಾದ "ಆರಿಖ" (ಋ. VI-53-8) ಪದದ ವಿವೇಚನೆ ಮಾಡುತ್ತ ವೈದಿಕ ಯುಗದ ಆರಂಭದಲ್ಲಿಯೇ ಭಾರತೀಯರಿಗೆ ಲಿಪಿಯ ಹಾಗೂ ಲೇಖನ ಕಲೆಯ ಪರಿಚಯವಿತ್ತು ಎಂದು ಪ್ರಸ್ತುತ ಗ್ರಂಥದಲ್ಲಿ ಪ್ರತಿಪಾದಿಸಿರುವದು ಕಂಡು ಬರುತ್ತದೆ. ಇನ್ನೊಂದು ಋಗ್ವೇದ ಮಂತ್ರ (ಋ-X-71-3) ದಲ್ಲಿ ಬರುವ 'ಸಪ್ತರೇಭಾ' ಎನ್ನುವ ಶಬ್ದ ಸಪ್ತ ವಿಧವಾದ ಲಿಪಿಗಳನ್ನು ತನ್ಮೂಲಕ ಸಪ್ತವಿಧವಾದ ಭಾಷೆಗಳ ಉತ್ಪತ್ತಿ, ಬೆಳವಣಿಗೆಗಳನ್ನು ಸೂಚಿಸುತ್ತದೆ ಎಂದು ಬ್ರಹ್ಮರ್ಷಿಗಳು ಅಭಿಪ್ರಾಯ ಪಡುತ್ತಾರೆ.

ವೈದಿಕ ನಿಘಂಟುವಿನಲ್ಲಿರುವ ವಾಕ್ ಪದದ ಐವತ್ತೇಳು ಪರ್ಯಾಯ ನಾಮಗಳನ್ನು ಋಗ್ವೇದ ಮಂತ್ರಗಳ ನೆಲೆಯಲ್ಲಿ ವಿಸ್ತಾರವಾಗಿ ಅರ್ಥವಿವರಣೆಗಳನ್ನು ಒಳಗೊಂಡ ವಾಕ್-ಸುಧಾ ಅಕ್ಷರಶಃ ಅನ್ವರ್ಥಕವೇ ಆಗಿದ್ದು ವಾಗ್ದೇವಿಯಾದ ಸರಸ್ವತಿಗೆ ದೈವರಾತರು ತೊಡಿಸಿದ ಅಮೂಲ್ಯವಾದ ಕಂಠಾಭರಣವೇ ಆಗಿದೆ.

೪. ವೇದ – ವೇದಿಕಾ ಮತ್ತು ಮೂಲ-ಯಜುರ್ವೇದ ಸಂಹಿತಾ

ವಿ. ಎಸ್. ಸಾತವಳೇಕರ, ಪರಡಿ – ೧೯೫೭
ಬನಾರಸ್ ಹಿಂದೂ ಯುನಿವರ್ಸಿಟಿ – ೧೯೭೩

ದೈವರಾತರ ಸಂಶೋಧನಾಪರವಾದ ದರ್ಶನ ವಿಶೇಷದ ಫಲದ ಪರಿಣಾಮವಾಗಿ ಮೂಲ-ಯಜುರ್ವೇದ ಸಂಹಿತಾ ಗ್ರಂಥ ಸಂಪಾದಿತವಾಗಿ ಪ್ರಕಟಗೊಂಡಿತು. ಯಜುರ್ವೇದದ ಆವೃತ್ತಿಗಳಲ್ಲಿ ಒಂದಾದ ಕೃಷ್ಣ ಯಜುರ್ವೇದ ದೋಷಗಳಿಂದ ಕೂಡಿದ್ದು ಅದು ಶುದ್ಧವಲ್ಲದ ಆವೃತ್ತಿ; ಸಂಹಿತಾ ಭಾಗದಲ್ಲಿ ಬ್ರಾಹ್ಮಣದ ಅವತರಣಿಕೆಗಳು ; ಅದರಂತೆ ಬ್ರಾಹ್ಮಣ ಹಾಗೂ ಅರಣ್ಯಕಗಳಲ್ಲಿ ಸಂಹಿತಾ ಭಾಗಗಳು ಮಿಶ್ರಣವಾಗಿದ್ದು

ಕೃಷ್ಣಯಜುರ್ವೇದ ಅಶುದ್ಧವಾಗಿದೆ ಎಂಬುದು ದೈವರಾತರ ಅಭಿಪ್ರಾಯ. ಕೃಷ್ಣ ಯಜುರ್ವೇದದ ಈ ಸಾರಸ್ವತ ಪಾಠವನ್ನು ಸಮರ್ಥಿಸುವದಕ್ಕೆ ಪ್ರಮಾಣವಾಗಿ "ಸಂಸ್ಕಾರ-ರತ್ನಮಾಲಾ" ಗ್ರಂಥದಲ್ಲಿ ಕೊಡಲಾದ ಪೌರಾಣಿಕ ವೃತ್ತಾಂತವೂ ಪ್ರಮಾಣವಾಗಲಾರದು ಎಂದು ವಾದಿಸುವ ದೈವರಾತರು ಸಾರಸ್ವತ ಆವೃತ್ತಿಯನ್ನು ಪರಿಷ್ಕರಿಸಿ ಸಂಪಾದಿಸಿದರು. ಬೌಧಾಯನೀಯ, ಆಪಸ್ತಂಭ ಮತ್ತು ಹಿರಣ್ಯಕೇಶಿ ಗೃಹ್ಯಸೂತ್ರಗಳನ್ನು ಆಧಾರವಾಗಿಟ್ಟುಕೊಂಡು ಬ್ರಾಹ್ಮಣ ಮತ್ತು ಅರಣ್ಯಕಗಳಲ್ಲಿ ಸೇರ್ಪಡೆಯಾಗಿದ್ದ ಸೂಕ್ತಗಳನ್ನು ಕೃಷ್ಣ ಯಜುರ್ವೇದದ ಪರಂಪರಾಗತವಾಗಿ ಬಂದ ಸಾರಸ್ವತ ಆವೃತ್ತಿಯಲ್ಲಿ ಉಚಿತವಾದ ಸ್ಥಾನಗಳಲ್ಲಿ ಅಳವಡಿಸಿ ಮೂಲ-ಯಜುರ್ವೇದ-ಸಂಹಿತಾ ಗ್ರಂಥವನ್ನು ದೈವರಾತರು ಸಂಪಾದಿಸಿದ್ದರು. ಸಂಪಾದಿತವಾದ ತಮ್ಮ ಈ ಗ್ರಂಥಕ್ಕೆ ಪೂರಕವಾಗಿ ಒಂದು ದೀರ್ಘವಾದ ಮುನ್ನುಡಿಯಂತಿರುವ ಲಘು-ಗ್ರಂಥವೊಂದನ್ನು ವೇದ-ವೇದಿಕಾ ಎಂಬ ಶೀರ್ಷಿಕೆಯೊಂದಿಗೆ ರಚಿಸಿದರು. ವೇದ-ವೇದಿಕಾ ಗ್ರಂಥವು ವೈದಿಕ ಸಾಹಿತ್ಯ ವಿಶೇಷವಾಗಿ ಯಜುರ್ವೇದ ಅದರಲ್ಲೂ ಕೃಷ್ಣಯಜುರ್ವೇದಕ್ಕೆ ಸಂಬಂಧಿಸಿದ ದೈವರಾತರ ವಾದಗಳು, ಸಿದ್ಧಾಂತಗಳು, ವಿಶೇಷವಾದ ವಿವರಗಳು ಮತ್ತು ದೈವರಾತರ ಯೋಜಿತ ಕೃತಿಯಾದ ಮೂಲ-ಯಜುರ್ವೇದ-ಸಂಹಿತೆಯ ಸೂಕ್ತಗಳ ಉಪಕ್ರಮಣಿಕೆಯನ್ನು ಪರಿಚಯಿಸುತ್ತದೆ. ವೇದ-ವೇದಿಕಾ ಮತ್ತು ಮೂಲ-ಯಜುರ್ವೇದ ಸಂಹಿತಾ ಗ್ರಂಥವನ್ನು ಸಮಗ್ರವಾಗಿ ಪ್ರಕಾಶಿಸಬೇಕೆಂಬುದು ಪ್ರಾಯಶಃ ದೈವರಾತರ ಹಂಬಲವಾಗಿತ್ತು. ಆದರೆ ಅವರ ಸಂಕಲ್ಪ ಈಡೇರಲಿಲ್ಲ. ಯಾವ ಪ್ರಕಾಶನ ಸಂಸ್ಥೆಯೂ ಅವರ ಯಾವೊಂದೂ ಕೃತಿಯನ್ನು ಪ್ರಕಟಿಸಲು ಲಭ್ಯವಾಗದಿದ್ದ ಕಾಲಘಟ್ಟವದು. ಅದರಿಂದಾಗಿ ವೇದ ವೇದಿಕಾ ಗ್ರಂಥವು ಪ್ರತ್ಯೇಕವಾಗಿ ಪ್ರಕಟಗೊಳ್ಳುವಂತಾಯಿತು. ೧೯೫೭ನೆಯ ಇಸ್ವಿಯಲ್ಲಿ ಮಹಾರಾಷ್ಟ್ರದ ಪಾರಡಿಯಿಂದ ವಿ. ಎಸ್. ಸಾತವಳೇಕರ ಎಂಬ ಮಹನೀಯರು ಮುದ್ರಿಸಿದ ಕೃಷ್ಣ ಯಜುರ್ವೇದದ ಆವೃತ್ತಿಯಲ್ಲಿ ವೇದ-ವೇದಿಕಾ ಎಂಬ ಲಘುಗ್ರಂಥವನ್ನು ಸೇರಿಸಿ ಮೊದಲಬಾರಿಗೆ ಪ್ರಕಟಪಡಿಸಲಾಯಿತು. ಇದಾದ ಸರಿಸುಮಾರು ಎರಡು ದಶಕಗಳ ನಂತರ ದೈವರಾತರ ಮಹತ್ವದ ಕೃತಿಗಳಲ್ಲೊಂದಾದ ಮೂಲ-ಯಜುರ್ವೇದ ಸಂಹಿತಾ ಗ್ರಂಥವು ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡಿತು. ಬೇರೆ ಬೇರೆ ಕಾಲಗಳಲ್ಲಿ ಪ್ರತ್ಯೇಕವಾಗಿ ಪ್ರಕಟಗೊಂಡರೂ ಇವೆರಡೂ ಒಂದಕ್ಕೊಂದು ಪೂರಕ ಗ್ರಂಥಗಳಾಗಿದ್ದು ಸಮಗ್ರವಾಗಿ ಒಂದೇ ಎಂದು ಪರಿಗಣಿಸಬಹುದುದಾಗಿದೆ. ವೇದ-ವೇದಿಕಾದಲ್ಲಿ ಮಂಡಿಸಲಾದ ದೈವರಾತರ

ವಾದಗಳನ್ನೂ, ಸಿದ್ಧಾಂತಗಳನ್ನೂ ಅವಲೋಕಿಸಿದರೆ ಮೂಲ–ಯಜುರ್ವೇದ –ಸಂಹಿತಾ ಗ್ರಂಥದ ಆಶಯಗಳನ್ನು ಗ್ರಹಿಸಿದಂತೆ ಆಗುತ್ತದೆಯಷ್ಟೆ.

ವೇದ–ವೇದಿಕಾ ಗ್ರಂಥದಲ್ಲಿ ಪ್ರತಿಪಾದಿತವಾದ ಪ್ರಮುಖವಾದ ವಿಚಾರಗಳು ಹೀಗಿವೆ :

I. ವೇದಗಳು ಸಾಕ್ಷಾತ್ ಪರಮಾತ್ಮನ ಪ್ರತ್ಯಕ್ಷ ವಿಧಿಗಳು ಮತ್ತು ವಿಧಾನಗಳೇ ಆಗಿವೆ.

II. ವೇದಮಂತ್ರಗಳು ಪರಬ್ರಹ್ಮ–ವಸ್ತುವಿನ ವ್ಯಕ್ತರೂಪಗಳೇ ಆಗಿವೆ.

III. ಪ್ರಾಚೀನ ಋಷಿಗಳಂತೆ ಸಾಮರ್ಥ್ಯ, ಅರ್ಹತೆ ಮತ್ತು ತಪೋನಿಷ್ಠೆಯಿರುವ ಪುರುಷನಿಗೆ ದೈವೀ ಅನುಗ್ರಹದಿಂದ ಮಂತ್ರಗಳ ಸಾಕ್ಷಾತ್ಕಾರ ಆಗುತ್ತದೆ.

IV. ವೇದವು ಮಾನವ ನಿರ್ಮಿತವಲ್ಲ; ಅದಕ್ಕೆ ಬದಲಾಗಿ ಮನುಷ್ಯ ಕೇವಲ ಮಂತ್ರಗಳ ದೃಷ್ಟಾರ ಮಾತ್ರ. ವೇದಗಳು ನಿಶ್ಚಯವಾಗಿಯೂ ಅಪೌರುಷೇಯವಾದವುಗಳು.

V. ಯಜ್ಞ–ಸಂಸ್ಥೆಯನ್ನು ಪ್ರತಿನಿಧಿಸುವ ಹೋತೃ, ಅಧ್ವರ್ಯು, ಉದ್ಗಾತೃ ಮತ್ತು ಬ್ರಹ್ಮ ಎಂಬ ಪ್ರಧಾನ ಋತ್ವಿಜರ ದೃಷ್ಟಿಯಿಂದಾಗಲಿ, ಮಂತ್ರಗಳ ಸ್ವರೂಪ ಮತ್ತು ಅಧಿಷ್ಠಾತೃ ದೇವತೆಗಳ ದೃಷ್ಟಿಯಿಂದಾಗಲೀ ಅಥವಾ ಇನ್ನಿತರ ಕಾರಣದಿಂದಾಗಲೀ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದಗಳೆಂದು ವಿಭಾಗಿಸಲ್ಪಟ್ಟರೂ ವೇದವಾಙ್ಮಯವು ನಿಜಾರ್ಥದಲ್ಲಿ ಅಖಂಡ ಹಾಗೂ ಅದ್ವೈತವೇ ಸರಿ.

VI. ಭಗವಾನ್ ವೇದವ್ಯಾಸರು ವೇದಗಳನ್ನು ವಿಭಾಗ ಮಾಡಿ ಸುವ್ಯವಸ್ಥಿತಗೊಳಿಸಿದರು ಎಂಬುದು ಪರಂಪರಾಗತವಾಗಿ ಬಂದ ವಿಚಾರವಾಗಿದೆ. ಆದರೆ ಇದನ್ನು ದೈವರಾತರು ಒಪ್ಪುವದಿಲ್ಲ. ಋಗಾದಿ ಚತುರ್ವೇದಗಳ ಪರಂಪರೆಯಲ್ಲಿ ಕ್ರಮವಾಗಿ ಕೇಳಿ ಬರುವ ಶಾಕಲ, ಕಾಣ್ವ, ಮಾಧ್ಯಂದಿನ, ತೈತ್ತಿರೀಯ, ಮೈತ್ರಾಯಣೀಯ, ರಾಣಾಯನೀಯ, ಕೌಥುಮೀಯ ಮತ್ತು ಜೈಮಿನೀಯ ಈ ಋಷಿಗಳ ಪಂಕ್ತಿಯಲ್ಲಿ ವ್ಯಾಸರ ಹೆಸರು ಕೇಳಿಬರುವುದಿಲ್ಲ. ಇಷ್ಟಾಗಿಯೂ ವ್ಯಾಸ ಮಹರ್ಷಿಗಳೇ ವೇದ–ವಿಭಾಗಕರ್ತರೇ ಆಗಿದ್ದ ಪಕ್ಷದಲ್ಲಿ ಬ್ರಾಹ್ಮಣಗಳು ಮತ್ತು ಉಪನಿಷತ್ತುಗಳ ಕಾಲಕ್ಕೂ ಮೊದಲೇ ಅವರ ಕಾಲ ಎಂದು ಪರಿಗಣಿಸಬೇಕಾಗುತ್ತದೆ; ಆದರೆ ಅದು ಅಸಂಗತವಾಗುವುದರಿಂದ ವ್ಯಾಸರು ವೇದಗಳನ್ನು ವಿಭಜಿಸಿದವರು ಎಂಬುದು ಸಮರ್ಪಕವಾಗುವುದಿಲ್ಲ ಎಂಬುದು ದೈವರಾತರ ಧೋರಣೆಯಾಗಿದೆ.

VII. ಯಜುರ್ವೇದ ಕುರಿತು ಉದ್ಬೋಧಕವಾದ ವಿವರಗಳನ್ನು ದೈವರಾತರು ಈ ಗ್ರಂಥದಲ್ಲಿ ಪ್ರತಿಪಾದಿಸಿರುವದು ವಿಶೇಷವಾಗಿದೆ. ಯಜುರ್ವೇದ ಮಂತ್ರಗಳ ಋಷಿ–ದೇವತಾ–ಛಂದಸ್ಸುಗಳನ್ನು ಮತ್ತು ಇನ್ನಿತರ ವಿವರಗಳನ್ನು ನೀಡಿ ಜಿಜ್ಞಾಸುಗಳಿಗೆ ಮಹದುಪಕಾರ ಮಾಡಿದ ದೈವರಾತರ ಕೃತಿ ಒಂದು ಅಮೂಲ್ಯ ಕೊಡುಗೆಯಾಗಿದೆ.

೫. ವೇದಾರ್ಥಕಲ್ಪಲತಾ

ಬನಾರಸ್ ವಿಶ್ವವಿದ್ಯಾಲಯದಿಂದ ಪ್ರಕಾಶಿತ

ವೇದಾರ್ಥಕಲ್ಪಲತಾ ದೈವರಾತರ ಇನ್ನೊಂದು ಮಹತ್ತ್ವದ ಗ್ರಂಥವಾಗಿದೆ. ಒಟ್ಟೂ ಮೂವತ್ತೆರಡು ಕಲೆ (ಅಧ್ಯಾಯ) ಗಳಿಂದ ಕೂಡಿದ ಈ ಗ್ರಂಥದ ಮೊದಲ ಆರು ಕಲೆಗಳು ಗದ್ಯರೂಪದಲ್ಲಿದ್ದರೆ ನಂತರದ ಭಾಗ ಪದ್ಯರೂಪದಲ್ಲಿದೆ. ಗ್ರಂಥದ ಪ್ರಾರಂಭದಲ್ಲಿ ವಿಸ್ತಾರವಾದ ಪೀಠಿಕಾ ಭಾಗದಿಂದ ಸಮಲಂಕೃತವಾದ ಈ ಗ್ರಂಥವು ವೈದಿಕ ಮಂತ್ರಗಳ ವಿಸ್ತಾರವಾದ ಅರ್ಥವಿವರಣೆಗಳಿಂದ ಕೂಡಿದೆ. ವೈದಿಕ ಪರಂಪರೆಗೆ ಸೇರಿರುವ ಹಲವು ಉಪಾಸನೆಗಳು, ಸಂಸ್ಕಾರಗಳು ಈ ಗ್ರಂಥದಲ್ಲಿ ಚರ್ಚಿಸಲ್ಪಟ್ಟಿರುವದು ಇದರ ವೈಶಿಷ್ಟ್ಯವಾಗಿದೆ.

೬. ಇಂದ್ರಯಜ್ಞ

ಇಂದ್ರಯಜ್ಞವು ಒಂದು ಕಿರು ಪುಸ್ತಿಕೆ. ಸ್ಥೂಲವಾಗಿ ಎರಡು ಭಾಗಗಳಲ್ಲಿ ವಿಭಾಗಿಸಲ್ಪಟ್ಟಿದೆ. ಮೊದಲನೆಯ ಭಾಗದಲ್ಲಿ ಋಙ್ಮಂತ್ರಗಳ ಹೇರಳವಾದ ಪ್ರಸ್ತಾವನೆಯೊಂದಿಗೆ ಇಂದ್ರನ ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕ ಅರ್ಥಗಳ ನೆಲೆಯಲ್ಲಿ ಇಂದ್ರನೇ ಪರಮಶ್ರೇಷ್ಠನಾದ ದೇವತಾ ಪುರುಷ, ಪರಮಾತ್ಮ ಎಂದು ನಿರೂಪಿಸಲಾಗಿದೆ.

ಎರಡನೆಯ ಭಾಗದಲ್ಲಿ ಇಂದ್ರನನ್ನು ಉದ್ದೇಶಿಸಿ ವಿಶೇಷವಾಗಿ ಹೋಮವೊಂದನ್ನು ನೂತನವಾಗಿ ಕಲ್ಪಿಸಿ ಅದರ ವಿಧಿ, ವಿಧಾನಗಳನ್ನು ಸಮಗ್ರವಾಗಿ ನಿರೂಪಿಸಲಾಗಿದೆ.

ಹವನಕ್ಕೆ ವಿನಿಯೋಗಿಸಲಾದ ಮಂತ್ರಗಳು ಮತ್ತು ಪ್ರಯೋಗ ಪದ್ಧತಿ ವಿಶಿಷ್ಟವಾಗಿದೆ.

೭. ಸಾಕ್ಷಾತ್ಕಾರ-ಯೋಗ-ಸುಧಾ

ಸನಾತನ ಹಿಂದೂ ಸಂಪ್ರದಾಯವು ಚತುರ್ವಿಧವಾದ ಪುರುಷಾರ್ಥಗಳನ್ನು ಪ್ರತಿಪಾದಿಸುತ್ತದೆ. ಅವುಗಳಲ್ಲಿ ಮೋಕ್ಷವು ತುರೀಯ ಪುರುಷಾರ್ಥವಾಗಿದ್ದು ಶ್ರೇಷ್ಠವಾದ ಪುರುಷಾರ್ಥವೆಂದು ವೈದಿಕ ಪರಂಪರೆ ಸಾರುತ್ತದೆ. ವೇದೋಪನಿಷತ್ತುಗಳು ಮುಮುಕ್ಷುಗಳಿಗೆ ಭಿನ್ನ ಭಿನ್ನವಾದ ಸಾಧನೋಪಾಯಗಳನ್ನೂ, ಮಾರ್ಗಗಳನ್ನೂ ಸೂಚಿಸಿವೆ. ಈ ಎಲ್ಲ ಸಾಧನೋಪಾಯಗಳು ವಿಶಿಷ್ಟ ಮತ್ತು ವಿವಿಧ ಸೋಪಾನತ್ವಗಳಿಂದ ಕೂಡಿದ್ದು ಸಂಕೀರ್ಣವಾಗಿವೆ. ದೈವರಾತರು ಸ್ವಯಂ ತಾವೇ ಒಬ್ಬ ಶ್ರೇಷ್ಠ ಯೋಗಿಗಳೂ, ತಪಸ್ವಿಗಳೂ ಮತ್ತು ಮಂತ್ರದೃಷ್ಟಾರರಾಗಿದ್ದರು. ತಮ್ಮ ತಪಸ್ಸು, ಯೋಗಾನುಷ್ಠಾನ ಮತ್ತು ಸ್ವಾಧ್ಯಾಯಗಳ ಅನುಭವದ ಪಾಕವನ್ನು ಈ ಗ್ರಂಥದ ಮೂಲಕ ಬೇರೆ ಬೇರೆ ಸ್ತರದ ಸಾಧಕರಿಗೆ, ಮುಮುಕ್ಷುಗಳಿಗೆ ಪ್ರದಾನ ಮಾಡುವ ಮಹದುಪಕಾರ ಮಾಡಿದ್ದಾರೆ. ಗ್ರಂಥದ ಶೀರ್ಷಿಕೆಯೇ ಸೂಚಿಸುವಂತೆ ಈ ಗ್ರಂಥವು ಮುಮುಕ್ಷುಗಳ ಕೈಪಿಡಿಯಂತಿರುವ ಗ್ರಂಥವಾಗಿದೆ. ದೈವರಾತರು ತಮ್ಮ ಸ್ವಾನುಭವ ಮತ್ತು ವೇದಾಧ್ಯಯನದ ಬೆಳಕಿನಿಂದ ವೇದಮಂತ್ರಗಳಲ್ಲಿ, ಉಪನಿಷತ್ತುಗಳ ಅವತರಣಿಕೆಗಳಲ್ಲಿ ಹರಡಿಕೊಂಡಿರುವ ವಿವಿಧ ಉಪಾಸನಾ ಪದ್ಧತಿಗಳನ್ನು ಅನಾವರಣಗೊಳಿಸಿ ಲೋಕೋಪಕಾರ ಮಾಡಿದ್ದು ಸತ್ಯ. ಆದರೆ ದುರ್ದೈವವಶಾತ್ ಗ್ರಂಥವು ಪ್ರಕಟವಾಗದೇ ಉಳಿದಿದೆ. ಶೀಘ್ರಾತಿಶೀಘ್ರವಾಗಿ ಪ್ರಕಾಶಿತಗೊಂಡು ಲೋಕಾರ್ಪಿತವಾಗಲಿ ಎಂಬುದು ನಮ್ಮ ಆಶಯವಾಗಿದೆ.

ಅನುಬಂಧ-೧

ದೈವರಾತರನ್ನು ಕುರಿತು ಮಹಾಪುರುಷರ ವಚನಗಳು

೧. "..... ಸಂಪ್ರತಿ ಇಪ್ಪತ್ತೈದು ವರ್ಷ ವಯಸ್ಸಿನಲ್ಲಿರುವ ಕುಮಾರ ದೈವರಾತನು ವಿಶೇಷವಾಗಿ ಸಂಸ್ಕೃತ ಭಾಷೆಯಲ್ಲಿ ಅಷ್ಟೊಂದು ಪರಿಣತಿಯನ್ನು ಹೊಂದದಿದ್ದರೂ ಬಾಲ್ಯದಿಂದಲೇ ತಪೋಯೋಗಾದಿ ಸಾಧನೆಗಳಲ್ಲಿ ನಿರಂತರವಾಗಿ ನಿರತನಾಗಿದ್ದುಕೊಂಡು "ಛಂದೋದರ್ಶನ"ವನ್ನು ಪಡೆದನು. ಈ ದೈವರಾತನು ತಪಸ್ವಿಯೂ ಯೋಗಿಯೂ, ಅಧ್ಯಾತ್ಮ ತತ್ತ್ವವೇತ್ತನೂ, ವೇದಮಂತ್ರ ದೃಷ್ಟಾರನೂ ಆಗಿ ತಪಸ್ಸಿನಿಂದಲೂ, ವಿದ್ಯೆಯಿಂದಲೂ ಸದಾಚಾರದಿಂದಲೂ ಮತ್ತು ವಿನಯಾದಿ ಸದ್ವೃತ್ತದಿಂದಲೂ ಪ್ರಾಚೀನ ಋಷಿಗಳು ಅಲಂಕರಿಸಿದ "ಬ್ರಹ್ಮರ್ಷಿ" ಪದವಿಯನ್ನು ಹೊಂದುವುದಕ್ಕೆ ಅರ್ಹನಾಗಿದ್ದಾನೆ ಎಂದು ನನ್ನ ಮತವು...."

ಶ್ರೀ ವಾಸಿಷ್ಠ ಗಣಪತಿ ಮುನಿಗಳು
(ವಾಸಿಷ್ಠಾನ್ವಯ ಭಾಷ್ಯದಲ್ಲಿ)

೨. "ಕೆಲವು ವರ್ಷಗಳ ಹಿಂದೆ ಶ್ರೀ ದೈವರಾತರ ಪರಿಚಯ ಆಕಸ್ಮಿಕವಾಗಿ ಆಗಿತ್ತು. ಆಗಲೇ ಅವರ ವಿದ್ವತ್ತು ಮತ್ತು ಯೋಗ-ಸಾಧನೆಗಳ ಪರಿಚಯವಾಯಿತು. ಆ ಪ್ರಥಮ ಭೇಟಿಯಲ್ಲಿಯೇ ಅವರ ಅಗಾಧ ಸ್ಮರಣ ಶಕ್ತಿ ಮತ್ತು ವೇದೋಪನಿಷತ್ತುಗಳನ್ನು ಕುರಿತು ಅವರ ಅಸಾಧಾರಣವಾದ ವಿದ್ವತ್ತು ನನ್ನನ್ನು ಚಕಿತಗೊಳಿಸಿತು.... ಇಂತಹ ಅಸೀಮ ಧಾರ್ಮಿಕ ಶ್ರದ್ಧಾಳುಗಳು ನಮ್ಮ ದೇಶಕ್ಕೆ ಅವಶ್ಯವಾಗಿ ಬೇಕು...."

ಡಾ. ರಾಜೇಂದ್ರ ಪ್ರಸಾದ
ಭಾರತದ ಪ್ರಥಮ ರಾಷ್ಟ್ರಪತಿಗಳು

೩. "ದೈವರಾತರು ಯೋಗಿಯೂ, ತಪಸ್ವಿಯೂ ಮತ್ತು ಉನ್ನತಶ್ರೇಣಿಯ ವೇದ ವಿದ್ವಾಂಸರು. ಅವರೊಬ್ಬ ಆದರಣೀಯ ಘನವ್ಯಕ್ತಿತ್ವವುಳ್ಳವರೂ ಆಗಿದ್ದಾರೆ. ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಘನತೆವೆತ್ತ ಹಲವಾರು ವಿದ್ವಾಂಸರೊಂದಿಗೆ ಕೂಡಿಕೊಂಡ ನಾನು ಅವರೊಂದಿಗೆ ಹಲವಾರು ವಿಷಯಗಳನ್ನು ಕುರಿತು ಸಂವಹನವನ್ನು ನಡೆಸಿದ್ದೇನೆ. ಅವರ ವಿಶಾಲ ಜ್ಞಾನ ಮತ್ತು ವಿದ್ಯೆಗಳಿಗೆ ಬೆರಗಾಗಿದ್ದೇನೆ. ನನ್ನ ವಿನಂತಿಯ ಮೇರೆಗೆ ಅವರು ವಿಶ್ವವಿದ್ಯಾಲಯದಲ್ಲಿ ಎರಡು ತಿಂಗಳು ತಂಗಿದ್ದರು. ಅವರೊಂದಿಗೆ ಹಲವಾರು ಮುಸ್ಸಂಜೆಗಳನ್ನು ಸಂತೋಷದಿಂದ ಕಳೆದಿದ್ದೇನೆ"

ಪಂಡಿತ ಮದನ ಮೋಹನ ಮಾಲವೀಯ
ಬನಾರಸ ಹಿಂದೂ ವಿಶ್ವವಿದ್ಯಾಲಯದ
ಕುಲಪತಿಗಳು

೪. "ದೈವರಾತರನ್ನು ಪ್ರತ್ಯಕ್ಷವಾಗಿ ಭೇಟಿಯಾದಾಗ ವೇದಯುಗದ ವಸಿಷ್ಠರೊಂದಿಗೋ, ಯಾಜ್ಞವಲ್ಕ್ಯರೊಂದಿಗೋ ಇದ್ದ ಅನುಭವವಾಯಿತು. ದೈವರಾತರ ವಿಶೇಷಗಳೆಂದರೆ ವೇದವಾಙ್ಮಯದ ಭಾಗಗಳಾದ ಸಂಹಿತೆಗಳ, ಬ್ರಾಹ್ಮಣಾರಣ್ಯಕಗಳ ಮತ್ತು ಉಪನಿಷತ್ತುಗಳ ಅಸ್ಖಲಿತವಾದ ಪಠಣದಲ್ಲಿ ಅದ್ವಿತೀಯವಾದ ಪ್ರಭುತ್ವ, ಅವುಗಳ ಅರ್ಥವಿಸ್ತಾರದ ಆಳವಾದ ಜ್ಞಾನ ಮತ್ತು ವೈದಿಕ ವಾಙ್ಮಯದ ಬೆಳವಣಿಗೆಯ ಹಿನ್ನೆಲೆಯ ಸಂಪೂರ್ಣ ಆಲೋಕಗಳೇ ಆಗಿದ್ದಾವೆ. ಇಂತಹ ಪರಿಪೂರ್ಣ ಜ್ಞಾನಿಗಳಾದ ಅಷ್ಟೇ ವಿಚಿಕಿತ್ಸಾ ಮತಿಗಳಾದ ದೈವರಾತರನ್ನು ನಾಡು ಗೌರವಿಸಬೇಕು. ಅಷ್ಟೇ ಅಲ್ಲ; ಅವರಿಗೆ ರಾಷ್ಟ್ರಾಚಾರ್ಯ ಪದವಿಯನ್ನು ಪ್ರದಾನ ಮಾಡಬೇಕು....."

ಶ್ರೀ ವಾಸುದೇವ ಶರಣ ಅಗರವಾಲ
ಬನಾರಸ್ ಹಿಂದೂ ವಿಶ್ವವಿದ್ಯಾಲಯದ

೫. "ದೇವರಿಗೆ ಅಭಿವಂದನೆಗಳು, ಭಾರತ ಮಾತೆಯು ಇನ್ನೂ ಬಂಜೆಯಾಗಿಲ್ಲ..."

ಕುಲಪತಿ ಕೆ. ಎಮ್. ಮುನ್ಶಿ
ಭಾರತೀಯ ವಿದ್ಯಾಭವನ

ಅನುಬಂಧ-೨

ಬ್ರಹ್ಮರ್ಷಿ ದೈವರಾತರ ಕೃತಿಗಳು

ಪ್ರಕಟಿತ ಕೃತಿಗಳು

೧. ವೇದ-ವೇದಿಕಾ- ವಿ.ಎಸ್. ಸಾತವಳೇಕರ- ಪರಡಿ (ಮಹಾರಾಷ್ಟ್ರ) (೧೯೫೭)

೨. ಇಂದ್ರಯಜ್ಞ - (೧೯೬೪)

೩. ಛಂದೋದರ್ಶನ- ಭಾರತೀಯ ವಿದ್ಯಾಭವನ - ಮುಂಬಯಿ (೧೯೬೮)

೪. ವೇದಾರ್ಥಕಲ್ಪಲತಿಕಾ- ಬನಾರಸ್ ಹಿಂದೂ ವಿಶ್ವವಿದ್ಯಾಲಯದ, ವಾರಣಾಸಿ (೧೯೭೧)

೫. ವಾಕ್-ಸುಧಾ- ಮದನಗೋಪಾಲ ಚಾರಿಟಿ ಟ್ರಸ್ಟ- ಕೊಲಕತ್ತಾ (೧೯೭೨)

೬. ಚಿತ್ರ-ಪ್ರಶಂಸಾ- ಬನಾರಸ ಹಿಂದೂ ವಿಶ್ವವಿದ್ಯಾಲಯದ, ವಾರಣಾಸಿ (೧೯೭೨)

೭. ಮೂಲ ಯಜುರ್ವೇದ ಸಂಹಿತಾ- ಬನಾರಸ ಹಿಂದೂ ವಿಶ್ವವಿದ್ಯಾಲಯದ, ವಾರಣಾಸಿ (೧೯೭೩)

ಅಪ್ರಕಟಿತ ಕೃತಿ

೧. ಸಾಕ್ಷಾತ್ಕಾರ– ಯೋಗ ಸುಧಾ

೩. ಪ್ರಸ್ತುತ ಹಸ್ತಪ್ರತಿಗಳು ಉಪಲಬ್ಧವಿಲ್ಲದ ಕೇವಲ ನಾಮಶೇಷವಾದ ಕೃತಿಗಳು

೧. ಗಾಯತ್ರೀ–ಸುಧಾ

೨. ಪುರುಷಸೂಕ್ತ–ಸುಧಾ

೩. ವೇದಹೃದಯಮ್

೪. ರಾಮರಸಾಯನಮ್

೫. ಅಹಂಪ್ರತ್ಯಯವಿಮರ್ಶಾ

೬. ಸಪ್ತಮರ್ಯಾದಾ ಸದ್ವಿದ್ಯಾ

೭. ನಿವರ್ತಧ್ವಮ್ (ಲೇಖನ)

ಅನುಬಂಧ–೩

ಬ್ರಹ್ಮರ್ಷಿ ದೈವರಾತರ ಜೀವನದ ಮುಖ್ಯ ಘಟನೆಗಳ ಕಾಲಾನುಕ್ರಮಣಿಕೆ

೧. ಜನ್ಮ ೪ನೇ ಜನವರಿ ೧೮೯೨ನೇ ಇಸ್ವಿ

೨. ಉಪನಯನ ಸಂಸ್ಕಾರ ೧೮೯೯ನೇ ಇಸ್ವಿ

೩. ತಾಯಿಯ ಅಕಾಲಿಕ ಮರಣ ೧೮೯೯ನೇ ಇಸ್ವಿ

೪. ತಂದೆಯಿಂದ ಋಗ್ವೇದ–ಪಾಠ ಪ್ರಾರಂಭ ೧೮೯೯ನೇ ಇಸ್ವಿ

೫. ಕೃಷ್ಣಭಟ್ಟ ಮೈಯರ –ಅವರ ಪಾಠಶಾಲೆಯಲ್ಲಿ ಋಗ್ವೇದಾಭ್ಯಾಸ ಮಾಡಿದ ಕಾಲ ೧೯೦೦–೧೯೦೪ನೇ ಇಸ್ವಿ

೬. ಸಂತ ರಾಮದಾಸರ ಭೇಟಿ ಗೋಕರ್ಣದಲ್ಲಿ ೧೯೦೪ನೇ ಇಸ್ವಿ

೭. ನಿಶ್ಚಯಿಸಲ್ಪಟ್ಟ ವಿವಾಹದಿಂದ ದೂರಸರಿದು ಸಂತ ರಾಮದಾಸರನ್ನು ಸೇರಿ ತೀರ್ಥಾಟನೆ ಮಾಡಿದ ಕಾಲಘಟ್ಟ ೧೯೦೫–೧೯೦೭

೮. ತೀರ್ಥಾಟನೆಯಿಂದ ಮರಳಿ ಬಂದು ಬಲವಂತ ರಾವ್ ಭಾಗವತರ ಹಠಯೋಗ ತರಗತಿಗೆ ಸೇರಿದ್ದು ೧೯೦೭ನೇ ಇಸ್ವಿ

೯. ಪೂರ್ವದಲ್ಲಿ ನಿಶ್ಚಿತವಾದ ವಧು ಅರುಂಧತಿಯೊಂದಿಗೆ ವಿವಾಹ ೧೯೦೮ನೇ ಇಸ್ವಿ

೧೦. ಟೆಂಬೇ ಮಹಾರಾಜರನ್ನು ಪ್ರಥಮವಾಗಿ ಭೇಟಿಯಾದದ್ದು ೧೯೦೯ನೇ ಇಸ್ವಿ

೧೧. ಮೊದಲ ಬಾರಿಗೆ ವಾಸಿಷ್ಠ ಗಣಪತಿ ಮುನಿಗಳ ದರ್ಶನವಾದದ್ದು ೧೯೧೦ನೇ ಇಸ್ವಿ

೧೨. ವಾಸಿಷ್ಠ ಮುನಿ ದಂಪತಿಗಳ ಸೇವೆ (ಗೋಕರ್ಣದ ಉಮಾಮಹೇಶ್ವರ ಮಂದಿರದ ಆಶ್ರಮದಲ್ಲಿ) ೧೯೧೦–೧೯೧೩ ಇಸ್ವಿ

೧೩. ಟೆಂಬೇ ಮಹಾರಾಜರ ಆಶ್ರಮದಲ್ಲಿ ವಾಸ ೧೯೧೩ನೇ ಇಸ್ವಿ

೧೪. ಟೆಂಬೇ ಮಹಾರಾಜರು ಮುಕ್ತರಾದ ವರ್ಷ ಮತ್ತು ದೈವರಾತರು ಪಂಚಗವ್ಯ ವ್ರತಾದಿಗಳನ್ನು ಆಚರಿಸಿದ ಕಾಲ ೧೯೧೪ನೇ ಇಸ್ವಿ
೧೫. ರಮಣ ಮಹರ್ಷಿಗಳ ದರ್ಶನ ೧೯೧೫ನೇ ಇಸ್ವಿ
೧೬. ದೈವರಾತರು ನೂತನ ಮಂತ್ರ ದೃಷ್ಟಾರರಾದದ್ದು ೧೯೧೭ನೇ ಇಸ್ವಿ
೧೭. ಗೋಕರ್ಣದಲ್ಲಿ ಆಶ್ರಮ ಸ್ಥಾಪನೆ ಮತ್ತು ಶ್ರದ್ಧಾದೇವಿಯೊಂದಿಗೆ ವಿವಾಹ ೧೯೧೯ನೇ ಇಸ್ವಿ
೧೮. ನಂದಿನಿ ಮುದ್ರಣಾಲಯ ಸ್ಥಾಪನೆ ಮತ್ತು ವಾಸಿಷ್ಠ ಗಣಪತಿ ಮುನಿಗಳ ಕೃತಿ ಪ್ರಕಟಣೆ ೧೯೨೬ನೇ ಇಸ್ವಿ
೧೯. ಭದ್ರಾತೀರದಲ್ಲಿ ತಪಾಚರಣೆ ೧೯೨೯ನೇ ಇಸ್ವಿ
೨೦. ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ವಾಸ-ಕೃತಿರಚನೆ ೧೯೩೫ನೇ ಇಸ್ವಿ
೨೧. ವೇದ-ವೇದಿಕಾ ಗ್ರಂಥದ ಪ್ರಕಾಶನ ೧೯೫೭ನೇ ಇಸ್ವಿ
೨೨. ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಪ್ರವಚನ ೧೯೬೩ನೇ ಇಸ್ವಿ
೨೩. ತಿರುಪತಿಯ ವೈದಿಕ ಸಮ್ಮೇಳನದಲ್ಲಿ ಭಾಗವಹಿಸಿದ್ದು, ದೆಹಲಿಯಲ್ಲಿ ನಡೆದ ವೇದ ಪರಿಷತ್‌ನಲ್ಲಿ ಅಧ್ಯಕ್ಷಸ್ಥಾನ ಪಡೆದದ್ದು ಮತ್ತು ಅಲ್ಲಿಯೇ 'ವಿದ್ಯಾ-ವಾಚಸ್ಪತಿ' ಬಿರಿದಿನಿಂದ ಸನ್ಮಾನಿತರಾದದ್ದು ೧೯೬೪ನೇ ಇಸ್ವಿ
೨೪. ಭಾರತೀಯ ವಿದ್ಯಾಭವನ 'ವೇದ-ವಾಚಸ್ಪತಿ' ಬಿರುದಿನಿಂದ ಸನ್ಮಾನಿಸಿದ ವರ್ಷ ೧೯೬೬ನೇ ಇಸ್ವಿ
೨೫. 'ಛಂದೋದರ್ಶನ'ದ ಪ್ರಕಟಣೆ ೧೯೬೮ನೇ ಇಸ್ವಿ
೨೬. ದೆಹಲಿಯ ಲಾಲಬಹಾದ್ದೂರ ಶಾಸ್ತ್ರಿ ವಿದ್ಯಾಪೀಠದಿಂದ ಸನ್ಮಾನ ೧೯೭೦ನೇ ಇಸ್ವಿ
೨೭. ಪಾಶ್ಚಾತ್ಯ ರಾಷ್ಟ್ರಗಳ ಸಂದರ್ಶನ ಮತ್ತು ವೇದಾರ್ಥಕಲ್ಪಲತಾ ಪ್ರಕಟಣೆ ೧೯೭೧ನೇ ಇಸ್ವಿ
೨೮. ವಾಕ್-ಸುಧಾ, ಚಿತ್ರಪ್ರಶಂಸಾ ಗ್ರಂಥಗಳು ಲೋಕಾರ್ಪಣೆಗೊಂಡ ವರ್ಷ ೧೯೭೨ನೇ ಇಸ್ವಿ
೨೯. ಮೂಲ-ಯಜುರ್ವೇದ ಸಂಹಿತಾ ಗ್ರಂಥ ಪ್ರಕಟಣೆ ೧೯೭೩ನೇ ಇಸ್ವಿ
೩೦. ಆಕಸ್ಮಿಕ ಅಪಘಾತ-ಹೃದಯಕ್ಕೆ ಪೆಟ್ಟು ೧೯೭೪ನೇ ಇಸ್ವಿ
೩೧. ನಿಧನ ೧೩ ಅಗಸ್ಟ ೧೯೭೫ನೇ ಇಸ್ವಿ

ಅನುಬಂಧ-೪

ವಂಶವೃಕ್ಷ

ವರದೇಶ್ವರ ಭಡತಿ (ದೈವರಾತರ ಅಜ್ಜ)

ಶಿವ-ಸಾವಿತ್ರಿ | ವಿಘ್ನೇಶ್ವರ ಭಡತಿ (ದೈವರಾತರ ತಂದೆ) | ಸುಬ್ರಾಯ ಪಾರ್ವತಿ

ನಾಗವೇಣು (ಮೊದಲ ಪತ್ನಿ) | ಸರಸ್ವತಿ (ಎರಡನೆಯ ಪತ್ನಿ ಸಂತಾನವಿಲ್ಲ) | ಪಾರ್ವತಿ (ಮೂರನೆಯ ಪತ್ನಿ)

ದೈವರಾತರು
ಸೀತಾರಾಮ
ಲಲಿತಾ

ಉಮಾಮಹೇಶ್ವರ
ದತ್ತಾತ್ರೇಯ
ವಿಘ್ನೇಶ್ವರ

ದೈವರಾತರು

ಅರುಂಧತಿ (ಮೊದಲ ಪತ್ನೀ)ಸಂತಾನವಿಲ್ಲ | ವರಮಹಾಲಕ್ಷ್ಮೀ (ಶ್ರದ್ಧಾದೇವಿ) (ಎರಡನೆಯ ಪತ್ನೀ-೭ ಮಕ್ಕಳು)

ಪುತ್ರ ೧. ಸೋಮಶ್ರವ- ಲಕ್ಷ್ಮೀ
i) ವೇದಶ್ರವ
ಸೋಮಶ್ರವ-ಸಾವಿತ್ರೀ
i) ಅಶ್ವಿನೀಕುಮಾರ ii) ರೋಹಿಣಿ iii) ರಾಜೀವಿ
ಪುತ್ರ ೨. ಸತ್ಯಶ್ರವ- (ಅವಿವಾಹಿತ)
ಪುತ್ರ ೩. ದೇವಶ್ರವ - ಸಾವಿತ್ರೀ
i) ಶ್ರುತಿ ii) ಪ್ರತಿಭಾನು
ಪುತ್ರಿ ೪. ಮಹಾದೇವಿ-ಮಹಾಬಲೇಶ್ವರ
i) ಗಜಾನನ ii) ಗಂಗಾಧರ iii) ಅಂಬಿಕಾ
iv) ವಾಗೀಶ್ವರಿ v) ಗಿರಿಜಾ vi) ಸಾವಿತ್ರೀ
ಪುತ್ರಿ ೫. ಶಚೀದೇವಿ-ಗಣಪತಿ
i) ಅಗ್ನಿಕುಮಾರ ii) ಸವಿತಾಕುಮಾರ iii) ಅರ್ಯಮ
ಪುತ್ರಿ ೬. ಪ್ರಜ್ಞಾದೇವಿ-ವೆಂಕಟರಮಣ
i) ಮಂಜುನಾಥ ii) ರವಿ iii) ಪೂರ್ಣಿಮಾ iv) ಇಂದು
ಪುತ್ರಿ ೭. ಭಾರತಿ-ಲಕ್ಷ್ಮೀನಾರಾಯಣ
i) ಸೌದಾಮನಿ ii) ನಾಗರಾಜ

ಅನುಬಂಧ-೫

ಛಂದೋದರ್ಶನದಿಂದ ಆಯ್ದ ಮಂತ್ರ ಅವತರಣಿಕೆ

೧. ಆತ್ಮಾನಂ ಯಂ ತೇ ಬಿಭ್ರತಿ ಗರ್ಭಮಾತ್ಮನಿ ಪೂರುಷಾಃ ।
ಅಮೃತಂ ತದು ಸುವೀರ್ಯಂ ಜ್ಯೋತಿರ್ವಿಶ್ವಸ್ಯ ದರ್ಶಯತ್॥

(ಸಕಲ ಪ್ರಾಣಿಗಳೂ, ಅಗ್ನಿ, ಇಂದ್ರ ಮತ್ತು ಸವಿತ್ರಾದಿ ದೇವತೆಗಳೂ ತಮ್ಮೊಳಗೆ ಆತ್ಮವನ್ನು ಧರಿಸಿದ್ದಾರೆ. ಪ್ರಚೇತನ ರೂಪವಾದ ಆತ್ಮವು ಅಮೃತ ಸ್ವರೂಪವುಳ್ಳದ್ದೂ, ಬಲಿಷ್ಠವಾದದ್ದೂ ಆಗಿದೆ. ಅಂತಹ ಆತ್ಮವೇ ಪ್ರಪಂಚವನ್ನೆಲ್ಲಾ ಬೆಳಗುತ್ತಿದೆ.)

ಛಂದೋದರ್ಶನ – ಸವಿತೃ ಸೂಕ್ತ–೨–೫ನೆಯ ಮಂತ್ರ

೨. ಸರಸ್ವತಿ ತ್ವಂ ಪ್ರತ್ಯಕ್ಷಂ ಬ್ರಹ್ಮ ಸತೀ
ಪರಮೇವಾನು ಸ್ವರಸಿ ಬ್ರಹ್ಮ ಸತ್ಯಮ್।
ಪ್ರತ್ಯಗೇವಾನು ತತ್‌ಸ್ವಯಂ ಭವಸಿ ತ್ವಮ್
ವಾಗ್ ವಿದಾ ಪ್ರತಿಮಾ ಬ್ರಹ್ಮಣಃ ಸಾ ಪರಾ ॥

(ಹೇ ಸರಸ್ವತಿ! ನೀನು ಪರಬ್ರಹ್ಮ ಸ್ವರೂಪಳು, ಇಂದ್ರಿಯಗಳಿಗೆ ಅಗೋಚರವಾದ ಬ್ರಹ್ಮವನ್ನು ಜಪಿಸುತ್ತಿರುವೆ. ಅದರಿಂದ ನೀನು ಬ್ರಹ್ಮವಸ್ತುವೇ ಆಗಿರುವೆ. ಅಂತಹ ಪರಬ್ರಹ್ಮದ ವ್ಯಕ್ತಸ್ವರೂಪವೇ ನೀನಾಗಿರುವೆ.)

ಛಂದೋದರ್ಶನ – ಸಾರಸ್ವತ್ಯನುವಾಕ–ಸರಸ್ವತೀಸೂಕ್ತ–೨ ಮಂತ್ರ–೩

೩. ಬ್ರಹ್ಮಣಸ್ಪತೇ ತವ ಯದ್ ಭೂತಂ ಭವ್ಯಂ
ದೃಶ್ಯಮೇತತ್ ಪರಿ ವರ್ತಮಾನಂ ವಿಶ್ವಮ್।
ವಿಶ್ವಯಾ ಸಂತತಾ ವಾಚ ಏವ ಭೂತಿ–
ರ್ವಾಗ್ ವಿದಾ ಪ್ರತ್ಯುತಾ ಪುರುಷೇಣ ಸ್ವಾತ್ಮ್ಯಮ್ ॥

(ಈ ವಿಶ್ವವು ಭೂತ–ವರ್ತಮಾನ–ಭವಿಷದ್ರೂಪದಲ್ಲಿ ಸದಾ ಸರ್ವದಾ ಪರಿವರ್ತನಶೀಲವುಳ್ಳದ್ದಾಗಿದೆ. ಅಂತಹ ಪರಿವರ್ತನಶೀಲವಾದ ಜಗತ್ತು ನಿನ್ನನ್ನು ಆಶ್ರಯಿಸಿದೆ. ಹೇ ಬ್ರಹ್ಮಣಸ್ಪತೇ! ಇದು ನಿನ್ನ ವಾಕ್ಕಿನ ಅದ್ಭುತವಾದ ಐಶ್ವರ್ಯವಾಗಿದೆ. ವಾಗ್ದೇವಿಯ ವಿಶ್ವವಿಭೂತಿಯೋಗದಿಂದ ನಿನ್ನ ಸಾರೂಪ್ಯವನ್ನು ಪಡೆದಿದ್ದಾಳೆ. ಈ ವಿಧವಾಗಿ ವಿಸ್ತೃತವಾದ ವಾಗ್ದೇವಿಯ ಐಶ್ವರ್ಯವು ನಿನ್ನದೇ ಆಗಿದೆ.)

ಛಂದೋದರ್ಶನ – ಬ್ರಹ್ಮಣಸ್ಪತಿ–ಅನುವಾಕ ಸೂಕ್ತ –೩ ಮಂತ್ರ–೭

೪. ಯದ್ ವಾ ಋಣಂ ವೇದಾನಾಂ ಜ್ಞಾನದಾಯಿ
ವಿದ್ಯಾನಾಂ ಪ್ರತಿ ನಿಹಿತಂ ಯನ್ಮಯಿ
ಇಂದ್ರಸ್ಯೈವ ಋಣೀ ಭವಾನ್ಯನೃಣೋಽನ್ಯದ್
ಇಂದ್ರಮೇವ ತಂ ವೃಣೇ ಶಙ್‌ಗಮಧ್ಯೈ ॥

(ಸಕಲ ಸದ್ವಿದ್ಯೆಗಳನ್ನೂ, ಜ್ಞಾನವನ್ನೂ ವೇದಗಳಿಂದ ಪಡೆದಿದ್ದೇನೆ. ಅದಕ್ಕಾಗಿ ವೇದಗಳಿಗೆ ಋಣಿಯಾದ ನಾನು ಆ ಋಣಮೋಚನೆಗಾಗಿ ಇಂದ್ರನನ್ನು ಮೊರೆಹೋಗುತ್ತೇನೆ. ಆ ಇಂದ್ರನೇ ಶಾಂತಿಯನ್ನೂ ಸಕಲವಿಧವಾದ ಕಲ್ಯಾಣವನ್ನೂ ಉಂಟು ಮಾಡಲೆಂದು ಪ್ರಾರ್ಥಿಸುತ್ತೇನೆ)

ಛಂದೋದರ್ಶನ – ಇಂದ್ರಾನುವಾಕ ಸೂಕ್ತ ೪, ಮಂತ್ರ–೪

೫. ಯೋ ಅಂತಃ ಪಾಶೈಸ್ತ್ರಿಷು ಪದೇಷು ಬದ್ಧೋ
ಯೋ ವಾ ವಿಮುಕ್ತೋ ವರುಣಸ್ಯ ಪಾಶಾತ್।
ಶುನಃಶೇಪೋ ಯ ಋಷಿರ್ದೇವರಾತಃ
ಸ ಸತ್ಯೋಽಯಮಮೃತೋ ವಿಶ್ವವೇದಾಃ ॥

(ಮೂಲಾಧಾರ, ಹೃದಯ ಮತ್ತು ಅಜ್ಞಾಚಕ್ರಗಳೆಂಬ ಮೂರು ಸ್ಥಾನಗಳಲ್ಲಿ ವರುಣನ ಪಾಶಗಳಿಂದ ಆತ್ಮನು ಬದ್ಧನಾಗಿದ್ದಾನೆ. ಶುನಃಶೇಪನು, ಯಾವ ಋಷಿಯು ಮುಂದೆ ದೇವರಾತನೆಂದು ಪ್ರಸಿದ್ಧನಾದನೋ, ಬದ್ಧವಾದ ತನ್ನ ಅಂತರಾತ್ಮವನ್ನು ವರುಣನ ಪಾಶಗಳಿಂದ ವಿಮೋಚನೆಗೊಳಿಸಿದನು. ಋಷಿ ದೇವರಾತನಿಗೆ ಇದು ಸಾಧ್ಯವಾದದ್ದು ದೇವತಾನುಗ್ರಹದಿಂದ ಆದ ಮಂತ್ರದರ್ಶನದಿಂದ ಅಂತಹ ಮಂತ್ರದೃಷ್ಟಾರನಾದ ದೇವರಾತನು ಸತ್ಯನೂ, ಅಮೃತನೂ ಮತ್ತು ಸರ್ವಜ್ಞನೂ ಆಗಿದ್ದಾನೆ)

ಛಂದೋದರ್ಶನ – ಅನುವಾಕ-೫ ಸೂಕ್ತ -೩-ಮಂತ್ರ-೭

೬. ಯಂ ವಾಚಾ ವಾ ವದಿತುಂ ನ ವಿಪ್ರಾ ಅರಂ
ಯಂ ಪ್ರಾಣ್ಯೈಃ ಸ್ಪರಿತುಂ ಪ್ರಾಣಬೃತೋ ನಾಲಮ್।
ಯಂ ಮನಸಾ ಮಂತುಂ ನ ಮನೀಷಿಣೋಽರಂ
ತಪಸಾ ಧೀಭಿಃ ಪುರುಷಂ ತಂ ಪು ಪದ್ಯೆ ॥

(ಯಾವ 'ಪುರುಷ'ನನ್ನು ವಿಪ್ರನೂ ಶಬ್ದಗಳಿಂದ ವರ್ಣಿಸಲಾರನೋ, ಯಾವ 'ಪುರುಷ'ನನ್ನು ಪ್ರಾಣಿಗಳೂ ತಮ್ಮ ಪ್ರಾಣಿಗಳಿಂದ ಸ್ಪುರಿಸಲಾರವೋ, ಮನೀಷಿಗಳೂ ಯಾವ 'ಈ ಪುರುಷ'ನನ್ನು ಧ್ಯಾನಿಸುವದಕ್ಕೆ ಸಾಧ್ಯವಿಲ್ಲವೋ ಆ ಪರಮ 'ಪುರುಷ'ನನ್ನು ನಾನು ತಪಸ್ಸಿನಿಂದಲೂ, ಜ್ಞಾನದಿಂದಲೂ ಪಡೆಯುತ್ತೇನೆ.)

ಛಂದೋದರ್ಶನ – ಅನುವಾಕ-೬ ಸೂಕ್ತ-೧ ಮಂತ್ರ-೬

೭. ಯದ್ ವಾಚಾ ದುರುಕ್ತಂ ಸುಧಿತ್ತಂ ಮಮ
ಯನ್ಮನಸಾ ದುರಿತ್ತಂ ಜುಷ್ಟಮಂತಃ।
ಯನ್ಮೇ ಧೀಭಿಃ ಸಂಭೃತ್ತಂ ದುಷ್ಟಂ ಕಿಂಚಿತ್
ತಾ ಆಪೋ ದೇವ್ಯಃ ಸ್ವಮೀಂ ಮಾಂ ಪುನಂತು ॥


(ಕ್ರಮವಾಗಿ ಮಾತಿನಿಂದ, ಮನಸ್ಸಿನಿಂದ ಮತ್ತು ಬುದ್ಧಿಯಿಂದ ಉತ್ಪನ್ನವಾದ ದುರಿತಗಳನ್ನು ಅಬ್-ದೇವತೆಗಳು ನಿರಸ್ತಗೊಳಿಸಿ ಪಾವಿತ್ರ್ಯವನ್ನುಂಟು ಮಾಡಲಿ)

ಛಂದೋದರ್ಶನ – ಅನುವಾಕ-೭ ಸೂಕ್ತ-೨-ಮಂತ್ರ-೬

೮. ಇದಂ ವೋ ವ್ರತೇನ ರಸ್ಯೈಃ ಪಂಚಬಿರ್ಗವ್ಯೈಃ ಸುಪೂತಃ ।
ಉಪೈಮಿ ತಪಸಾದಿತ್ಯಂ ಜ್ಯೋತಿರ್ವಿಶ್ವಸ್ಯ ದರ್ಶಯತ್ ॥

(ಗೋಕ್ಷೀರ, ಗೋದಧಿ, ಗೋಘೃತ, ಗೋಮೂತ್ರ ಮತ್ತು ಗೋಮಯಗಳೆಂಬ ಪಂಚಗವ್ಯಗಳ ಸೇವನಾರೂಪವಾದ ಗೋವ್ರತವನ್ನು ಪರಿಪಾಲಿಸಿ ಪವಿತ್ರನಾದ ನಾನು ಜಗತ್ತನ್ನು ಬೆಳಗುತ್ತಿರುವ ಆದಿತ್ಯನ ತೇಜಸ್ಸನ್ನು ಪಡೆಯುತ್ತೇನೆ.)

ಅನುಬಂಧ-೬ (೧)



ॐ श्रीः

श्रीदेवरात–ऋषिकुल–योगाश्रमः

—: अशोकावन गोकर्ण :—

॥ ॐ भद्रं नो अपि वातय मनः ॥

कुलपतिः ब्रह्मर्षिः श्रीदेवरातः


पोस्ट–गोकर्ण, जिला– कारवार, प्रांत– कर्नाटक

॥ शान्तिः स्वस्ति अस्तु ॥ दिनांक - २८-१०-१९६८

[illegible]

देवरात

ಅನುಬಂಧ-೬ (೨)



ॐ श्रीः

गोरक्षाब्रह्मचर्याश्रमः

अशोकावन गोकर्ण


पो. गोकर्ण

जि. कारवार

प्रां. कर्नाटक

॥ शान्तिः स्वस्ति अस्तु ॥

[illegible]



ಶ್ರೀ ಭಗವತ್ಪಾದ ಪ್ರಕಾಶನ (ರಿ.)

ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ, ಮಠದೇವಳ, ಶಿರಸಿ

೧.	**ಪ್ರಹ್ಲಾದ ಚರಿತಂ***	
೨.	ಶ್ರೀ ಸ್ವರ್ಣವಲ್ಲೀ ದರ್ಶನ*	೧-೦೦
೩.	ಶ್ರೀ ಸರ್ವಜ್ಞೇಂದ್ರ ಚಂಪೂ	೫೦-೦೦
೪.	ಯತಿಪರಿಚಯ*	
೫.	ರುದ್ರಮಂತ್ರ ಪುರಶ್ಚರಣ*	೫-೦೦
೬.	ಪ್ರಾರ್ಥನಾ ಪಂಚಕಂ*	
೭.	ಶ್ರೀ ಪೀಠಾರೋಹಣ*	೧೦೦-೦೦
೮.	ಶ್ರೀ ಸರ್ವಜ್ಞೇಂದ್ರ ಸರಸ್ವತೀ	೩೦-೦೦
೯.	ಸ್ವರ್ಣವಲ್ಲೀ ಪ್ರಕಾಶ*	೬-೦೦
೧೦.	ಬೋಧಾಯನೋಕ್ತ ಸಂಧ್ಯಾವಿಧಿಃ	೨೦-೦೦
೧೧.	ಸ್ವರ್ಣವಲ್ಲೀ ಸುಧಾ, ಕುಸುಮ-೧	೧೦-೦೦
೧೨.	ಸ್ವರ್ಣವಲ್ಲೀ ಸುಧಾ, ಕುಸುಮ-೨	೧೦-೦೦
೧೩.	ದಾರಿದೀವಿಗೆ	
೧೪.	ಸ್ತೋತ್ರಗಳು	
೧೫.	ಶ್ರೀರಾಮರಕ್ಷಾ ಸ್ತೋತ್ರ	೫-೦೦
೧೬.	ವಿವಾಹ ಸಂಸ್ಕಾರ*	೨೫-೦೦
೧೭.	ಗಾಯತ್ರೀ ಜಪಯಜ್ಞ	೨೫-೦೦
೧೮.	ಬೌಧಾಯನೀಯ ನಿತ್ಯಕರ್ಮ	೨೨೫-೦೦
೧೯.	ಸ್ವರ್ಣವಲ್ಲೀ ಮಹಾಸಂಸ್ಥಾನ (ಚರಿತ್ರೆ)	೧೦೦-೦೦
೨೦.	कृष्णयजुर्वेदस्वाहाकारविधिः भाग-१	೧೮೦-೦೦
೨೧.	ಭಗವದ್ಗೀತೆ ಅಧ್ಯಾತ್ಮ ವಿದ್ಯೆ ಸಂ. - ೧	೧೦೦-೦೦
೨೨.	ಶಂಕರಾಚಾರ್ಯರ ಸ್ತೋತ್ರರತ್ನಮಾಲೆ	೪೦-೦೦
೨೩.	ಶ್ರೀ ಲಕ್ಷ್ಮೀನೃಸಿಂಹ ಕಲ್ಪೋಕ್ತ ಪೂಜಾವಿಧಿಃ	೫೦-೦೦
೨೪.	ಶ್ರೀ ಸ್ವರ್ಣವಲ್ಲೀ ಗುರುವಂಶ ಚರಿತಂ	೧೦೦-೦೦

೨೫. ಸಂದೇಶ ನುಡಿ ೭೫-೦೦
೨೬. ಶ್ರೀ ಸರ್ವಜ್ಞೇಂದ್ರರು ೪೫-೦೦
೨೭. ಸನಾತನ ಸಂಸ್ಕಾರಗಳು ೫೦-೦೦
೨೮. ಶ್ರೀ ಬೃಹತ್ ಗಂಗಾಧರೇಂದ್ರ ಸ್ವರಸ್ವತೀ ೭೦-೦೦
೨೯. कृष्णयजुर्वेदस्वाहाकारविधिः भाग-२ ೪೫೦-೦೦
೩೦. ಶ್ರೀ ಶಂಕರಾಚಾರ್ಯರ ಅದ್ವೈತದರ್ಶನ* ೧೨೦-೦೦
೩೧. ವಿಭೂತಿ ಪುರುಷ ವಿದ್ಯಾರಣ್ಯರು ೬೫-೦೦
೩೨. ಕನ್ನಡದಲ್ಲಿ ಶತಕಸಾಹಿತ್ಯ ೨೪೦-೦೦
೩೩. ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳ ಪೀಠಾರೋಹಣ ದಶಮಾನೋತ್ಸವ ಸ್ಮರಣ ಸಂಪುಟ ೯೦-೦೦
೩೪. ನಮ್ಮ ಪ್ರೀತಿಯ ಸ್ವಾಮಿಜಿ ೧೦೦-೦೦
೩೫. ಶ್ರೀ ಲಕ್ಷ್ಮೀನಾರಾಯಣ ಹೃದಯಂ ೧೦-೦೦
೩೬. ಶ್ರೀ ಲಕ್ಷ್ಮೀನಾರಾಯಣ ಪೂಜಾ ವಿಧಿಃ ೧೦-೦೦
೩೭. ಶ್ರೀ ಲಲಿತಾಸಹಸ್ರನಾಮ ೨೫-೦೦
೩೮. ಧರ್ಮಶಂದೇಶ ೬೦-೦೦
೩೯. ತಂತ್ರ ಸಮುಚ್ಚಯ ೬೦೦-೦೦
೪೦. ಶ್ರೀವಿದ್ಯಾ ಸಾಧನಾಸಂಪುಟ* ೧೦೦-೦೦
೪೧. ಮಾನವಧರ್ಮಶಾಸ್ತ್ರ ಮತ್ತು ಮಹಿಳೆಯರು ೯೦-೦೦
೪೨. ಆಲೋಕಯಾಂಬ ಲಲಿತೇ ೪೦-೦೦
೪೩. ಶ್ರೀ ದುರ್ಗಾರಾಧನಾ ೬೦-೦೦
೪೪. A History of the Swarnavalli Mahasamstana ೨೫೦-೦೦
೪೫. ಪರಿಪೂರ್ಣವೂ ಅಖಂಡವೂ ಆದ ಅಂತಿಮ ಸತ್ಯವೇ ನಾನು ೩೫೦-೦೦
೪೬ कृष्णयजुर्वेदस्वाहाकारविधिः भाग-३ ೪೫೦-೦೦
೪೭ ಶಾಸ್ತ್ರಪ್ರಭಾ (ಸ್ವರ್ಣವಲ್ಲೀ ಪ್ರಭಾ ವಿಶೇಷಾಂಕ) ೧೫೦-೦೦
೪೮. ಶ್ರೀ ವಿಷ್ಣುಸಹಸ್ರನಾಮ ೨೦-೦೦
೪೯. ಶ್ರೀ ಶಿವಸಹಸ್ರನಾಮ ೨೦-೦೦
೫೦. ಶ್ರೀ ಲಕ್ಷ್ಮೀಸಹಸ್ರನಾಮ ೨೦-೦೦
೫೧. ಅಜ್ಜ ನೀಡುವ ಮದ್ದು ೨೦-೦೦
೫೨. ಸಂಕಷ್ಟಹರ ಗಣಪತಿ ಪೂಜಾ ವಿಧಿಃ ಸಹಸ್ರನಾಮ ಸಹಿತ ೪೦-೦೦
೫೩. ಅಮರ ಸಾಧನೆ (ನಾಟಕ) ೨೦-೦೦
೫೪. ಶ್ರೀ ಗುರುಗೀತ ೩೦-೦೦
೫೫. कृष्णयजुर्वेदस्वाहाकारविधिः भाग-४ ೪೫೦-೦೦

೫೬. ಅಂತರ್ಜ್ಯೋತಿ ೫೦-೦೦
೫೭. ಸೂರ್ಯ ನಮಸ್ಕಾರ ೩೦-೦೦
೫೮. ಖೇಚರ ಯೋಗಿ ೩೦-೦೦
೫೯. ಶೇಷಸಮುಚ್ಚಯ ೪೦೦-೦೦
೬೦. Radiant Thouhts ೮೦-೦೦
೬೧. ಶ್ರೀ ಸರಸ್ವತಿ ಸಹಸ್ರನಾಮ ೨೦-೦೦
೬೨. ಕುಮಾರವ್ಯಾಸ ಭಾರತ ಕಥಾಮೃತ ೩೦೦-೦೦
೬೩. ದೇವೋಪಚಾರ ಪೂಜಾ ೧೦-೦೦
೬೪. ಶ್ರೀ ಗಂಗಾ ಪೂಜಾ ೧೫-೦೦
೬೫. ಶ್ರೀ ಸೋಂದಾ ದರ್ಶನ ೧೨-೦೦
೬೬ Shri Sonda Darshan ೧೫-೦೦
೬೭ ಶ್ರೀಮದ್‌ಭಗವದ್ಗೀತಾ ೧೫-೦೦
೬೮. ಆಸ್ತಿಕಪರ್ವ ೫೦-೦೦
೬೯. ಶ್ರೀಮದ್‌ಭಗವದ್ಗೀತಾ ಭಕ್ತಿಯೋಗ ೮೦-೦೦
೭೦. ಮಂತ್ರದೃಷ್ಟಾರ ಬ್ರಹ್ಮರ್ಷಿ ದೈವರಾತರು ೧೫೦-೦೦

೧. ಸಂಧ್ಯಾವಂದನೆ (ಕ್ಯಾಸೆಟ್) ೩೦-೦೦
೨. ಗಾಯತ್ರೀ ಮಹತ್ವ (ಕ್ಯಾಸೆಟ್) ೩೦-೦೦
೩. ಶ್ರೀ ಶಾಂಕರ ಸರಸ್ವತೀ (ಕ್ಯಾಸೆಟ್) ೪೦-೦೦
೪. ಶ್ರೀ ಶಂಕರ ಸರಸ್ವತೀ (ಸಿ.ಡಿ.) ೫೦-೦೦
೫. ಶ್ರುತಿ ಸಂಜೀವಿನಿ (ಕ್ಯಾಸೆಟ್) ೪೦-೦೦
೬ ಶ್ರುತಿ ಸಂಜೀವಿನಿ (ಸಿ.ಡಿ.) ೫೦-೦೦
೭ ಶ್ರೀಮದ್‌ಭಗವದ್ಗೀತಾ (ಕ್ಯಾಸೆಟ್) ೪೦-೦೦
೮. ಶ್ರೀಮದ್‌ಭಗವದ್ಗೀತಾ (ಸಿ.ಡಿ.) ೫೦-೦೦

"ಸ್ವರ್ಣವಲ್ಲೀ ಪ್ರಭಾ" ಮಾಸಪತ್ರಿಕೆಗೆ ಚಂದಾದಾರರಾಗಿ

ಚಂದಾವಿವರ : ವಾರ್ಷಿಕ ಚಂದಾ ರೂ. ೧೦೦-೦೦
ಮೂರು ವರ್ಷ ಚಂದಾ ರೂ. ೨೭೫-೦೦
ಆಜೀವ ಚಂದಾ ರೂ. ೧,೫೦೦-೦೦
ಆಜೀವ ಸದಸ್ಯರು ರೂ. ೨,೦೦೦-೦೦
ಪೋಷಕರು ರೂ. ೫,೦೦೦-೦೦

* ಚಿಹ್ನೆ ಇರುವ ಪುಸ್ತಕಗಳ ಪ್ರತಿ ಮುಗಿದಿವೆ.